ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಸಂಗನಗೌಡ ಶಿವಣಗಿ

ಮಾರ್ಗದರ್ಶಕರು

ಡಾ. ಸುಚೇತಾ ನವರತ್ನ

ಸಹ ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾನಿಕಾಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೯

ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಸಂಗನಗೌಡ ಶಿವಣಗಿ

ಮಾರ್ಗದರ್ಶಕರು

ಡಾ. ಸುಚೇತಾ ನವರತ್ನ

ಸಹ ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

*****

“ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿ” ಎಂಬ ವಿಷಯದ ಕುರಿತು ಸಂಗನಗೌಡ ಶಿವಣಗಿ ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಹಾಗೂ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

ಡಾ. ಸುಚೇತಾ ನವರತ್ನ
ಸಹ ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: 7/9/2019

ಸ್ಥಳ: ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

*****

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ **"ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿ"** ಎಂಬ ಮಹಾಪ್ರಬಂಧವು ಡಾ. ಸುಚೇತಾ ನವರತ್ನ, ಸಹ ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದೆ. ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೆ ಇಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಸಂಗನಗೌಡ ಶಿವಣಗಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: 7/9/19

ಸ್ಥಳ: ವಿದ್ಯಾರಣ್ಯ

ಪರಿವಿಡಿ

* * *

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಪ್ರಮುಖ ಕಲೆಗಳಲ್ಲಿ ಒಂದಾದ ನಾಟಕ ಕಲೆಯು ಮನುಷ್ಯನ ವಿಕಾಸದೊಂದಿಗೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತ ಬಂದಿದೆ. ಆದ್ದರಿಂದ ಎಲ್ಲಾ ಸಂಸ್ಕೃತಿಗಳಲ್ಲಿಯೂ ನಾಟಕದ ಹುಟ್ಟಿನ ಕಾರಣಗಳು ಒಂದೆ ರೀತಿಯಲ್ಲಿವೆ ಎಂದು ಹೇಳಬಹುದು.

ಕನ್ನಡದಲ್ಲಿ ನಾಟಕ ಸಾಹಿತ್ಯದ ಹುಟ್ಟು, ಬೆಳವಣಿಗೆ, ಚರಿತ್ರೆ ಮುಂತಾದ ವಿಚಾರಗಳನ್ನು ಕುರಿತು ಈಗಾಗಲೇ ಸಾಕಷ್ಟು ಅಧ್ಯಯನಗಳು, ಸಂಶೋಧನಾ ಪ್ರಬಂಧಗಳು ಮತ್ತು ಎಂ.ಫಿಲ್, ಪಿಎಚ್.ಡಿ ಮಹಾಪ್ರಬಂಧಗಳು ಪ್ರಕಟಗೊಂಡಿವೆ. ಆದ್ದರಿಂದ ನಾಟಕವನ್ನು ಕುರಿತ ಚರಿತ್ರೆಯನ್ನಾಗಲಿ, ಅದರ ಪ್ರಾಚೀನತೆ ಇತ್ಯಾದಿ ವಿಷಯಗಳನ್ನು ಕುರಿತಾಗಲಿ ಇಲ್ಲಿ ಚರ್ಚಿಸಲಾಗುವುದಿಲ್ಲ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಸಾಂಸ್ಕೃತಿಕ ಸ್ಮೃತಿಗೆ ತೆರೆದುಕೊಂಡ ಕನ್ನಡ ಸಾಹಿತ್ಯವು ವಿಭಿನ್ನ ಆಯಾಮದ ಬಾಗಿಲನ್ನು ತಟ್ಟಿತು. ವಿಜ್ಞಾನ, ಕಲೆ, ಸಂಸ್ಕೃತಿ ಮತ್ತು ವಿವಿಧ ಜ್ಞಾನ ಪರಂಪರೆಗಳು ವಿನೂತನವಾದ ಸಾಮಾಜಿಕ ವ್ಯವಸ್ಥೆಗೆ ರಂಗ ಹಾಡಿದವು. ರಾಷ್ಟ್ರೀಯ ಆಂದೋಲನದಂತ ಚಿಂತನೆಯನ್ನು ಸಾಹಿತ್ಯದ ಮೂಲಕ 'ವಾಯು'ವಿನಂತೆ ಎಲ್ಲರನ್ನು ಪ್ರವೇಶಿಸಿ ಪ್ರಾದೇಶಿಕತೆಯಂದಿಗೆ ಒಕ್ಕೂಟ ರಾಷ್ಟ್ರದ ನೂತನ ಆಡಳಿತ ಕ್ರಮಕ್ಕೆ ಕಾರಣವಾದವು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಹುಟ್ಟಿಕೊಂಡಿರುವ ನಾಟಕ ಪ್ರಕಾರವೊಂದು ಹತ್ತೊಂಬತ್ತನೆ ಶತಮಾನದವರೆಗೂ ಸ್ಪಷ್ಟರೂಪ ಪಡೆದಿರಲಿಲ್ಲ. ಅನುವಾದಗಳ ಮೂಲಕ ತನ್ನನ್ನು ಸಂರಚಿಸಿಕೊಂಡ ಕನ್ನಡ ನಾಟಕ ಸಾಹಿತ್ಯ, ತದನಂತರ ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಓದು ಬರಹಬಾರದ ಜನಸಾಮಾನ್ಯರನ್ನೂ ಆಕರ್ಷಿಸುತ್ತಾ ಏಕಕಾಲಕ್ಕೆ ಜನಪ್ರಿಯ ಸಾಹಿತ್ಯಿಕ ಅಭಿವ್ಯಕ್ತಿಯಾಗಿ ಹಾಗೂ ಸ್ವಾತಂತ್ರ್ಯ ಚಳುವಳಿಯ ಪ್ರಚಾರ ಮಾಧ್ಯಮವಾಗಿ ರೂಪುಪಡೆಯಿತು. ಅಷ್ಟೆ ಅಲ್ಲದೆ ಸ್ವಾತಂತ್ರ್ಯ ಹಾಗೂ ಸೃಜನಶೀಲ ದೃಷ್ಟಿಯಿಂದ ತನ್ನನ್ನು ವಿಸ್ತರಿಸಿಕೊಂಡಿತು. ಹೀಗೆ ಕನ್ನಡ ನಾಟಕ

ಸಾಹಿತ್ಯ ಹಾಗೂ ಭಾರತೀಯ ಸ್ವಾತಂತ್ರ್ಯ ಚಳುವಳಿ, ಒಂದಕ್ಕೊಂದು ಪೂರಕ ಪ್ರೇರಕವಾಗಿ ನಡೆದುಕೊಂಡು ಬಂದಂತ ಸನ್ನಿವೇಶವನ್ನು ಅಥವಾ ವಿಶಿಷ್ಟ ಸಾಂದರ್ಭಿಕತೆಯನ್ನು ಇಲ್ಲಿ ಗಮನಿಸಲಾಗಿದೆ.

ಯುರೋಪಿನ ಚಿಂತನೆಗಳ ಮೂಸೆಯಲ್ಲಿ ಒಡಮೂಡಿದ ಭಾರತದ ರಾಷ್ಟ್ರೀಯ ಚಳುವಳಿಗೆ ಯುರೋಪ್ ಕೇಂದ್ರಿತ ರಾಷ್ಟ್ರೀಯತೆಯನ್ನು ಭಾರತೀಯ ಸಾಂಸ್ಕೃತಿಕ ಪರಿಸರಕ್ಕೆ ಅನ್ವಯಿಸಿಕೊಳ್ಳುವ ದೊಡ್ಡಜಬ್ದಾರಿ ಇತ್ತು. ಕರ್ನಾಟಕದಲ್ಲಿ ರಾಷ್ಟ್ರೀಯ ಚಿಂತನೆಗಳು ನೆಲೆಗೊಳ್ಳಲು ಬಂಗಾಳಿ ಸಾಹಿತ್ಯದ ಪ್ರಭಾವವಿದೆ. ವಸಾಹತುಶಾಹಿಯೊಂದಿಗೆ ಧಾರ್ಮಿಕ ಪ್ರಚಾರವು ಆರಂಭಗೊಂಡಿತ್ತು. ಆಗ ಸಮಾಜದಲ್ಲಿ ಮೇಲ್ವರ್ಗದವರೆ ಅಂದಿನ ಅಧಿಕಾರ ಶಾಹಿಗಳ ಜೊತೆ ಸಂಪರ್ಕ, ಶಿಕ್ಷಣ, ಆಡಳಿತದಲ್ಲಿ ನೆಲೆಗೊಂಡಿದ್ದರಿಂದ ಮತ್ತು ಯುರೋಪಿನಲ್ಲಾದ ಪುನರುಜ್ಜೀವನ ಪ್ರಭಾವದಿಂದ ಭಾರತದಲ್ಲಿ ಧಾರ್ಮಿಕ ಸಾಮಾಜಿಕ ಸುಧಾರಣೆಗಳು ಆರಂಭಗೊಂಡವು. ಇವು ಉದಾರವಾದಿ ರಾಷ್ಟೀಯ ಚಳುವಳಿಯ ಉಗಮಕ್ಕೆ ಕಾರಣವಾದವು. ಈ ಭಾಗವಾಗಿ ಬಂದ ವಸಾಹತುಶಾಹಿಯು ಯುರೋಪಿನ ಕೆಲವು ದೇಶಗಳ ಸಾಮ್ರಾಜ್ಯವಾದದ ಆಡಳಿತದ ಕ್ರಮವಾಗಿದೆ. ಬಂಡವಾಳಶಾಹಿಯೇ ಇದರ ಮೂಲ ಉದ್ದೇಶ. ಅದಕ್ಕಾಗಿ ಈ ದೇಶಗಳು ಜಗತ್ತಿನ ಕೆಲವು ಪ್ರದೇಶಗಳನ್ನು ಸಂಘರ್ಷಕ್ಕಿಳಿಸಿ ತಮ್ಮ ವಸಾಹತುಗಳನ್ನಾಗಿ ಮಾಡಿಕೊಂಡಿದ್ದವು. ಡಚ್, ಬ್ರಿಟಿಶ್, ಪೋರ್ಚಗಿಸರ ನಡುವಿನ ಸ್ವರ್ದೆಯ ನಂತರ ಬ್ರಿಟಿಶರ ವಸಾಹತು ರಾಷ್ಟವಾಗಿ ಭಾರತ ಮಾರ್ಪಟ್ಟಿತು. ಹಾಗಾಗಿ ವಸಾಹತುಗಳು ಸಾಮ್ರಾಜ್ಯಶಾಹಿ ರಾಷ್ಟಗಳ ಆರ್ಥಿಕತೆಯ ಕೇಂದ್ರಗಳಾಗಿದ್ದವು. ಮತ್ತು ಮಾರುಕಟ್ಟೆ ವಿಸ್ತರಣೆಯ ಭಾಗವಾಗಿಯು ಇವುಗಳನ್ನು ನೋಡಬಹುದು. ಈ ವ್ಯಾಪಾರಿ ಮನೋಭಾವದ ವ್ಯವಸ್ಥೆಗಳು ಜಗತ್ತನ್ನು ಕೇಂದ್ರಿಕರಿಸಿಕೊಂಡಿದ್ದವು. ಇತಿಹಾಸ ತಜ್ಞರು ೧೮೭೬ರಿಂದ ೧೯೧೫ರ ನಡುವಿನ ಕಾಲಾವಧಿಯನ್ನು ಬಂಡವಾಳಶಾಹಿ ವಿಸ್ತರಣೆಯ ಕಾಲಾವಧಿ ಎಂದು ಗುರುತಿಸಿದ್ದಾರೆ. ಕಾರಣ ಈ ಅವಧಿಯಲ್ಲಿ ಜಗತ್ತಿನ ಕಾಲುಭಾಗದಷ್ಟು ಪ್ರದೇಶಗಳು ವಸಾಹತುಗಳಾಗಿ, ಆರು ರಾಷ್ಟಗಳ ನಡುವೆ ಹರಿದುಹೋಗಿದ್ದವು. ಬಂಡವಾಳಶಾಹಿ, ಆರ್ಥಿಕ ನೀತಿಗಳೆ ಪ್ರಮುಖ ಎಂದು ನಂಬಿಕೊಂಡ ರಾಷ್ಟ್ರಗಳ ನಡುವೆ ಸಂಘರ್ಷ ಏರ್ಪಟ್ಟು ಎರಡು ಮಹಾಯುದ್ಧಗಳು ನಡೆದವು. ಯುರೋಪಿನ ಈ ಕೊಳ್ಳುಬಾಕ ನೀತಿಗಳೊಂದಿಗೆ ಅಲ್ಲಿಯ ಚಿಂತನೆಗಳಾದ ಶಿಕ್ಷಣ, ಧರ್ಮ, ಸಾಹಿತ್ಯ, ಸಾಮಾಜಿಕ, ರಾಜಕೀಯ ವ್ಯವಸ್ಥೆಗಳು ವೈಚಾರಿಕ ನೆಲೆಯಲ್ಲಿ ಭಾರತದಲ್ಲಿ ಪುನರ್ ನಿರ್ಮಾಣಗೊಳ್ಳಲು ಆರಂಭಿಸಿದವು. ಮುಖ್ಯವಾಗಿ ಕನ್ನಡ ನಾಟಕ ಸಾಹಿತ್ಯವು ವಸಾಹತುಶಾಹಿಗೆ ಮುಖಾಮುಖಿಗೊಳ್ಳುತ್ತಲೆ ರಾಜಕೀಯವಾಗಿ, ಸಾಮಾಜಿಕವಾಗಿ ಭಾರತದ ಸ್ವಾತಂತ್ರ್ಯ ಪರಿಸರವನ್ನು ನಿರ್ಮಿಸಿತು.

ಈ ರಾಷ್ಟ್ರೀಯತೆ ರಾಷ್ಟ್ರ, ರಾಷ್ಟ್ರೀಯತೆ ಎಂಬ ಈ ಸಂಕೀರ್ಣ ಚಾರಿತ್ರಿಕ ವಿದ್ಯಮಾನ ೧೮ ಮತ್ತು ೧೯ನೇ ಶತಮಾನದಲ್ಲಿ ರಾಜಕೀಯವಾಗಿ ನಿರ್ಮಾಣಗೊಂಡಂತಹ ವ್ಯವಸ್ಥೆ. ಈ ರಾಷ್ಟ್ರ, ರಾಷ್ಟ್ರೀಯತೆಯ ಕುರಿತು. ಜಗತ್ತಿನ ಕೆಲವು ಚಿಂತಕರು ಪರವಾಗಿ ಮಾತನಾಡಿದ್ದಾರೆ, ಇನ್ನೂ ಕೆಲವರು ಅವುಗಳ ವಿರುದ್ಧ ಮಾತನಾಡಿದ್ದಾರೆ. ಕಾರಣ ಈ "ರಾಷ್ಟ್ರ ಹಾಗೂ ರಾಷ್ಟ್ರೀಯ ಅಸ್ಮಿತೆ ಕೆಲವರಿಗೆ ಜನಸಮುದಾಯಗಳನ್ನು ಒಂದುಗೂಡಿಸುವ ಹಾಗೂ ನಿರ್ದಿಷ್ಟ ಗುರಿಗಳತ್ತ ಅವುಗಳನ್ನು ಕೊಂಡೊಯ್ಯುವ ಒಂದು ಅಭೂತಪೂರ್ವ ಭಾವನಾ ಲಹರಿಯಾದರೆ ಇನ್ನೂ ಹಲವರಿಗೆ ರಾಷ್ಟ್ರ ಹಾಗೂ ರಾಷ್ಟ್ರೀಯತೆಯ ಕಥೆ ರಕ್ತಪಾತದ ಹೇಯವಾದ ನರಮೇಧದ ಒಂದು ವಿನಾಶಕಾರಿ ಬೆಳವಣಿಗೆಯಾಗಿದೆ. ಜನರಲ್ಲಿ ತೀವ್ರವಾದ ಭಾವನೆಗಳನ್ನು ಉದ್ರೇಕಿಸುವ ಹಾಗೂ ಅವರ ಮಹಾನ್ ತ್ಯಾಗ ಹಾಗೂ ಬಲಿದಾನಗಳಿಗೆ ಪ್ರಚೋದಿಸುವ ರಾಷ್ಟ್ರೀಯತೆ ಎನ್ನುವ ಅಥವಾ ರಾಷ್ಟ್ರೀಯವಾದ ಎಂದು ಕರೆಯಲ್ಪಡುವ ವಿಶಿಷ್ಟವಾದ ಚಾರಿತ್ರಿಕ-ತಾತ್ವಿಕ ವಿದ್ಯಮಾನದ ಅನೇಕನೇಕ ವಿಸ್ಮಯಕಾರಿ ಮಜಲುಗಳು ನಮ್ಮಲ್ಲಿ ಕುತೂಹಲವನ್ನು ಮೂಡಿತ್ತದೆ. ಹಾಗೂ ಆತಂಕವನ್ನು ತರುತ್ತದೆ". (ಬಾರ್ಕೂರು ಉದಯ, ರಾಷ್ಟ್ರೀಯತೆ : ಇತಿಹಾಸಕಥನ, ಪು.೫, ಮುನ್ನುಡಿ) ಪ್ರಮುಖವಾಗಿ ಯುರೋಪಿನಲ್ಲಿ ಉಗಮವಾದ ರಾಷ್ಟ್ರೀಯತೆಯ ಕುರಿತು ಚಿಂತಿಸಿದ ಚಿಂತಕರಾದ ಬೆಟಿಡಿಕ್ಟ್ ಎಂಡರ್ಸ್‌ನ್, ಆರ್ನೆಸ್ಟ್ ಗೆಲ್‌ನರ್ ಹಾಗೂ ಆ್ಯಂಟನಿ ಸ್ಮಿತ್‌ರು ರಾಷ್ಟ್ರೀಯತೆ ಎನ್ನುವುದು ಭಾವನಾತ್ಮಕ ನೆಲೆಗಟ್ಟಿನಲ್ಲಿ ನಿರೂಪಣೆಗೊಳ್ಳುತ್ತದೆ ಎಂದಿದ್ದಾರೆ. ಇಂದಿಗೂ ರಾಷ್ಟ್ರೀಯತೆ ಎನ್ನುವುದು ಹಲವಾರು ಮುಖವಾಡಗಳೊಂದಿಗೆ ತನ್ನನ್ನು ಪ್ರದರ್ಶಿಸಿಕೊಳ್ಳುತ್ತಿದ್ದರು, ಅದು ಮೂಲತಃ ಒಂದು ಭಾವನಾತ್ಮಕ ವಿದ್ಯಮಾನವಾಗಿದೆ. ಹಾಗೂ ರಾಷ್ಟ್ರೀಯತೆಯನ್ನು ಅನ್ವಹಿಸಿಕೊಳ್ಳುವಲ್ಲಿ ಇರುವ ದ್ವಂದ್ವಾತ್ಮಕಗಳನ್ನು ಕುರಿತು ಚಿಂತಕರು ಹೀಗೆ ಪ್ರತಿಕ್ರಿಯಿಸಿದ್ದಾರೆ. "ಆರ್ನೆಸ್ಟ್ ಗೆಲ್‌ನರ್ ರಾಷ್ಟ್ರೀಯವಾದವನ್ನು ನಮ್ಮ ಕಾಲದ ಅತ್ಯಂತ ಪರಿಣಾಮಕಾರಿಯಾದ ಭಾವಾವೇಶವೆಂದು ಕರೆದರೆ, ಬೆನಾಡಿಕ್ಟ್ ಎಂಡರ್ಸ್ ನ್ ರಾಷ್ಟ್ರವನ್ನು ಒಂದು ಭಾವಿಸಿದ ಸಮುದಾಯ ಎಂದು ಬಣ್ಣಿಸುತ್ತಾರೆ. ರಾಷ್ಟ್ರೀಯತೆ ಅಥವಾ ರಾಷ್ಟ್ರೀಯವಾದ ಹೀಗೆ ಭಾವನಾತ್ಮಕ ನೆಲೆಗಳಲ್ಲಿ ರೂಪಗೊಳ್ಳುವ ಹಾಗೂ ವ್ಯಕ್ತವಾಗುವು ವಿದ್ಯಮಾನವಾಗಿರುವುದರಿಂದ ಅದರ ಚರಿತ್ರೆ ಏಕಕಾಲದಲ್ಲಿ ವೈಭವದಿಂದ ಕೂಡಿದ್ದು ಹಾಗೂ ಸಂಕಷ್ಟಮಯವು ಆಗಿ ಕಂಡುಬರುತ್ತದೆ. ಜನಸಮುದಾಯವನ್ನು ಹೀಗೆ ಭಾವನಾತ್ಮಕ ನೆಲೆಯಲ್ಲಿ ಸಂಘಟಿಸುವ ಹಾಗೂ ವಿಭಿನ್ನವಾದ ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳನ್ನು ಉಂಟುಮಾಡುವ ರಾಷ್ಟ್ರೀಯತೆಯ ಈ ವಿರೋದಾಭಾಸದ ಚರಿತ್ರೆಯ ಚಿಂತಕರ ಹಾಗೂ ಜನನಾಯಕರು ಅದರ ಕುರಿತು ಅತಿರೇಕದ ನಿಲುವುಗಳನ್ನು ತಳೆಯುವಂತೆ ಮಾಡಿದೆ. ಬಿಸ್ಮಾರ್ಕ್, ಮ್ಯಾಜಿನಿ, ಮುಸಲೋನಿ ಹಾಗೂ ಸಾವರ್ಕರ್ ಮೊದಲಾದವರು ರಾಷ್ಟ್ರದ ಪರಿಕಲ್ಪನೆಯನ್ನು

ಭಾವಾವೇಶದಿಂದ ಒಪ್ಪಿಕೊಂಡರೆ. ಗಾಂಧಿ ಹಾಗೂ ಟಾಲ್‌ಸ್ಟಾಯ್ ಮೊದಲಾದ ಚಿಂತಕರು ಹಾಗೂ ಜನನಾಯಕರು ರಾಷ್ಟ್ರೀಯತೆಯಲ್ಲಿ ಅತ್ಯಂತ ವಿನಾಶಕಾರಿಯಾದದ್ದನ್ನು ಕಂಡುಕೊಳ್ಳುತ್ತಾರೆ. ಒಂದು ಅರ್ಥದಲ್ಲಿ ರಾಷ್ಟ್ರೀಯತೆಯ ಅಭೂತಪೂರ್ವತೆಯೆ ಅದನ್ನು ವಿಭಿನ್ನ ನೆಲೆಗಳಲ್ಲಿ ಆವೇಶದಿಂದ ಒಪ್ಪಿಕೊಳ್ಳುವ ಹಾಗೂ ತೀವ್ರವಾಗಿ ವಿರೋಧಿಸುವ ಧೋರಣೆಗಳನ್ನು ಹುಟ್ಟುಹಾಕಿವೆ. ತತ್ಪರಿಣಾಮವಾಗಿ ಇಂದು ರಾಷ್ಟ್ರೀಯವಾದ ಅನೇಕ ಬಗೆಯಾದ ವಾಂಗ್ಮಯಗಳನ್ನು, ಸಂಕಥನಗಳನ್ನು ಹಾಗೂ ದುಷ್ಟಿಕೋನಗಳನ್ನು ಪ್ರಚೋದಿಸುವಲ್ಲಿ ಯಶಸ್ವಿಯಾಗಿದೆ". (ಅದೇ.೬ ಮುನ್ನುಡಿ) ಎಂದು ಹೇಳಬಹುದು. ಈ ರಾಷ್ಟ್ರೀಯತೆಯು ಎರಡು ಬಗೆಯ ರಾಷ್ಟ್ರೀಯತೆಗಳನ್ನು ಕಟ್ಟಿಕೊಟ್ಟಿದೆ. ಒಂದು ಯುರೋಪ ಮಾದರಿಯ ರಾಷ್ಟ್ರೀಯತೆ ಇನ್ನೊಂದು ವಸಾಹತುಶಾಹಿ ಸಂದರ್ಭದ ರಾಷ್ಟ್ರಿಯತೆ. ಆದರೆ ಕನ್ನಡ ನಾಟಕಗಳು ಯಾವ ಮಾದರಿಯ ಹಿನ್ನೆಲೆಯಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಕಟ್ಟಿಕೊಟ್ಟಿದೆ, ಎಂಬುದು ಪ್ರಸ್ತುತ ಅಧ್ಯಯನದ ಪ್ರಮುಖ ಅಂಶವಾಗಿದೆ.

೧.೧. ಅಧ್ಯಯನದ ಉದ್ದೇಶಗಳು

* ಕನ್ನಡ ನಾಟಕ ಸಾಹಿತ್ಯ ಹಾಗೂ ಭಾರತದ ಸ್ವಾತಂತ್ರ್ಯ ಚಳುವಳಿಗಳೆರಡು ವಸಾಹತು ಸಂದರ್ಭದ ಸೃಷ್ಟಿಗಳಾಗಿವೆ. ಇವೆರಡೂ ಪರಸ್ಪರ ಪೂರಕ ಮತ್ತು ಪ್ರೇರಕ ಅಂಶಗಳಾಗಿ ಕನ್ನಡ ಸಂದರ್ಭವನ್ನು ಎದುರುಗೊಂಡ ಬಗೆಯನ್ನು ವಿಶ್ಲೇಷಿಸುವದು ಈ ಅಧ್ಯನಯದ ಪ್ರಮುಖ ಉದ್ದೇಶವಾಗಿದೆ.

* ನಾಟಕ ಪ್ರಕಾರಕ್ಕಿರುವ ದೃಶ್ಯ ಮತ್ತು ಶ್ರವ್ಯ ಸಾಧ್ಯತೆಗಳು ಜಗತ್ತಿನ ಎಲ್ಲ ಜನರನ್ನು ತಲುಪುವ ಪ್ರಮುಖ ಸಾಧನಗಳಾಗಿವೆ. ಅಕ್ಷರಸ್ಥ ಮತ್ತು ಅನಕ್ಷರಸ್ಥ ಎರಡೂ ವರ್ಗಗಳನ್ನು ನಾಟಕ ಏಕತ್ರಗೊಳಿಸುವ ರೀತಿ ಇಲ್ಲಿ ಗಮನೀಯ. ಏಕಕಾಲಕ್ಕೆ ಕಲೆ, ಸಾಹಿತ್ಯ ಎರಡು ವಿಭಿನ್ನ ಶಿಸ್ತುಗಳನ್ನು ನಾಟಕ ನಿರ್ವಹಿಸುವ ರೀತಿ ಇಲ್ಲಿ ಗಮನಾರ್ಹ. ಹಾಗೇ ಈ ಪ್ರಕಾರ ಸ್ವಾತಂತ್ರ್ಯ ಚಳುವಳಿಯನ್ನು ಸ್ವೀಕರಿಸಿದ ರೀತಿ ವಿಶೇಷವಾದದ್ದು.

* ಸ್ವಾತಂತ್ರ್ಯ ಚಳುವಳಿಯ ಘಟನೆಗಳನ್ನು ಸಾಹಿತ್ಯದ ಇತರ ಪ್ರಕಾರಗಳು ನಿರ್ವಹಿಸಿದ ಬಗೆಗಿಂತ, ನಾಟಕ ಪ್ರಕಾರಕ್ಕೆ ಓದುಪಠ್ಯ ಮತ್ತು ರಂಗಪಠ್ಯವಾಗಿ ಸಾಕಷ್ಟು ಅನುಕೂಲವಿದ್ದರೂ, ಅಷ್ಟೇ ಆತಂಕದ ಸ್ಥಿತಿಯಿತ್ತು. ಇಂತಹ ಸನ್ನಿವೇಶವನ್ನು ನಾಟಕ ಪ್ರಕಾರ ಸೃಜನಶೀಲವಾಗಿ ಅಥವಾ ಸಂವೇದನಾಶೀಲವಾಗಿ ನಿರ್ವಹಿಸಿದ ಹಾಗೂ ನಿಭಾಯಿಸಿದ ಬಗೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗುವುದು.

* ಹಾಗೆ ಚರಿತ್ರೆಯ ನಿರ್ಮಾಣದ ಆಕರವಾಗಿ ನಾಟಕ ಪ್ರಕಾರವೊಂದರ ಅಸ್ಮಿತೆಯನ್ನು ಗುರುತಿಸಿ ವಿಶ್ಲೇಷಿಸುವುದು ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

* ಕನ್ನಡ ಸಾಹಿತ್ಯಕ್ಕೆ ಅನೇಕ ವಿಚಾರಗಳು ಬಂದಿರುವುದು ಗಮನಾರ್ಹ. ಹಾಗೆ ಘಟನೆಯೊಂದು ವಸ್ತುವಾಗಿ ಒದಗಿ ಅನೇಕ ವರ್ಷಗಳ ಕಾಲ ಕನ್ನಡ ಸಾಹಿತ್ಯದೊಂದಿಗೆ ಒಡನಾಟವನ್ನು ನಡೆಸಿರುವ ಸಂದರ್ಭವಾಗಿ ಸ್ವಾತಂತ್ರ್ಯ ಚಳುವಳಿ ಒಂದು ವಿಭಿನ್ನ ಮಾದರಿಯಿಂದ ಕನ್ನಡ ಸಾಹಿತ್ಯವನ್ನು ಎದುರುಗೊಂಡಿದೆ. ಈ ಘಟನೆಯನ್ನು ಕನ್ನಡ ನಾಟಕ ಸಾಹಿತ್ಯ ಅನುಸಂಧಾನ ನಡೆಸಿದ ನೆಲೆಯನ್ನು ವಿಶ್ಲೇಷಿಸುವುದು ಅಧ್ಯಯನದ ಉದ್ದೇಶವಾಗಿದೆ.

* ಸ್ವಾತಂತ್ರ್ಯ ಚಳುವಳಿಯನ್ನು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ವಸ್ತುಗಳ ಮೂಲಕವೇ ಕನ್ನಡ ನಾಟಕಗಳು ಸ್ವಾತಂತ್ರ್ಯ ಚಳುವಳಿಯನ್ನು ನಿರ್ವಚಿಸಿಕೊಂಡ ಜರೂರನ್ನು ಗುರುತಿಸುವುದು ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಒಂದು ನಿರ್ದಿಷ್ಟ ವ್ಯಾಪ್ತಿಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಈ ಅಧ್ಯಯನವು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆಯಾದ ನಾಟಕಗಳು ಹಾಗೂ ಸ್ವಾತಂತ್ರ್ಯ ಪರಿಕಲ್ಪನೆಯನ್ನು ವಸ್ತುವಾಗಿಟ್ಟುಕೊಂಡು ರಚನೆಗೊಂಡ ನಾಟಕಗಳು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಕ್ಷೇತ್ರಕಾರ್ಯ ಮತ್ತು ವಕ್ತೃಗಳ ಮಾಹಿತಿಗಳು ಅಧ್ಯಯನದ ವ್ಯಾಪ್ತಿಗೆ ಬರುತ್ತವೆ.

೧.೩. ಅಧ್ಯಯನದ ವಿಧಾನ

ಸಾಹಿತ್ಯ ಮತ್ತು ಚರಿತ್ರೆಗೆ ಸಂಬಂಧಿಸಿದ ಅಂತರ್‌ಶಿಸ್ತಿಯ ವಿಧಾನವನ್ನು ಪ್ರಸ್ತುತ ಅಧ್ಯಯನ ಒಳಗೊಂಡಿದೆ. ಹಾಗೆ ಸ್ವಾತಂತ್ರ್ಯ ಚಳುವಳಿಯನ್ನು ವಸ್ತುವಾಗಿ ಒಳಗೊಂಡ ನಾಟಕಗಳನ್ನು ಆಕರಳನ್ನಾಗಿಸಿ, ಭಿನ್ನ ಭಿನ್ನ ನೆಲೆಯಲ್ಲಿ ವಿಶ್ಲೇಷಿಸುವ ಮಾದರಿಯನ್ನು ಅಧ್ಯಯನ ಒಳಗೊಂಡಿದೆ.

೧.೪. ಅಧ್ಯಯನದ ಸ್ವರೂಪ

ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿ ಎಂಬ ಅಧ್ಯಯನವನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ಅಧ್ಯಯನದ ಅನುಕೂಲಕ್ಕಾಗಿ ಎಂಟು ಅಧ್ಯಾಯುಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ.

ಅಧ್ಯಾಯ ಒಂದು – ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಈ ಅಧ್ಯಾಯದಲ್ಲಿ ಪ್ರಾರಂಭಿಕವಾಗಿ ಅಗತ್ಯ ತಾಂತ್ರಿಕ ಅಂಶಗಳಾದ ಉದ್ದೇಶ, ವ್ಯಾಪ್ತಿ, ವೈಧಾನಿಕತೆಯನ್ನು ವಿವರಿಸಿಕೊಳ್ಳಲಾಗಿದೆ. ಉದ್ದೇಶ ವ್ಯಾಪ್ತಿಗಳಿಗನುಗುಣವಾಗಿ ಯೋಜಿತ ಅಧ್ಯಾಯಗಳನ್ನು ಸ್ವರೂಪವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಎರಡು – ವಿಷಯ ಪ್ರವೇಶಿಕೆ ಮತ್ತು ಪೂರ್ವಾಧ್ಯಯನಗಳ ಸಮೀಕ್ಷೆ

ಈ ಅಧ್ಯಾಯದಲ್ಲಿ ಪೂರ್ವಾಧ್ಯಯನಗಳ ಸಮೀಕ್ಷೆಯ ಮೂಲಕ ಇದುವರೆಗೆ ನಡೆದ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ. ಹಾಗೂ ಪ್ರಸ್ತುತ ಅಧ್ಯಯನ ಅವೆಲ್ಲವುಗಳಿಗಿಂತ ಭಿನ್ನವಾಗುವ ಬಗೆಯನ್ನು ಅವಲೋಕಿಸಲಾಗಿದೆ. ವಿಷಯಕ್ಕೆ ಅನುಗುಣವಾಗಿ ಪೀಠಿಕೆಯನ್ನು ನಿರೂಪಿಸಲಾಗಿದೆ.

ಅಧ್ಯಾಯ ಮೂರು – ಕನ್ನಡ ಸಾಹಿತ್ಯ ಮತ್ತು ಸ್ವಾತಂತ್ರ್ಯ ಚಳುವಳಿಯ ಅಂತರ್ ಸಂಬಂಧದ ನೆಲೆಗಳು

ಈ ಅಧ್ಯಾಯದಲ್ಲಿ ವಸಾಹತುಶಾಹಿ ನಿಲುವಿಗೆ ಪ್ರತಿರೋಧವಾಗಿ ಕನ್ನಡ ಸಾಹಿತ್ಯ ತನ್ನನ್ನು ಸೃಷ್ಟಿಸಿಕೊಂಡ ಬಗೆ, ವಿಸ್ತರಿಸಿಕೊಂಡ ಬಗೆಗಳನ್ನು ಮೌಖಿಕ ಸಾಹಿತ್ಯದ ಆದಿಯಾಗಿ ಇತರ ಪ್ರಕಾರಗಳ ಹಿನ್ನಲೆಯಲ್ಲಿ ಕಂಡುಕೊಳ್ಳಲಾಗಿದೆ.

ಅಧ್ಯಾಯ ನಾಲ್ಕು – ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಅಭಿವ್ಯಕ್ತಿಯ ಸ್ವರೂಪ

ಸ್ವಾತಂತ್ರ್ಯ ಚಳುವಳಿಯನ್ನು ಕನ್ನಡ ನಾಟಕ ಸಾಹಿತ್ಯ ಅಭಿವ್ಯಕ್ತಪಡಿಸಿದ ನೆಲೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಮುಖ್ಯವಾಗಿ ವ್ಯಕ್ತಿ, ವಸ್ತು ಮತ್ತು ಚಳುವಳಿಯ ಭಾಗವಾಗಿ ಹುಟ್ಟಿಕೊಂಡ ಇತರೆ ಚಳುವಳಿಗಳನ್ನು, ಅವುಗಳ ನಡುವಿನ ಕಾರ್ಯ ಕಾರಣ ಸಂಬಂಧಗಳನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಅಧ್ಯಾಯ ಐದು – ಕನ್ನಡ ನಾಟಕಗಳಲ್ಲಿ ಗಾಂಧಿ

ಈ ಅಧ್ಯಾಯದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ತನ್ನದೆ ದೃಷ್ಟಿಕೋನದಲ್ಲಿ ಕಲ್ಪಿಸಿಕೊಂಡು, ಅದನ್ನು ಮುನ್ನಡೆಸಿಕೊಂಡು ಬಂದಂತ ಮಹಾತ್ಮಗಾಂಧಿ ಅವರ ಕುರಿತು ಬಂದ ನಾಟಕಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಗಾಂಧಿ ಪ್ರಭಾವಕ್ಕೆ ಒಳಗಾದ ಕನ್ನಡ ನಾಟಕಕಾರರು ಗಾಂಧಿಯನ್ನು ಒಂದು ಪಾತ್ರವನ್ನಾಗಿ, ಚಿಂತನೆಯನ್ನಾಗಿ, ವಸ್ತುವನ್ನಾಗಿ ತಮ್ಮ ತಮ್ಮ ನಾಟಕಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಹೀಗೆ ಕನ್ನಡದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕಾಣಬರುವ ಗಾಂಧೀಜಿ ಅವರನ್ನು ಕುರಿತ ನಾಟಕಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಆರು – ಸಕ್ರಿಯ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ನಾಟಕಗಳ ಪ್ರೇರಣೆ ಮತ್ತು ಪ್ರಭಾವ

ವಸಾಹತುಶಾಹಿ ಭಾಗವಾಗಿ ಬಂದ ವ್ಯವಸ್ಥೆಗಳಾದ ಕಲೆ, ಸಾಹಿತ್ಯ, ಪತ್ರಿಕೋದ್ಯಮ, ಅಂಚೆ ಮತ್ತು ಇನ್ನಿತರ ವ್ಯವಸ್ಥೆಗಳು ಭಾರತೀಯ ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹವನ್ನು

ಒದಗಿಸಿದವು. ಒದಗಿಬಂದ ವ್ಯವಸ್ಥೆಗಳಿಂದ ಉತ್ತೇಜಿತರಾದ ಜನರು ಅಸ್ಮಿತೆಯನ್ನು (ತಮ್ಮತನವನ್ನು ಹುಡುಕುವ) ಕಂಡುಕೊಳ್ಳುವ ಭಾಗವಾಗಿ ಪ್ರತಿಕ್ರಿಯಾತ್ಮಕವಾಗಿ ನಾಟಕ, ರಂಗಭೂಮಿ, ಸಾಹಿತ್ಯ, ಕಲೆ, ಸಂಸ್ಕೃತಿಗಳ ಮೂಲಕ ಅವುಗಳನ್ನು ಬಿಂಬಿಸಲು ಪ್ರಯತ್ನಿಸಿದರು. ಹೀಗೆ ರೂಪುಗೊಂಡ ನಾಟಕ ಸ್ವಾತಂತ್ರ್ಯ ಚಳುವಳಿಗೆ ಪೂರಕ-ಪ್ರೇರಕವಾದ ಬಗೆಯನ್ನು ಈ ಅಧ್ಯಾಯ ವಿಸ್ತೃತವಾಗಿ ವಿವರಿಸುತ್ತದೆ.

ಅಧ್ಯಾಯ ಏಳು – ಸಮಾರೋಪ ಮತು ಅಧ್ಯಯನದ ಫಲಿತಗಳು

ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ.

ಅನುಬಂಧ : ಸ್ವಾತಂತ್ರ್ಯ ಚಳುವಳಿ ಕುರಿತ ನಾಟಕಗಳ ಸಮಗ್ರ ಪಟ್ಟಿಯನ್ನು ಕೊಡಲಾಗಿದೆ. ಸಂಶೋಧನೆಗೆ ಬಳಸಿಕೊಂಡ ಆಕರಗಳ ಸೂಚಿಯನ್ನು ನೀಡಲಾಗಿದೆ.

* * *

ಅಧ್ಯಾಯ: ಎರಡು

ವಿಷಯ ಪ್ರವೇಶಿಕೆ ಮತ್ತು ಪೂರ್ವಾಧ್ಯಯನಗಳ ಸಮೀಕ್ಷೆ

೨.೧. ವಿಷಯ ಪ್ರವೇಶಿಕೆ

೨.೨. ಪೂರ್ವಾಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ವಿಷಯ ಪ್ರವೇಶಿಕೆ ಮತ್ತು ಪೂರ್ವಾಧ್ಯಯನಗಳ ಸಮೀಕ್ಷೆ

೨. ೧. ವಿಷಯ ಪ್ರವೇಶಿಕೆ

ಭಾರತದ ಸ್ವಾತಂತ್ರ್ಯ ಅಂದರೆ ಅದು ಬ್ರಿಟಿಶ್ ಆಡಳಿತ ಮತ್ತು ಭಾರತೀಯ ಸಂಸ್ಥಾನಿಕರ ಆಡಳಿತದಿಂದ ಬಿಡುಗಡೆಗೊಳ್ಳುವುದಾಗಿತ್ತು. ಸಂಸ್ಥಾನಗಳ ಹೊರತಾಗಿ ಭಾರತದಾದ್ಯಂತ ಪ್ರಾರಂಭಗೊಂಡ ಭಾರತದ ಸ್ವಾತಂತ್ರ್ಯ ಚಳುವಳಿ ಕರ್ನಾಟಕದಲ್ಲಿಯೂ ಮೈಸೂರು ಮತ್ತು ಹೈದರಾಬಾದ್ ಸಂಸ್ಥಾನಗಳನ್ನು ಹೊರತುಪಡಿಸಿ ಆರಂಭಗೊಂಡಿತು. ಮೊದಲು ಬ್ರಿಟಿಶ್ ವಿರೋಧಿ ನೀತಿಗಳ ಭಾಗವಾಗಿ ಆರಂಭಗೊಂಡ ಸ್ಥಳೀಯ ರಾಜರ ಹೋರಾಟಗಳು ತದನಂತರದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಗೆ ವೇದಿಕೆಯಾದವು. ೧೭೫೭ರ ಪ್ಲಾಸಿ ಕದನದ ವಿಜಯದ ತರುವಾಯ ಈಸ್ಟ್ ಇಂಡಿಯಾ ಕಂಪನಿಯ ವಸಾಹತುಶಾಹಿ ರಾಜ್ಯಭಾರ ಆರಂಭಗೊಂಡಿತು. ಸಹಾಯಕ ಸೈನ್ಯಪದ್ಧತಿಯಂತಹ ಕುತಂತ್ರ ನೀತಿಗಳ ಮೂಲಕ ಬ್ರಿಟಿಶರ ಭಾರತದ ರಾಜಕೀಯ ಅಧಿಕಾರ ಇಮ್ಮಡಿಗೊಂಡಿತು. ೪ನೇ ಆಂಗ್ಲೋ–ಮೈಸೂರ್ ಯುದ್ಧದಲ್ಲಿ ಟಿಪ್ಪು ಮರಣ ಹೊಂದಿದ ನಂತರ ಕರ್ನಾಟಕದ ಆಡಳಿತಕ್ಕೆ ಬ್ರಿಟಿಶರ ಆಗಮನವಾಯಿತು. ಕರ್ನಾಟಕ ಭೌಗೋಳಿಕ ಗಡಿ ಮತ್ತು ಏಕ ಆಡಳಿತ ರಚನೆಗೊಂಡಿರದ ಕಾಲದಲ್ಲಿ ಟಿಪ್ಪುವಿನ ಆಡಳಿತಕ್ಕೆ ಕರ್ನಾಟಕ ಒಳಪಟ್ಟಿತ್ತೇ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಆದರೆ ಕರ್ನಾಟಕದ ಆಡಳಿತದ ಚುಕ್ಕಾಣಿ ಹಿಡಿಯಲು ಪ್ರಯತ್ನಿಸುತ್ತಿದ್ದ ಬ್ರಿಟಿಶರಿಗೆ ಟಿಪ್ಪುವಿನ ಮರಣವು ಕರ್ನಾಟಕದ ಸಂಸ್ಥಾನಗಳನ್ನು ವಶಪಡಿಸಿಕೊಳ್ಳಲು ಸುಲಭವಾಯಿತು. ತಿ.ತಾ.ಶರ್ಮಾ ಅವರು ಟಿಪ್ಪುವಿನ ಪತನ ಕುರಿತು "ಈ ನಾಡಿನ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯನ್ನು ನಾಲ್ಕು ಪರ್ವಗಳಾಗಿ ವಿಂಗಡಿಸಿದ್ದಾರೆ. ಮೊದಲನೆ ಪರ್ವದಲ್ಲಿ (೧೭೬೦–೧೭೮೦) ತಂದೆ ಮಕ್ಕಳಿಬ್ಬರು (ಹೈದರ ಮತ್ತು ಟಿಪ್ಪು) ಪರದೇಶೀಗಳಿಂದ, ಮುಖ್ಯವಾಗಿ ಬ್ರಿಟಿಶರಿಂದ ಭಾರತವನ್ನು ಉಳಿಸಬೇಕೆಂದು ಅವರನ್ನು ಈ ದೇಶದಿಂದ ಓಡಿಸಬೇಕೆಂದು ದೂರದೃಷ್ಟಿಯುತರಾಗಿ, ಆಲೋಚನೆ ಮಾಡಿ ಹೋರಾಡಿದರು. ತಕ್ಕ ಮಟ್ಟಿಗೆ ಯಶಸ್ವಿಗಳು ಆದರು. ತಂದೆ ಹೈದರ್ ವಿಜಯಸ್ಕಂದವಾರದಲ್ಲೇ ದೇಹವನ್ನು ತ್ಯಜಿಸಿದ. ಮಗ ಟಿಪ್ಪುವಾದರೂ ಶ್ರೀರಂಗಪಟ್ಟಣ ಕೋಟೆಯ ಉತ್ತರ ದ್ವಾರದ ರಣಭೂಮಿಯಲ್ಲಿ

ವೀರಾವೇಶದಿಂದ ಹೋರಾಡುತ್ತ ಬಿದ್ದು, ಸತ್ತು ಸ್ವರ್ಗಕ್ಕೇರಿದ! ಶ್ರೀರಂಗಪಟ್ಟಣದ ಪತನವೆಂದರೆ ಮೈಸೂರಿನ-ಕರ್ನಾಟಕ ಸ್ವಾತಂತ್ರ್ಯದ ವಿನಾಶ" (ತಿ.ತಾ ಶರ್ಮ, ಕರ್ಣಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ-೧೮೦೦-೧೮೫೭ ಪುಟ-ಲೇಖಕರ ಭಿನ್ನಹ) ಎಂದು ಹೇಳಿದ್ದಾರೆ.

ಟಿಪ್ಪು ನಂತರ ಪ್ರಬಲಗೊಳ್ಳುತ್ತಿದ್ದ ಬ್ರಿಟಿಶರು, ಇಲ್ಲಿಯ ಸಂಸ್ಥಾನಿಕರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಸಹಾಯಕ ಸೈನ್ಯಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗಳನ್ನು ಜಾರಿಗೊಳಿಸಿದರು. ಈ ನೀತಿಗಳಿಂದ ಭಾರತದಾದ್ಯಂತ ಅನೇಕ ರಾಜರು, ಸಂಸ್ಥಾನಿಕರು, ಜಮೀನ್ದಾರರು ಮತ್ತು ದೇಶಮುಖರು ಬ್ರಿಟಿಶರ ವಿರುದ್ಧ ಹೋರಾಡಿದ್ದಾರೆ. ಇವರೆಲ್ಲರ ಹೋರಾಟಗಳ ಉದ್ದೇಶ ಬ್ರಿಟಿಶರನ್ನು ಕರ್ನಾಟಕದಿಂದ (ಭಾರತ) ಓಡಿಸಿ ಸ್ವಾತಂತ್ರ್ಯ ಭಾರತವನ್ನು ಕಟ್ಟದೇ ಇದ್ದರೂ, ಬ್ರಿಟಿಶರ ವಿರುದ್ಧ ೧೮೫೭ರ ದಂಗೆಗೆ ಕಾರಣಗಳಾದವು. ಝಾನ್ಸಿರಾಣಿ ಲಕ್ಷ್ಮೀಬಾಯಿ, ಕರ್ನಾಟಕದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ನರಗುಂದದ ಬಾಬಾಸಾಹೇಬ ಮುಂತಾದವರು ಹೋರಾಡಿದರು. ಮೈಸೂರು ಅರಸರು ಕಾನೂನಾತ್ಮಕ ಹೋರಾಟ ನಡೆಸಿದರು. ಟಿಪ್ಪು ಕಾಲವಾದ ನಂತರ ಕರ್ನಾಟಕದಲ್ಲಿ ಧೋಂಡಿಯವಾರ್ಘನ ಹೋರಾಟ ಮುಖ್ಯವಾದದ್ದು. ಹೈದರಾಲಿ ಮತ್ತು ಟಿಪ್ಪುವಿನ ಸೈನ್ಯದಲ್ಲಿ ಧೋಂಡಿಯು ತನ್ನೂರಾದ ಬಿದನೂರಿಗೆ ಮರಳಿ ಬ್ರಿಟಿಶರ ನೀತಿಗಳಿಂದ ಸಂತ್ರಸ್ಥರಾಗಿದ್ದ ಕೆಲವರನ್ನು ಸೇರಿಸಿ, ಸೈನ್ಯಕಟ್ಟಿ ಬ್ರಿಟಿಶರ ವಿರುದ್ಧ ಹೋರಾಟ ಆರಂಭಿಸಿದನು. ನೆರೆಯ ಅರಸರುಗಳಿಗೆ ಪತ್ರ ಬರೆದು ಸಮಾನ ವೈರಿಗಳಾದ ಬ್ರಿಟಿಶರನ್ನು ಓಡಿಸಲು ಸಹಾಯ ಕೇಳಿದನು. ಟಿಪ್ಪುವಿನ ಹಾಗೆ ಪರಾಕ್ರಮಿಯಾದ ಧೋಂಡಿಯಾನ ಧೈರ್ಯಕ್ಕೆ ಹೆದರಿದ ಬ್ರಿಟಿಶರು ಧೋಂಡಿಯಾನನ್ನು ನೀಚಕೋರ, ಸುಲಿಗೆ ಕೋರನೆಂದು ಏಕಪಕ್ಷೀಯವಾಗಿ ಆಪಾದಿಸಿ, ಅವನನ್ನು ಕೊಲ್ಲಲು ಟಿಪ್ಪುವನ್ನೇ ಸೋಲಿಸಿದ ಕರ್ನಲ್ ವೆಲ್ಲೆಸ್ಲಿಯನ್ನೇ ನೇಮಿಸಿದರು. ಇಂತ ಹೋರಾಟಗಾರರ ಚರಿತ್ರೆಯನ್ನು ಬ್ರಿಟಿಶರು ಇದೆ ರೀತಿ ನಿರ್ಮಿಸಿದ್ದಾರೆ. ವೆಲೆಸ್ಲಿಯು ಪೇಶ್ವೆ ಮತ್ತು ನಿಜಾಮನ ಸೈನ್ಯದ ನೆರವಿನಿಂದ ಧೋಂಡಿಯಾನನ್ನು ೧೮೫೭ರಲ್ಲಿ ಗುಂಡಿಕ್ಕಿ ಕೊಂದನು. ಸ್ಥಳೀಯ ರಾಜರ ಈ ಸ್ವರಾಜ್ಯ ಪರಿಪಾಲನಾ ನೀತಿಗಳೇ ಅವರನ್ನು ಸ್ವಾತಂತ್ರ್ಯ ಹೋರಾಟಗಾರರು ಎನ್ನುವುದಕ್ಕೆ ತೊಡಕುಗಳಾಗಿವೆ ಎಂದು ಹೇಳಬಹುದು.

೧೭೯೯ರಿಂದ ೧೮೫೭ರ ಕಾಲದ ನಡುವೆ ಹಲವಾರು ದಂಗೆಗಳು ನಡೆದಿವೆ. ಕರ್ನಾಟಕದಲ್ಲಿ ಟಿಪ್ಪುವಿನ ಮರಣದ ನಂತರ ಬ್ರಿಟಿಶರು, ಮೈಸೂರು ಸಾಮ್ರಾಜ್ಯವನ್ನು ಹಲವಾರು ಭಾಗಗಳಾಗಿ ವಿಂಗಡಿಸಿ ಮರಾಠ ಮತ್ತು ನಿಜಾಮರಿಗೆ ಹಂಚಿದರು. ಈ ಸಂದರ್ಭದಲ್ಲಿ ಆರ್ಥಿಕ ತೊಂದರೆಗೆ ಸಿಲುಕಿದ್ದ ರೈತರು, ಪಾಳೇಗಾರರು ದಂಗೆ ಎದ್ದರು. ಕರ ನಿರಾಕರಣೆಗಾಗಿ ೧೮೨೪ರಲ್ಲಿ ಸಿಂಧಗಿಯ ರೈತರು ಬ್ರಿಟಿಶರ ವಿರುದ್ಧ ಹೋರಾಟಕ್ಕೆ ಇಳಿದರು. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಕಿತ್ತೂರು ಸಂಸ್ಥಾನವು ಬ್ರಿಟಿಶರ

ವಿರುದ್ಧ ಯುದ್ಧ ಸಾರಿತು. ಕರ್ನಾಟಕದಲ್ಲಿ ಟಿಪ್ಪು ಮತ್ತು ಚೆನ್ನಮ್ಮನ ಬ್ರಿಟಿಶ್ ವಿರೋಧಿ ನೀತಿಗಳನ್ನು ಮುಖ್ಯವಾಗಿ ಪರಿಗಣಿಸಲಾಗುತ್ತದೆ. ೧೭೮೫ರಲ್ಲಿ ಕಿತ್ತೂರು ಸಂಸ್ಥಾನದ ಅರಸನಾಗಿ ಪಟ್ಟಕ್ಕೇರಿದ ಮಲ್ಲಸರ್ಜ ದೇಸಾಯಿಯು ಬ್ರಿಟಿಶರ ಪರವಾದ ನೀತಿಗಳನ್ನು ಅನುಸರಿಸುತ್ತಿದ್ದರಿಂದ ಬ್ರಿಟಿಶರು ಕಿತ್ತೂರಿನ ಸಂಸ್ಥಾನದ ಆಡಳಿತವನ್ನು ಮಲ್ಲಸರ್ಜನ ವಂಶಸ್ಥರಿಗೆ ಸ್ವತಂತ್ರವಾಗಿ ಆಡಳಿತ ನಡೆಸಲು ಬಿಟ್ಟುಕೊಟ್ಟರು. ಮಲ್ಲಸರ್ಜನ ಮರಣದ ನಂತರ ರಾಣಿ ಚೆನ್ನಮ್ಮ ಕಿತ್ತೂರಿನ ಅಧಿಕಾರ ವಹಿಸಿಕೊಂಡಳು. ಆದರೆ ಭೂದಾಹದ ಕಂಪನಿಯ ರಾಜ್ಯ ವಿಸ್ತಾರದ ನೀತಿಗಳಲ್ಲೊಂದಾದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದ ಧಾರವಾಡದ ಕಲೆಕ್ಟರ್ ಆಗಿದ್ದ ಬ್ರಿಟಿಶ್ ಅಧಿಕಾರಿ ಥ್ಯಾಕರೆ, ಈ ಹಿಂದೆ ಹೇಳಿದ ಮಾತಿನಂತೆ ನಡೆಯದೇ ೧೮೨೪ರಲ್ಲಿ ಕಿತ್ತೂರಿನ ಮೇಲೆ ಮುತ್ತಿಗೆ ಹಾಕಿದ. ಈ ಭೀಕರ ಸಮರದ ಸನ್ನಿವೇಶ ಮತ್ತು ಚೆನ್ನಮ್ಮನ ಸಾಹಸಮಯ ಸಮರ ಕಂಡು ಬ್ರಿಟಿಶರ ಎದೆ ಅಳುಕಿತು. ಥ್ಯಾಕರೆಯ ಹತ್ಯೆಯೊಂದಿಗೆ ಕಿತ್ತೂರು ಜಯಶಾಲಿಯಾಯಿತು. ರಾಣಿ ಚೆನ್ನಮ್ಮನ ವ್ಯಕ್ತಿತ್ವದ ಕುರಿತು ಎಫ್ಎಂಸಿ ಬಾಂಬೆಯ ವರದಿಯಲ್ಲಿ "ಕಾಗತಿ ದೇಶಾಯಿಗಳ ಮಗಳೀಕೆ. ಸಣ್ಣ ವಯಸ್ಸಿನಿಂದಲೂ ಈಕೆ ರಾಜನೀತಿ, ಜ್ಞಾನ ನೈಪುಣ್ಯತೆ ಪಡೆದಿದ್ದಳು. ಕತ್ತಿವರಸೆಯ ಆಟವೆಂದರೆ ಆಕೆಗೆ ಪ್ರಾಣ. ಬಿಲ್ಲು ಬಾಣ, ಕುದುರೆ ಸವಾರಿಗಳಲ್ಲಿ ವಿಶೇಷ ಪರಿಶ್ರಮ. ವಿವಾಹ ನಂತರ ಪತಿ ಮಲ್ಲಸರ್ಜನೊಂದಿಗೆ ಇದ್ದು ಸಂಗ್ರಾಮ ಕಲಾಕೋವಿದಳೆನಿಸಿದಳು. ಚೆನ್ನಮ್ಮ ರಾಣಿ ಮೇಧಾವಿ, ವಿವೇಕಿ, ಧೈರ್ಯಶಾಲಿ. ತನ್ನ ಪ್ರಜೆಗಳ ಯೋಗಕ್ಷೇಮ ಸಾಧನೆಗಾಗಿ ಆಕೆ ಮುಟ್ಟದ ಮಟ್ಟವಿಲ್ಲ. ಈ ಕಾರ್ಯಾವಸರದಲ್ಲಿ ಈ ಜಾತಿ, ಆ ಜಾತಿಯೆಂಬ ಭೇದಭಾವವಿಲ್ಲ. ಮಕ್ಕಳನ್ನು ಕಂಡರಂತು ಚೆನ್ನಮ್ಮನ ದಯೆಗೆ ಪಾರವೇ ಇಲ್ಲ. ಕಿತ್ತೂರಿನ ಸಮರ-ವೈರಕಾಲದಲ್ಲಿ ಹನ್ನೆರಡು ಮಂದಿ ಬ್ರಿಟಿಶರ ಮಕ್ಕಳನ್ನು ಬಂಧಿಸಿ ಆಕೆಯವರು ತಂದು ನಿಲ್ಲಿಸಿದರು. ಆಗ ಚೆನ್ನಮ್ಮನು ಆ ಮಕ್ಕಳನ್ನು ಬ್ರಿಟಿಶರ ಕಡೆಗೆ ಕೊಟ್ಟು ಕಳುಹಿಸಿದಳು. ಅನಾಥರು, ಅಂಗವಿಕಲರನ್ನು ಕಂಡರೆ ಚೆನ್ನಮ್ಮನ ಹೃದಯ ಕರಗಿ ನೀರಾಗುತ್ತಿತ್ತು. ಕಿತ್ತೂರು ಸಂಸ್ಥಾನದ ಪ್ರಜೆಗಳಾಕೆಯ ಗುಣಗಾನ ಮಾಡುತ್ತಿದ್ದುದ್ದು ; ಆಕೆಯನ್ನು ದೇವಿಯೆಂದೇ ಭಾವಿಸಿ ಪೂಜಿಸುತ್ತಿದ್ದರು. ಇಂದಿಗೂ ಕಿತ್ತೂರು ಚೆನ್ನಮ್ಮ ರಾಣಿಯ ಸ್ಮರಣೆಯೂ ಹಾಡುಗಳಲ್ಲಿ, ಲಾವಣಿಗಳಲ್ಲಿ, ಭಾವಗೀತೆಯಲ್ಲಿ ಸುರಕ್ಷಿತವಾಗಿದೆ. ಕನ್ನಡಿಗರ ನಾಲಿಗೆಯಲ್ಲಿ ಆಕೆಯ ಹೆಸರು ನುಡಿಯುತ್ತಿದೆ." ಎಂಬ ವರ್ಣನೆಯ ಮಾತುಗಳನ್ನು ಹೇಳಲಾಗಿದೆ. (ತಿ.ತಾ ಶರ್ಮ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ-೧೮೦೦-೧೮೫೭, ಪು.೧೦,)

ದಕ್ಷಿಣ ಭಾರತದ ಕಮೀಷನರ್ ಆಗಿದ್ದ ಚಾಪ್ಲಿನ್ ಕರ್ನಲ್ ಸಿ. ಬಿ. ಡೀಕನು ಥ್ಯಾಕರೆಯ ನಂತರ ಸೈನ್ಯದೊಂದಿಗೆ ಕಿತ್ತೂರಿನ ಮೇಲೆ ಮುತ್ತಿಗೆ ಹಾಕಿ ರಾಣಿ ಚೆನ್ನಮ್ಮನನ್ನು ಬಂಧಿಸುವುದರೊಂದಿಗೆ ಕಿತ್ತೂರನ್ನು ವಶಪಡಿಸಿಕೊಂಡನು. ೧೮೨೯ರಲ್ಲಿ ಕಿತ್ತೂರಿನ ಸೈನಿಕನಾಗಿದ್ದ

ರಾಯಣ್ಣನು ರಾಣಿ ಚೆನ್ನಮ್ಮನ ಮರಣದ ನಂತರ ಕಿತ್ತೂರಿನ ಬಿಡುಗಡೆಗಾಗಿ ಮತ್ತೆ ಯುದ್ಧ ಸಾರಿದನು. ಬ್ರಿಟಿಶ್ ವಿರುದ್ಧದ ಕಿತ್ತೂರಿನ ಹೋರಾಟದಲ್ಲಿ ರಾಣಿ ಚೆನ್ನಮ್ಮನ ಹೋರಾಟ ಮೊದಲ ಘಟ್ಟವಾದರೆ ರಾಯಣ್ಣನ ಹೋರಾಟ ಎರಡನೇ ಘಟ್ಟವಾಗಿದೆ.

ಮತ್ತೆ ಬ್ರಿಟಿಶರ ನೀತಿಗಳಿಂದ ೧೮೩೧ರಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರ ಕಳೆದುಕೊಂಡರು. ನಂತರ ಮೈಸೂರಿನ ಅಧಿಕಾರ ವಹಿಸಿಕೊಂಡಿದ್ದ ಬ್ರಿಟಿಶರ ವಿರುದ್ಧ ೧೮೩೩ರ ಹೊತ್ತಿಗೆ ದಕ್ಷಿಣ ಕನ್ನಡ ಮತ್ತು ಕೊಡಗಿನಲ್ಲಿಯೂ ಬಂಡಾಯಗಳು ಆರಂಭವಾದವು. ಈ ಎರಡು ಸಂಸ್ಥಾನಗಳನ್ನು ಪುನಃ ಸ್ಥಾಪಿಸುವುದಕ್ಕಾಗಿ ಅಪರಾಂಪರ ಎಂಬುವವನು ಕೊಡಗಿನ ಜನರಿಗೆ ಮನವಿ ಮಾಡಿದನು. ಮಂಗಳೂರಿನ ನಿವಾಸಿಗಳಿಗೂ, ಸಾಹುಕಾರರಿಗೂ ನಿರೂಪ ಕಳುಹಿಸಿದನು. ಅದು ಹೀಗಿದೆ. "ಆಂಗ್ಲರ ವಿರುದ್ಧ ಯುದ್ಧ ಮಾಡಲು ಸ್ವಾಮಿಗಳ ಸೈನಿಕರು ಬಂದಿಳಿದಿದ್ದಾರೆ. ನೀವೆಲ್ಲ ನಮ್ಮೊಂದಿಗೆ ಸೇರಬೇಕೆಂದು ನಿಮಗೆ ಅಪ್ಪಣೆ ಮಾಡಲು ನಾನು ಆಜ್ಞಾಪನಾಗಿದ್ದೇನೆ. ನೀವೆಲ್ಲ ನಿಮ್ಮಲ್ಲಿರುವ ಆಯುಧಗಳನ್ನು ಹಿಡಿದು ಬರತಕ್ಕದ್ದು. ನೀವು ಈ ಆಜ್ಞೆಗೆ ತಪ್ಪಿ ನಡೆದರೆ ನಿಮ್ಮ ಮನೆತನದವರೆಲ್ಲ ತಲೆಗಳನ್ನು ಕತ್ತರಿಸಿ ಹಾಕಲಾದೀತು. ಹನ್ನೆರಡು ಲಕ್ಷ ಸೈನಿಕರ ದಂಡು ಸೇರಲಿದೆ. ಆದ ಕಾರಣ ತಕ್ಷಣ ನೀವು ಸ್ವಾಮಿಗಳ ಸಹಾಯಕ್ಕೆ ಬಂದು ಸೈನ್ಯ ಸೇರುವಿರೆಂದು ಸುದ್ದಿಯನ್ನು ಕಳುಹಿಸತಕ್ಕದ್ದು. ಇಲ್ಲವಾದರೆ ಇದರ ದುಷ್ಪರಿಣಾಮಕ್ಕೆ ನೀವೇ ಗುರಿಯಾಗುವಿರಿ. ನೀವೆಲ್ಲ ಸ್ವಾಮಿಗಳ ಸೈನ್ಯ ಸೇರಿದಿರಾದರೆ ನಿಮ್ಮನ್ನು ಕಾಪಾಡಲಾಗುತ್ತದೆ. ಈ ನಿರೂಪ ಮುಟ್ಟಿದ ಕೂಡಲೇ ಉತ್ತರ ಬರೆಯತಕ್ಕದ್ದು." (ತಿ.ತಾ ಶರ್ಮ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ–೧೮೦೦–೧೮೫೭, ಪು.೩೦,)

ಕರ್ನಾಟಕದಲ್ಲಿ ಕಿತ್ತೂರಿನ ಸಂಸ್ಥಾನದಂತೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ವಿರುದ್ಧ ನರಗುಂದದ ಸಂಸ್ಥಾನವು ಬಂಡಾಯವೆದ್ದಿತು. ಬ್ರಿಟಿಶರ ಬಲವನ್ನು ಚೆನ್ನಾಗಿ ಅರಿತಿದ್ದ ಬಾಬಾ ಸಾಹೇಬನು ತನ್ನ ಸುತ್ತಮುತ್ತಲಿನ ಸಂಸ್ಥಾನಿಕರಾದ ಮುಂಡರಗಿ ಭೀಮರಾಯ, ಹಮ್ಮಗಿಯ ಕೆಂಚನಗೌಡ, ಸೊರತುರು ಗೋವಿನಕೊಪ್ಪದ ದೇಸಾಯಿಗಳಿಗೆ ಪತ್ರ ವ್ಯವಹಾರದಿಂದ ಯುದ್ಧ ಸಾರಿದ. ಕೊನೆಗೆ ಬ್ರಿಟಿಶರಿಗೆ ಸೆರೆಸಿಕ್ಕು ೧೮೫೮ರಂದು ಗಲ್ಲಿಗೇರಿದ.

೧೮೫೭ರ ದಂಗೆಯ ತರುವಾಯ ಭಾರತದ ಬ್ರಿಟಿಶ್ ಕಂಪನಿಯ ಆಡಳಿತವು ಬ್ರಿಟನ್ ರಾಣಿಗೆ ಹಸ್ತಾಂತರವಾಯಿತು. ೧೮೦೦ ರಿಂದ ೧೮೫೭ರ ವರೆಗೆ ಭಾರತದಲ್ಲಿ ಬ್ರಿಟಿಶರ ವಿರುದ್ಧ ಭಾರತೀಯ ರಾಜರು ನಡೆಸಿದ ಒಂದೊಂದು ಹೋರಾಟಗಳ ಉದ್ದೇಶ ಬ್ರಿಟಿಶರನ್ನು ಭಾರತ ಬಿಟ್ಟು ಓಡಿಸುವುದೆ ಆಗಿದಿದ್ದರೆ, ಭಾರತವು ೧೮೫೭ ರಲ್ಲಿಯೇ ಸ್ವಾತಂತ್ರ್ಯವಾಗುತ್ತಿತ್ತು. ಆದರೆ ಈ ದಂಗೆಗಳು ಭಾರತ ಸ್ವಾತಂತ್ರ್ಯದ ಐಕ್ಯತೆಯ

ಹೋರಾಟಗಳಾಗಿರದೆ ಬ್ರಿಟಿಶರ ನೀತಿಗಳ ವಿರುದ್ಧ, ತಮ್ಮ ತಮ್ಮ ಸಂಸ್ಥಾನಗಳನ್ನು ಉಳಿಸಿಕೊಳ್ಳಲು ನಡೆಸಿದ ಸಂಸ್ಥಾನಿಕರ ಹೋರಾಟಗಳಾಗಿದ್ದವು. ಈ ಕಾಲಘಟ್ಟದಲ್ಲಿ ಬ್ರಿಟಿಶ್ ಸರ್ಕಾರವು ಕಂಪನಿ ಸರ್ಕಾರದ ದೋಷಗಳನ್ನು ಕೊನೆಗೊಳಿಸಿತು. ನಂತರ ಮುಖ್ಯವಾಗಿ ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ ಆಗುವುದರ ಮೂಲಕ ಭಾರತದ ಸ್ವಾತಂತ್ರ್ಯದ ಹಾದಿ ಸುಗಮವಾಯಿತು. ಪತ್ರಿಕೆಗಳು ಭಾರತೀಯ ಕಾಂಗ್ರೆಸ್ ಮತ್ತು ಅದರ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿದವು. ಇಂಗ್ಲಿಶ್ ಶಿಕ್ಷಣ ಪಡೆದ ಭಾರತದ ಮೊದಲ ತಲೆಮಾರಿನ ಯುವಕರು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಹೋರಾಟಕ್ಕೆ ಇಳಿದರು. ಕರ್ನಾಟಕ ಪ್ರಕಾಶಿಕ, ಹಿತಬೋಧಿನಿ, ಧನುರ್ಧಾರಿ, ದೇಶಾಭಿಮಾನಿ ಪತ್ರಿಕೆಗಳು ಕರ್ನಾಟಕದ ಜನರಿಗೆ ಸ್ವಾತಂತ್ರ್ಯದ ಬಗ್ಗೆ ಅರಿವು ಮೂಡಿಸಿದವು. ಕನ್ನಡ ಸಾಹಿತ್ಯವು ಕೂಡ ಸ್ವಾತಂತ್ರ್ಯ ಚಳುವಳಿಯಂತ ಘಟನೆಗಳನ್ನು ವಸ್ತುವಾಗಿಸಿಕೊಂಡು ರಚನೆಗೊಂಡಿತು. ೧೯೫೫ರಲ್ಲಿ ಕರ್ನಾಟಕ ಸಂಘ, ಕನ್ನಡ ಸಾಹಿತ್ಯ ಸಂಸ್ಥೆಗಳ ಸ್ಥಾಪನೆ ಈ ಹೋರಾಟಕ್ಕೆ ಮತ್ತಷ್ಟು ಪುಷ್ಟಿ ನೀಡಿದವು.

ಗಾಂಧಿ ಆಗಮನ

ಭಾರತದ ಆಡಳಿತವು ಕಂಪನಿಯ ಸರ್ಕಾರದಿಂದ ಬ್ರಿಟಿಶ್ ರಾಣಿಗೆ ಹಸ್ತಾಂತರಗೊಂಡು ಭಾರತದ ಸ್ವಾತಂತ್ರ್ಯಕ್ಕಾಗಿ ಕಾನೂನುಬದ್ಧ ಹೋರಾಟಗಳಿಗೆ ಅವಕಾಶ ನೀಡಿತು. ಗಾಂಧೀಜಿಯವರ ಆಗಮನ ಸ್ವಾತಂತ್ರ್ಯ ಹೋರಾಟದ ಹಾದಿಯನ್ನು ಮತ್ತಷ್ಟು ಬಲಪಡಿಸಿತು. ಕಥೆ, ಕಾದಂಬರಿ, ಕಾವ್ಯ, ನಾಟಕ, ಲಾವಣಿ ಮುಂತಾದ ಸಾಹಿತ್ಯ ಪ್ರಕಾರಗಳು ಸ್ವಾತಂತ್ರ್ಯ ಚಳುವಳಿ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದವು. ಲಾವಣಿಯು ಕಾಂಗ್ರೆಸಿನ ಭಾಗವೇ ಆಗಿತ್ತು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ಜಾತಿಭೇದ ಮಾಡದೆ ಜನರನ್ನು ತನ್ನತ್ತ ಸೆಳೆಯಿತು. ಬಾಲಗಂಗಾಧರ್ ತಿಲಕರ ವಿಚಾರಗಳು ರಾಷ್ಟ್ರೀಯ ಹೋರಾಟಕ್ಕೆ ಸ್ಫೂರ್ತಿಯಾದವು. ಹಾಗೆ ಸ್ವದೇಶಿ ಚಳುವಳಿ, ಸತ್ಯಾಗ್ರಹದಂತ ಹೋರಾಟಗಳು ಹಳ್ಳಿಗಳನ್ನು ತಲುಪಿದವು.

ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿದ್ದ ಬದಲಾವಣೆಗಳು ಭಾರತದ ಮೇಲೆಯೂ ಪ್ರಭಾವ ಬೀರಿದವು. ಅದು ಕರ್ನಾಟಕಕ್ಕೂ ವ್ಯಾಪಿಸಿತು. ಜಾಗತಿಕ ಯುದ್ಧಗಳ ಪರಿಣಾಮಗಳು ಮತ್ತು ಅದರ ಪ್ರಜಾಪ್ರಭುತ್ವ ಶಕ್ತಿಗಳ ವಿಜಯ ಇಂಗ್ಲಿಶ್ ಶಿಕ್ಷಣ, ಪಾಶ್ಚಿಮಾತ್ಯ ಚಿಂತನೆಗಳು, ರಷ್ಯಾದಲ್ಲಿ ನಡೆದ ಕೈಗಾರಿಕಾ ಕ್ರಾಂತಿ ಹಾಗೂ ಪತ್ರಿಕೋದ್ಯಮ ಮುಂತಾದವುಗಳು ವಿವಿಧ ವಿಭಾಗಗಳಲ್ಲಿ ನಡೆಯುತ್ತಿದ್ದ ರಾಜಕೀಯ, ಸಾಮಾಜಿಕ ವಿದ್ಯಮಾನಗಳು ಬ್ರಿಟಿಶರ ಇಬ್ಬಗೆ ನೀತಿಗಳ ವಿರುದ್ಧ ಜನರನ್ನು ಎಚ್ಚರಿಸಿದವು. ಜಾತಿ, ವರ್ಗ ಮರೆತು ಬ್ರಿಟಿಶರಿಂದ ಮತ್ತು ಸಂಸ್ಥಾನಿಕರಿಂದ ಭಾರತವನ್ನು ಬಿಡುಗಡೆಗೊಳಿಸಲು

ಸಾಮೂಹಿಕವಾಗಿ ಜನರು ಹೋರಾಡಿದರು. ಈ ಸಂದರ್ಭದಲ್ಲಿ ಜಾತಿ ಮತ್ತು ವರ್ಗಭೇದಗಳು ಸತ್ವವನ್ನು ಕಳೆದುಕೊಂಡವು. ಹಾಗಾಗಿ ಅಂಬೇಡ್ಕರ್ ಅವರು ರಾಜಕೀಯ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಸ್ವಾತಂತ್ರ್ಯ ಹಾಗೂ ಅಸಮಾನತೆ ಇಲ್ಲದ ರಾಜಕೀಯ ಸಮಾಜವನ್ನ ನಿರ್ಮಿಸಲು ಪ್ರಯತ್ನಿಸಿದರು. ಹಾಗೆ ಆ ನೆಲೆಯಲ್ಲಿಯೇ ಅವರು ಚಳುವಳಿಯನ್ನು ರೂಪಿಸಿದರು. ಮತ್ತು ಸ್ವಾತಂತ್ರ್ಯ ಭಾರತವನ್ನು ಕಟ್ಟಲು ಪ್ರಯತ್ನಿಸಿದರು.

೧೯೪೨ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯು ಸ್ವಾತಂತ್ರ್ಯ ಚಳುವಳಿಯ ಪ್ರಮುಖವಾದ ಹಂತ. ೧೯೩೯ ರಿಂದ ೧೯೪೫ ಅವಧಿಯಲ್ಲಿ ನಡೆದ ಎರಡನೇ ಜಾಗತಿಕ ಯುದ್ಧದಲ್ಲಿ ಭಾರತೀಯ ಸೈನಿಕರು ಪಾಲ್ಗೊಳ್ಳದೆ ಇದ್ದದ್ದರಿಂದ ಇನ್ನಷ್ಟು ಬ್ರಿಟಿಶ್ ಮಿತ್ರಕೂಟಕ್ಕೆ ಸೋಲಾಯಿತು. ನಮಗೆ ಸ್ವಾತಂತ್ರ್ಯವಿಲ್ಲದೇ ಯುದ್ಧದಲ್ಲಿ ಪಾಲ್ಗೊಳ್ಳಲಾಗದು ಎಂದು ಭಾರತೀಯ ನಾಯಕರು ಪಟ್ಟು ಹಿಡಿದರು. ಆಗ ಕಾಂಗ್ರೆಸ್ ಬ್ರಿಟಿಶರಿಗೆ ಭಾರತ ಬಿಟ್ಟು ತೊಲಗಿ ಎಂಬ ಕರೆ ಕೊಟ್ಟಿತು. ಆಗ ಬ್ರಿಟಿಶ್ ಸರ್ಕಾರ ಕಾಂಗ್ರೆಸ್ ನಾಯಕರನ್ನು ಬಂಧಿಸಿ ಸೆರೆಯಲ್ಲಿಟ್ಟಿತು. 'ಭಾರತ ಬಿಟ್ಟು ತೊಲಗಿ', 'ಮಾಡು ಇಲ್ಲವೇ ಮಡಿ' ಎಂಬ ನಿರ್ಣಯ ವಿದ್ಯಾರ್ಥಿಗಳನ್ನು, ಮಹಿಳೆಯರನ್ನು ವ್ಯಾಪಿಸಿ ಹೋರಾಟ ಪ್ರಬಲಗೊಂಡಿತು. ಭೂಗತ ಕ್ರಾಂತಿಗಳು ಆರಂಭಗೊಂಡವು. ಕರ್ನಾಟಕದಲ್ಲಿ ಈ ಚಳುವಳಿಯ ಭಾಗವಾಗಿ ಹಲವಾರು ಹೋರಾಟಗಳು ನಡೆದವು. ಅವುಗಳಲ್ಲಿ ಈಸೂರು ಹೋರಾಟ ಪ್ರಮುಖವಾದದ್ದು.

'ಏಸೂರು ಕೊಟ್ಟರು ಈಸೂರು ಕೊಡೆವು' ಎಂಬ ಮಾತು ಸ್ವಾತಂತ್ರ್ಯ ಚಳುವಳಿಯಲ್ಲಿ ಈಸೂರಿನ ಪಾತ್ರವನ್ನು ಗುರುತಿಸುತ್ತದೆ. ಅಲ್ಲಿಯ ಜನ ಬ್ರಿಟಿಶರ ವಿರುದ್ಧ ಸ್ವಾತಂತ್ರ್ಯ ಪಡೆಯುವದಕ್ಕಿಂತ ಪೂರ್ವದಲ್ಲಿಯೇ ಸ್ವಾತಂತ್ರ್ಯ ಘೋಷಿಸಿಕೊಂಡು, ಊರಿನ ದೇವಾಲಯವನ್ನೇ ಆಡಳಿತ ಕಚೇರಿಯನ್ನಾಗಿ ಮಾಡಿಕೊಂಡು ಸ್ವಾತಂತ್ರ್ಯ ಆಡಳಿತ ನಡೆಸಿದರು. ಬ್ರಿಟಿಶ್ ಸಾಮ್ರಾಜ್ಯಶಾಹಿಯು ಈಸೂರು ಹೋರಾಟವನ್ನು ಹತ್ತಿಕ್ಕಲು ಮೈಸೂರು ರಾಜಶಾಹಿಗೆ ಹುಕುಂ ನೀಡಿ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿತು. ಈಸೂರಿಗೆ ಬಂದ ಪೋಲೀಸ್ ಅಧಿಕಾರಿಗಳಿಗೆ ಜನರು ಖಾದಿ ಧರಿಸಲು ಹೇಳಿದರು. ರೊಚ್ಚಿಗೆದ್ದ ಪೊಲೀಸರು ಲಾಠಿಚಾರ್ಜ್ ಮಾಡಿದರು. ಈ ಗಲಾಟೆಯಲ್ಲಿ ಅಮಲ್ದಾರ ಮತ್ತು ಸಬ್‌ಇನ್‌ಸ್ಪೆಕ್ಟರ್ ಸಾವಿಗೀಡಾದರು. ಈ ಕ್ರಾಂತಿಯಿಂದ ಭಯಗೊಂಡ ಅಧಿಕಾರಿಗಳು ಮೇಲಾಧಿಕಾರಿಗಳಿಗೆ ಭೂಗತ ಚಳುವಳಿಗಾರರ ಕುರಿತು ಮಾಹಿತಿ ಕೊಡಲು ಹಿಂಜರಿಯುತ್ತಿದ್ದರು.

ಈ ಸಂಸ್ಥಾನಿಕ ಹೋರಾಟಗಳು ಪ್ರಾದೇಶಿಕವಾಗಿ ಜನರ ಮನಸ್ಸಿನಲ್ಲಿ ಅಚ್ಚಳಿಯದ ಪರಿಣಾಮಗಳನ್ನು ಬೀರಿದವು. ಈ ಪರಿಣಾಮ ಜನಮಾನಸದಲ್ಲಿ ಒಂದು ಕಿಚ್ಚನ್ನು ಹಚ್ಚಿದವು. ಇದು ಕಲೆ, ಸಾಹಿತ್ಯ ರೂಪದಲ್ಲಿ ಪ್ರಕಟವಾಗಲು ಕಾರಣವೂ ಹೌದು. ಹಾಗಾಗಿ ನಾಟಕಗಳು

ಈ ಸಂದರ್ಭವನ್ನು ಸದುಪಯೋಗಪಡಿಸಿಕೊಂಡ ಬಗೆ ಗಮನಾರ್ಹ ಎನಿಸುವುದು. ಈ ಹಿನ್ನಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯ ಪ್ರಾರಂಭದ ಹಂತವಾಗಿ ಸಂಸ್ಥಾನಗಳ ಚರಿತ್ರೆ ರೂಪುಗೊಂಡ ಬಗೆ ಇಲ್ಲಿ ಮನನೀಯ ಅಂಶವೆನಿಸಿದೆ. ಹೀಗೆ ಭಾರತದ ಬಿಡುಗಡೆಗಾಗಿ ಬ್ರಿಟಿಶರ ವಿರುದ್ಧ ಹಂತ ಹಂತವಾಗಿ ನಡೆದ ಹೋರಾಟಗಳು ಪ್ರಾದೇಶಿಕ ಭೇದಭಾವವಿಲ್ಲದೆ ಜನರನ್ನು ಒಳಗೊಂಡ ಮಹತ್ವದ ಚಳುವಳಿಗಳಾಗಿವೆ.

ಪೂರ್ವಾಧ್ಯಯನಗಳ ಸಮೀಕ್ಷೆ

ಕನ್ನಡ ರಂಗಭೂಮಿ ಮತ್ತು ನಾಟಕ ಸಾಹಿತ್ಯ ಕುರಿತು ಬಹಳಷ್ಟು ಅಧ್ಯಯನಗಳು ನಡೆದಿವೆ. ಕನ್ನಡ ರಂಗಭೂಮಿ ಮತ್ತು ನಾಟಕ ಸಾಹಿತ್ಯದ ಉಗಮ, ಚರಿತ್ರೆ, ಸಂಗೀತ, ರಂಗ-ಪರಿಕರಗಳು, ಬೆಳಕು ಹಾಗೂ ರಂಗಗೀತೆಗಳು ಮುಂದುವರೆದು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಎಂಬ ಎರಡು ಕಾಲಘಟ್ಟಗಳ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಜನಪದ, ಕಂಪನಿ ನಾಟಕಗಳು ಮತ್ತು ಹವ್ಯಾಸಿ ನಾಟಕಗಳು ಎಂಬ ನೆಲೆಯಲ್ಲಿಯೂ ಅಧ್ಯಯನಗಳನ್ನು ಮಾಡಲಾಗಿದೆ. ಅಷ್ಟೇ ಅಲ್ಲದೆ ಸಮುದಾಯ ಕೇಂದ್ರಿತ, ಸ್ತ್ರೀ ಕೇಂದ್ರಿತ ಅಧ್ಯಯನಗಳು ನಡೆದಿವೆ. ನಾಟಕಕಾರರು ಹಾಗೂ ಅವರು ರಚಿಸಿದ ನಾಟಕಗಳನ್ನು ಕುರಿತು ವ್ಯಕ್ತಿ ಮತ್ತು ಪಠ್ಯ, ಪ್ರದರ್ಶನ ಆಧಾರಿತ ಅಧ್ಯಯನಗಳು ನಡೆದಿವೆ. ಕನ್ನಡ ರಂಗಭೂಮಿಯ ಮೇಲೆ ಬಂಗಾಲಿ, ಮರಾಠಿ ಮತ್ತು ಪಾರ್ಸಿ ರಂಗಭೂಮಿಯ ಪ್ರಭಾವ ಪ್ರೇರಣೆಗಳನ್ನು ಕುರಿತು ಅಧ್ಯಯನಗಳು ಸಾಕಷ್ಟು ನಡೆದಿವೆ. ಹಾಗೂ ತೆಲುಗು ಮತ್ತು ಕನ್ನಡ ರಂಗಭೂಮಿಯ ಸಂಬಂಧಾಂತರಗಳ ಕುರಿತು ಚರ್ಚೆಗಳೂ ನಡೆದಿವೆ.

ಪ್ರಸ್ತುತ ಅಧ್ಯಯನ ಸಮೀಕ್ಷೆಯಲ್ಲಿ ಕನ್ನಡ ನಾಟಕಗಳು ಮತ್ತು ಸ್ವಾತಂತ್ರ್ಯ ಚಳುವಳಿ ಸಂದರ್ಭ ಎಂಬ ಅಂಶಗಳಿರುವ ಕೃತಿ, ಲೇಖನ, ಪ್ರಬಂಧಗಳನ್ನು ಕ್ರೋಢಿಕರಿಸಲಾಗಿದೆ. ನೇರವಾಗಿ ಸ್ವಾತಂತ್ರ್ಯ ಚಳುವಳಿ ಮತ್ತು ಕನ್ನಡ ನಾಟಕ ಸಂದರ್ಭ ಮತ್ತು ಸ್ವಾತಂತ್ರ್ಯ ಚಳುವಳಿಯಂತಹ ಸಂದರ್ಭಗಳನ್ನು ಗ್ರಹಿಸಿದ ಅಧ್ಯಯನಗಳನ್ನು ಕ್ರೋಢಿಕರಿಸಲು ಪ್ರಯತ್ನಿಸಲಾಗಿದೆ. ನಾಟಕಕ್ಕೆ ಪೂರಕವಾದ ರಂಗಭೂಮಿ, ರಾಷ್ಟ್ರೀಯತೆ, ವಸಾಹತುಶಾಹಿಯ ವಿಚಾರಗಳನ್ನು ಹಾಗೆಯೇ ಸ್ವಾತಂತ್ರ್ಯ ಚಳುವಳಿಯನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ಗಾಂಧೀಜಿ ಪ್ರತಿನಿಧೀಕರಣ ಕ್ವಿಟ್ ಇಂಡಿಯಾ ಘಟನೆಗಳ ಜೊತೆಗೆ ಅಸ್ಪೃಶ್ಯತೆ, ಪಾನವಿರೋಧ ಇತ್ಯಾದಿ ಪೂರಕ ಅಂಶಗಳ ಚರ್ಚೆಯನ್ನು ಗ್ರಹಿಸಿ ಸಮೀಕ್ಷಿಸಲಾಗಿದೆ.

ರಂಗಭೂಮಿ ಅಷ್ಟೇ ಅಲ್ಲದೆ ಕನ್ನಡ ಮತ್ತು ನಾಟಕ ಸಾಹಿತ್ಯದ ಇತರ ಪ್ರಕಾರಗಳಾದ ಜನಪದ ಸಾಹಿತ್ಯ, ಕಾವ್ಯ, ಕಥೆ, ಕಾದಂಬರಿ ಸಾಹಿತ್ಯವೂ ವಸಾಹತುಶಾಹಿಗೆ ಪ್ರತಿಕ್ರಿಯಿಸಿದ್ದನ್ನು ನೋಡಬಹುದು. ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತಾ ಚಿಂತನೆಯ ಆಯಾಮಗಳು,

ನಾಡು–ರಾಷ್ಟ್ರ ಪರಿಕಲ್ಪನೆ: ಕನ್ನಡ ಕವಿತೆಗಳ ವಾಗ್ವಾದದ ತಾತ್ವಿಕತೆ, ಜನಪದ ಸಾಹಿತ್ಯದ ಲಾವಣಿಗಳ ಮುಖೇನ ವಸಾಹತುಶಾಹಿಗೆ ಪ್ರತಿರೋಧದ ನೆಲೆಗಳು, ನವೋದಯ ಕಾವ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ, ಬೇಂದ್ರೆ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಗಳು, ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿ, ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ ಇನ್ನೂ ಮುಂತಾದ ಅಧ್ಯಯನಗಳು ಕನ್ನಡದ ಸಂದರ್ಭದಲ್ಲಿ ನಡೆದಿವೆ. ಹಾಗೆ ಕನ್ನಡದಲ್ಲಿ ಚರಿತ್ರೆಯ ಭಾಗವಾಗಿ ಸ್ವಾತಂತ್ರ್ಯ ಹೋರಾಟವನ್ನು ಚರ್ಚಿಸುವ ನಿಟ್ಟಿನಲ್ಲಿಯೂ ಸಾಕಷ್ಟು ಅಧ್ಯಯನಗಳು ನಡೆದಿವೆ. ಕನ್ನಡ ರಂಗಭೂಮಿ ಅದರಲ್ಲೂ ವೃತ್ತಿರಂಗಭೂಮಿಯನ್ನು ಶ್ರೀರಂಗ, ಕೈಲಾಸರಂತಹ ರಂಗತಜ್ಞರು, ನಾಟಕಕಾರರು, ಒಪ್ಪದ ಕಾರಣಕ್ಕಾಗಿ ವೃತ್ತಿರಂಗಭೂಮಿ ಮತ್ತು ಸ್ವಾತಂತ್ರ್ಯ ಚಳುವಳಿಯನ್ನು ಮುಖಾಮುಖಿಗೊಳಿಸುವ ಪ್ರಕ್ರಿಯೆಯಲ್ಲಿ ವಿದ್ವಾಂಸರು ತೊಡಗಲಿಲ್ಲ. ಈ ಅಂಶವು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ಇದರ ಭಾಗವಾಗಿ ಬಂದ ಅಧ್ಯಯನಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಪ್ರಕಟಿತ ಪಿಎಚ್.ಡಿ ಪ್ರಬಂಧಗಳು

ಬಸವರಾಜ ಜಗಜಂಪಿ ಅವರ ಗರೂಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿ ಅಧ್ಯಯನ

ವೃತ್ತಿರಂಗಭೂಮಿಯ ಕುರಿತು ಮೊದಲು ನಡೆದ ಕೆಲವೇ ಕೆಲವು ಅಧ್ಯಯನಗಳಲ್ಲಿ ಇದು ಒಂದು. ದಕ್ಷಿಣ ಕರ್ನಾಟಕದ ವೃತ್ತಿರಂಗಭೂಮಿ ಕುರಿತು ಅಷ್ಟೇನೂ ಅಧ್ಯಯನಗಳು ನಡೆಯದೇ ಇದ್ದ ಸಂದರ್ಭದಲ್ಲಿ ಕರ್ನಾಟಕ ವೃತ್ತಿರಂಗಭೂಮಿಯ ಚರಿತ್ರೆಯಲ್ಲಿ ಪ್ರಯೋಗ ಶೀಲ ನಟ, ನಾಟಕಕಾರ ಎಂದು ಪರಿಚಿತರಾಗಿದ್ದ, ಗರೂಡಶಿವರಾಯರನ್ನು ಕುರಿತು ಬಸವರಾಜ ಜಗಜಂಪಿಯವರು ಕೈಗೊಂಡ ಈ ಅಧ್ಯಯನವು ಪ್ರಮುಖವಾದದ್ದು. ಒಂಬತ್ತು ಅಧ್ಯಾಯಗಳಲ್ಲಿ ರಚನೆಗೊಂಡ ಈ ಪ್ರಬಂಧವು ಕರ್ನಾಟಕ ವೃತ್ತಿರಂಭೂಮಿ ಮೇಲೆ ಬಂಗಾಳಿ, ಮರಾಠಿ ವೃತ್ತಿರಂಗಭೂಮಿಗಳ ಸಂಬಂಧ, ಗರುಡ ಸದಾಶಿವರಾಯರ ಜೀವನ, ಗಾಂಧೀ, ತಿಲಕರ ಪ್ರಭಾವ, ದತ್ತಾತ್ರೇಯ ಸಂಗೀತ ನಾಟಕ ಮಂಡಳಿ ಸ್ಥಾಪನೆ, ಕಂಪನಿಯ ಕಲಾವಿದರು ಹಾಗೂ ನಾಟಕಕಾರರಾಗಿ ಮತ್ತು ನಟರಾಗಿ ಗರುಡರ ಸಾಧನೆ ಈ ಅಂಶಗಳ ಕುರಿತ ಚರ್ಚೆಗಳನ್ನು ಈ ಅಧ್ಯಯನ ಒಳಗೊಂಡಿದೆ. ಎಂಟು ಮತ್ತು ಒಂಬತ್ತನೆಯ ಅಧ್ಯಾಯಗಳು ಈ ಪ್ರಬಂಧದ ಪ್ರಮುಖ ಭಾಗಗಳಾಗಿದ್ದು, ಒಬ್ಬ ನಟನನ್ನಾಗಿ ನಾಟಕಕಾರನನ್ನಾಗಿ ಗರುಡರನ್ನು ಅಂದಿನ ಸಂದರ್ಭಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಆದರೆ ಸ್ವಾತಂತ್ರ್ಯ ಚಳುವಳಿಗೆ ಗರುಡ ಸದಾಶಿವರಾಯರನ್ನು ಮುಖಾಮುಖಿಗೊಳಿಸುವಲ್ಲಿ ಪ್ರಯತ್ನಿಸಿದರೂ, ಇದನ್ನೇ ಅಧ್ಯಯನದ ಪ್ರಮುಖ ವಿಷಯವನ್ನಾಗಿ ಚರ್ಚಿಸಿಲ್ಲ.

ಪ್ರಕಾಶ್ ಗರುಡ ಅವರ ಕಂಪನಿ ನಾಟಕ ಅರ್ಥಾತ್ ವೃತ್ತಿರಂಗಭೂಮಿ

ಪ್ರಕಾಶ ಗರುಡ ಅವರ ಈ ಸಂಶೋಧನ ಕೃತಿಯು ಮುಖ್ಯವಾಗಿ ಉತ್ತರ ಕರ್ನಾಟಕದ ವೃತಿರಂಗಭೂಮಿಯ ಚರಿತ್ರೆಯನ್ನು ಕಟ್ಟಿಕೊಡುತ್ತದೆ. ಮೈಸೂರು ಪ್ರಾಂತ್ಯದ ವೃತ್ತಿರಂಗಭೂಮಿಯ ಚಟುವಟಿಕೆಗಳಿಗಿಂತ ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯು ಭಿನ್ನ ಸ್ವರೂಪದ್ದಾಗಿದೆ ಎಂಬ ಅಂಶವು ಈ ಪ್ರಬಂಧದ ಮುಖ್ಯ ಆಶಯ ಕೂಡ. ಈ ಹಿಂದೆ ಹಲವಾರು ಕೃತಿಗಳಲ್ಲಿ ಚರ್ಚೆಯಾದಂತೆ ಕನ್ನಡ, ಮರಾಠಿ, ಬಂಗಾಲಿ ಹಾಗೂ ಪಾರ್ಸಿ ರಂಗಭೂಮಿಗಳ ಪ್ರಭಾವ ಪ್ರೇರಣೆಗಳ ಜೊತೆಗೆ ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಆರಂಭವನ್ನು ಅಂದಿನ ಸಂದರ್ಭದ ಘಟನೆಗಳಿನುಗುಣವಾಗಿ ಚರ್ಚೆಗೆ ಒಳಪಡಿಸಲಾಗಿದೆ. ಹಾಗೂ ವೃತ್ತಿರಂಗಭೂಮಿಯ ಸಾಧ್ಯತೆಗಳನ್ನು ಅದರ ಪ್ರಯೋಗಗಳ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಭಾರತೀಯ ಸಂದರ್ಭದಲ್ಲಿ ಪ್ರೇಕ್ಷಕರಾಗಿದ್ದ ಜನರು ವಸಾಹತುಶಾಹಿಯ ಆಳ್ವಿಕೆಯಿಂದ ಗ್ರಾಹಕರಾದ ಈ ಬದಲಾವಣೆ ವಸ್ತು ಸ್ಥಿತಿಯನ್ನು ಗುರುತಿಸಿದ್ದಾರೆ. ಇಷ್ಟೆಲ್ಲಾ ಚರ್ಚೆಗಳನ್ನು ಈ ಕೃತಿಯು ಒಳಗೊಂಡಿದ್ದರೂ, ನಾಟಕದ ಬೆಳವಣಿಗೆಗೆ ವಸ್ತು, ಘಟನೆಗಳನ್ನು ಎರವಲಾಗಿ ಕೊಟ್ಟ ಸ್ವಾತಂತ್ರ್ಯ ಚಳುವಳಿಯಂತಹ ಚಾರಿತ್ರಿಕ ಸಂದರ್ಭವನ್ನು ಗರೂಡರ ನಾಟಕಗಳ ಮೂಲಕ ಚರ್ಚಿಸುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿಲ್ಲ.

ಶಿವಾನಂದ ಗುಬ್ಬಣ್ಣ ಅವರ ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ

ಶಿವಾನಂದ ಗುಬ್ಬಣ್ಣನವರ ಈ ಕೃತಿಯು ಹತ್ತು ಅಧ್ಯಾಯಗಳಲ್ಲಿ ರಾಷ್ಟ್ರೀಯ ಚಳುವಳಿಯನ್ನು ಭಾರತ ಮತ್ತು ಕರ್ನಾಟಕ ಎಂಬ ಈ ಎರಡು ಭೌಗೋಳಿಕ ಪರಿಕಲ್ಪನೆ ನೆಲೆಯಲ್ಲಿ ಕಟ್ಟಿಕೊಡುತ್ತದೆ. ಇಲ್ಲಿ ಲಾವಣಿ ಎಂಬ ಜನ ಮಾಧ್ಯಮವು ಒಬ್ಬ ಸಾಮಾನ್ಯ ಪ್ರಜೆಗೂ ಚಳುವಳಿಯ ಮಹತ್ವವನ್ನು ತಿಳಿಸುವ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಿತು. ಮತ್ತು ರಾಷ್ಟ್ರೀಯತೆ ಕಲ್ಪನೆಯನ್ನು ಯಾವ ಯಾವ ನೆಲೆಗಳಲ್ಲಿ ಗುರುತಿಸಿಕೊಂಡಿತು ಎಂಬ ಅಂಶವನ್ನು ಚರ್ಚಿಸಲಾಗಿದೆ. ಉದಾಹರಣೆಗೆ ಲಾವಣಿ ಸಾಹಿತ್ಯ ಹಾಗೂ ಮಹಿಳಾ ಚಳವಳಿ ಎಂಬ ಅಧ್ಯಾಯದಲ್ಲಿ ಬಲಿಷ್ಠರ (ಬ್ರಿಟೀಷರ) ವಿರುದ್ಧ ಹೋರಾಡಿದ ಝಾನ್ಸಿರಾಣಿ ಲಕ್ಷ್ಮೀಬಾಯಿ, ಕಿತ್ತೂರರಾಣಿ ಚನ್ನಮ್ಮರಂತವರ ದೇಶದ ರಾಣಿಯರ ಕುರಿತು ಲಾವಣಿಗಳನ್ನು ಕಟ್ಟಿ ಹಾಡುವುದರ ಮೂಲಕ ಸಾಮಾನ್ಯ ಮಹಿಳೆಯರಿಗೂ ಸ್ವಾತಂತ್ರ್ಯದ ಅವಶ್ಯಕತೆಯ ಕುರಿತು ಹೇಳಲಾಗಿದೆ. ಹೀಗೆ ಭಾರತೀಯ ರಾಷ್ಟ್ರೀಯತೆಯನ್ನು ಮಹಿಳಾ ನೆಲೆಯಿಂದಲೂ ನೋಡುವ ಒಂದು ದೃಷ್ಟಿಕೋನವನ್ನು ಈ ಕೃತಿ ಒಳಗೊಂಡಿದೆ ಎಂದು ಹೇಳಬಹುದು.

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ

ಕಾರಂತರ ಕಾದಂಬರಿಗಳನ್ನು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂದು ಎರಡು ಕಾಲಘಟ್ಟಗಳಲ್ಲಿ ವಿಂಗಡಿಸಿಕೊಂಡು ಕಾದಂಬರಿಗಳ ರಚನೆಗೆ ಹಿನ್ನೆಲೆ, ಆ

ಕಾಲದ ಧೋರಣೆ ಕುರಿತು ಈ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಕಾರಂತರ ರಾಜಕೀಯ ಅಂಶಗಳನ್ನು ಕಾದಂಬರಿಗಳನ್ನು ಮಾತ್ರ ಇಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ. ಎರಡೂ ಕಾಲಘಟ್ಟದಲ್ಲಿ ರಾಜಕೀಯ, ಸಾಮಾಜಿಕ, ಚಿತ್ರಣಗಳ ಹಿನ್ನೆಲೆಯಲ್ಲಿ ಕಾದಂಬರಿಗಳ ಅಭಿವ್ಯಕ್ತಿ ಕ್ರಮದ ಕುರಿತು ಚರ್ಚಿಸಿದ್ದಾರೆ.

ಮಳಲಿ ವಸಂತ ಕುಮಾರ ಅವರ ಕುವೆಂಪು ಅವರ ನಾಟಕಗಳು ಒಂದು ಅಧ್ಯಯನ

ಈ ಕೃತಿಯಲ್ಲಿ ಕುವೆಂಪು ಅವರ ನಾಟಕಗಳನ್ನು ವಾಲ್ಮೀಕಿ, ವ್ಯಾಸ, ಭಾಸ ಮುಂತಾದ ಕೃತಿಗಳ ಮೂಲಕ ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮತ್ತು ರೂಪಾಂತರಗಳನ್ನು ಶೇಕ್ಸಪಿಯರ್‌ಯರನ ಕೃತಿಗಳೊಂದಿಗೆ ಹೋಲಿಸಿ ಚರ್ಚಿಸಿದ್ದಾರೆ. ಮುಖ್ಯವಾಗಿ ಕುವೆಂಪು ಅವರ ಸಾಮಾಜಿಕ ಪ್ರಜ್ಞೆ, ವಿಶ್ವಮಾನವ ಪ್ರಜ್ಞೆಗಳನ್ನು ಅವರ ಆಕರಗಳ ಮೂಲಕ ಉತ್ತರಿಸಿದ್ದಾರೆ.

ಶಿವಾರೆಡ್ಡಿ ಕೆ.ಸಿ ಅವರ ಕನ್ನಡ ಹಾಡುಪಾಡು, ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಅಧ್ಯಯನ

ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ ಎಂಬ ಈ ಪಿಎಚ್.ಡಿ ಪ್ರಬಂಧವು ಕನ್ನಡ ಪ್ರಮುಖ ಕವಿಗಳ ಕಾವ್ಯಗಳನ್ನು ಅವರು ಬರೆದ ಕಾಲಘಟ್ಟದ ಹಿನ್ನೆಲೆಯಲ್ಲಿ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಕರ್ನಾಟಕದಲ್ಲಿ ವಸಾಹತುಶಾಹಿ ಭಾಗವಾಗಿ ಆರಂಭವಾದ ಸ್ವಾತಂತ್ರ್ಯ ಚಳುವಳಿ ಏಕೀಕರಣ, ಪುರೋಹಿತಶಾಹಿ ಮುಂತಾದ ಅಂಶಗಳಿಗೆ ಕನ್ನಡ ಕಾವ್ಯ ವ್ಯಕ್ತಪಡಿಸಿದ ರೀತಿಯನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

ಲಕ್ಷ್ಮೀದೇವಿ ಎಸ್. ಅವರ ಕರ್ನಾಟಕಾಂಧ್ರ ರಂಗಭೂಮಿ ಇತ್ತೀಚಿನ ಪ್ರವೃತ್ತಿಗಳು

ಸ್ವತಃ ರಂಗ ಕಲಾವಿದೆ, ನಿರ್ದೇಶಕಿಯಾದ ಎಸ್. ಲಕ್ಷ್ಮೀದೇವಿಯವರ ಈ ಕೃತಿಯು ಕನ್ನಡ ಮತ್ತು ಆಂಧ್ರ ರಂಗಭೂಮಿಯನ್ನು ದ್ರಾವಿಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡುವುದರ ಮೂಲಕ ಈ ಎರಡು ಪ್ರದೇಶದ ರಂಗಭೂಮಿಯ ಮೇಲೆ ಆದ ಪಲ್ಲಟಗಳನ್ನು ಕುರಿತು ಚರ್ಚಿಸುತ್ತದೆ. ಒಟ್ಟು ನಾಲ್ಕು ಅಧ್ಯಾಯಗಳಲ್ಲಿ ಕನ್ನಡ ಮತ್ತು ತೆಲುಗು ರಂಗಭೂಮಿಯ ಅಂತಃ ಸಂಬಂಧಗಳನ್ನು ಈ ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಋಗ್ವೇದದಿಂದ ಪಠ್ಯ ಮತ್ತು ಸಾಹಿತ್ಯವನ್ನು ಸಾಮವೇದದಿಂದ ಗಾಯನವನ್ನು, ಯಜುರ್ವೇದದಿಂದ ಅಭಿನಯವನ್ನು, ಅಥರ್ವಣವೇದದಿಂದ ರಸಾದಿಗಳನ್ನು ಅಯ್ದುಕೊಂಡು ನಾಟ್ಯ ಪ್ರಕಾರವು ಉಗಮವಾದ ನಾಟ್ಯವನ್ನು ಪ್ರದರ್ಶಿಸಲು ಇಂದ್ರನು ತನ್ನ ಧ್ವಜವನ್ನು, ವಿಷ್ಣುವು ಸಿಂಹಾಸನವನ್ನು, ಕುಬೇರನು ಕಿರೀಟವನ್ನು, ಸೂರ್ಯನು ವೃತ್ತವನ್ನು, ವಾಯುವು ವ್ಯಜನವನ್ನು ಕೊಟ್ಟರು. ಮುಂದೆ ಇಂದ್ರಧ್ವಜ, ಮಹೋತ್ಸವದ ಸಂದರ್ಭದಲ್ಲಿ ಈ ನಾಟಕ ಪ್ರಕಟಗೊಂಡಿತು. ಆದರೆ ಇದರ

ಕಥಾವಸ್ತು ತಮಗೆ ಅವಮಾನಕರವೆಂದು ದೈತ್ಯರು ಜಗಳ ತೆಗೆದರು. ಈ ಜಗಳವೆ ನಾಟ್ಯಕ್ಕೆ ಕಾರಣವಾಯಿತು. ಹೀಗೆ ರಂಗಭೂಮಿಯ ವಿಕಾಸ ಪಾರ್ಸಿ, ಸಂಸ್ಕೃತ ಮತ್ತು ಆಂಗ್ಲ ರಂಗಭೂಮಿಗಳ ಪ್ರಭಾವ ಪ್ರೇರಣೆಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ಆದರೆ ಕನ್ನಡ ಮತ್ತು ತೆಲುಗು ರಂಗಭೂಮಿಯು ಸ್ವಾತಂತ್ರ್ಯ ಚಳುವಳಿಗೆ ಸ್ಪಂದಿಸಿದ ವಿವರಗಳನ್ನು ಚರ್ಚಿಸಿಲ್ಲ.

ಅಪ್ರಕಟಿತ ಪಿಎಚ್.ಡಿ ಪ್ರಬಂಧಗಳು

ವೆಂಕಟೇಶ ನೆಲಕುಂಟೆ ಅವರ ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತಾ ಚಿಂತನೆಯ ಆಯಾಮಗಳು

ವೆಂಕಟೇಶಯ್ಯ ನೆಲಕುಂಟೆ ಅವರ ಈ ಪ್ರಬಂಧದಲ್ಲಿ ಆಧುನಿಕ ಕನ್ನಡ ಸಾಹಿತ್ಯವು ರಾಷ್ಟ್ರೀಯತೆಯನ್ನು ಯಾವ ಯಾವ ನೆಲೆಯಲ್ಲಿ ಅರ್ಥೈಸಿಕೊಂಡಿದೆ ಎಂಬುದನ್ನು ಚರ್ಚಿಸಲಾಗಿದೆ. ಮುಖ್ಯವಾಗಿ ಭೌಗೋಳಿಕವಾಗಿ, ಭಾಷಿಕವಾಗಿ, ಚಾರಿತ್ರಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ರಾಷ್ಟ್ರೀಯತೆಯನ್ನು ಕಟ್ಟಿಕೊಂಡಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಮುಖ್ಯ ಬರಹಗಾರರಾದ ಆಲೂರು ವೆಂಕಟರಾಯ, ಬಿ.ಎಂ.ಶ್ರೀ, ಶಂಬಾಜೋಶಿ, ಕುವೆಂಪು ಮತ್ತು ಚಿದಾನಂದಮೂರ್ತಿ ಅವರ ಸಾಹಿತ್ಯದ ಮೂಲಕ ತೌಲನಿಕವಾಗಿ ಚರ್ಚಿಸಿದ್ದಾರೆ. ಹಾಗೆ ರಾಷ್ಟ್ರೀಯತೆಯನ್ನು ಕರ್ನಾಟಕ ವಿಮೋಚನಾ ರಂಗ ಎಂಬ ಸಂಸ್ಥೆಯು ರೂಪಿಸಿಕೊಂಡ ಪರಿಯನ್ನು ಕೂಡ ಅಧ್ಯಯಕ್ಕೆ ಒಳಪಡಿಸಿಕೊಂಡಿದ್ದಾರೆ.

ಮೂಡಿಗೆರೆಯಯ್ಯ ಅವರಕನ್ನಡ ಕಾದಂಬರಿಗಳಲ್ಲಿ ಗಾಂಧೀವಾದದ ಪ್ರೇರಣೆ

ಸ್ವಾತಂತ್ರ್ಯ ಚಳುವಳಿಯ ವಸ್ತುವನ್ನು ಆಧರಿಸಿ ರಚನೆಯಾದ ಕಾದಂಬರಿಗಳ ಮೂಲಕ ಅವುಗಳಲ್ಲಿ ಬಿತ್ತರವಾದ ಗಾಂಧಿ ಚಿಂತನೆಗಳನ್ನ, ಸ್ವಾತಂತ್ರ್ಯ ಚಳುವಳಿಯ ವಿಭಿನ್ನ ನೆಲೆಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಹಾಲೊಳ್ಳಿ ಎಚ್. ಪಿ. ಅವರ ಆಧುನಿಕ ಕನ್ನಡ ಕಾವ್ಯ ಮತ್ತು ಗಾಂಧಿವಾದ

ಕನ್ನಡ ಸಾಹಿತ್ಯವು ಗಾಂಧಿಯವರನ್ನು ವಿವಿಧ ಕಾಲಘಟ್ಟಗಳಲ್ಲಿ ಹೇಗೆ ಪ್ರತಿನಿಧಿಸಿದೆ ಎಂಬ ಅಂಶಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಿದ್ದಾರೆ. ಮತ್ತು ಗಾಂಧೀಯವರ ತತ್ವಗಳು ಅವರ ಚಳುವಳಿಯ ವಿಭಿನ್ನ ನೆಲೆಗಳನ್ನು ಕೂಡ ಅಧ್ಯಯನ ಭಾಗವಾಗಿ ಕೇಂದ್ರಿಕರಿಸಿ ವಿಶ್ಲೇಷಿಸಿದ್ದಾರೆ.

ಜ್ಯೋತಿ ಅವರ ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿ

ಜ್ಯೋತಿ ಅವರ ಈ ಪಿಎಚ್.ಡಿ ಮಹಾಪ್ರಬಂಧವು ಕಾದಂಬರಿಗಳ ಅಧ್ಯಯನವಾಗಿದ್ದು, ಸ್ವಾತಂತ್ರ್ಯ ಚಳುವಳಿ ಕಾಲದ ಚರಿತ್ರೆಯು ಕನ್ನಡ ಸಾಹಿತ್ಯ ರಚನೆಗೆ ಸ್ಪಂದಿಸಿದ ರೀತಿಯನ್ನು

ಚರ್ಚಿಸಿದ್ದಾರೆ. ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿ ನಿರೂಪಿತಗೊಂಡಿರುವ ಬಗ್ಗೆ ಚರ್ಚಿಸಿದ್ದಾರೆ.

ವಿರುಪಾಕ್ಷಪ್ಪ.ಸಿ ಅವರ ಕನ್ನಡ – ತೆಲುಗು ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಹೋರಾಟ ಚಿತ್ರಣ

ಈ ಪ್ರಬಂಧವು ತೆಲಗು ಮತ್ತು ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಚಳುವಳಿ ಅಭಿವ್ಯಕ್ತಿಗೊಂಡ ಪರಿಯನ್ನು ಗುರುತಿಸಿದ್ದಾರೆ. ಎರಡು ಭಾಷೆಯ ಆಯಾ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಹತ್ತು ಅಧ್ಯಾಯಗಳಲ್ಲಿ ರಚನೆಗೊಂಡಿರುವ ಈ ಪ್ರಬಂಧವು ಎರಡೂ ಭಾಷೆಯ ಸಾಹಿತ್ಯ ಪರಿಸರವು ಸ್ವಾತಂತ್ರ್ಯ ಚಳುವಳಿಯನ್ನು ತನ್ನ ವಸ್ತುವಾಗಿ ಸ್ವೀಕರಿಸಲು ಅಂದಿನ ಸಾಂಸ್ಕೃತಿಕ ಒತ್ತಡಗಳ ಮೇಲೆ ಬೆಳಕು ಚಲ್ಲುತ್ತದೆ.

ಸಂಗನಗೌಡ ನಾಲತವಾ ಅವರ ಬಿ.ಆರ್.ಅರಿಶಿಣಗೋಡಿ: ಬದುಕು ಬರಹ

ಸಂಗನಗೌಡ ನಾಲತವಾಡ ಅವರ ಈ ಪಿಎಚ್.ಡಿ ಪ್ರಬಂಧವು ವ್ಯಕ್ತಿ ಕೇಂದ್ರಿತ ಅಧ್ಯಯನವಾಗಿದೆ. ಪ್ರಾಸ್ತಾವಿಕವಾಗಿ ಕನ್ನಡ ವೃತ್ತಿರಂಗಭೂಮಿಯ ಹಿರಿಯ ನಾಟಕಕಾರರ ಮಾಹಿತಿಯನ್ನು ಒಳಗೊಂಡಿದೆ. ಸ್ಥಳೀಯ ಸಮಸ್ಯೆಗಳನ್ನು ತಮ್ಮ ನಾಟಕದ ವಸ್ತುವನ್ನಾಗಿಸಿಕೊಂಡು ಸ್ವತಃ ನಟರಾಗಿ ನಟಿಸಿ ಆ ಸಮಸ್ಯೆಗಳನ್ನು ಸಮಾಜದ ನಡುವೆ ಚರ್ಚಿಸುವಂತ ಪ್ರಜ್ಞೆಯನ್ನು ಹೊಂದಿದ್ದರು. ನಾಲ್ಕು ಕಂಪನಿಗಳನ್ನು ಕಟ್ಟಿ, ಹಲವಾರು ಪಾತ್ರಧಾರಿಗಳಿಗೆ, ನಾಟಕಕಾರರುಗಳಿಗೆ ಆಶ್ರಯ ನೀಡಿದ್ದರು. ಅರಿಶಿಣಗೋಡಿಯವರ ಪೋಲಿಸನ ಮಗಳು ನಾಟಕ 1200 ಪ್ರಯೋಗಗಳನ್ನು ಕಂಡು, ವಿಶ್ವದಾಖಲೆ ನಿರ್ಮಿಸಿದ್ದರ ಕುರಿತು ಚರ್ಚಿಸಿದ್ದಾರೆ. ತುರ್ತುಪರಿಸ್ಥಿತಿಯ ಕುರಿತು ಗರಭಿ ಹಠಾವೋ ನಾಟಕವನ್ನು ರಚಿಸಿ ಪ್ರದರ್ಶಿಸಿ ಅಂದಿನ ರಾಜನೀತಿಯನ್ನು ಪ್ರಶ್ನಿಸಿ ನಾಟಕ ಎಂಬುದು ಮನರಂಜನೆಯ ಜೊತೆಗೆ ಸಾಮಾಜಿಕ ಮತ್ತು ರಾಜಕೀಯ ಅಂಶಗಳಾಗಿ ಒಳಗೊಂಡಿರುವುತ್ತದೆ ಎಂಬುದನ್ನು ಗುರುತಿಸಿದ್ದಾರೆ.

ಕೃತಿಗಳು

ರಾಮಕೃಷ್ಣ ಮರಾಠೆ ಅವರ ನಾಟಕ-ಕರ್ನಾಟಕ

ರಾಮಕೃಷ್ಣ ಮರಾಠೆ ಅವರ ಈ ಕೃತಿಯು ರಂಗಭೂಮಿಗೆ ಸಂಬಂಧಿಸಿದ ಪ್ರಮುಖ ಲೇಖನಗಳನ್ನು ಒಳಗೊಂಡಿದೆ. ಆ ಲೇಖನಗಳನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ಆಧುನಿಕ ರಂಗಭೂಮಿ ಮತ್ತು ವೃತ್ತಿರಂಗಭೂಮಿಯ ಸ್ವರೂಪ, ಕರ್ನಾಟಕ ರಂಗಭೂಮಿಗೆ ಶಾಂತಕವಿಗಳ ಕೊಡುಗೆ ಕರ್ನಾಟಕ ಏಕೀಕರಣಕ್ಕೆ

ಶಾಂತರಸರ 'ಉಷಾಹರಣ'ದಂತಹ ನಾಟಕದ ಪ್ರೇರಣೆಗಳು, ಸ್ವಾತಂತ್ರ್ಯ ಚಳುವಳಿಯನ್ನು ಚಿತ್ರಿಸುವಂತೆ ಕಿತ್ತೂರು ಕೇಸರಿ, ಸಂಗೊಳ್ಳಿ ರಾಯಣ್ಣ, ನರಗುಂದದ ಬಂಡಾಯದಂತ ನಾಟಕಗಳ ಕುರಿತ ಚರ್ಚೆಗಳನ್ನು ಒಳಗೊಂಡಿದೆ. ಜೊತೆಗೆ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ವೃತ್ತಿರಂಗಭೂಮಿಯ ಸಾಧ್ಯತೆ-ಬಾಧ್ಯತೆಗಳ ವಿವರಣೆಗಳನ್ನು ಒಳಗೊಂಡ ಲೇಖನಗಳ ಸಂಗ್ರಹವಾಗಿದೆ.

ರಹಮತ್ ತರೀಕೆರೆ ಅವರ ಅಮೀರ್‌ಬಾಯಿ ಕರ್ನಾಟಕಿ

ರಹಮತ್ ತರೀಕೆರೆ ಅವರ ಈ ಕೃತಿಯು ಮೇಲ್ನೋಟಕ್ಕೆ ಜೀವನ ಚರಿತ್ರೆಯಾಗಿ ಕಂಡರೂ, ಸುಮಾರು ಮೂರು ದಶಕಗಳ ವಸಾಹತುಶಾಹಿಗೆ ವಿರೋಧಿ ಚಳುವಳಿಯ ಇತಿಹಾಸವನ್ನು ರಂಗಭೂಮಿಯ ಮೂಲಕ ಕಟ್ಟಿಕೊಡುವ ಒಂದು ಚರಿತ್ರೆಯ ಕೃತಿಯು ಹೌದು. [ಕನ್ನಡ ರಂಗಭೂಮಿಯ ಮೂಲಕ ಕರ್ನಾಟಕ ಚರಿತ್ರೆಯ ನೋಡುವ ಒಂದು ಆಯಾಮ ಎಂದು ಹೇಳಬಹುದು] ಮತ್ತು ಇದರ ಭಾಗವಾಗಿ ಸಿನಿಮಾ, ಮತ್ತು ಸಂಗೀತ ಕ್ಷೇತ್ರಗಳು ನಿರ್ವಹಿಸಿದ ಕ್ಷೇತ್ರಗಳ ಕುರಿತು ಮಾತನಾಡುತ್ತದೆ. ಅದರಲ್ಲೂ ಮುಖ್ಯವಾಗಿ ಮುಂಬೈ ಕರ್ನಾಟಕದ ವೃತ್ತಿರಂಗಭೂಮಿಯ ಸ್ವಾತಂತ್ರ್ಯ ಚಳುವಳಿಯನ್ನು ನಿರ್ವಹಿಸಿಕೊಂಡ ಬಗ್ಗೆ ಮತ್ತು ಅಮೀರ್‌ಬಾಯಿ ಎಂಬ ನಟಿಯ ಮೂಲಕ ಕನ್ನಡ ರಂಗಭೂಮಿ, ಕನ್ನಡ, ಹಿಂದಿ, ಮರಾಠಿ ಸಿನಿಮಾ ಹಾಗೂ ಸಂಗೀತ ಕ್ಷೇತ್ರಗಳನ್ನು ಚಳುವಳಿಯ ಭಾಗವಾಗಿ ಕಟ್ಟಿಕೊಡುವ ಸಣ್ಣದೊಂದು ಪ್ರಯತ್ನವನ್ನು ಈ ಕೃತಿ ತೋರಿಸಿದೆ ಎಂದರೆ ತಪ್ಪಾಗಲಾರದು.

ಶಿವರಾಮ ಕಾರಂತ ಅವರ ಕರ್ನಾಟಕ ಇಂದು ಮತ್ತು ನಾಳೆ

ಇಂದಿನ ಕರ್ನಾಟಕ ಮತ್ತು ನಾಳೆಯ ಕರ್ನಾಟಕವನ್ನು ಕುರಿತು ಎರಡು ಉಪನ್ಯಾಸ ಲೇಖನಗಳನ್ನು ಒಳಗೊಂಡ ಶಿವರಾಮ ಕಾರಂತರ ಈ ಕೃತಿಯು ಇಂದಿನ ಕರ್ನಾಟಕ ಎಂಬ ಲೇಖನದಲ್ಲಿ ರಾಷ್ಟ್ರೀಯತೆ ಪರಿಕಲ್ಪನೆ ಕುರಿತು ಪೂರ್ತಿಯಾಗಿ ಚರ್ಚಿಸದೆ ಇದ್ದರು ಸ್ವಲ್ಪಮಟ್ಟಿಗೆ ಚರ್ಚಿಸಲಾಗಿದೆ. ನಾಳೆಯ ಕರ್ನಾಟಕ ಎಂಬ ಲೇಖನದಲ್ಲಿ ನಶಿಸಿಹೋಗತ್ತಿರುವ ಅರಣ್ಯ ಸಂಪತ್ತನ್ನು ಕುರಿತು ಚರ್ಚೆಗಳು ಒಳಗೊಂಡಿವೆ. ಈ ಹಿಂದೆ ಇದ್ದ ಅರಣ್ಯ ಸಂಪತ್ತಿನ ಜೊತೆಗೆ ಹೋಲಿಸಿನ ಇಂದಿನ ಮತ್ತು ನಾಳೆಯ ಕರ್ನಾಟಕದ ಸ್ಥಿತಿಗತಿ ಮತ್ತು ಪ್ರಪಂಚದ ಸ್ಥಿತಿಗತಿಯನ್ನು ಇಲ್ಲಿ ಚರ್ಚಿಸಲು ಪ್ರಯತ್ನಿಸಿದ್ದಾರೆ. ಒಂದು ದೇಶದ ರಾಷ್ಟ್ರೀಯತೆ ಪರಿಕಲ್ಪನೆಯು ಸಮಗ್ರಗೊಳ್ಳುವುದು ಆ ದೇಶದ ಆರ್ಥಿಕ ಸಂಪತ್ತು, ಭೌಗೋಳಿಕ ಸಂಪತ್ತು, ಸಾಮಾಜಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿಯೆ ನೋಡುವ ಅವಶ್ಯಕತೆಯು ಮುಖ್ಯ. ಹಾಗಾಗಿ ಅರಣ್ಯ ಸಂಪತ್ತು ಕೂಡ ಒಂದು ರಾಷ್ಟ್ರೀಯ ಮಾನವ ಅವಿಭಾಜ್ಯ ಅಂಗ.

ನಿಗಣ್ಣ ಸಣ್ಣಕ್ಕಿ ಅವರ ಜಾನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು

ನಿಂಗಣ್ಣ ಸಣ್ಣಕ್ಕಿ ಅವರ ಈ ಕೃತಿಯು ಜನಪದ ಸಾಹಿತ್ಯ, ಜನಪದ ಗೀತ ಸಾಹಿತ್ಯ, ಜನಪದದಲ್ಲಿ ಮೈಲಾರ ಮಹಾದೇವ ಮತ್ತು ರಮಾನಂದ ತೀರ್ಥರು, ಮತ್ತು ಸ್ವಾತಂತ್ರ್ಯ ಸಂಗ್ರಾಮ–ಹೈದರಾಬಾದ ವಿಮೋಚನೆ ಎಂಬ ಈ ನಾಲ್ಕು ಪ್ರಕಾರಗಳಲ್ಲಿ ಜನಪದರು ಕಟ್ಟಿಕೊಂಡ ಸ್ವಾತಂತ್ರ್ಯದ ಸ್ವರೂಪವನ್ನು ವಿಶ್ಲೇಷಿಸುತ್ತದೆ. (ಸಾಹಿತ್ಯ ವ್ಯಕ್ತಿಗಳು, ಪ್ರದೇಶ) ಹಾಗೆ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯ ಕಾಲ, ಸ್ವಾತಂತ್ರ್ಯದ ನಂತರ ಕಾಲದಲ್ಲಿ ನಿರ್ವಚನಗೊಂಡ ಸ್ವಾತಂತ್ರ್ಯದ ಕಲ್ಪನೆಯನ್ನು ಚರ್ಚೆಗೆ ಒಳಪಡಿಸಿದ್ದಾರೆ. ಇದರಿಂದಾಗಿ ಸ್ಯಾತಂತ್ರ್ಯ ಎಂಬ ಪರಿಕಲ್ಪನೆಯು ವಸಾಹತು ಸಂದರ್ಭದಲ್ಲಿ ಚರ್ಚೆಗೆ ಬಂದ ಅಂಶವಾಗಿದ್ದರೂ ಕೂಡ ಇದರ ಬೇರುಗಳು ಹಿಂದಿನಿಂದಲೂ ಇವೆ ಎಂಬುದು ತಿಳಿಯುತ್ತದೆ.

ಶೇಷಾದ್ರಿ ಬಿ, ಚಂದ್ರಶೇಖರ್ ಟಿ. ಆರ್. (ಸಂ) ಅವರ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

ಬಿ.ಶೇಷಾದ್ರಿ ಮತ್ತು ಟಿ.ಆರ್.ಚಂದ್ರಶೇಖರ್ ರವರ ಸಂಪಾದನೆಯ ಈ ಕೃತಿಯು ಏಕೀಕರಣ ಪೂರ್ವದ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಅಧ್ಯಯನದ ಭಾಗವಾಗಿ ಗುರುತಿಸಿಕೊಂಡಿದೆ. ಈ ಸ್ವಾತಂತ್ರ್ಯ ಚಳವಳಿಯ ಪರವಾಗಿ ಕೆಲಸ ನಿರ್ವಹಿಸಿದ ಸಂಘ ಸಂಸ್ಥೆಗಳನ್ನು, ಸರ್ಕಾರಿ ನೌಕರರನ್ನು ಹಾಗೆ ಬಳ್ಳಾರಿ ಜಿಲ್ಲೆಯ ಅಂದಿನ ಗಡಿ ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಕುರಿತು ನಡೆದ ಘಟನೆಗಳನ್ನು ವಿಶ್ಲೇಷಿಸಲಾಗಿದೆ. ಹಾಗೆ ಸ್ಯಾತಂತ್ರ್ಯ ಸಂದರ್ಭದಲ್ಲಿ ಕಡೂರು ಸಂಸ್ಥಾನ ವಿಲೀನಗೊಂಡ ಪ್ರಕ್ರಿಯೆಯನ್ನು ಚರ್ಚಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಘಟನೆಗಳ ಜೊತೆಗೆ ಸ್ವಾತಂತ್ರ್ಯ ನಂತರದ ಭಾರತದ ಆಸೆ ಆಕಾಂಕ್ಷೆಯನ್ನು ಚರ್ಚಿಸಿದ್ದಾರೆ. ಹಾಗೂ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ರಾಜಕೀಯ ಅಂಶಗಳ ಜೊತೆಗೆ ಸಾಮಾಜಿಕ ಸ್ವಾತಂತ್ರ್ಯದ ಕನಸುಗಳನ್ನು ಒಳಗೊಂಡಿತ್ತು ಎಂಬುದು ಮುಖ್ಯವಾಗುತ್ತದೆ.

ದ್ರಾವಿಡ ಭಾಷಾ ಸಾಹಿತ್ಯದಲ್ಲಿ ಜನಪದ ಆಶಯ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿರುವ ಈ ಕೃತಿಯು ದಿನಾಂಕ: 07.11.1992 ರಂದು ಹೊಸಪೇಟೆಯಲ್ಲಿ ನಡೆದ "ದ್ರಾವಿಡ ಭಾಷಾ ಸಾಹಿತ್ಯಗಳಲ್ಲಿ ಜನಪದ ಆಶಯ" ಎಂಬ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಲೇಖನಗಳ ಸಂಗ್ರಹವಾಗಿದೆ. ಮುಖ್ಯವಾಗಿ ಈ ವಿಚಾರ ಸಂಕಿರಣ ನಡೆದ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಆಲೋಚಿಸಿದರೆ 'ಜನಪದ' ಎಂಬುದು ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಸ್ವಾತಂತ್ರ್ಯದ ಒಂದು ಭಾಗವಾಗಿತ್ತು. ಮತ್ತೊಮ್ಮೆ ಈ ಪರಿಕಲ್ಪನೆಯನ್ನು ತೊಂಬತ್ತರ ದಶಕದಲ್ಲಿ ಬಂದ ಜಾಗತೀಕರಣದ ಭಾಗವಾಗಿ

ನಿರ್ವಚಿಸಿಕೊಳ್ಳುವ ಜರೂರನ್ನು ದ್ರಾವಿಡ ಸಾಹಿತ್ಯದ ಮೂಲಕ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಈ ಕೃತಿ ಮುಖ್ಯವಾಗುತ್ತದೆ. (ಪ್ರಸ್ತುತ ಅಧ್ಯಯನವನ್ನು ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ದ್ರಾವಿಡ ಚಳುವಳಿಯನ್ನು ಹಿಂದಿ ಭಾಷಾ ಹೇರಿಕೆಯ ವಿರುದ್ಧವಾಗಿ ಕಟ್ಟಲಾಗಿತ್ತು ಎಂಬ ಕ್ರಮದಲ್ಲಿಯೂ ನೋಡಬಹುದು.)

ಶಾಮಸುಂದರ ಬಿದರಕುಂದಿ ಅವರ ಸ್ವಾತಂತ್ರ್ಯ ಹೋರಾಟ ಮತ್ತು ರಂಗಭೂಮಿ

ಶಾಮಸುಂದರ ಬಿದರಕುಂದಿಯವರ ಈ ಲೇಖನವು ಸ್ವಾತಂತ್ರ್ಯ ಚಳುವಳಿಗೆ ಕನ್ನಡ ವೃತ್ತಿರಂಗಭೂಮಿಯ ಕೊಡುಗೆಯನ್ನು ಕೆಲವು ಆಯ್ದ ನಾಟಕಗಳ ಮೂಲಕ ಚರ್ಚಿಸಿದ್ದಾರೆ. ಭಾರತೀಯ ಸ್ವಾತಂತ್ರ್ಯದ ಚಳುವಳಿಯ ಪೂರ್ವದಲ್ಲಿ ಭಾರತ ಮತ್ತು ಕರ್ನಾಟಕದ ಚಾರಿತ್ರಿಕ ಘಟನೆಗಳನ್ನು, ಪ್ರಭಾವ ಪ್ರೇರಣೆಗಳನ್ನು ಗುರುತಿಸಿದ್ದಾರೆ. ಹಾಗೆ ಸಾಮಾಜಿಕ ಸ್ವಾತಂತ್ರ್ಯಕ್ಕೊಳಗಾಗದ ಅಸ್ಪೃಶತಾ ನಿವಾರಣೆಯನ್ನು ಮತ್ತು ನಾಟಕಗಳಷ್ಟೆ ಅಲ್ಲದೆ ನಾಟಕ ಕಂಪನಿಯ ಮಾಲೀಕರು ಒಂದೊಂದು ಪ್ರಯೋಗದ ಹಣವನ್ನು ಸ್ವಾತಂತ್ರ್ಯ ಹೋರಾಟದ ನಿಧಿಗಾಗಿ ಮೀಸಲಿಟ್ಟ ಉದಾರಣೆಗಳನ್ನು ಕುರಿತು ಮಾಹಿತಿ ನೀಡಿದ್ದಾರೆ.

ಶಾಮರಾಯ ತ. ಸು. ಅವರ ಕನ್ನಡ ನಾಟಕ

೧೯೬೨ರಲ್ಲಿ ಪ್ರಕಟವಾದ ಈ ಕೃತಿಯು ಕನ್ನಡ ನಾಟಕದ ಕೈಪಿಡಿಯಂತಿದೆ. ಕನ್ನಡ ನಾಟಕಗಳು, ದೇಶಿ ನಾಟಕಗಳು ಅವುಗಳ ಲಕ್ಷಣ, ಪೌರಾಣಿಕಗಳು ಮತ್ತು ಅನುವಾದಗೊಂಡ ನಾಟಕಗಳ ಕುರಿತು ಹಲವಾರು ಮಾಹಿತಿಗಳನ್ನ ಒಳಗೊಂಡಿದೆ. ಆದರೆ ನಾಟಕ ಸಾಹಿತ್ಯದ ಕ್ರಿಯಾತ್ಮಕ ಹೋರಾಟದ ಅಂಶಗಳನ್ನು ಒಳಗೊಂಡ ಮಾಹಿತಿಗಳು ಇಲ್ಲಿ ಸಿಗುವುದಿಲ್ಲ. ನಾಟಕಗಳ ಆರಂಭಿಕ ಓದುಗರಿಗೆ ನಾಟಕದ ಬಗ್ಗೆ ಒಂದು ಮೌಲ್ಯಯುತ ಮಾಹಿತಿಗಳನ್ನು ಈ ಕೃತಿ ಒದಗಿಸುತ್ತದೆ.

ಸಿದ್ದಣ್ಣ ಮಸಳಿ ಅವರ ಕಟ್ಟಿಮನಿ: ಜೀವನ ಸಾಹಿತ್ಯ

ಈ ಕೃತಿಯಲ್ಲಿ ಬಸವರಾಜ ಕಟ್ಟಿಮನಿಯವರ ಒಟ್ಟು ಸಾಹಿತ್ಯವನ್ನು ವಿಮರ್ಶಿಸಲಾಗಿದೆ. ಮತ್ತು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಕಾದಂಬರಿಗಳಲ್ಲಿ ವಿಷಯದ ಬಗ್ಗೆ ಗಮನ ಹರಿಸಿದ್ದಾರೆ.

ಎಂ.ಫಿಲ್ ಪ್ರಬಂಧಗಳು

ಪ್ರವಳಿಕಾ ಅವರ ನಾಡು ನುಡಿಗಳ ಕಥನಗಳಾಗಿ ಕನ್ನಡ ನಾಟಕಗಳು

ಪ್ರವಳಿಕಾ ಅವರ ಪ್ರಬಂಧವು [ಅಪ್ರಕಟಿತ ಎಂ.ಫಿಲ್ ಪ್ರಭಂದ] ವಸಹಾತುಶಾಹಿಗೆ ವಿರೋಧವಾಗಿ ಆರಂಭವಾದ ರಾಷ್ಟ್ರೀಯ ಚಳವಳಿಯ ಸ್ವರೂಪವನ್ನು ಕುರಿತು ಅಧ್ಯಯನವಾಗಿ

ಕಂಡರೂ, ರಾಷ್ಟ್ರೀಯ ಚಳುವಳಿ ಆರಂಭಗೊಂಡು ನಾಡು ನುಡಿಯ ಚಿಂತನೆಗಳನ್ನು, ಅಂದರೆ ಭಾಷಾವಾರು ರಾಜ್ಯಗಳ ಸ್ಥಾಪನೆಯನ್ನು ವಸ್ತುವುಳ್ಳ ನಾಟಕಗಳನ್ನು ವಿಶ್ಲೇಷಣೆಗೆ ಒಳಪಡಿಸಿದೆ. ನಾಡು ನುಡಿಯ ಪರಿಕಲ್ಪನೆಯ ಸ್ವರೂಪ ಕಾಲಕಾಲಕ್ಕೆ ವಿಸ್ತಾರಗೊಂಡ ಪ್ರಕ್ರಿಯೆಯನ್ನು ಕುರಿತು ಇಲ್ಲಿ ಚರ್ಚಿಸಿದ್ದಾರೆ. [ಪ್ರಾಚೀನ ಸಾಹಿತ್ಯದಿಂದ ಆಧುನಿಕ ಸಾಹಿತ್ಯದವರೆಗೂ] ಹಾಗೂ ತುರ್ತು ಪರಿಸ್ಥಿತಿಯನ್ನು ವಿರೋಧಿಸುವಂತ ನಾಟಕಗಳನ್ನು ಸಹ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಕೆಂಪಮ್ಮ ಎ.ಕೆ. ಅವರ ನವೋದಯ ಕಾವ್ಯಗಳಲ್ಲಿ ಸ್ವಾತಂತ್ರ್ಯ ಪರಿಕಲ್ಪನೆ :

ಕನ್ನಡ ನವೋದಯ ಕಾವ್ಯವು ಸ್ವಾತಂತ್ರ್ಯ ಚಳುವಳಿಯನ್ನು ಗ್ರಹಿಸಿದ ಮತ್ತು ಅದಕ್ಕೆ ಪ್ರತಿಕ್ರಿಯಿಸಿದ ಕುರಿತು ಚರ್ಚಿಸಲಾಗಿದೆ. ಸ್ವಾತಂತ್ರ್ಯ ಆಂದೋಲನ ಕುರಿತು ನವೋದಯ ಕವಿಗಳ ಮನೋಧೋರಣೆಯನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ.

ಹೇಮಲತಾ ಟಿ.ಕೆ. ಅವರ ದಕ್ಷಿಣ ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ

ಈ ಪ್ರಬಂಧದಲ್ಲಿ ದಕ್ಷಿಣ ಕನ್ನಡ ಭಾಗದ ಕವಿಗಳ ಕಾವ್ಯವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿ ಅವುಗಳು ಸ್ವಾತಂತ್ರ್ಯ ಚಳುವಳಿಗೆ ತೋರಿದ ಪ್ರತಿಕ್ರಿಯೆಯನ್ನು ಚರ್ಚಿಸಲಾಗಿದೆ. ಹಾಗೂ ರಾಷ್ಟ್ರೀಯತೆ ಅದರ ಕುರಿತ ಧೋರಣೆಗಳು, ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ದಕ್ಷಿಣ ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ ಪರಕಲ್ಪನೆಯು ಮೂಡಿ ಬಂದ ಪ್ರಕ್ರಿಯೆಯನ್ನು ವಿಶ್ಲೇಷಿಸಿದ್ದಾರೆ.

ಲೇಖನಗಳು

ಗುಡಿಹಳ್ಳಿ ನಾಗರಾಜ ಅವರ ಸ್ವಾತಂತ್ರ್ಯ ಚಳುವಳಿಯಲ್ಲಿ ಕನ್ನಡ ರಂಗಭೂಮಿಯ ಪಾತ್ರ

ಗುಡಿಹಳ್ಳಿ ನಾಗರಾಜ ಅವರ ಈ ಲೇಖನವು ಸ್ವಾತಂತ್ರ್ಯ ಚಳುವಳಿಗೆ ಕನ್ನಡ ನಾಟಕಗಳು ಪ್ರತಿಕ್ರಿಯಿಸಿದ ಸಂದರ್ಭವನ್ನು ಕುರಿತು ವಿಶ್ಲೇಷಿಸುತ್ತದೆ. ಸಾತಂತ್ರ್ಯ ಚಳುವಳಿಯ ಭಾಗವಾಗಿ ರಚನೆಗೊಂಡ ನಾಟಕಗಳನ್ನು ಮತ್ತು ನಾಟಕ ಕಂಪನಿಗಳ ಕುರಿತು ಮಾಹಿತಿಯನ್ನು ನೀಡುತ್ತದೆ. ಹಾಗೆ ಸ್ವಾತಂತ್ರ್ಯ ನಂತರದ ಕಾಲಘಟ್ಟಗಳಲ್ಲಿ ರಚನೆಯಾದ ನಾಟಕಗಳು ಯಾಕೆ 'ಸ್ವಾತಂತ್ರ್ಯ' ಅಂಶಗಳಿರುವ ವಸ್ತುಗಳನ್ನು ಮತ್ತೆ ತೆಗೆದುಕೊಂಡವು ಎಂಬುದರ ಬಗ್ಗೆಯೂ ಮಾಹಿತಿಯನ್ನು ಒದಗಿಸುತ್ತದೆ.

ಮಾಲತಿ ಎಸ್. ಅವರ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಂದಿಸಿದ ರಂಗಭೂಮಿ

ಮಾಲತಿ ಎಸ್ ಅವರು ಈ ಲೇಖನದ ಮೂಲಕ ಕಲೆಯ ಉದ್ದೇಶವನ್ನು ಹೇಳುವುದರ ಮೂಲಕ ಕಲೆಯ ಒಂದು ಪ್ರಕಾರವಾದ ರಂಗಭೂಮಿಯು ಆಯಾ ಕಾಲಘಟ್ಟದ ವರ್ತಮಾನದ

ಬಿಕ್ಕಟ್ಟುಗಳಿಗೆ ಸ್ಪಂದಿಸಿದ ರೀತಿಯನ್ನು ಹಲವು ನಾಟಕಗಳ ಮೂಲಕ ಚರ್ಚಿಸಲು ಪ್ರಯತ್ನಿಸಿದ್ದಾರೆ. 1975 ರಲ್ಲಿ ಘೋಷಣೆಯಾದ ತುರ್ತುಪರಿಸ್ಥಿತಿಯ ವಿರುದ್ಧ ದೇಶಾದ್ಯಂತ ಆರಂಭಗೊಂಡ ಬೀದಿ ರಂಗಭೂಮಿ ಹಾಗೂ ಇದಕ್ಕಿಂತ ಮೊದಲು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಶರ ವಿರುದ್ಧ ಚಳುವಳಿಯ ಭಾಗವಾಗಿ ರಚನೆಗೊಂಡ ನಾಟಕಗಳನ್ನು ವಿಶ್ಲೇಷಿಸಿದ್ದಾರೆ. ಕರ್ನಾಟಕ ಅಷ್ಟೇ ಅಲ್ಲದೆ ಬಂಗಾಲದಲ್ಲಿ ಪ್ರದರ್ಶನಗೊಂಡ ನೀಲ್ ದರ್ಪಣ, ಮಹಾರಾಷ್ಟ್ರದಲ್ಲಿ ಪ್ರದರ್ಶನಗೊಂಡ ಕೀಚಕವಧ ನಾಟಕಗಳ ಬಗ್ಗೆಯೂ ಮಾಹಿತಿ ನೀಡಿದ್ದಾರೆ. ಹಾಗೆ ಕರ್ನಾಟಕದಲ್ಲಿ ಗರುಡ ಸದಾಶಿವರಾಯರು, ಶಾಂತಕವಿಗಳು, ವೆಂಕೋಬರಾಯರು, ಕಂದಗಲ್ಲ ಹನುಮಂತರಾಯರ ನಾಟಕಗಳನ್ನು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿಯೇ ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಕನ್ನಡ ಸಾಹಿತ್ಯದ ಪ್ರಕಾರಗಳಾದ ಲಾವಣಿ, ಕಾವ್ಯ, ಕಾದಂಬರಿ, ತತ್ವಪದ ಮತ್ತು ಕಿರ್ತನ ಸಾಹಿತ್ಯ ಕುರಿತು ವಿಭಿನ್ನ ಆಯಾಮಗಳಲ್ಲಿ ಅಧ್ಯಯನಗಳು ನಡೆದಿವೆ. ಆದರೆ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ರಚನೆಗೊಂಡ ಕನ್ನಡ ನಾಟಕಗಳ ಕುರಿತು ಅಷ್ಟೊಂದು ಅಧ್ಯಯನಗಳು ನಡೆದಿರುವುದು ಕಂಡುಬರುವುದಿಲ್ಲ. ಹಾಗಾಗಿ ಗಾಂಧಿ ಆದಿಯಾಗಿ ರಾಷ್ಟ್ರೀಯತೆ, ಸಾಮಾಜಿಕ ಸಮಸ್ಯೆಗಳು ಮತ್ತು ಏಕೀಕರಣದಂತ ವಸ್ತು ವಿಷಯಗಳಿಗೆ ಕನ್ನಡ ಸಾಹಿತ್ಯ ಮುಖಾಮುಖಿಗೊಂಡ ಪರಿಯನ್ನು ಪ್ರಸ್ತುತ ಅಧ್ಯಯನದಲ್ಲಿ ಸಮಿಕ್ಷೆಗೆ ಒಳಪಡಿಸಲಾಗಿದೆ.

* * *

ಅಧ್ಯಾಯ: ಮೂರು

ಕನ್ನಡ ಸಾಹಿತ್ಯ ಮತ್ತು ಸ್ವಾತಂತ್ರ್ಯ ಚಳುವಳಿಯ ಅಂತರ್ ಸಂಬಂಧದ ನೆಲೆಗಳು

೩.೧. ಲಾವಣಿ
೩.೨. ಕಾವ್ಯ
೩.೩. ಕಥೆ
೩.೪. ಕಾದಂಬರಿ

ಅಧ್ಯಾಯ : ಮೂರು

ಕನ್ನಡ ಸಾಹಿತ್ಯ ಮತ್ತು ಸ್ವಾತಂತ್ರ್ಯ ಚಳುವಳಿಯ ಅಂತರ್ ಸಂಬಂಧದ ನೆಲೆಗಳು

ಕನ್ನಡ ಸಾಹಿತ್ಯಕ್ಕೆ ಅನೇಕ ವಸ್ತುವಿಚಾರಗಳು ಕಾಲ ಕಾಲಕ್ಕೆ ಒದಗಿ ಬಂದಿರುವುದು ಗಮನಾರ್ಹ. ಹಾಗೆ ಘಟನೆಯೊಂದು ವಸ್ತುವಾಗಿ ಒದಗಿ ಅನೇಕ ವರ್ಷಗಳ ಕಾಲ ಕನ್ನಡ ಸಾಹಿತ್ಯದೊಂದಿಗೆ ಒಡನಾಟವನ್ನು ನಡೆಸಿರುವ ಸಂದರ್ಭವಾಗಿ ಸ್ವಾತಂತ್ರ್ಯ ಚಳುವಳಿ ಒಂದು ವಿಭಿನ್ನ ಮಾದರಿಯಿಂದ ಕನ್ನಡ ಸಾಹಿತ್ಯವನ್ನು ಎದುರುಗೊಂಡಿದೆ. ಈ ಹಂತದಲ್ಲಿ ಸ್ವಾತಂತ್ರ್ಯ ಚಳುವಳಿ ಎನ್ನುವ ವಿಷಯ, ಘಟನೆ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಅನಾವರಣಗೊಂಡಿದೆ. ಬಹುಶಃ ಸ್ವಾತಂತ್ರ್ಯ ಚಳುವಳಿ ಎಲ್ಲ ವಿಷಯಗಳಂತೆ ಒಂದು ಕಾಲ್ಪನಿಕ ಅಥವಾ ಪಾರಂಪರಿಕ ವಿಷಯವಾಗದೆ ನೇರವಾಗಿ ಘಟನೆಯನ್ನು ಕುರಿತದ್ದಾಗಿದೆ. ಇಲ್ಲಿ ಪ್ರತಿಯೊಬ್ಬ ಸಾಹಿತಿ/ಲೇಖಕರು ಸ್ವಾತಂತ್ರ್ಯ ಚಳುವಳಿಯನ್ನು ಇದಿರುಗೊಂಡ ಸಂದರ್ಭ ಎಷ್ಟರ ಮಟ್ಟಿಗೆ ಇದು ಕನ್ನಡದಲ್ಲಿ ಹಾಸುಹೊಕ್ಕಾಗಿದೆ ಎಂಬುದು ಮುಖ್ಯ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯದ ಇತರೆ ಪ್ರಕಾರಗಳಾದ ಲಾವಣಿ, ಕಾವ್ಯ, ಕಥೆ, ಕಾದಂಬರಿ ಮುಂತಾದವುಗಳಲ್ಲಿ ಮೂಡಿ ಬಂದ ಸ್ವಾತಂತ್ರ್ಯ ಚಳುವಳಿಯ ವಿಶಿಷ್ಟ ಅಂಶಗಳನ್ನು ಸಮೀಕ್ಷಿಸಲಾಗಿದೆ.

೩.೧ ಲಾವಣಿ

ಮನುಷ್ಯನ ವಿಕಾಸವೇ ವಲಸೆಯ ಮೂಲಾಂಶವುಳ್ಳದ್ದು. ಮಣ್ಣ(ಭೂಮಿ)ನ್ನು ಒಂದು ಚೌಕಟ್ಟಿಗೆ ಒಳಪಡಿಸಿ ತನ್ನದಾಗಿಸಿಕೊಂಡದ್ದು, ವ್ಯವಸಾಯವನ್ನು ಆರಂಭಿಸಿ, ಒಂದು ಕಡೆ ನೆಲೆನಿಂತ ಮೇಲೆ ಜಗತ್ತಿನಾದ್ಯಂತ ಆರಂಭಗೊಂಡ ರಾಜ ಪ್ರಭುತ್ವಗಳು ಕೂಡ ಯುದ್ಧಗಳ ಮೂಲಕ ತಮ್ಮತಮ್ಮ ಸೀಮೆಯನ್ನು ಹಿಗ್ಗಿಸಿಕೊಳ್ಳುವ, ಕುಗ್ಗಿಸಿಕೊಳ್ಳುವ ಘಟನೆಗಳಿಗೆ ಒಳಗಾಗಿವೆ. ಕ್ರಮೇಣ ರಾಜಪ್ರಭುತ್ವ ಮೇಲ್ವರ್ಗ ಮತ್ತು ಧರ್ಮಗಳ ಹಿತವನ್ನು ಬಯಸಿವೆ. ಜನಸಾಮಾನ್ಯರು ಪ್ರಭುತ್ವದ ಭಾಗವಾಗಲೇ ಇಲ್ಲ. ಆಯಾ ಚಾರಿತ್ರಿಕ ಸನ್ನಿವೇಷದಲ್ಲಿ ಇಂಥ ಘಟನೆಗಳ ವಿರುದ್ಧ ಜಗತ್ತಿನಾದ್ಯಂತ ಸಾಮಾಜಿಕ ನೆಲೆಯಲ್ಲಿ ಕ್ರಿಯಾತ್ಮಕ ಹೋರಾಟಗಳು ನಡೆದಿವೆ.

ವಸಹಾತು ಸಾಂಸ್ಕೃತಿಕ ಸಂದರ್ಭದಲ್ಲಿ ಸ್ಥಿತ್ಯಂತರಗೊಳ್ಳುತ್ತಿದ್ದ 'ಭಾರತೀಯ' ಸಮಾಜದ ಚಹರೆಗಳನ್ನು ಭಾರತದ ಸಂಸ್ಕೃತಿಯ ಚಹರೆಗಳನ್ನಾಗಿ, ರಾಷ್ಟ್ರೀಯತೆಯ ನೆಪದಲ್ಲಿ ಏಕೀಕರಿಸುವ ಕೆಲಸಗಳು ಪ್ರಾರಂಭಗೊಂಡಿದ್ದವು. ಹಾಗೆ ವಸಹಾತು ಪೂರ್ವದಿಂದಲೂ ಪರಂಪರೆಯ ಬಳುವಳಿಯಾಗಿ ಹೇರಲ್ಪಟ್ಟಿದ್ದ ಅಸಮಾನತೆಗಳನ್ನು ತಿಳಿಗೊಳಿಸುವ ಕೆಲಸಗಳು ಆರಂಭಗೊಂಡಿದ್ದವು. ಇಂತಹ ಚಲನೆಗಳಿಗೆ ಕನ್ನಡ ಸಾಹಿತ್ಯ ಪ್ರತಿಕ್ರಿಯಿಸಿದ ಬಗೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ .ಕನ್ನಡದ ಸಂದರ್ಭದಲ್ಲಿ ಶಿಷ್ಟ ಸಾಹಿತ್ಯ ರಚನೆಗಿಂತ ಪೂರ್ವದಲ್ಲಿಯ ರಾಷ್ಟ್ರೀಯ ಚಳಿವಳಿಗೆ ಜನರನ್ನು ಪ್ರೇರಿಸುವಲ್ಲಿ ಜನಪದ ಸಾಹಿತ್ಯದ ಪಾತ್ರ ಪ್ರಮುಖವಾದದ್ದು. ಅದರಲ್ಲೂ "ಅಸಹಕಾರದ ಲಾವಣಿಗಳನ್ನು ಬ್ರಿಟಿಶ್ ಸರಕಾರ ಮುಟ್ಟುಗೋಲು ಹಾಕಿತೆಂದು" ಜಿ.ಎಸ್.ಹಾಲಪ್ಪ ಅವರು Historhry of freedom movement in Karnataka (govt of mysore. Bangalore. P.no.392. 2ndvol) ಕೃತಿಯಲ್ಲಿ ಉಲ್ಲೇಖಿಸಿರುವುದು ಲಾವಣಿ ಸಾಹಿತ್ಯಕ್ಕೆ ಸ್ವಾತಂತ್ರ್ಯ ಚಳುವಳಿ ಬಗ್ಗೆ ಇದ್ದ ಬದ್ಧತೆಯನ್ನು ತಿಳಿಸುತ್ತದೆ.

"ಗ್ರಾಮಾಂತರ ಜನರ ಅನಕ್ಷರತೆ ಹಾಗೂ ಅವರನ್ನು ತಲುಪಲು ಸಾರಿಗೆ ಸಂಪರ್ಕದ ಅಭಾವವಿರುವ ಸಂದರ್ಭದಲ್ಲಿ ಗ್ರಾಮಾಂತರ ಜನರೊಡನೆ ನೇರ ಸಂಪರ್ಕ ಬೆಳೆಸಿ ಅವರು ರಾಷ್ಟ್ರೀಯ ಚಳುವಳಿಯಲ್ಲಿ ಆಸಕ್ತಿ ತೋರುವಂತೆ ಮಾಡುವಲ್ಲಿ ಲಾವಣಿಯೊಂದೇ ಏಕೈಕ ಹಾಗೂ ಸಮರ್ಥ ಸಂವಹನ ಮಾಧ್ಯಮವಾಗಿರಬಹುದೆಂದು ಬಗೆದ ಕಾಂಗ್ರೆಸ್ ಕಾರ್ಯಕರ್ತರು ಲಾವಣಿಕಾರರ ಮೊರೆ ಹೋದುದು, ಪ್ರತಿಯಾಗಿ ಲಾವಣಿಕಾರರು ರಾಷ್ಟ್ರಿಯ ಚಳುವಳಿಯ ವಿದ್ಯಮಾನಗಳನ್ನು ಕುರಿತು ಲಾವಣಿ ಸಾಹಿತ್ಯ ರಚನೆ, ಪ್ರಚಾರ ಮಾಡುವ ಮೂಲಕ ಗ್ರಾಮೀಣ ಜನರಲ್ಲಿ ರಾಷ್ಟ್ರ–ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಮೂಡಿಸಿ ರಾಷ್ಟ್ರೀಯ ಚಳುವಳಿಯೆಡೆಗೆ ಆಕರ್ಷಿಸುವಲ್ಲಿ ಯಶಸ್ವಿಯಾದುದು" ಮುಖ್ಯ. (ಶಿವಾನಂದ ಗುಬ್ಬಣ್ಣವರ, ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ, 'ಮೊದಲ ಮಾತು'ನಿಂದ ತೆಗೆದುಕೊಂಡದ್ದು) ರಾಜಕೀಯ ಸ್ವಾತಂತ್ರ್ಯದಿಂದ ಮಾತ್ರ ಸ್ವಾತಂತ್ರ್ಯ ಭಾರತವನ್ನು ಕಟ್ಟಲು ಸಾಧ್ಯವಿಲ್ಲ ಎಂದು ಗಾಂಧೀಜಿಯವರು ಮತ್ತು ಅನೇಕ ಹೋರಾಟಗಾರರು ಮನಗಂಡಿದ್ದರು. ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಅಸ್ಪೃಶ್ಯತಾ ನಿವಾರಣೆ, ಸಾಮಾಜಿಕ, ಆರ್ಥಿಕ ಸಮಾನತೆಯಂತ ಕಾರ್ಯಕ್ರಮಗಳನ್ನು ಮತ್ತು ರಾಷ್ಟ್ರೀಯತೆಯ ಅಂಗವಾಗಿಯೆ ಪ್ರಾರಂಭಗೊಂಡ ಕರ್ನಾಟಕ ಏಕೀಕರಣ ಚಳುವಳಿಗಳ ಮಹತ್ವವನ್ನು ಹಳ್ಳಿಗಳ ಜನರಿಗೆ ತಿಳಿಸುವಲ್ಲಿಯೂ ಲಾವಣಿಗಳು ಪ್ರಮುಖ ಪಾತ್ರ ವಹಿಸಿವೆ.

"ಪುಣ್ಯ ಭೂಮಿ ಎಂದರೆ ಹಿಂದೂಸ್ಥಾನ
ಕೇಳದಿ ಸರ್ವಜನ ಹೇಳುವೆನು ಪೂರ್ಣ

ಇರಲಿ ನಿಮ್ಮ ಚಿತ್ತ
ಧನಧಾನ್ಯ ತುಂಬಿ ತುಳುಕುವುದು ಸರ್ವ ಸಂಪತ್ತು
ಕನ್ಯಾಕುಮಾರಿಯಿಂದ ಹಿಮಾಲಯತನಕ
ದಕ್ಷಿಣೋತ್ತರ ಉದ್ದಳತೆ ತಕ್ಕ
ಎರಡು ಸಾವಿರ ಮೈಲಿ
ಪೂರ್ವಪಶ್ಚಿಮದಡ್ಡಾಗಲಿರುವುದು ೧೮೦೦ ಮೈಲಿ
ರಾಷ್ಟ್ರದ ಕ್ಷೇತ್ರಫಲ
ಒಟ್ಟಗೂಡಿ ಎಲ್ಲ ೧೫ ಲಕ್ಷಮೈಲಿ
ಚಚೌಕು ಇರುವುದಲ್ಲ
ಭರತಖಂಡದ ಉತ್ತರದಲ್ಲಿ ಪರ್ವತದ ಸಾಲ
ಅದರಲ್ಲಿ ಎತ್ತರವಾದ ಶಿಖರ
ಗೌರಿಶಂಕರ ಎಂಬ ಹೆಸರ
ಎಲ್ಲಾರಕ್ಕಿಂತ ಮೇಲ
೨೫ ಸಾವಿರದ ೨೫ ಅಡಿ ಇರುವುದಲ್ಲ."

(ಶಿವಾನಂದ ಗುಬ್ಬಣ್ಣವರ, ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ, ಪುಟ-೪೮)

ರಾಷ್ಟ್ರೀಯತೆ, ದೇಶಾಭಿಮಾನ, ದೇಶ ಎಂಬ ಕಲ್ಪನೆಯನ್ನು ಸಾಮಾನ್ಯ ಜನರಿಗೂ ತಿಳಿಸುವ ಪ್ರಕ್ರಿಯೆಗಳು ಮೊದಲು ಆರಂಭಗೊಂಡವು. ಇಂತಹ ಸಂದರ್ಭದಲ್ಲಿ ಹುಲಕುಂದ ಭೀಮಕವಿ, ಬರೆದ ಈ ಲಾವಣಿ ಪದ ಭಾರತದ ವಿಶಾಲ ಭೂಪ್ರದೇಶದ ಗಡಿಯನ್ನು (ಸೀಮೆ) ಗುರುತಿಸುವ ಮೂಲಕ ಭಾರತ ದೇಶದ ವ್ಯಾಪ್ತಿಯನ್ನು ತಿಳಿಸುತ್ತದೆ. ವಸಹಾತು ಪೂರ್ವದಲ್ಲಿ ರಾಜಪ್ರಭುತ್ವಗಳ ಆಳ್ವಿಕೆಯಲ್ಲಿ ಭಾರತದ ಜನರಿಗೆ ಒಂದು ದೇಶದ ವ್ಯಾಪ್ತಿಯನ್ನು ಅದರ ಪ್ರಾಮುಖ್ಯತೆಯನ್ನು ಕುರಿತು ತಿಳಿಹೇಳುವಲ್ಲಿ ಈ ಲಾವಣಿಗಳು ಪ್ರಮುಖ ಪಾತ್ರ ವಹಿಸಿವೆ. ಇಂತ ಲಾವಣಿ ಪದಗಳು ಆರಂಭ ಕಾಲದ ರಾಷ್ಟ್ರೀಯತೆಯ ಸ್ವರೂಪವನ್ನು ಗುರುತಿಸುತ್ತವೆ.

"ಶ್ರೇಷ್ಠವಾದ ರಾಷ್ಟ್ರೀಯ ಮುಖಂಡರು
ಲೋಕಮಾನ್ಯ ಟಿಳಕರೆಂಬುವರು

ಮೊದಲಿಗೆ ಅಂಜತಿದ್ದ ಜನರು
ಜೇಲ ಅಂದ್ರ ಅವಮಾನ ಅಂತಿದ್ರು
ಮೊದಲಿಗೆ ಇವರು ಜೇಲಿಗೆ ಹೋದವರು
ಜನರಲ್ಲಿಯ ಅಂಜಿಕೆತಗದವರು......" (ಅದೇ, ಪುಟ-೫೦)

ಈ ಲಾವಣಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ನಾಯಕರ ಮೇಲಿನ ಬ್ರಿಟಿಶರ ದೌರ್ಜನ್ಯ, ಕ್ರೌರ್ಯಗಳ ಕುರಿತು ಜನರಲ್ಲಿದ್ದ ಚಿತ್ರಣವನ್ನು ಚಿತ್ರಿಸುತ್ತ, ಅಂಥ ದೌರ್ಜನ್ಯಗಳಿಗೂ ಬಗ್ಗದೆ ಚಳುವಳಿಯಲ್ಲಿ ಭಾಗಿಯಾಗಿ ಸೆರೆವಾಸ ಅನುಭವಿಸಿದ ತಿಲಕರ ವ್ಯಕ್ತಿತ್ವದ ಮೂಲಕ ಗ್ರಾಮೀಣ ಜನರನ್ನು ಚಳುವಳಿಗೆ ಪ್ರೇರೇಪಿಸಿ ಕಠಿಣ ಸಂದರ್ಭದಲ್ಲೂ ಅಂಜದೆ ದೇಶದ ಸ್ವಾತಂತ್ರ್ಯಕ್ಕಾಗಿ ಜೈಲುವಾಸಕ್ಕೂ ಸಿದ್ದಗೊಳ್ಳುವ ಭಾವನಾತ್ಮಕ ಸಂದೇಶಗಳನ್ನು ಲಾವಣಿ ಪದಗಳು ಕಟ್ಟಿಕೊಟ್ಟಿವೆ.

ಭಾರತೀಯ ಸಮಾಜದಲ್ಲಿ ಹೆಣ್ಣು ಪರಂಪರೆಯಿಂದಲೂ ಸಮಾಜದ ಪಾಲುದಾರಿಕೆಯಲ್ಲಿ ಮುನ್ನೆಲೆಗೆ ಬರದಂತ ಪರಿಸರವನ್ನು ಪುರುಷ ಪ್ರಭುತ್ವ ನಿರ್ಮಿಸಿತ್ತು. ಆದರೆ ೧೮-೧೯ ನೇ ಶತಮಾನದ ಚಿಂತನೆಗಳು ಜಗತ್ತಿನಾದ್ಯಂತ ಈಗಾಗಲೇ ನಿರ್ಮಾಣಗೊಂಡಿದ್ದ ಮೌಲ್ಯಗಳನ್ನು ಸಮಾನತೆ ದೃಷ್ಟಿಯಿಂದ ಮುರಿದು ಕಟ್ಟುವ ಕ್ರಿಯೆಯಲ್ಲಿ ತೊಡಗಿದವು. ಇಂಥ ಚಿಂತನೆಗಳ ಭಾಗವಾಗಿ ವಸಹಾತು ಅನೇಕ ದೇಶಗಳು ಸ್ವತಂತ್ರವಾಗಲು ಚಳುವಳಿಯನ್ನು ರೂಪಿಸಿದ್ದವು. ಭಾರತದಲ್ಲಿಯೂ ಆರಂಭಗೊಂಡಿದ್ದ ಸ್ವಾತಂತ್ರ್ಯ ಚಳುವಳಿ ಎಲ್ಲ ಸಮುದಾಯಗಳನ್ನು, ಮುಖ್ಯವಾಗಿ 'ಹೆಣ್ಣು' ಚಳುವಳಿ ಎಂಬ ಪರದೆಯ ಹಿಂದೆ ತನ್ನದೆ ಮಿತಿಯಲ್ಲಿ ಕಾರ್ಯ ಪ್ರವೃತ್ತಿಗಳಾಗಿದ್ದವು. ಆದರೆ ಲಾವಣಿ, ನಾಟಕಗಳಂತಹ ಮಾಧ್ಯಮಗಳು ಸ್ವಾತಂತ್ರ್ಯ ಚಳುವಳಿಯ ಧ್ಯೇಯೋದ್ದೇಶಗಳನ್ನು ಪ್ರಚಾರಪಡಿಸಿ ಅರಿತವರನ್ನು ಚಳುವಳಿಯ ಮುನ್ನೆಲೆಗೆ ತಂದವು. ಆ ಲಾವಣಿಗಳಲ್ಲಿ ಹೆಣ್ಣು ಸ್ವಾತಂತ್ರ್ಯ ಚಳುವಳಿಗೆ ತನ್ನ ಪಾಲುದಾರಿಕೆ ಕುರಿತು ಹೀಗೆ ಮಾತನಾಡುತ್ತಾಳೆ.

ನಾ ನೆರೆತರೇನು ಇನ್ನೂ ಸಣ್ಣಾಕಿ
ರಾಷ್ಟ್ರಸೇವಾ ಮಾತ್ರ ಮಾಡಾಕಿ
ಕರೆಕರೆದು ಸ್ತ್ರೀಯರನೆಲ್ಲ ಕಲೆಹಾಕಿ
ವೀರ ಸ್ತ್ರೀಯರ ಚರಿತ್ರೆ ತಿಳಸಾಕಿ
ಕರದಿ ರಾಷ್ಟ್ರಧ್ವಜ ಸೇರಸಾಕಿ
ಹಡೆದರೇನಾತು ಇನ್ನೂ ಸಣ್ಣಾಕಿ

ರಾಷ್ಟ್ರಸೇವಾ ನಾನು ಮಾತ್ರ ಮಾಡಾಕಿ
ಚಿಕ್ಕಚಿಕ್ಕ ಮಕ್ಕಳನೆಲ್ಲ ಕೂಡಿಸಾಕಿ
ಚೊಕ್ಕರಾಷ್ಟ್ರ ಬಾವುಟವನ್ನು ಹಿಡಸಾಕಿ
ಅಕ್ಕರೆಯಿಂದ ಜೈಘೋಷ ಮಾಡಿಸಾಕಿ
ಮಂದಿ ಬೈದರೇನಾತು ಇನ್ನೂ ಸಣ್ಣಾಕಿ
ರಾಷ್ಟ್ರಸೇವಾ ಮಾತ್ರ ನಾನು ಮಾಡಾಕಿ
ಹಾದಿಗೆ ಹಜ್ಜಿ ಪರದೇಶಿ ಅರವಿ ಬಿಡಸಾಕಿ
ಖಾದಿ ಅರವಿ ಮಾತ್ರ ನಾನು ತೊಡಸಾಕಿ
ಗಾಂಧೀತರ ಖಾದಿ ನೂಲು ತೆಗಸಾಕಿ
ನಾ ಮುದಿಕ್ಯಾದ್ರ ಏನಾತ ಇನ್ನೂ ಸಣ್ಣಾಕಿ
ರಾಷ್ಟ್ರಸೇವಾ ನಾನು ಮಾತ್ರ ಮಾಡಾಕಿ
ಭವಪಾಶವನೆಲ್ಲ ನಾನು ಹರಿವಾಕಿ
'ಶಿವನಾಮವ' ಮಾತ್ರ ನಾನು ಜಪಿಸುವಾಕಿ
ಕವಿ ನಿಜಲಿಂಗೇಶನ ಕವನ ಹಾಡಾಕಿ"(ಅದೇ, ಪುಟ-೭೧)

ಈ ಕೆಳಗಿನ ಲಾವಣಿಯು ಖಾದಿಯ ಮಹತ್ವವನ್ನು ಈ ರೀತಿ ಚಿತ್ರಿಸಿದೆ.

"ಮೂವತ್ತೇಳು ಕೋಟಿ ಮಂದಿ ಇಂದ
ಖಾದಿ ಧರಿಸಿದ ಭರತಖಂಡ ಆಗತೈತಿ ಸ್ವಾದೀನ
ಗೋಳಾಡಿ ಇಂಗ್ಲೀಷರು ಹಾಳಾಗಿ ಹೋಗತಾರ
ಕೂಳ ಇಲ್ಲದ ಸಾಯತಾರ ಗಿರಣಿ ಜನ ಇಲ್ಲ ಅನುಮಾನ."

(ಅದೇ,ಪುಟ-೯೧)

ಬೇಂದ್ರೆಯವರ ಮೂವತ್ಮೂರು ಕೋಟಿಜನ ಕವಿತೆಯನ್ನು ನೆನಪಿಸುವ ಈ ಲಾವಣಿಯು ಒಂದೇ ಕಾಲಘಟ್ಟದಲ್ಲಿ ರಚಿತವಾದಂತಿದೆ. ಗಾಂಧೀಜಿಯವರ ನೇತೃತ್ವದಲ್ಲಿ ಆರಂಭವಾದ ಸ್ವದೇಶಿ ಚಳುವಳಿಯ ಸ್ವರೂಪವನ್ನು, ಅದರ ಅಹಿಂಸೆಯ ಅಂಶಗಳಿಂದಲೆ ಬ್ರಿಟಿಶರನ್ನು ಭಾರತದಿಂದ ಓಡಿಸಬಹುದು ಎಂಬ ಸೂಕ್ಷ್ಮ ಅಂಶಗಳನ್ನು ಈ ಲಾವಣಿಗಳು ತಿಳಿಸುತ್ತವೆ.

ಸುಮಾರು ೩೩ ಕೋಟಿಯಷ್ಟಿರುವ ಭಾರತದ ಅಂದಿನ ಜನಸಂಖ್ಯೆಯು ಸ್ವದೇಶಿ ಚಳುವಳಿಯ ಭಾಗವಾಗಿ ದುಡಿದರೆ ದೇಶ ಸ್ವಾತಂತ್ರ್ಯಗೊಳ್ಳುವುದರಲ್ಲಿ ಅನುಮಾನವೇ ಇಲ್ಲ ಎಂದು ಸೂಚಿಸುತ್ತವೆ. ಗಾಂಧೀ ಅವರ ಈ ಚಳುವಳಿ ಗುಡಿಕೈಗಾರಿಕೆಯ ಭಾಗವಾಗಿಯು ಆರಂಭಗೊಂಡಂತದ್ದು.

ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಸ್ವಾತಂತ್ರ್ಯ ಚಳುವಳಿಯ ಮುಖ್ಯಗುರಿ ರಾಜಕೀಯ ಹಸ್ತಾಂತರವಾಗಿದ್ದರೂ ಅದರ ಭಾಗವಾಗಿ ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ ಇನ್ನೂ ಮುಂತಾದ ಚಳುವಳಿಗಳನ್ನು ಭಾರತದ ಸ್ವಾತಂತ್ರ್ಯ ಚಳುವಳಿ ಒಳಗೊಂಡಿತ್ತು. ಈ ದೃಷ್ಟಿಯಿಂದ ನೋಡಿದರೆ ಮಾತ್ರ ಭಾರತದ ಸ್ವಾತಂತ್ರ್ಯ ಚಳುವಳಿಗೆ ಸಮಗ್ರತೆಯ ವ್ಯಾಪ್ತಿಯನ್ನು ಗುರುತಿಸಲು ಸಾಧ್ಯ. ಆದರೆ "ರಾಷ್ಟ್ರೀಯ ಚಳುವಳಿ ಕಾಲದಲ್ಲಿ ಭಾರತೀಯರು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಬಲವಾಗಿ ಹೋರಾಡಬೇಕೆಂದು ಹಾಗೂ ಸಾಮಾಜಿಕ ಸುಧಾರಣೆಗಳಿಗೆ ಕೈ ಹಾಕಬಾರದೆಂದು ಲೋಕಮಾನ್ಯ ತಿಲಕ ಮುಂತಾದ ಕೆಲವು ಮುಖಂಡರು ಅಭಿಪ್ರಾಯ ಪಟ್ಟಿದ್ದಾರೆ." (ಶಿವಾನಂದ ಗುಬ್ಬಣ್ಣವರ, ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ, ಪು.ಸಂ.೧೦೭)

ಭಾರತದ ಸ್ವರಾಜ್ಯಕ್ಕಾಗಿ ಆರಂಭಗೊಂಡ ಚಳುವಳಿಗೆ ಪ್ರೇರಣೆಗಳಾದ ಇಂಗ್ಲಿಶ್ ಶಿಕ್ಷಣ, ರಾಷ್ಟ್ರೀಯತೆ, ವೈಜ್ಞಾನಿಕ ಚಿಂತನೆಗಳು ಭಾರತವನ್ನು ಪಾಶ್ಚಾತ್ಯ ಮತ್ತು ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದವು. ಇಂತ ಅಧ್ಯಯನಗಳ ಭಾಗವಾಗಿ ಭಾರತವೆಂಬ ರಾಷ್ಟ್ರ ಉಗಮಗೊಳ್ಳಲು ಆರಂಭಿಸಿತು. ಜೊತೆಗೆ ಒಂದು ರಾಷ್ಟ್ರ ನಿರ್ಮಾಣಕ್ಕಾಗಿ ಒಂದೇ ಧರ್ಮ, ಒಂದೇ ಭಾಷೆ ಎಂಬ ಅಂಶಗಳು ಭಾರತವನ್ನು ಕಟ್ಟುವಲ್ಲಿ ಕೆಲಸ ಮಾಡಿವೆ. ಇಂತ ಚಿಂತನೆಗಳ ಬೇರುಗಳಿಂದಲೇ ಭಾರತದ ಸ್ವಾತಂತ್ರ್ಯ ಚಳುವಳಿ ಆರಂಭಗೊಂಡಿದೆ.

೩.೨ ಕಾವ್ಯ

ಕನ್ನಡ ಸಾಹಿತ್ಯ ರಚನೆಗೊಂಡಿರುವುದೆ ಕಾವ್ಯದ ಮಾದರಿಯಲ್ಲಿ ಕನ್ನಡ ಸಾಹಿತ್ಯ ಎಂದರೆ ಅದು ಕಾವ್ಯ ಎಂಬ ಮಾತನ್ನು ಕನ್ನಡ ಸಾಹಿತ್ಯ ಪರಂಪರೆಯಿಂದ ಗಮನಿಸಬಹುದು. ಆದರೆ ಹತ್ತೊಂಭತ್ತನೆಯ ಶತಮಾನದಲ್ಲಿ ವಸಾಹತುಶಾಹಿ ಆಗಮನದಿಂದಾದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು ಆಧುನಿಕ ಕನ್ನಡ ಸಾಹಿತ್ಯದ ರಚನಾ ಮಾದರಿಯ ಸ್ವರೂಪವನ್ನೇ ವಿಸ್ತಾರಗೊಳಿಸಿದರು. ಕಥೆ, ಕಾದಂಬರಿ, ನಾಟಕ ಮತ್ತು ಇನ್ನೂ ಹಲವಾರು ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯಕ್ಕೆ ಎರವಲಾಗಿ ಬಂದವು. ಇಂಥ ಅಂಶಗಳು ಕನ್ನಡ ಸಾಹಿತ್ಯದಲ್ಲಿ ಆರಂಭದಿಂದಲೂ ಇದ್ದವು ಎಂಬುದನ್ನು ಹಲವಾರು ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಹಾಗೆಯೇ ಇಲ್ಲಿಯ ವರೆಗೆ ಇದ್ದ ಕನ್ನಡ ಕಾವ್ಯ ರಚನೆಯ ಮಾದರಿ ಪ್ರಾಚೀನ ಮಾದರಿಗಳಿಗಿಂತ ಭಿನ್ನವಾಗಿ ಭಾವಗೀತ, ಸುನೀತ, ಕಥನಕವನ,

ಪ್ರಗಾಥ ಸರಳ ರಗಳೆ, ಮಹಾಛಂದಸ್ಸು ಮತ್ತು ಖಂಡಕಾವ್ಯ ಎಂಬ ಪಾಶ್ಚಾತ್ಯ ಕಾವ್ಯದ ರೂಪಗಳೂ ಕನ್ನಡಕ್ಕೆ ಎರವಲಾದವು. ಹಾಗೆಯೇ ಕನ್ನಡ ಸಾಹಿತ್ಯವು ವಸ್ತುವಿನ ಆಯ್ಕೆ ಅಭಿವ್ಯಕ್ತಿ ಕ್ರಮದಲ್ಲಿಯೂ ಪ್ರಮುಖವಾದ ಬದಲಾವಣೆಗಳನ್ನು ಕಂಡಿತು. ಭಾರತದಲ್ಲಿ ಆರಂಭವಾದ ರಾಷ್ಟ್ರೀಯತೆ, ಸ್ವಾತಂತ್ರ್ಯ ಹೋರಾಟ, ವಸಾಹತುಶಾಹಿ ವಿರೋಧಿ ಚಿಂತನೆಗಳು ಸಾಂಸ್ಕೃತಿಕ ಪಲ್ಲಟಗಳು, ಧಾರ್ಮಿಕ ವಿಚಾರಗಳು, ಕನ್ನಡ ಸಾಹಿತ್ಯದ ಅಭಿವ್ಯಕ್ತಿ ಕ್ರಮಕ್ಕೆ ವೇದಿಕೆಯನ್ನು ಒದಗಿಸಿದವು. ಇದೇ ಸಂದರ್ಭದಲ್ಲಿ ನಡೆದ ಸಾಮಾಜಿಕ ಚಳುವಳಿ, ಭಾಷಿಕ ಚಳುವಳಿಗಳು ಸ್ವಾತಂತ್ರ್ಯ ಚಳುವಳಿಯ ಭಾಗವೇ ಆಗಿವೇ. ಮತ್ತು ಇವು ಒಂದಕ್ಕೊಂದು ಅವಿನಾಭಾವ ಸಂಬಂಧವನ್ನಿಟ್ಟುಕೊಂಡೆ ರಚನೆಗೊಂಡಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಕಾವ್ಯವು ಸ್ವಾತಂತ್ರ್ಯ ಚಳವಳಿಗೆ ಹೇಗೆ ಪ್ರತಿಕ್ರಿಯಿಸಿದೆ ಎಂಬುದನ್ನು ಈ ಭಾಗದಲ್ಲಿ ಸಮೀಕ್ಷಿಸಲಾಗಿದೆ.

ಭಾರತ ಭಾಗ್ಯವಿಧಾತ

ಗೋವಿಂದ ಪೈ ಅವರ ಈ ಕವಿತೆಯು ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖರಾಗಿದ್ದ ಗಾಂಧಿಯವರ ಕುರಿತದ್ದು. ರವೀಂದ್ರನಾಥ ಟ್ಯಾಗೂರರ ಜನಗಣ ಮನ ಎಂಬ ಕವಿತೆಯ ಭಾರತ ಭಾಗ್ಯವಿಧಾತ ಎಂಬ ಸಾಲಿನ ಮೂಲಕ ಗಾಂಧೀಜಿಯನ್ನು ಭಾರತದ ನಾಯಕನನ್ನಾಗಿ ಚಿತ್ರಿಸಿದ್ದಾರೆ. ಇಲ್ಲಿ ಸ್ವಾತಂತ್ರ್ಯದ ಬಗ್ಗೆ ಮತ್ತು ಅಂದಿನ ಪ್ರಮುಖ ವಿಷಯಗಳಾಗಿದ್ದ ಐಕ್ಯತೆ ಮತ್ತು ಶಾಂತಿಯ ಕುರಿತು ಪ್ರಶ್ನೆ ಮಾಡಲಾಗಿದೆ. ಹಾಗೂ ಈ ಅಂಶಗಳ ಮೂಲಕ ಭಾರತ ಸ್ವಾತಂತ್ರ್ಯಗೊಳ್ಳಬೇಕು ಎಂಬುದು ಈ ಕವಿತೆಯ ಆಶಯವಾಗಿದೆ.

ಭಾರತ ಭಾಗ್ಯ ವಿದಾತಾ

ತಾ ತಾ ತಾ

ಸ್ವರಾಜ್ಯವೆಮಗೆ ದಾತಾ

ತಾ ತಾ ತಾ

ಕಲಸೆಮಗೆ ಸತ್ಯವೊಂದು

ಇಸ್ಲಾಮಂತೆಯೇ ಹಿಂದೂ

ತಾಯಿ ಮೊಲೆಗಳಿವೆಂದು

ಮೊಲೆಕೊಡುವ ತಾಯೊಂದು

ಸ್ವರಾಜ್ಯ ಪಿಪಾಸಿ

ಜಗಕೆ ಹಾಲಿನ ಬಾಸೆ

ಯವುಂತೆ ಕರುಣಿಸೆ

ಸುರಿಸು ಶಾಂತಿಯ ಸೇಸ

(ಗೋವಿಂದ ಪೈ, ಗಿಳಿವಿಂಡು, ಪುಟ–೩೪–೩೫)

ಮಹತ್ಮರ ಉಪವಾಸ

"ಗುರುವೆ ಇಪ್ಪತ್ತೊಂದುದಿನದುಪೋಷ್ಯವ ನೋಂತು

ನೀ ಧಿಲ್ಲಿಯಂ ಚೆಲ್ಲಿಯಂ ಚೆಲ್ಲಿದೀ ಪ್ರೇಮ ಭೀಜಂ

ಭಾರತದ ಭಾಗ್ಯವತಿಯಾಗಿ ಮಡಲಿಡದೆಂತು?

ಬೆಳೆಸದೆಂತಮರ ಸಾದರ್ಯಮಿದುಸಾಜಂ?"

(ಗೋವಿಂದ ಪೈ, ಗಿಳಿವಿಂಡು, ಪುಟ–೪೬)

ಗೋವಿಂದ ಪೈ ಅವರ ಈ ಪದ್ಯವು ಕೂಡ ಮಹಾತ್ಮ ಗಾಂಧಿಯವರನ್ನು ಕುರಿತಂತೆ ಭಾರತದ ಸ್ವಾತಂತ್ರ್ಯಕ್ಕಾಗಿ ೧೯೨೪ರಲ್ಲಿ ಗಾಂಧಿ ಕೈಗೊಂಡ ೨೧ದಿನಗಳ ಉಪವಾಸವನ್ನು ಈ ಕವಿತೆ ಚಿತ್ರಿಸುತ್ತದೆ. ಮುಖ್ಯವಾಗಿ ಗಾಂಧಿಯನ್ನು ಭಗೀರಥ, ಬುದ್ಧ ಮತ್ತು ಏಸುವಿಗೆ ಹೋಲಿಸಲಾಗಿದೆ. ಈ ಮೂಲಕ ಗಾಂಧಿಯನ್ನು ಒಬ್ಬ ಛಲದಂಕನ್ನಾಗಿ ಮತ್ತು ಶಾಂತಿದೂತನನ್ನಾಗಿ ಉನ್ನತೀಕರಿಸಲಾಗಿದೆ. ಈ ತಾಳ್ಮೆಯ ಗಾಂಧಿ ಸ್ವಾತಂತ್ರ್ಯಕ್ಕೆ ದಾರಿಯಾಗಲಿ ಮತ್ತು ಉಪವಾಸವೇ ಹೋರಾಟದ ಅಸ್ತ್ರವಾಗಲಿ ಎಂಬ ಆಶಯ ಕವಿತೆಯದ್ದಾಗಿದೆ.

ಭಾರತ ಸ್ವಾತಂತ್ರ್ಯದ ಗಾಯತ್ರಿ

'Quitindia! ಎಂದು ನೀ ಬರೆದೆ

ಭಾರತದ ಹೃದಯದಲಿ ಮಿಂಚಿನಕ್ಷರವೆ!'

(ಗೋವಿಂದ ಪೈ, ಹೃದಯರಂಗ, ಪುಟ–೪೫)

ಪೈ ಅವರ ಈ ಕವಿತೆಯು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ನಡೆದ ಕ್ವಿಟ್ ಇಂಡಿಯಾ ಚಳುವಳಿಗಳ ಕುರಿತದ್ದಾಗಿದೆ. ಈ ಚಳುವಳಿಯು ಭಾರತದ ಸ್ವಾತಂತ್ರ್ಯ ಚಳುವಳಿಗೆ ಕ್ರಾಂತಿಯ ಸ್ವರೂಪ ನೀಡಿತು. ಕವಿಯು ಈ ಚಳುವಳಿಯನ್ನು ಭಾರತ ಸ್ವಾತಂತ್ರ್ಯದ ಗಾಯತ್ರಿ ಎಂದು ಕರೆದಿದ್ದಾನೆ. ಕಾರಣ ಕ್ವಿಟ್ ಇಂಡಿಯಾ ಚಳವಳಿ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಭಾಗವಾಗಿತ್ತು. ಇಲ್ಲಿ ಬುದ್ಧನ ಶಾಂತಿಯ ಸೆಲೆ

ಗಾಂಧಿಯ ಮೂಲಕ ವ್ಯಕ್ತವಾಗಿ ಭಾರತ ಸ್ವಾತಂತ್ರ್ಯಗೊಳ್ಳಲಿ ಎಂಬುದು ಕವಿತೆಯ ಆಶಯವಾಗಿದೆ.

ಹೊಲೆಯನ ಹಾಡು

ನವೋದಯದ ಆರಂಭದ ಕವಿಗಳಲ್ಲಿ ಒಬ್ಬರಾದ ಪಂಜೆ ಮಂಗೇಶರಾಯರ ಈ ಕವಿತೆ ವಸಾಹತುಶಾಹಿ ವಿರುದ್ಧ ನಡೆದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿಯೇ ಭಾರತೀಯ ಸಮಾಜದಲ್ಲಿದ್ದ ಅಸ್ಪೃಶ್ಯತೆ, ತಾರತಮ್ಯತೆಯನ್ನು ವಿಮರ್ಶಿಸುತ್ತ ಸ್ವಾತಂತ್ರ್ಯ ಚಳುವಳಿಗೆ ಕೆಳವರ್ಗಗಳು, ಕೆಳಜಾತಿಗಳು ಕೂಡ ಮುಖ್ಯ ಎಂಬುದನ್ನು ಪ್ರತಿಧ್ವನಿಸುತ್ತದೆ. ಎಲ್ಲರೂ ಸೇರಿ ಚಳುವಳಿಗಾಗಿ ಹೋರಾಡೋಣ ಎಂಬ ಸಂಬಂಧದ ಮಾತುಗಳು ಇಲ್ಲಿ ಅಡಕಗೊಂಡಿವೆ. ಮನುಷ್ಯನ ದೈಹಿಕ ರಚನೆಯ ಮೂಲಕ ಮೇಲು ಕೀಳು ಮತ್ತು ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳನ್ನು ಸಮ್ಮಿಲಗೊಳಿಸಿ ಭಾರತದ ಸ್ವಾತಂತ್ರ್ಯ ಚಳುವಳಿಯೂ ಹೇಗೆ ನಿರೂಪಣೆಗೊಳ್ಳಬೇಕಾಗಿದೆ ಎಂಬುದನ್ನು ಈ ಕವಿತೆ ವಿಶ್ಲೇಷಿಸುತ್ತದೆ.

"ಕಣ್ಣು, ಮೂಗು, ಕೈ, ಕಾಲು, ಗಂಟು
ಅಣ್ಣ ನಿಮ್ಮಂತೆಯೇ ನಮಗೆಲ್ಲ ಉಂಟು
ಬಣ್ಣ ಕಪ್ಪೆಂದು ನೀ ಬಿಡುವುದೇ ನಂಟು?
ಎಣ್ಣೆಯೋಲ್ ಹಿಡಿಯುವುದೇ ನಮ್ಮ ಮೈಯಂಟು
ಒಳಹೊಕ್ಕು ಅನ್ನತಿಂಬುದುವುದು ಬೆಕ್ಕು
ಉಳುವರು ನಾವು । ನಮಗಿಲ್ಲ ಹಕ್ಕು
ಅಳುವ ತಮ್ಮಗೆ ಸರಿ ಮಣಿಯನ್ನು ಇಕ್ಕು
ಕಲಿಯುಗದಲ್ಲಿ ನಿನಗಿದು ಪುಣ್ಯವಕ್ಕು
ನೋಡು ಸ್ವರಾಜ್ಯಕ್ಕೆ ನಾವೂರುಗೋಲು
ನೀಡಣ್ಣ ! ದಮ್ಮಯ್ಯ ! ಕೊಡು ಸರಿಪಾಲು
ಬೇಡಿದಾಗಲೇ ಬಿಟ್ಟುಕೊಡುವುದು ಮೇಲು !
ಬೇಡ ನಾಂ ಸೆಳೆದುಕೊಂಬೆವು ನಮ್ಮ ಪಾಲು!"

(ಪಂಜೆಮಂಗೇಶರಾಯರ, ಪಂಜೆಮಂಗೇಶರಾಯರ ಸಮಗ್ರ ಸಾಹಿತ್ಯ, ಪುಟ–೫೫೭–೫೫೮)

ಹಿಂದುಸ್ತಾನ ಹಮಾರ

ಗೋವಿಂದ ಪೈ ಅವರ ಈ ಕವಿತೆ ಉರ್ದುವಿನ ಶೇಖ್ ಮಹ್ಮದ್ ಇಕ್ಬಾಲರ ಗಜಲ್‌ನ್ನು ಅವಲಂಬಿಸಿ ರಚನೆಗೊಂಡಿದೆ. ಕವಿತೆಯ ಶೀರ್ಷಿಕೆಯೇ ಹಿಂದುಸ್ತಾನವೆನ್ನುವುದು ಒಂದು ಮನೆ, ತಾಯಿಯೆಂದು ಮತ್ತು ಭಾರತದ ಅಂದಿನ ಐಕ್ಯತೆಯನ್ನು ಸೂಚಿಸುವಂತಹದ್ದಾಗಿದೆ. ಹಾಗೆಯೇ ಭಾರತ ಎನ್ನುವಂತಹದ್ದು ಒಂದು ಕುಟುಂಬ ಇಲ್ಲಿ ಇರುವವರೆಲ್ಲರೂ ಒಂದಾಗಿ ಭಾರತ ಮಾತೆಯನ್ನು ಬಿಡುಗಡೆಗೊಳಿಸೋಣ ಎಂಬ ಆಶಯವನ್ನು ಈ ಕವಿತೆ ಒಳಗೊಂಡಿದೆ.

> "ಭೂಮಂಡಲ ರಮಣೀಯಂ
>
> ಈ ಭಾರತವೆಮ್ಮೆಯ ನಿಲಯಂ
>
> ನಾವೀಕೆಯ ಮರಿದುಂಬಿಗಳು
>
> ಈಕೆಯಮ್ಮ ಜೀವನನಳಿಸಿ"(ಗೋವಿಂದ ಪೈ, ಗಿಳಿವಿಂಡು, ಪುಟ-೧೧)

ಎಂಬುದೇ ಭಾರತದ ಐಕ್ಯತೆಯ ಸ್ವಾತಂತ್ರ್ಯದ ಪ್ರಶ್ನೆಯಾಗಿದೆ.

ಕೋಗಿಲೆ

ಬೇಂದ್ರೆಯವರ ಈ ಕವಿತೆಯೂ ರಾಷ್ಟ್ರೀಯ ಅನನ್ಯತೆಯ ಭಾಗವಾಗಿ ಕರ್ನಾಟಕ ಏಕೀಕರಣದ ಅಂಶಗಳನ್ನು ಒಳಗೊಂಡಿರುವಂತಹದ್ದು. ಮುಖ್ಯವಾಗಿ ಸ್ಥಳೀಯ ಸಾಮ್ರಾಜ್ಯಶಾಹಿ ಮತ್ತು ಹೊರಗಿನಿಂದ ಬಂದ ವಸಾಹತುಶಾಹಿ ಎಂಬ ಎರಡು ಆಡಳಿತಗಳ ಹಿಡಿತದಿಂದ ಹೊರಬಂದು ದೇಶ ಅಥವಾ ರಾಷ್ಟ್ರದ ಜೊತೆಗೆ ಕನ್ನಡ ನಾಡನ್ನು ಕಟ್ಟುವ ಅನಿವಾರ್ಯತೆಯನ್ನು ಹೇಳುತ್ತದೆ.

> "ಇನ್ನೂ ನಿದ್ದೆಯ ತೊರೆದು ತನ್ನತನವನರಿದು
>
> ಭಿನ್ನ ಭಾವವ ಬಿಟ್ಟು ಕೋಗಿಲೇ
>
> ನನ್ನ ಕನ್ನಡ ನಾಡ ಚೆನ್ನರೇಳುವಂತೆ
>
> ಕೂಗುವೆಯಾ ಹೇಳು ಕೊಗಿಲೇ"

ನರಬಲಿ

ಬೇಂದ್ರೆ ಅವರ ನರಬಲಿ ಕವಿತೆಯು ಎರಡನೇ ಮಹಾಯುದ್ಧದಿಂದಾದ ಅನಾಹುತಗಳನ್ನು ಬಿಚ್ಚಿಡುವುದರ ಜೊತೆಗೆ ಭಾರತ ಯುದ್ಧವನ್ನು ನಿರಾಕರಿಸುತ್ತ ಅಹಿಂಸೆಯ ಮೂಲಕ ಸ್ವಾತಂತ್ರ್ಯಗೊಳ್ಳಬೇಕೆಂಬ ಆಶಯವನ್ನು ತಿಳಿಸುತ್ತದೆ. ಯುದ್ಧವೆಂಬುದು ಸಾಮ್ರಾಜ್ಯಶಾಹಿಗಳು

ಒಂದು ಪ್ರದೇಶವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳಲು ಕಂಡುಕೊಂಡಿರುವ ತಂತ್ರವಾಗಿದೆ. ಯುದ್ಧಗಳಿಂದ ಸೃಷ್ಟಿಯಾಗುವ ಪರಿಸರ ನಾಶ, ಮಾನವ ಕುಲದ ನಾಶಗಳನ್ನು, ಎರಡನೇ ಮಹಾಯುದ್ಧದಲ್ಲಿ ಭಾರತದ ಪಾಲುದಾರಿಕೆಯ ಬಗ್ಗೆ ನಿರಾಶೆಯ ಚಿತ್ರಣವನ್ನು ಈ ಕವಿತೆ ಒಳಗೊಂಡಿದೆ.

ಇಲ್ಲಿ ಕಾಳಿಯನ್ನು ಸ್ವಾತಂತ್ರ್ಯದ ಸಂಕೇತಕ್ಕೆ ಹೋಲಿಸಲಾಗಿದೆ. ಕವಿತೆಯ ಮೊದಲ ಸಾಲುಗಳು ಕಾಳಿಗೆ ಎದುರಾದ ಎರಡು ದ್ವಂದ್ವಗಳನ್ನು ಸೂಚಿಸುತ್ತದೆ.

'ಬಲಗಾಲಲಿ ಬಿಡುಗಡೆಯನು ಮೆಟ್ಟಿನಿಂತಿಹೆ ಎಲೆ ಕಾಳಿ!
ನಿನ್ನೆಡಗಾಲನು ನೆಕ್ಕುತಲಿಹುದು ಶ್ವಾನಸೂಕರಾಳಿ!
ಭಯದಾಯಕ ಬಲಗೈಯನು ಚಾಚಿಹೇ!

(ವಾಮನ ಬೇಂದ್ರೆ, ಔದುಂಬರಗಾಥೆ, ಪುಟ-೩೩೯)

ಸ್ವಾತಂತ್ರ್ಯ ಎಂಬ ಮಹಾಕಾಳಿ ಬಲಗಾಲಲಿ ವಸಾಹತುಶಾಹಿಯನ್ನೇ ಮೆಟ್ಟಿ ನಿಂತು ಬಿಡುಗಡೆಯನ್ನೇ ಬಯಸುತ್ತಿದ್ದರೆ ಅವಳ ಎಡಗಾಲನ್ನು ಸಾಮ್ರಾಜ್ಯಶಾಹಿ ಎಂಬ ಸ್ವಾರ್ಥವು ನಾಯಿ ಹಂದಿಗಳಂತೆ ನೆಕ್ಕುತ್ತಿರುವ ಸನ್ನಿವೇಶವನ್ನು ಈ ಕವಿತೆಯಲ್ಲಿ ಕಾಣಬಹುದು.

ವಸ್ತ್ರಾಪಹರಣ

ನವೋದಯ ಕವಿ ಎಂದೇ ಗುರುತಿಸಿಕೊಂಡ ಕಡೆಂಗೋಡ್ಲು ಶಂಕರಭಟ್ಟರು ಘೋಷಾಯಾತ್ರೆ, ಗಾಂಧಿ ಸಂದೇಶ, ವಸ್ತ್ರಾಪಹರಣದಂತಹ ಖಂಡ ಕಾವ್ಯಗಳನ್ನು ರಚಿಸಿದರು. ಆ ಮೂಲಕ ತಮ್ಮ ಕಾವ್ಯ ರಚನೆಯ ಸಂದರ್ಭ ಚಲನೆಗಳಿಗೆ ಪ್ರತಿಕ್ರಿಯಿಸಲು ಹೆದರದೆ ಬ್ರಿಟಿಶ್ ಸರ್ಕಾರದಿಂದ ಬಹಿಷ್ಕೃತಗೊಂಡರು. ೧೯೨೧ರಲ್ಲಿ ರಚನೆಗೊಂಡ ವಸ್ತ್ರಾಪಹರಣ ಖಂಡಕಾವ್ಯವು ಮಹಾಭಾರತದ ಕಥೆಯನ್ನಿಟ್ಟುಕೊಂಡೆ ಸ್ವಾತಂತ್ರ್ಯ ಹೋರಾಟದ ಕಥೆಯನ್ನು ಹೇಳುತ್ತದೆ. ಪುರಾಣದ ದ್ರೌಪದಿಯನ್ನು ಭಾರತಾಂಬೆಯಾಗಿ, ದುಶ್ಯಾಸನನ್ನು ಬ್ರಿಟಿಶ್ ವೈಸರಾಯ್‌ನನ್ನಾಗಿ ಸಮಕಾಲೀನಗೊಳಿಸಲಾಗಿದೆ. ಕೃಷ್ಣನನ್ನು ಗಾಂಧಿಯನ್ನಾಗಿ ಚಿತ್ರಿಸಿ ಭಾರತ ಸ್ವಾತಂತ್ರ್ಯ ಹೋರಾಟ ಗಟ್ಟಿಗೊಂಡ ಬಗೆಯನ್ನು ಕಟ್ಟಿಕೊಡಲಾಗಿದೆ.

"ಪರಮ ಮೋಹನ ಕೃಷ್ಣನೆಸಗುವ
ಮರುತರದ ಕಾರ್ಯಗಳನೀಕ್ಷಿಸು
ಪಿರಿದೆನಿಪ ಚಕ್ರದಲಿ ಮಾಡಿದ ವಸ್ತ್ರರಾಶಿಯು
ತರುಣಿಯನು ಕುನಿಸಿದರು ಮಾನವ

ಮುರಿಯಲಾರನು ಪಿಂಗಲೋಚನ

ನರಿತೆಯಾ ಸತ್ಯಾಗ್ರಹದ ಮಹಿಮೆಗಳನೆಲೆ ಭೀಮ."

(ರಾಮಚಂದ್ರ. ಎಮ್, ಪಾದೇಕಲ್ಲು ವಿಷ್ಣುಭಟ್ಟ, ಎಚ್ ಕೃಷ್ಣಭಟ್ಟ, ಕಡೆಂಗೋಡ್ಲು ಶಂಕರಭಟ್ಟ ಸಮಗ್ರ ಕಾವ್ಯ, ಪುಟ-೬೭)

ಸ್ವದೇಶಿ ಚಳುವಳಿ ಭಾಗವಾಗಿ ರಚನೆಗೊಂಡ ಈ ಖಂಡಕಾವ್ಯವು ಭಾರತಮಾತೆಯ ಆತ್ಮಗೌರವದಂತೆ ಕಾಣುತ್ತದೆ. ಗಾಂಧಿಯ ಚರಕದಿಂದ ವಿನ್ಯಾಸಗೊಂಡ ಖಾದಿ ಸೀರೆಯು ಮಹಾಭಾರತದಲ್ಲಿ ವಸ್ತ್ರಾಪಹರಣ ಸಂದರ್ಭದಲ್ಲಿ ದ್ರೌಪದಿಯ ಮಾನ ಕಾಪಾಡಿದ ಶ್ರೀಕೃಷ್ಣನ ಸುದರ್ಶನ ಚಕ್ರಕ್ಕೆ ಹೋಲಿಸಲಾಗಿದೆ. ಇದು ಗಾಂಧೀಯವರ ಗುಡಿ ಕೈಗಾರಿಕೆಯ ಕನಸೂ ಆಗಿತ್ತು.

ಗಾಂಧಿ ಸಂದೇಶ

ಗಾಂಧಿ ಅನುಯಾಯಿಯಾದ ಕಡೆಂಗೋಡ್ಲು ಶಂಕರಭಟ್ಟರು ಗಾಂಧಿ ವಿಚಾರಗಳಿಗೆ ಪ್ರೇರಿತರಾಗಿ ಬರೆದಂತಿರುವ ಈ ಖಂಡಕಾವ್ಯವು, ಅಂದಿನ ರಾಜಕೀಯ ಚಲನೆಗಳನ್ನೆ ವಸ್ತುವನ್ನಾಗಿಟ್ಟುಕೊಂಡೇ ರಚನೆಗೊಂಡ್ಡದ್ದು. ೧೯೨೧ರಲ್ಲಿ ರಚನೆಗೊಂಡ ಈ ಖಂಡಕಾವ್ಯವು ಗಾಂಧಿ ಅವರು ಭಾರತದ ರಾಜಕೀಯಕ್ಕೆ ಇಳಿದ ಸನ್ನಿವೇಶದಿಂದ ನಂತರ ಎಲ್ಲ ಸ್ಥಿತ್ಯಂತರಗಳನ್ನು ಈ ಕಾವ್ಯ ಒಳಗೊಂಡಿದೆ.

ತುತ್ತೂರಿ

ಈಗಾಗಲೇ ಹೇಳಿರುವಂತೆ ಸ್ವಾತಂತ್ರ್ಯ ಚಳುವಳಿಯು ತನ್ನ ಒಡಲೊಳಗೆ ರಾಜಕೀಯ ಹೋರಾಟದ ಜೊತೆಗೆ ಸಾಮಾಜಿಕ ಹೋರಾಟವನ್ನು ಒಳಗೊಂಡಿತ್ತು. ಪರಂಪರೆಯಿಂದ ರೂಢಿಗೆ ಬಂದ ಅಸಮಾನತೆ, ಶೋಷಣೆ ಹಾಗೂ ಜಾತಿ ವೈಷಮ್ಯಗಳಂತ ಮೂಢನಂಬಿಕೆಗಳನ್ನು ವಾಸ್ತವಾಂಶಗಳ ಮೂಲಕ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ದೇಶಭಕ್ತಿ ಮತ್ತು ರಾಷ್ಟ್ರೀಯ ಪ್ರಜ್ಞೆಯ ನೆಲೆಯಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಸಾಹಿತ್ಯದ ಮೂಲಕ ಕಟ್ಟುವ ಕೆಲಸವನ್ನು ಕನ್ನಡದ ಸಾಹಿತಿಗಳು ಮಾಡುತ್ತಾ ಬಂದಿದ್ದಾರೆ. ಅಂತ ಸಮಕಾಲೀನ ಪ್ರಸ್ತುತತೆಯನ್ನು ಗೋವಿಂದ ಪೈ ಅವರ ತುತ್ತೂರಿ, ಮಾತಂಗಿ, ಮುಕ್ತಿ, ಹಳ್ಳಿಯ ಹುಡುಗಿ, ಭಾರತಾಂಬೆಯ ಮಹಿಮೆ, ಜಯಹಿಂದ ಗೀತ, ಕ್ವಿಟ್ ಇಂಡಿಯ ಇನ್ನೂ ಮುಂತಾದ ಕವಿತೆಗಳನ್ನು ಹೆಸರಿಸಬಹುದು.

ಪೈಯವರು ಅನುವಾದದ ಮೂಲಕವು ಸ್ವಾತಂತ್ರ್ಯ ಚಳುವಳಿ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯನ್ನು ವಿಸ್ತರಿಸಿದ್ದಾರೆ. ಹೆನ್ರಿಚ್ ಹೆನೆ ಎಂಬ ಜರ್ಮನ್ ಕವಿಯ Bergstimme

ಕವಿತೆಯನ್ನು ಫ್ರಾನ್ಸಿನ ವಿಕ್ಟರ್ ಹ್ಯೂಗೊನ ಎಂಬ ಕೃತಿಯನ್ನು ಮತ್ತು ಜರ್ಮನಿಯ karl theoder korner ನ gebet waihrend der schlacint ಕವಿತೆಗಳನ್ನು ರಚಿಸಿದ್ದಾರೆ. (ಗೋವಿಂದ ಪೈಯವರ ಸಮಗ್ರ ಕವಿತೆಗಳು)

ತುತ್ತೂರಿ ಕವಿತೆಯು ಮರಾಠಿಯ ಕೇಶವಸುತರ ತುತಾರಿ ಕವಿತೆಯ ಪ್ರೇರಣೆಯಿಂದ ರಚನೆಗೊಂಡಿರುವಂತದ್ದು. ದೇಶವನ್ನು ಸ್ವಾತಂತ್ರ್ಯಗೊಳಿಸುವಲ್ಲಿ ಹೋರಾಟಗಾರರನ್ನು ಅಣಿಗೊಳಿಸುವ ಸಿದ್ಧತೆಯಲ್ಲಿ ತೊಡಗಿದಂತಿದೆ. ಮುಂದೆ ಸ್ವಾತಂತ್ರ್ಯ ಭಾರತವನ್ನು ಕಟ್ಟುವಲ್ಲಿ ಮನುಷ್ಯ ಮನುಷ್ಯರ ನಡುವೆ ಸಮಾನತೆಯನ್ನು ಎತ್ತಿ ಹಿಡಿಯುತ್ತಾ ಹೊಸಯುಗಕ್ಕೆ ನಾಂದಿ ಹಾಡುವಂತೆ ಇದೆ.

"ಕಳಚಿಬಿಡಾ ಹಳತರ ನಿರ್ಬಂಧಂ
ನೇಮವೆ ಮನುಜರಿಗಲ್ಲದೆ ಮಾನವ
ನಲ್ಲ ನೇಮಕೆನೆ ಗೆಳೆಯರಿರಾ, ನವ
ಯುಗದಿ ನವಚೇತೋಮೃತಪಾನವ
ಮಾಡಿ ನಡಿರಿಜಗಕ್ಕೆ ನಮಸ್ವಂಧಂ !"

(ಗೋವಿಂದ ಪೈ, ಹೃದಯರಂಗ, ಪುಟ-೧೬)

ಪಾಂಚಜನ್ಯ

ತನ್ನ ವೈಚಾರಿಕ ದೃಷ್ಟಿಯಿಂದ ರಾಷ್ಟ್ರೀಯತೆಯನ್ನ, ಭಾರತೀಯ ಸಮಾಜವನ್ನು, ಕನ್ನಡವನ್ನು ಕುರಿತು ಬರಹದ ಮೂಲಕ ಸಮಾಜವನ್ನು ಕಟ್ಟುವಲ್ಲಿ ಕುವೆಂಪು ಅವರು ಪ್ರಮುಖರು. ವಸಾಹತುಶಾಹಿಯ ಉತ್ತಮ ಅಂಶಗಳನ್ನು ಸ್ವಾಗತಿಸುತ್ತವೆ. ಅದರ ಸಾಮ್ರಾಜ್ಯಶಾಹಿ ಗುಣಗಳನ್ನು ವಿರೋಧಿಸುತ್ತಾರೆ. ಪರೋಕ್ಷವಾಗಿ ಭಾರತ ಸ್ವಾತಂತ್ರ್ಯ ಚಳುವಳಿಗೆ ಪ್ರೇರೆಪಿಸಿದರು.

"ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ
ಜಗ್ಗದೆಯೆ ಕುಗ್ಗದೆಯೆ
ಹಿಗ್ಗಿ ನಡೆ ಮುಂದೆ"(ಕುವೆಂಪು, ಪಾಂಚಜನ್ಯ, ಪುಟ-೧)

ಚಳುವಳಿಯ ಉಚ್ಛ್ರಾಯ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಮಾನಸಿಕವಾಗಿ ಹುರಿದುಂಬಿಸುವ ಕವಿತೆ ಇದಾಗಿದೆ. ಜಾತಿ ಮತಗಳ ಹಂಗು ತೊರೆದು ಸಹೋದರರಂತೆ ಭಾರತ ಮಾತೆಯನ್ನು ಮುಕ್ತಿಗೊಳಿಸುತ್ತ ನಮ್ಮ ಹೋರಾಟಗಳು ನಡೆಯಬೇಕಾಗಿದೆ. ಈ

ತರಹದ ವಸ್ತುಗಳುಳ್ಳ ಸಾಹಿತ್ಯವು ಭಾರತದ ರಾಷ್ಟ್ರೀಯ ಹೋರಾಟದ ಜೊತೆಗೆ ಅಂದಿನ ಜಾತಿ ಸಂಘರ್ಷ, ಧಾರ್ಮಿಕ ಸಂಘರ್ಷಗಳನ್ನು ಬೆಸೆಯುತ್ತ ಸಮಾನತೆಯನ್ನು ಸಾರುವಂತೆ ಗೋಚರಿಸುತ್ತದೆ. ಈ ಮೂಲಕ ಅಖಂಡ ಭಾರತದ ಸ್ವಾತಂತ್ರ್ಯ ಸಾಧ್ಯ ಎಂಬುದನ್ನು ಸೂಚಿಸುವಂತಿದೆ.

"ಭರತಖಂಡದ ಹಿತವೆ
ನನ್ನ ಹಿತ ಎಂದು
ಭಾರತಮಾತೆಯ ಮತವೆ
ನನ್ನ ಮತ ಎಂದು
ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನಮಗೆಯ
ನುಗ್ಗು ಮುಂದಕೆ, ಧೀರ
ಕಾಳಗರ ಕೊಲೆಗೆ!
ನುಗ್ಗು ಮರಣಕೆ, ವೀರ
ಸಗ್ಗದಾ ನೆಲೆಗೆ"(ಅದೇ, ಪುಟ-೨)

ಅಹಹ ಸ್ವಾತಂತ್ರ್ಯದೇವಿ

ಬೇಂದ್ರೆಯವರ ಈ ಕವಿತೆಯಲ್ಲಿ ಸ್ವಾತಂತ್ರ್ಯವನ್ನು ದೇವಿಗೆ ಹೋಲಿಸಿ ಆಕೆಯನ್ನು ಆಹ್ವಾನಿಸುವ, ನಮ್ಮದಾಗಿಸಿಕೊಳ್ಳುವ ಅಭಿವ್ಯಕ್ತಿಗೊಂಡಿದೆ. ಕವಿತೆಯ ಮೊದಲನೆ ಭಾಗವೇ ಆ ಮಾತನ್ನು ಸೂಚಿಸುತ್ತದೆ.

"ದೇವಮಾನವರೆಲ್ಲ ಕಂಡ ಕನಸೇ
ಬಾರೆ, ಮನಸಿನೊಳು ನೆಲಸು ನನಸೇ
ನೆನೆಸುತಿಹೆ ಹಾಸಿದ ಚೇತನೆಯ ತಿನಿಸೇ
ಬಾರೆ, ನನ್ನ ಎದೆಯೊಳು ಜನಿಸೇ"

(ವಾಮನ ಬೇಂದ್ರೆ,(ಸಂ) ಔದುಂಬರಗಾಥೆ,ಪುಟ-೧೧)

ಸ್ವಾತಂತ್ರ್ಯ ಎಂಬುದು ಎಲ್ಲರ ಕನಸು. ಅದು ಜಾತಿ ಧರ್ಮವನ್ನು ಮೀರಿ ಹೃದಯದಲ್ಲಿ ಹುಟ್ಟಿ ಮನಸ್ಸಿನೊಳಗೆ ನೆಲೆಸಿ ಹಸಿದ ಚೇತನಗಳಿಗೆ ಶಕ್ತಿಯಾಗುವಂತಹದ್ದು.

ಕಾವ್ಯದ ಮೂಲಕ ಸಮಕಾಲೀನ ಸಮಾಜದ ರಾಜಕೀಯ ಸಾಮಾಜಿಕ ಧೋರಣೆಗಳಿಗೆ ವಸಾಹತುಶಾಹಿ ಮತ್ತು ಸ್ವಾತಂತ್ರ್ಯದ ಮೂಲಕ ವಿದ್ಯಮಾನಗಳಿಗೆ ಪ್ರತಿಕ್ರಿಯಿಸಿದ ಅಡಿಗರೂ ಪ್ರಮುಖರು. ಅಡಿಗರ ಕಾವ್ಯವನ್ನು ಕುರಿತು ಬೇಂದ್ರೆಯವರ ಮಾತಿನಲ್ಲಿ ಹೇಳುವುದಾದರೆ " ... ಅನುಕೂಲ ಪ್ರತಿಕೂಲಗಳ ಬಂಡೆಗಳೊಳಗಿಂದ ಆಯ್ದು ಶ್ರೀ ಅಡಿಗರ ಭಾವತರಂಗಿಣಿ ಕನ್ನಡದ ಹೃದಯದ ಸಮುದ್ರದತ್ತ ಹೊರಟಿದೆ.... ವಿಧಿಗೆ ಇದಿರಾಗುವ ಅನಿರ್ವಿಣ್ಣ ಉತ್ಸಾಹವಿದೆ. ಹೊಸ ಬಾಳಿನ ಅನಂತ ಕ್ಷಿತಿಜ ಅವರ ಕಣ್ಣಿನ ಕದಿರಿಗೆ ದುರ್ಬಿನ ಹರಿತವನ್ನು ಕೊಟ್ಟಿದೆ. ಅದರಿಂದ ಅವರ ಏಳು ಬೀಳಿನ ತೇಂಕಾಟ ಇಂದಿನ ಜೀವನದ ಚಂದವಾಗಿ, ಅಂದವಾಗಿ ಸಹೃದಯರಿಗೆ ಉತ್ಸುಕತೆಯನ್ನು, ಉತ್ಸಾಹವನ್ನು ಸಮಾನವಾಗಿ ತಂದು ಕೊಡುವುದು. (ಬೇಂದ್ರೆ ದ.ರಾ, ಭಾವತರಂಗ, ಮುನ್ನುಡಿ)

೩.೩ ಕಥೆಗಳು

ಭಾರತೀಯ ಪರಂಪರೆಯಿಂದ ಕಥಾ ಮಾದರಿಯನ್ನು ಗುರುತಿಸಿದರೂ, ಈಗಿನ ಕಥನ ಮಾದರಿ ರೂಪಗೊಳ್ಳಲು ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆ ಮುಖ್ಯವಾದದ್ದು. ೧೮-೧೯ನೇ ಶತಮಾನದಲ್ಲಾದ ಸ್ಥಿತ್ಯಂತರಗಳು ಭಾರತವನ್ನು ಒಂದು ಚೌಕಟ್ಟಿನಲ್ಲಿ ನೋಡಲು ಪ್ರಯತ್ನಿಸಿದವು. ರಾಜಕೀಯವಾಗಿ, ಸಾಮಾಜಿಕವಾಗಿ, ಹಾಗೂ ಸಾಂಸ್ಕೃತಿಕವಾಗಿ ಕಟ್ಟಲ್ಪಡುತ್ತಿದ್ದ ಭವಿಷ್ಯದ ಭಾರತಕ್ಕಾಗಿ ನಡೆದ ಚಳುವಳಿಗಳನ್ನು, ಹೋರಾಟಗಳನ್ನು ಕನ್ನಡ ಸಾಹಿತ್ಯ ಹೇಗೆ ಮುಖಾಮುಖಿಗೊಳಿಸಿಕೊಂಡಿದೆ ಎಂಬುದು (ಈ ಅಧ್ಯಯನ ಉದ್ದೇಶ) ಮುಖ್ಯ. ಈ ಹಿನ್ನೆಲೆಯಲ್ಲಿ (ಭಾರತ) ಕನ್ನಡ ಸಾಹಿತ್ಯ ಹೊಸ ರೀತಿಯಲ್ಲಿ ತನ್ನನ್ನು ತೊಡಗಿಸಿಕೊಂಡಿತು.

ವಸಾಹತುಶಾಹಿಯ ಗುಣಾತ್ಮಕ ಅಂಶಗಳನ್ನು ಸ್ವೀಕರಿಸುತ್ತಲೇ ಅದರ ಸಾಮ್ರಾಜ್ಯಶಾಹಿ ನೀತಿಗಳನ್ನು ಕನ್ನಡದ ಮೊದಲ ಘಟ್ಟದ ಸಾಹಿತಿಗಳು ವಿರೋಧಿಸಿದರು. ಅಂಥವರಲ್ಲಿ ಕುವೆಂಪು ಅವರು ಪ್ರಮುಖರು. ಭಾರತದ ರಾಜಕೀಯ ಸ್ವಾತಂತ್ರ್ಯವನ್ನು ಸಾಮಾಜಿಕ ಜೀವನಕ್ಕೆ ಹಿಗ್ಗಿಸಿಕೊಂಡು ಸ್ವಾತಂತ್ರ್ಯ ಚಳುವಳಿಗೆ ತಮ್ಮ ಸಾಹಿತ್ಯದ ಮೂಲಕ ಮತ್ತೊಂದು ಮಗ್ಗುಲನ್ನು ತೋರಿಸಿದರು. ವಸಾಹತುಶಾಹಿ ಆಡಳಿತದಿಂದ ನಿರ್ಮಾಣಗೊಂಡಿದ್ದ ಜಮೀನ್ದಾರಿ ವ್ಯವಸ್ಥೆಯ ಕ್ರೂರತೆಗಳು, ರೈತ ಸಮುದಾಯದ ಮೇಲಿನ ದಬ್ಬಾಳಿಕೆಗಳನ್ನು ಕುವೆಂಪು ಅವರು 'ಧನ್ವಂತರಿ ಚಿಕಿತ್ಸೆ' ಕತೆಯ ಮೂಲಕ ಕಟ್ಟಿಕೊಂಡಿದ್ದಾರೆ. ಮೇಲ್ನೋಟಕ್ಕೆ ಈ ಕಥೆ ಪಾಶ್ಚಿಮಾತ್ಯದಿಂದ ಬರುತ್ತಿದ್ದ ಅಧುನಿಕತೆಯ ವಾಸ್ತವಾಂಶಗಳನ್ನು ಹೇಳುತ್ತಿದ್ದರು, ಪರಂಪರೆ ಮತ್ತು ಪುರಾಣಗಳಿಂದ ಕಟ್ಟಿಕೊಂಡಿರುವ ಭಾರತೀಯ ಸಾಮಾಜಿಕ ವ್ಯವಸ್ಥೆಯು ಇಂಥ

ಪರಕೀಯತೆಗಳಿಂದ ಬಿಡುಗಡೆಯನ್ನು ಹೊಂದಬೇಕಾಗಿದೆ ಎಂಬ ಸೂಕ್ಷ್ಮ ಅಂಶಗಳನ್ನೂ ತಿಳಿಸುತ್ತದೆ. ಅಂದರೆ ವಸಾಹತುಶಾಹಿಯ ಸಾಮ್ರಾಜ್ಯಶಾಹಿ ಅಂಶಗಳಿಂದ ಮತ್ತು ಭಾರತದ ಪರಂಪರೆಯ ಮೌಢ್ಯಗಳಿಂದಲೂ ಭಾರತ ಸ್ವಾತಂತ್ರ್ಯಗೊಳ್ಳಬೇಕಾಗಿದೆ ಎಂಬುದು ಇಲ್ಲಿ ಮುಖ್ಯ ಅಂಶವಾಗಿದೆ.

ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ೧೯೪೨ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿ ಪ್ರಮುಖವಾದದ್ದು. 'ಮಾಡು ಇಲ್ಲವೆ ಮಡಿ' ಎಂಬ ಉಗ್ರ ರೀತಿಯಲ್ಲಿ ಆರಂಭಗೊಂಡ ಈ ಹೋರಾಟ ಕುರಿತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು '೧೯೪೨ನೇ ಅಗಸ್ಟ್ ಎಂಬ ಕತೆಯನ್ನು ಬರೆದಿದ್ದಾರೆ. ಗುಂಡುರಾಯ ಮತ್ತು ಗೋಸಾಯಿ ಎಂಬ ಪಾತ್ರಗಳಿಂದ ರಚನೆಗೊಂಡ ಈ ಕತೆ, ಭಾರತೀಯ ಬ್ರಿಟಿಶ್ ಪೊಲೀಸ್ ಅಧಿಕಾರಿಯಾದ ಗುಂಡುರಾಯನು ಗೋಸಾಯಿ ಎಂಬ ಚಳುವಳಿಗಾರನಿಂದ ಪ್ರೇರಿತನಾಗಿ ಚಳುವಳಿ ಭಾಗವಾಗಿ ವ್ಯಕ್ತಿತ್ವವನ್ನು ರೂಪಿಸಿಕೊಂಡ ಒಬ್ಬ ಪೊಲೀಸ್ ಅಧಿಕಾರಿಯ ಕಥನವಾಗಿದೆ.

೧೯೪೨ರ ಅಗಸ್ಟ್ ಕ್ರಾಂತಿಯನ್ನು ಕುರಿತ ಕತೆ ರಚಿಸಿದ ಮತ್ತೊಬ್ಬ ಕಥೆಗಾರರೆಂದರೆ ಅನಕೃ. ಪ್ರಗತಿಶೀಲ ಪಂತರ ಸಾಹಿತಿಗಳಲ್ಲಿ ಪ್ರಮುಖರಾದವರು. ಒಬ್ಬ ಸಾಮಾನ್ಯ ಪ್ರಾಥಮಿಕ ಶಿಕ್ಷಕನ ಕುಟುಂಬವು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಅನುಭವಿಸಿದ ಬವಣೆಗಳನ್ನು ಚಿತ್ರಿಸುವ 'ಜೈಯಿಂದ' ಕತೆಯು ಚಳುವಳಿಯ ಭಾಗವಾಗಿ ಬಂದು ರಾಜಕಾರಣದ ಭಾಗವಾಗಿ ಮುಂದುವರಿಯುವಂತ ಸನ್ನಿವೇಶಗಳನ್ನು ಈ ಕಥೆ ಸೂಕ್ಷ್ಮವಾಗಿ ಸೂಚಿಸುತ್ತಾದೆ.

ಕಾರವಾನ್

೧೯೪೫ರಲ್ಲಿ ಪ್ರಕಟವಾದ ಈ ಕಥಾ ಸಂಕಲನದಲ್ಲಿ ಕಾರವಾನ್ ಕತೆಯು ಅಧ್ಯಯನದ ದೃಷ್ಟಿಯಿಂದ ಮುಖ್ಯವಾದದ್ದು. ಸ್ವಾತಂತ್ರ ಪೂರ್ವ ಭಾರತದ ಒಂದು ಹಳ್ಳಿಯಲ್ಲಿನ ಸಾಮಾನ್ಯ ಜನರ ಬದುಕನ್ನು ಚಿತ್ರಿಸುವಂತದ್ದು. ಈ ಮೂಲಕ ಭಾರತದ ಸ್ವಾತಂತ್ರ್ಯ ಚಳುವಳಿಯ ರಾಜಕೀಯಕ್ಕೆ ಸೀಮಿತವಾಗದೆ ಸಾಮಾಜಿಕ ಸಮಾನತೆ ಒಳಗೊಳ್ಳುವಿಕೆಗೂ ಸಹಕರಿಸಬೇಕೆಂದು ಈ ಕತೆ ತಿಳಿಸುತ್ತದೆ. ಒಬ್ಬ ಸಾಮಾನ್ಯ ಮನುಷ್ಯನ ಪರಿಚಯದೊಂದಿಗೆ ಕತೆ ಆರಂಭಗೊಳ್ಳುತ್ತದೆ. ರೈಲಿನ ಪ್ರಯಾಣದಲ್ಲಿ ಕಂಡ ಒಂದು ದೃಶ್ಯವನ್ನು "ದಾರಿದ್ರ್ಯದಿಂದ ಕುಸಿದು ಕುಗ್ಗಿರುವ ಬಡ ಭಾರತವೇ ಆ ಸಂಸಾರದ ರೂಪ ತಳೆದು ಬಂದ ಹಾಗೆ ಕಾಣಿಸಿತು ನನಗೆ" ಎಂದು ಲೇಖಕರು ಕತೆಯಲ್ಲಿಯೇ ಅಂದಿನ ಸ್ಥಿತಿಯನ್ನು ಕುರಿತು ಹೇಳುತ್ತಾರೆ. (ಬಸವರಾಜ ಕಟ್ಟಿಮನಿ, ಸಮಗ್ರ ಸಾಹಿತ್ಯ ಕಥಾ ಸಂಪುಟ-೧೧ ಪುಟ-೧೨)

ಐದು ಮಕ್ಕಳ ಹೆತ್ತ ತಾಯಿ ಒಂದು ಕಡೆ ಮತ್ತು ಕ್ಷಯರೋಗಕ್ಕೆ ಒಳಗಾದ ಕೃಶ ದೇಹಿ ಆಕೆಯ ಗಂಡ ಇನ್ನೊಂದು ಕಡೆ. ಇವರ ಧ್ವನಿಗಳನ್ನೇ ಲೇಖಕರು ವಿವರಿಸುತ್ತಾರೆ. ಕತೆಯಲ್ಲಿ ಬರುವ ಸ್ತ್ರೀಯಗೋಳು. ಮತ್ತೊಂದು ರೀತಿಯ ಧ್ವನಿಯನ್ನು ನಿರೂಪಿಸುತ್ತಾರೆ. "ಬೆಳಗಾಗುವುದೇ ತಡ! ಸುರುವಾಯಿತೆ ನಿನ್ನ ಕಾಟ! ತಿನ್ನೋಕೆ ರೊಟ್ಟಿನೆ ಇಲ್ಲದಿದ್ದರೆ ಮೊಲೆಯಲ್ಲಿ ಹಾಲಾದರೂ ಎಲ್ಲಿ ಬಂದಿತೋ? ನಿಮ್ಮನ್ನು ಮಣ್ಣಲ್ಲಿ ಹಾಕಲಿ! ನಿಮ್ಮ ರುಂಡಾ ಚಿವುಟಲಿ! ಸತ್ತಾದರೂ ಸಾಯಬಾರದೆ! ಪೀಡೆ ಹೋದಿ! (ಅದೇ, ಪುಟ-೧೫) ಎಂದು ಗೋಳಿಡುವ ದೃಶ್ಯವು ಮಾನವೀಯತೆಯನ್ನು ಕಲಕುತ್ತದೆ. ಅವಳು ಬೇರೆ ಯಾರು ಅಲ್ಲ ಎಂದು ಲೇಖಕರಿಗೆ ಅದೃಶ್ಯವಾಣಿಯಿಂದ ಮನವರಿಕೆಯಾಗುತ್ತದೆ. "ಯಾರು ಅಂತ ತಿಳಿದಿದೀಯಾ ಈ ಹೆಂಗಸು? ತಾಯಿ ಭಾರತ ಮಾತೆ ! ಇವಳೇ ಭಾರತ ಮಾತೆ!"(ಅದೇ, ಪುಟ-೧೬) ಎನ್ನುವಲ್ಲಿ ಭಾರತದ ಹಳ್ಳಿಗಳು ಎದುರಿಸುತ್ತಿದ್ದ ದಾರುಣ ಕಥೆಯನ್ನು ಈ ಕಥೆ ಚಿತ್ರಿಸುತ್ತದೆ. ಇಲ್ಲಿ ಜನ ಗುಳೆ ಹೋಗುವುದು ಇಡೀ ಭಾರತದ ಸ್ಥಿತಿಯನ್ನು ಚಿತ್ರಿಸುವಂತಿದೆ.

ಇಲ್ಲಿ ತಾಯಿ ಮಗುವನ್ನು ಹೊಡೆಯುವುದು, ಬಯ್ಯುವುದಕ್ಕೆ, ಮಗುವಿನಿಂದ ಯಾವುದೇ ಪ್ರತಿಕ್ರಿಯೆ ಇಲ್ಲ. ಇದು ಭಾರತದ ಬಡ ಸಮುದಾಯಗಳ ದಯನೀಯತ ಧ್ವನಿಯನ್ನು ಸಂಕೇತಿಸುತ್ತದೆ. ಇಲ್ಲಿ 'ತಾಯಿ'ಯನ್ನು ಭಾರತ ಮಾತೆಯಾಗಿ, 'ಮಗು'ವನ್ನು ಬಡ ಸಮುದಾಯದ ಸಂಕೇತವಾಗಿ ನೋಡಲಾಗಿದೆ.

ಅಗಸ್ಟ್ ಒಂಭತ್ತು

ಮುನ್ನುಡಿಯಲ್ಲಿ ಲೇಖಕರೆ ಈ ಕತೆಗಳಿಗೆಲ್ಲಾ ಸಾಮಾನ್ಯವಾಗಿ ೧೯೪೨ರ ಅಗಸ್ಟ್ ಚಳುವಳಿಯ ಹಿನ್ನೆಲೆಯಿದೆ ಎಂದು ಹೇಳಿದ್ದಾರೆ. ಅಂದಿನ ಘಟನೆಗಳನ್ನೇ ಬಳಸಿಕೊಂಡು ನಾನು ಇವುಗಳನ್ನು ರಚಿಸಿದೆ. ತಮ್ಮ ನೆತ್ತರಿನಿಂದ ನಮ್ಮ ಬಾವುಟಕ್ಕೆ ಬಣ್ಣ ಬಳಿದರು. ಅವರ ತ್ಯಾಗ ಬಲಿದಾನದಿಂದ ನಮ್ಮ ನಾಡಿಗೆ ಸ್ವಾತಂತ್ರ್ಯ ಬಂತು. ಸ್ವಾತಂತ್ರ್ಯಕ್ಕಾಗಿ ಜೀವ ಪಾದಾರ್ಪಣೆ ಮಾಡಿದ ಆ ಪುಣ್ಯಾತ್ಮರನ್ನು ಮರೆತ ನಾವು ಕೃತಜ್ಞರಾಗಿದ್ದೇವೆ. ಎಂತಲೇ ಆ ವೀರಜೀವಗಳನ್ನು ಸಾಹಿತ್ಯದಲ್ಲಾದರೂ ಸಾಧ್ಯವಾದ ಮಟ್ಟಿಗೆ ಶಾಶ್ವತಗೊಳಿಸಲು ನಾನು ಪ್ರಯತ್ನಿಸಿದುದರ ಫಲವೇ ಈ ಕಥಾ ಸಂಗ್ರಹ (ಬಸವರಾಜ ಕಟ್ಟಿಮನಿ, ಸಮಗ್ರ ಸಾಹಿತ್ಯ ಕಥಾ ಸಂಪುಟ-೧೧, ಮುನ್ನುಡಿ) ಎಂದು ಹೇಳಿದ್ದಾರೆ.

೧೯೪೭ ರಲ್ಲಿ ಪ್ರಕಟವಾದ ಈ ಕಥಾ ಸಂಕಲನವು ಒಟ್ಟು ಏಳು ಕಥೆಗಳನ್ನು ಒಳಗೊಂಡಿದೆ. ಇಲ್ಲಿಯ ಕಥೆಗಳೆಲ್ಲ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಿಂದಲೆ ರಚಿತಗೊಂಡಿವೆ. ಇಲ್ಲಿ 'ಅಗಸ್ಟ್ ಒಂಭತ್ತು' ಕಥೆ ಮುಖ್ಯವಾದದ್ದು. ದೇಶಪ್ರೇಮಿಯ ಕುಟುಂಬವೊಂದು

ಎದುರಿಸಿದ ಮೂರು ವರ್ಷದ ಬವಣೆಯನ್ನು ಈ ಕತೆಯು ಬಿಚ್ಚಿಡುತ್ತಾ ಹೋಗುತ್ತದೆ. "ಜಯಾ" ಕಥೆಯ ನಾಯಕಿ. ತನ್ನ ಗಂಡ ಚಳುವಳಿಗೆ ಧುಮುಕುವ ಮೊದಲು ಸುಖದ ಸುಪ್ಪತ್ತಿನಲ್ಲಿದ್ದ ಇವಳಿಗೆ ಮೂರು ವರ್ಷಗಳಲ್ಲಿ "ತನ್ನ ಸೀರೆಗಳು ಚೂರು ಚೂರಾದವು. ತನ್ನ ಸಂಪಾದನೆ ಹೊಟ್ಟೆಗೂ ಸಾಲದು, ಬಟ್ಟೆಗೋ ವಿಪರೀತ ಬೆಲೆ. ಉಳಿದಿರುವ ಎರಡು ಸೀರೆಗಳಲ್ಲಿಯೆ ಸಾಗಬೇಕಾಗಿದೆ. ಹೊಲಿದುಕೊಂಡು ಹಚ್ಚಿಕೊಂಡು.."(ಅದೇ, ಪುಟ-೯೬) ಎಂಬ ಮಾತುಗಳು ಅಂದಿನ ಇಡೀ ಭಾರತದ ಸ್ಥಿತಿಯನ್ನು ಕಟ್ಟಿಕೊಡುತ್ತದೆ. "ಕೊಂಚ ಹೊತ್ತು ಕೈ ಹಾಗೆಯೇ ಇರಿಸಿದ್ದಳು ಮಗನ ಎದೆಯ ಮೇಲೆ. ಬೆರಳುಗಳಿಗೆ ಹತ್ತಿಕೊಳ್ಳುತ್ತಿದ್ದ ಆ ಮೂಳೆ, ಪತಿ ಇದ್ದಾಗ ರಕ್ತ ಮಾಂಸ ತುಂಬಿಕೊಂಡು ನುಣುಪಾಗಿದ್ದ ಆ ಎದೆ ಇಂದು ಮೂಳೆ ಮೂಳೆ" (ಅದೇ, ಪುಟ, ೯೭-೯೮) ಎಂದು ಮಲಗಿದ್ದ ಮಗನ ದಾರುಣ ಸ್ಥಿತಿ ಭಾರತೀಯ ಮಕ್ಕಳನ್ನು ಸಂಕೇತಿಸುತ್ತದೆ. ಒಂದು ಕಡೆ ಹಸಿವು ಮತ್ತೊಂದು ಕಡೆ ಸ್ವಾತಂತ್ರ್ಯದ ತುಡಿತ. ಮಧ್ಯೆ ಕಾಮುಕ ಮಾಸ್ತರನ 'ಮಧುರಾಯ' ವಕ್ರದೃಷ್ಟಿ. ಇವುಗಳನ್ನೆಲ್ಲ ಎದುರಿಸಿ ದಿಟ್ಟತನವನ್ನು ತೋರಿದ ಜಯಾ ಟೀಚರ್ ಅಂದಿನ ಭಾರತದ ಗಟ್ಟಿಗಿತ್ತಿಯರಲ್ಲಿ ಒಬ್ಬಳು. ಎಲ್ಲಾ ಸ್ತ್ರೀಯರಲ್ಲಿ ಇಂತಹ ಮನೋಸ್ಥಿತಿಯನ್ನು ಅಂದಿನ ಅಗಸ್ಟ್ ೧೯೪೨-೪೫ರ ಅವಧಿ ತಂದೊಡ್ಡಿದ್ದು ಬ್ರಿಟಿಶ್ ಸರ್ಕಾರದ ದಬ್ಬಾಳಿಕೆ ಎಂಬುದನ್ನು ಈ ಕಥೆ ಕಟ್ಟಿಕೊಡುತ್ತದೆ.

"ತಗೋ ಈ ಖಾಲಿದೋಸೆ ತಿನ್ನು ಅಮ್ಮ. ನನಗೆ ಗೊತ್ತು ಮನೇಲಿ ಏನೂ ಇಲ್ಲ. ಅದಕ್ಕಾಗಿಯೇ ಇಂದಿನಿಂದ ನಾನು ಕೆಲಸಕ್ಕೆ ಹೋಗುತ್ತಿದ್ದೇನೆ. ಸಂಜೆಯಲ್ಲಿ ದಿನಪತ್ರಿಕೆ ಮಾರಿದರೆ ನಾಲ್ಕೈದಾಣೆ ಸಿಗುತ್ತಮ್ಮ. ಇನ್ನು ಮೇಲೆ ನೀನು ಶಾಲೆಗೆ ಹೋಗುವುದು ಬೇಡ, ಬಿಟ್ಟು ಬಿಡು. ನಾನು ದೊಡ್ಡವನಾಗಲಿಲ್ಲವೆ? ಅಪ್ಪ ಬರುವವರೆಗೂ ನಾನೇ ದುಡಿದುಕೊಂಡು ಬರುತ್ತೇನೆ. ಬೇಕಾದರರೆ ಶಾಲೆಯನ್ನು ಬಿಡುತ್ತೇನೆ.(ಅದೇ, ಪುಟ-೯೭) ಎಂಬ ಮಾತುಗಳು ಅಂದು ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿದ ವಿದ್ಯಾರ್ಥಿಗಳನ್ನು ನೆನೆಯುತ್ತದೆ. ಒಂದು ಮಾತು ಹೀಗಿದೆ.

"ಬೀಳಲಿ ಮೈ ನೆತ್ತರು ಕಾರಿ
ಹೋದರೆ ಹೋಗಲಿ ತಲೆ
ತಾಯಿನಾಡಿನ ಮೇಲ್ಮೆಗೆ ಹೋರಿ
ಸ್ವಾತಂತ್ರ್ಯ ಸ್ವರ್ಗಕ್ಕೆ ಏರಿ"(ಅದೇ, ಪುಟ-೯೭)

ಇಲ್ಲಿಯ ಮಾತುಗಳು ಸ್ವಾತಂತ್ರ್ಯಕ್ಕಾಗಿ ಅಂದಿನ ಜನರ ಧೈರ್ಯ, ಸಾಹಸಗಳನ್ನು ಹೇಳುತ್ತಾರೆ.

ಬಲಿ

ಅಗಸ್ಟ್ ೯ರ ಘಟನೆ ಇಲ್ಲಿ ಮತ್ತೆ ನೆನಪಿಸುತ್ತಾರೆ. ೧೯೪೨ ಆಗಸ್ಟ್ ೧೧ ರಿಂದ ಆರಂಭವಾದ ಕಥೆ ದಿನಚರಿಯಂತೆ ಮುಂದುವರೆಯುತ್ತದೆ. ಇಲ್ಲಿಯೂ ಮಾಡಿರಿ ಮಡಿಯಿರಿ, ಬಲಿದಾನ, ತೊಲಗಿರಿ, ಸಂಗ್ರಾಮ ಪದಗಳೆ ರಿಂಗಣಿಸುತ್ತದೆ. "ಸ್ವಾತಂತ್ರ್ಯಕ್ಕಾಗಿ ಸಂತೋಷದಿಂದ ಪ್ರಾಣಾರ್ಪಣೆ ಮಾಡಿದ ವೀರಾಧಿವೀರರ ನಾಡಿನಲ್ಲಿ ನಾವು ಹುಟ್ಟಿದ್ದೇವೆ. ಈಗ ನಾವು ಹೇಡಿಗಳಾಗಬಾರದು. ನಮ್ಮ ಪೂರ್ವಜರ ಉಜ್ವಲ ಇತಿಹಾಸಕ್ಕೆ, ಅವರ ಸ್ಮರಣೆಗೆ ಕಳಂಕ ಹಚ್ಚಬಾರದು.(ಅದೇ, ಪುಟ-೧೯೭) ಹೊಸ ತಲೆಮಾರಿನ ಯುವ ಸಮುದಾಯದ ಸ್ವಾತಂತ್ರ್ಯ ಜ್ವಾಲೆಯನ್ನು ಕಟ್ಟಿಮನಿಯವರು ಈ ಕಥೆಯಲ್ಲಿ ಶಂಕರನ ಮೂಲಕ ಹೊರ ಹಾಕಿದ್ದಾರೆ.

ತಂದೆ ತಾಯಿಗಳ ಮಮತೆಯ ಬಂಧನವನ್ನು ಬದಿಗೊತ್ತಿ, ಓದಿಗೆ ತಿಲಾಂಜಲಿಯಿತ್ತು ಬಾಪೂ ಕರೆಗೆ ಓಗೊಟ್ಟು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸಹೋದ್ಯೋಗಿಗಳಿಗೆ ಸ್ಫೂರ್ತಿಯ ಕೇಂದ್ರವಾಗಿ ಆದರ್ಶದ ಅಣ್ಣನಾಗಿ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಮನಸ್ಥೈರ್ಯವನ್ನು ಕಳೆದುಕೊಳ್ಳದೆ ಧೀರ ಪುರುಷನಾಗಿ ಮೆರೆದು ಪೋಲಿಸರ ದೌರ್ಜನ್ಯಕ್ಕೆ ಈಡಾಗಿ ಸತ್ತ ಅಭಿಮನ್ಯುವಿನೊಬ್ಬನ ದುರಂತ ಕಥೆ ಇದು. (ದೇಜಗೌ, ಸಿ.ಪಿ.ಕೆ. (ಸಂ) ಕಟ್ಟಿಮನಿ ಬದುಕು ಬರಹ, ಪುಟ-೧೩) ಎಂದು ಎಚ್.ಜೆ. ಲಕ್ಕಪ್ಪಗೌಡರು ವಿಮರ್ಶಿಸಿದ್ದಾರೆ. ಶಂಕರನನ್ನು ಆದರ್ಶ ಮೂರ್ತಿಯಾಗಿ ರಚಿಸಿದ್ದಾರೆ. ಅವನ ಸಾವು ಯಾರು ತುಂಬಲಾರದ ಸಂಪತ್ತಾಗುತ್ತದೆ. ರಾಜಕೀಯ ಪ್ರಜ್ಞೆ ಸಾಮಾಜಿಕ ಕಳಕಳಿಯಂತ ಪ್ರಜ್ಞೆಗಳು ಕಟ್ಟಿಮನಿಯವರ ಕಥೆಗಳಲ್ಲಿ ಢಾಳಾಗಿವೆ.

ಮಣ್ಣಿನ ಮಗ ಗನ್ನು ತಂದ

ಪ್ರಗತಿಶೀಲ ಘಟ್ಟದ ಲೇಖಕರಲ್ಲಿ ಪ್ರಮುಖವಾದ ನಿರಂಜನ ಅವರು ತಮ್ಮ ಕೃತಿಗಳನ್ನು ಚಳುವಳಿಗಾಗಿಯೇ ದುಡಿಸಿಕೊಂಡವರು. ಸಮಾಜವಾದಿ ಹಿನ್ನೆಲೆಯ ವಾಸ್ತವಿಕ ನೆಲೆಗಟ್ಟಿನಲ್ಲಿ ಸಾಹಿತ್ಯ ರಚನೆಗೆ ತೊಡಗಿದವರು. 'ಮಣ್ಣಿನ ಮಗ ಗನ್ನು ತಂದ' ಕಥೆಯು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ್ದಾಗಿದೆ. ಈ ಕತೆಯು 'ನಾಸ್ತಿಕ ಕೊಟ್ಟ ದೇವರು' ಕಥಾಸಂಕಲನದಲ್ಲಿದೆ. ನಮ್ಮ ದೇಶದ ಸ್ವಾತಂತ್ರ್ಯ ನಂತರ ರಾಜಕೀಯ ಕ್ಷೇತ್ರದಿಂದ ಪ್ರೇರಣೆಗೊಂಡು ರಚಿಸಿದ ಈ ಕಥೆಯಲ್ಲಿ ನಮ್ಮ ದೇಶಭಕ್ತಿಯ ಆಚಾರ ವಿಚಾರಗಳನ್ನು ಕುರಿತು ಅದ್ಭುತ ವಿಶ್ಲೇಷಣೆಯಿದೆ. ಬೀರಣ್ಣ ಸೇನೆ ಸೇರುವುದು ಕಥೆಯ ವಸ್ತು. ದೇಶಾಭಿಮಾನ ರಾಷ್ಟ್ರಭಕ್ತಿಯು ನಮ್ಮ ಯುವ ಜನತೆಯು ನರನಾಡಿಗಳಲ್ಲಿ ಮಿಡಿಯುಬೇಕಾಗಿದೆ. ಒಬ್ಬ ವ್ಯಕ್ತಿ ನಿಷ್ಪ್ರಯೋಜಕನಾಗಿರಬಹುದು. ಆದರೆ ಅನೇಕ ಸಂದರ್ಭಗಳಲ್ಲಿ ಅಂಥವನಿಗೆ ಅವಕಾಶ

ಲಭಿಸಿದಾಗ ತನ್ನ ಸತ್ವಯುತ ಪ್ರತಿಭೆಯನ್ನು ವ್ಯಕ್ತಪಡಿಸದೆ ಬಿಡಲಾರ ಎಂಬುದಕ್ಕೆ ಪ್ರಸ್ತುತ ಕತೆಯು ಉದಾಹರಿಸುತ್ತಾರೆ.

ಗಿರಿಜವ್ವನ ರೊಟ್ಟಿ

ಇಪ್ಪತ್ತನೆ ಶತಮಾನದ ಪೂರ್ವಾರ್ಧವು ಸ್ವಾತಂತ್ರ್ಯಕ್ಕಾಗಿ ಬಿರುಸಿನ ಹೋರಾಟ ನಡೆಸಿದ ಕಾಲವದು. ಹಿರಿಯರು, ಕಿರಿಯರು, ಮಹಿಳೆಯರೆನ್ನದೆ ಎಲ್ಲರೂ ಭಾರತದ ಸ್ವಾತಂತ್ರ್ಯದಲ್ಲಿ ಮಹಿಳೆಯರು ಪಾಲುದಾರರು ಎಂಬ ಹಕ್ಕು ಮಂಡಿಸುತ್ತಾರೆ. ಮಹಿಳೆಯರು ಸಬಲೆ ಅಲ್ಲ ಎಂಬ ಭಾರತದ ಸಮಾಜದಲ್ಲಿಯೆ ಇಂತ ಮಹಿಳಾ ಕತೆಗಳು ಸಾಕಷ್ಟಿವೆ. ಬ್ರಿಟಿಶ್ ಸರಕಾರದ ಪೋಲೀಸ್ ಅಧಿಕಾರಿಯ ಹೆಂಡತಿಯಾದ ಗಿರಿಜವ್ವ ಒಬ್ಬ ಸ್ವಾತಂತ್ರ್ಯ ಹೋರಾಟಗಾರನಿಗೆ ಆಶ್ರಯ ನೀಡಿ ತನ್ನ ಗಂಡನನ್ನು ಮನಪರಿವರ್ತಿಸುವ ಸನ್ನಿವೇಶವನ್ನು ಮಾರ್ಮಿಕವಾಗಿ ಕಟ್ಟಿಕೊಡಲಾಗಿದೆ.

ಇನ್‌ಸ್ಪೆಕ್ಟರ್ ಗುರುಬಸಪ್ಪನಿಗೆ ಖಾನಾಪುರದ ಕಾಡಿನಲ್ಲಿ ಕ್ರಾಂತಿಕಾರರ ತಾಣವಿದೆ ಎಂದು ತಿಳಿದ ಕೂಡಲೆ, ಅವರನ್ನು ಹಿಡಿಯುವ ಆತುರದಲ್ಲಿ ಹೆಂಡತಿ ಗಿರಿಜವ್ವ ಮಾಡಿದ ರೊಟ್ಟಿಯನ್ನು ತಿನ್ನದೆ ಹೋಗುತ್ತಾನೆ. ಗುರುಬಸಪ್ಪನ ಗುಂಡೇಟು ತಿಂದು ಕ್ರಾಂತಿಕಾರಿ ದುಗ್ಗ, ಗುರುಬಸಪ್ಪನ ಮನೆಗೆ ಬಂದು ಅವಿತುಕೊಳ್ಳುತ್ತಾನೆ. ಗಿರಿಜವ್ವನ ಉಪಚಾರಕ್ಕೆ ಹಣಿಮಣಿದು ಗುರು ಬಸಪ್ಪನ ರಿವಾಲ್ವರನ್ನೆ ತೆಗೆದುಕೊಂಡು ಪರಾರಿಯಾಗುತ್ತಾನೆ. ಇಲ್ಲಿ ಮನೆಗೆ ಬಂದ ಗುರುಬಸಪ್ಪ ಗಿರಿಜವ್ವಳ ನಡುವಿನ ಮಾತುಗಳು ಒಬ್ಬ ದೇಶಪ್ರೇಮಿ ಮಹಿಳೆಯ ತುಡಿತವನ್ನು ನಿರೂಪಿಸುತ್ತಾರೆ. ಕ್ರಾಂತಿಕಾರರು ಹೇಗೆ ದೇಶ ದ್ರೋಹಿಗಳು, ಅವರನ್ನು ನೀವೇಕೆ ಕೊಲ್ಲಬೇಕು? ಎಂದು ಗಂಡನನ್ನು ಪ್ರಶ್ನಿಸುತ್ತಾಳೆ. ಬಿಳಿಯರ ಸರಕಾರಕ್ಕೆ ನೀವೇಕೆ ದೇಹ ತೆಯಬೇಕು ಎಂಬಲ್ಲಿ ಅವಳ ಸ್ವಾತಂತ್ರ್ಯದ ಮಾತುಗಳು ಅಭಿವ್ಯಕ್ತಿಗೊಂಡಿವೆ.

ಕ್ವಿಟ್ ಇಂಡಿಯಾ ಚಳುವಳಿಯನ್ನು ಕುರಿತು ಅನಕೃ ಅವರು 'ಗಿರಿಜವ್ವನ ರೊಟ್ಟಿ' ಎಂಬ ಮತ್ತೊಂದು ಕಥೆಯನ್ನು ರಚಿಸಿದ್ದಾರೆ. ದುಗ್ಗಪ್ಪ(ಸ್ವಾತಂತ್ರ್ಯ ಹೋರಾಟಗಾರ ಗುರುಬಸಪ್ಪ(ಪೊಲೀಸ್ ಅಧಿಕಾರಿ), ಗಿರಿಜವ್ವ (ಪೊಲೀಸ್ ಅಧಿಕಾರಿ ಹೆಂಡತಿ) ಪಾತ್ರಗಳ ಮೂಲಕ ೧೯೪೦ರ ನಂತರ ಭಾರತ ಸ್ವಾತಂತ್ರ್ಯ ಚಳುವಳಿಯ ಬೇರೆ ಬೇರೆ ಚಳುವಳಿಗಳ ಮೂಲಕ ಅಹಿಂಸೆಯಿಂದ ಹಿಂಸೆಯ ಮಾರ್ಗದೆಡೆಗೆ ಹೊರಳುತ್ತಿಯ ಇಂಥ ಸಂದಿಗ್ಧತೆಗಳನ್ನು ಈ ಮೂರು ಪಾತ್ರಗಳ ಮೂಲಕ ಮುಖಾಮುಖಿಗೊಳಿಸಿದ್ದಾರೆ. ಬ್ರಿಟಿಶರ ಕ್ರೌರ್ಯದ ಪ್ರತೀಕವಾದ ಪೊಲೀಸ್ ಅಧಿಕಾರಿಯು ಮನಃಪರಿವರ್ತನೆ ಮೂಲಕ ಕೊನೆಗೊಳ್ಳುವ ಈ ಕಥೆಯ ಬ್ರಿಟಿಶರಿಂದ ಭಾರತವು ಬಿಡುಗಡೆಗೊಂಡ ಸಂಕಥನವಾಗಿಯು ಗಮನಿಸಬಹುದು.

ಪ್ರಗತಿಶೀಲ ಪಂಥದ ಮತ್ತೊಬ್ಬ ಕಥೆಗಾರರು ಬಸವರಾಜ ಕಟ್ಟಿಮನಿ ಅವರ ಅಗಸ್ಟ್ ಒಂಭತ್ತು ಕಥಾ ಸಂಕಲನವು ಅಗಸ್ಟ್ ಕ್ರಾಂತಿಯನ್ನು(ಕ್ವಿಟ್ ಇಂಡಿಯಾ) ಕುರಿತದ್ದೆ

'ರಕ್ತಧ್ವಜ' ಕತೆಯ ಅತ್ಯಂತ ಚಿಕ್ಕ ಪರಿಮಿತಿಯಲ್ಲಿ ಅದ್ಭುತ ಅನುಭವವೊಂದನ್ನು ತಂದುಕೊಡುವ ಮೈನರಳಿಸುವ ಸತ್ವಶಾಲಿ ಕತೆಯದು. ಹತ್ತು ವರ್ಷದ ಹಸುಳೆಯೆಲ್ಲ ಕೋರ್ಟಿನ ಗೋಪುರದ ಮೇಲೆ ತ್ರಿವರ್ಣ ಧ್ವಜಾರೋಹಣ ಮಾಡಲು ಹೋಗಿ ಪೊಲೀಸರ ನಿರ್ಭೀತಿಯಿಂದ ಪೊಲೀಸರ ಗುಂಡಿಗೆ ಗುಂಡಿಗೆಯೊಡ್ಡಿದ ವೀರ ವೃತ್ತಾಂತ ಇದರ ವಸ್ತು"(ದೇಜಗೌ, ಸಿಪಿಕೆ, ಕಟ್ಟಿಮನಿ ಬದುಕು ಬರಹ,) ದೇಶಾಭಿಮಾನ, ಸ್ವಾತಂತ್ರ್ಯ ಪ್ರೇಮದಂತೆ ಕಲಿತನಗಳು ಸಾಲು ಸಾಲಿನಲ್ಲಿಯೂ ಮೂಡಿವೆ. ಈ ಕತೆಯು ನಾಯಕನಾದ ಕಿಸನ್ನನ ಅಪ್ರತಿಮ ಹೋರಾಟದ ಸ್ಫೂರ್ತಿಗಾರರ ಅವನ ತಂದೆ ತಾಯಿಯೂ ನಾಡ ಪ್ರೇಮವು ಕೊಡುವ ಕತೆಯಲ್ಲಿ ವ್ಯಕ್ತಗೊಂಡಿದೆ.

ಕನ್ನಡ ಸಾಹಿತ್ಯಕ್ಕೆ ಅನೇಕ ವಸ್ತು ವಿಚಾರಗಳು ಕಾಲಕಾಲಕ್ಕೆ ಒದಗಿಬಂದಿರುವುದು ಗಮನಾರ್ಹ. ಹಾಗೆ ಘಟನೆಯೊಂದು ವಸ್ತುವಾಗಿ ಒದಗಿ ಅನೇಕ ವರ್ಷಗಳ ಕಾಲ ಕನ್ನಡ ಸಾಹಿತ್ಯದೊಂದಿಗೆ, ಒಡನಾಟವನ್ನು ನಡೆಸುವ ಸಂದರ್ಭವಾಗಿ ಸ್ವಾತಂತ್ರ್ಯ ಚಳುವಳಿ ಒಂದು ವಿಭಿನ್ನ ಮಾದರಿಯಿಂದ ಕನ್ನಡ ಸಾಹಿತ್ಯವನ್ನು ಎದುರುಗೊಂಡಿದೆ. ಈ ಚಳುವಳಿ ಎನ್ನುವ ವಿಷಯ ಘಟನೆ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಅನಾವರಣಗೊಂಡಿದೆ. ಬಹುಶಃ ಸ್ವಾತಂತ್ರ್ಯ ಚಳುವಳಿ ಎಲ್ಲ ವಸ್ತು ವಿಷಯಗಳಂತೆ ಒಂದು ಕಾಲ್ಪನಿಕ ಅಥವಾ ಪಾರಂಪರಿಕ ವಿಷಯವಾಗಿದೆ. ನೇರವಾಗಿ ಘಟನೆಯನ್ನು ಕುರಿತದ್ದಾಗಿದೆ. ಇಲ್ಲಿ ಪ್ರತಿಯೊಬ್ಬ ಸಾಹಿತಿ/ಲೇಖಕರು ಸ್ವಾತಂತ್ರ್ಯ ಚಳುವಳಿಯನ್ನು ಇದಿರುಗೊಂಡ ಸಂದರ್ಭ ಎನ್ನುವಷ್ಟರ ಮಟ್ಟಿಗೆ ಇದು ಕನ್ನಡದಲ್ಲಿ ಹಾಸುಹೊಕ್ಕಾಗಿದೆ. ಈ ಹಿನ್ನೆಲೆಯಲ್ಲಿ ಈ ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯದ ಇತರೆ ಪ್ರಕಾರಗಳಲ್ಲಿ ಮೂಡಿಬಂದ ಚಳುವಳಿಯ ವಿಶಿಷ್ಟ ಅಂಶಗಳನ್ನು ಸಮೀಕ್ಷಿಸಲಾಗಿದೆ.

ವಸಾಹತುಶಾಹಿ ಸಾಂಸ್ಕೃತಿಕ ಸಂದರ್ಭದಲ್ಲಿ ಸ್ಥಿತ್ಯಂತರಗೊಳ್ಳುತ್ತಿದ್ದ ಭಾರತೀಯ ಸಮಾಜದ ಚಹರೆಗಳನ್ನಾಗಿ ರಾಷ್ಟ್ರೀಯತೆಯು ನೆಪದಲ್ಲಿ ಏಕೀಕರಿಸುವ ಕೆಲಸಗಳು ಪ್ರಾರಂಭಗೊಂಡಿದ್ದರು. ಇಂತ ಘಟನೆಗಳಾಗಿ ಕನ್ನಡ ಸಾಹಿತ್ಯ ಪ್ರತಿಕ್ರಿಯಿಸಿದ ಬಗ್ಗೆ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಭೂಮಿಯ ಮೇಲೆ ಮಾನವ ಉಗಮವಾದಾಗಿನಿಂದಲೂ ಹಲವಾರು ಹಂತಗಳನ್ನು ದಾಟಿ ಬಂದಿದ್ದಾನೆ. ೧೯-೨೦ನೆ ಶತಮಾನವು ಭಾರತಕ್ಕೆ ಒಂದು ಚೈತನ್ಯದ ಉಗಮವಾಗಿದೆ. ಆ ಚೈತನ್ಯಕ್ಕೆ ನಡೆದ ಕ್ರಾಂತಿಯಲ್ಲಿ ರಕ್ತಪಾತವು ಆಗದೇ ಮುಂದೆ ಧರ್ಮ ಸಂಘರ್ಷಕ್ಕೂ ಕಾರಣವಾಯಿತು. ಹಾಗೆ ಪ್ರತಿಯೊಬ್ಬ ವೈಯಕ್ತಿಕ ಅಸ್ತಿತ್ವವನ್ನು ಬಡಿದೆಬ್ಬಿಸಿತು. ಜಗತ್ತಿನ ಬಹುತೇಕ ರಾಷ್ಟ್ರಗಳು ಯುರೋಪಿನ ವಸಾಹತುಗಳಲ್ಲಿ ಆದ ಸನ್ನಿವೇಶಗಳಲ್ಲಿ ಜಗತ್ತಿನಾದ್ಯಂತ

ಮುನ್ನೆಲೆಗೆ ಬಂದ ಚಿಂತನೆಗಳು ಮನುಷ್ಯನಿಗೆ ಆಲೋಚಿಸುವ / ಪ್ರತಿಕ್ರಿಯಿಸುವ ಶಕ್ತಿಯನ್ನು ನೀಡಿದವು. ಹಿಂದಿನಿಂದಲೂ ಬಂದ ಧಾರ್ಮಿಕ ವ್ಯವಸ್ಥೆಯ ಕೆಲವು ಜನಗಳಲ್ಲಿ ಬಂದಿಯಾಗಿತ್ತು. ೧೫-೧೬ನೆ ಶತಮಾನದಲ್ಲಿ ಇಂಗ್ಲೆಂಡಿನ ಚರ್ಚೆಗಳಲ್ಲಿ ನಡೆದ ಧಾರ್ಮಿಕ ಬಗೆಗಿನ ಜಿಜ್ಞಾಸೆಗಳು ಧರ್ಮದ ಒಳ ಹುರುಳನ್ನು ಬಯಲಿಗೆಳೆದ ನಂತರ ಪ್ರಪಂಚದಾದ್ಯಂತ(ಭಾರತದಲ್ಲಿ ಈ ಹಿಂದಿನ ಈ ತರ ಕೆಲಸಗಳನ್ನು ಭಕ್ತಿ ಯುಗದಲ್ಲಿ ಕಾಣಬಹುದು.) ಮೊದಲ ಬಾರಿಗೆ ಧರ್ಮದ ಕುರಿತಂತೆ ಮಾತನಾಡುವಂತಾಯಿತು. ವಸಾಹತು ರಾಷ್ಟ್ರಗಳಿಗೆ ಅದರಲ್ಲೂ ಸ್ವಾತಂತ್ರ್ಯದ ಕನಸನ್ನು ಕಾಣುತ್ತಿದ್ದ 'ಭಾರತಕ್ಕೆ ಇದೊಂದು ರೀತಿಯ ವರವಾಗಿ/ಶಾಪವಾಗಿ ಕಾಣಿಸಿತು. ಧರ್ಮವನ್ನು ಸಂಸ್ಕೃತಿಯ ಹೆಸರಲ್ಲಿ ರಾಷ್ಟ್ರೀಯ ಚಳುವಳಿಯ ಭಾಗವಾಗಿಯೆ ಗಮನಿಸಿದ್ದರಿಂದ ಭಾರತವನ್ನು ಹಿಂದೂ ನಾಡೆಂದು ಪರಿಗಣಿಸುವತ್ತ ಚಿಂತನೆಗಳು ಆರಂಭವಾದವು. ಇದಕ್ಕೆ ಪುಷ್ಟಿ ನೀಡುವಂತೆ ಕನ್ನಡದಲ್ಲಿ ೧೯೨೦-೩೦ರ ಸುಮಾರಿಗೆ ಮಾಸ್ತಿ, ಡಿವಿಜಿ, ದೇವುಡು ಮುಂತಾದವರು ಸಂಸ್ಕೃತಿಯನ್ನು ಕುರಿತ ಬರಹಗಳನ್ನು ರಚಿಸತೊಡಗಿದರು. ಹೀಗಾಗಿ ಭಾರತವು ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಒಂದು ಚೌಕಟ್ಟಿಗೆ ಒಳಪಡಲು ಆರಂಭಗೊಂಡವು.

ಮನುಷ್ಯನ ವಿಕಾಸವೇ ವಲಸೆಯ ಮೂಲಾಂಶಗಳಾದ್ದ(ಮಣ್ಣು) ಭೂಮಿಯನ್ನು ಒಂದು ಚೌಕಟ್ಟಿಗೆ ಒಳಪಡಿಸಿ, ತನ್ನದಾಗಿಸಿಕೊಂಡಿದ್ದು ವ್ಯವಸಾಯವನ್ನು ಆರಂಭಿಸಿ ಒಂದು ಕಡೆ ನೆಲೆನಿಂತ ಮೇಲೆ ಪ್ರಪಂಚದಾದ್ಯಂತ ಆರಂಭಗೊಂಡ ರಾಜಪ್ರಭುತ್ವಗಳು ಕೂಡ ತನ್ನ ಸೀಮೆಗಳನ್ನು ಹಿಗ್ಗಿಸಿಕೊಳ್ಳುವ, ಕುಗ್ಗಿಸಿಕೊಳ್ಳುವ ಘಟನೆಗಳಿಗೆ ಒಳಗಾಗಿವೆ. ಕ್ರಮೇಣ ರಾಜಪ್ರಭುತ್ವಗಳು ಮೇಲ್ವರ್ಗ ಮತ್ತು ಧರ್ಮಗಳು ಹಿತವನ್ನು ಬಯಸಿದವು ಜನಸಾಮಾನ್ಯರು ಪ್ರಭುತ್ವದ ಭಾಗವಾಗಲೇ ಇಲ್ಲ.

೩.೪. ಕಾದಂಬರಿ

ಭಾರತದ ಸ್ವಾತಂತ್ರ್ಯ ಚಳುವಳಿ ಸಂಕೀರ್ಣವಾದದ್ದು. ಹಾಗಾಗಿ ಅದು ಕಾಲದಿಂದ ಕಾಲಕ್ಕೆ ಭಿನ್ನ ಭಿನ್ನ ಅರ್ಥಗಳಿಗೆ ತೆರೆದುಕೊಳ್ಳುತ್ತದೆ. ಅಲೆಮಾರಿಯಾದ ಮನುಷ್ಯ ಒಂದು ಕಡೆ ನೆಲೆನಿಂತು ಬದುಕಲು ಆರಂಭಿಸಿದ್ದಾಗಿನಿಂದ ಅವರು ಅಸ್ತಿತ್ವದ/ಸ್ವಾತಂತ್ರ್ಯದ ಪ್ರಶ್ನೆ ಕಾಡಲು ಆರಂಭಿಸಿರಬಹುದು. ಅಂದಿನಿಂದ ತಮ್ಮ ಸೀಮಿತ ಚೌಕಟ್ಟಿನೊಳಗೆ ಅಂದಂದಿನ ಪ್ರಭುತ್ವಗಳ ವಿರುದ್ಧ ಹೋರಾಡಿದ್ದಾರೆ. ತಮ್ಮ ಅಸ್ಮಿತೆಗಾಗಿ ಸೆಣಸಾಡಿದ್ದಾರೆ, ಸಾವುನೋವುಗಳನ್ನು ಕಂಡಿದ್ದಾರೆ, ಬಳಲಿದ್ದಾರೆ, ಬದುಕಿದ್ದಾರೆ ಇದಕ್ಕೆ 'ಭಾರತ'ವು ಹೊರತಲ್ಲ. ಸ್ವಾತಂತ್ರ್ಯ ಪೂರ್ವದ್ದು ಒಂದು ಚಿತ್ರಣವಾದರೆ, ಸ್ವಾತಂತ್ರ್ಯ ನಂತರದ್ದು ಮತ್ತೊಂದು ಚಿತ್ರಣ. ಆಧುನಿಕ ಕನ್ನಡ ಸಾಹಿತ್ಯವನ್ನು ಯುರೋಪಿನ ಸಾಹಿತ್ಯದ ಪ್ರಭಾವ, ಪ್ರೇರಣೆಗಳಿಂದ ಗುರುತಿಸಲಾಗುತ್ತದೆ. ವಸಾಹತುಶಾಹಿ ಸಂಸ್ಕೃತಿ ಸಂದರ್ಭದಲ್ಲಿ "ಕಟ್ಟಲ್ಪಡುತ್ತಿದ್ದ ಭಾರತ"ಕ್ಕೆ ಪಾಶ್ಚಾತ್ಯ ಚಿಂತನೆಗಳ

ಭಾಗವಾಗಿ ಬಂದ ರಾಷ್ಟ್ರೀಯತೆ, ದೇಶಪ್ರೇಮ, ಸ್ವಾತಂತ್ರ್ಯ, ಸಮಾನತೆ ಅಂಶಗಳು ಮತ್ತು ಪರಂಪರೆಯಿಂದ ಬಂದ ಧಾರ್ಮಿಕ ಸಂಘರ್ಷಗಳು ಸ್ವಾತಂತ್ರ್ಯ ನಂತರದ ಭಾರತದ ನಿರ್ಮಾಣಕ್ಕಾಗಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದುಕುಗಳಾಗಿ 'ಸಂವಿಧಾನ' ಒಂದು ಚೌಕಟ್ಟನ್ನು ನಿರ್ಮಿಸಿತು.(ಆ ಚೌಕಟ್ಟು ನಿರ್ಮಾಣಗೊಂಡಿದೆಯೇ ಎಂಬ ಪ್ರಶ್ನೆಯ ಚರ್ಚೆಗಳು ಇವೆ)

ಮೂರಾಬಟ್ಟೆ

ಎಂ. ವಿ. ಇನಾಮದಾರ ಮೂರಾಬಟ್ಟೆ ಕಾದಂಬರಿಯು ಬೇರೆ ಬೇರೆ ವರ್ಗಗಳಿಗೆ ಸಂಬಂಧಿಸಿದೆ. ಕಲೆ, ಜೀವನ, ಸೌಂದರ್ಯ- ರಸಿಕತೆ, ಬುದ್ಧಿ ಭಾವನೆ, ಪ್ರೇಮ, ದೇಶಾಭಿಮಾನ, ಹೋರಾಟ ಸ್ವಾತಂತ್ರ್ಯದ ತುಡಿತ ಮಿಡಿತಗಳನ್ನು ಒಳಗೊಂಡಿದೆ. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಹಿನ್ನೆಲೆಯಲ್ಲಿ ರಚನೆಗೊಂಡ ಈ ಕಾದಂಬರಿ ಪ್ರಮುಖವಾಗಿ ಮೂರು ಪಾತ್ರಗಳನ್ನು ಒಳಗೊಂಡಿದೆ. ಈ ಮೂರು ಪಾತ್ರಗಳು ಮೂರು ದಿಕ್ಕಿನಲ್ಲಿ ಚಿಂತಿಸುತ್ತಾರೆ. ಈ ಮೂರು ಚಿಂತನೆಗಳು ಸಮಾಜದಲ್ಲಿನ ಸಮಸ್ಯೆಗಳಿಗೆ ಬೇರೆ ಬೇರೆಯಾದ ಆಯಾಮಗಳನ್ನು ಕಲ್ಪಿಸುವಲ್ಲಿ ಗೊಂದಲಗಳನ್ನು ಸೃಷ್ಟಿಸಲು ಕಾರಣವಾಗುತ್ತವೆ. ಆಗ ಈ ಮೂರು ಪಾತ್ರಗಳಲ್ಲಿನ ಸೂಕ್ಷ್ಮ ಸಂಬಂಧಗಳು ಒಡೆದು ಮೂರಾಬಟ್ಟೆಗೆ ದಾರಿಯಾಗುತ್ತದೆ. ಕಾದಂಬರಿಯಲ್ಲಿನ ಕತೆಗೂ, ಕಾದಂಬರಿಗೂ, ಇಟ್ಟ ಹೆಸರಿಗೂ ತುಂಬಾ ಸಾಮ್ಯತೆಯಿದೆ ಮತ್ತು ಆ ಪಾತ್ರಗಳು ವಸಾಹತುಶಾಹಿಯಿಂದ ಸೃಷ್ಟಿಯಾದ ಸಾಮಾಜಿಕ ಮೌಲ್ಯಗಳು, ದ್ವಂದ್ವಗಳು ಸ್ವಾತಂತ್ರದ ಅವಶ್ಯಕತೆಯನ್ನು ಗುರುತಿಸಬಹುದು.

"ಅಜ್ಞಾನದ ಕತ್ತಲೆಯಲ್ಲಿ ಮೂರು ತಲೆಮಾರೊ, ಹತ್ತು ತಲೆಮಾರೊ, ಮುಳುಗಿದ್ದವರಿಗೆ ಬೆಳಕೊಂದು ಕನಸೇ ಸರಿ. ಆದರೂ ಬೆಳಕೆಂಬುದೊಂದು ಇದೆ ಎಂಬ ಕಲ್ಪನೆಯನ್ನಾದರೂ ಅವರ ತಲೆಯಲ್ಲಿ ಸೇರಿಸಿದರೂ ಅದೊಂದು ದೊಡ್ಡ ಕೆಲಸವಾದಂತೆ"(ಇನಾಂದಾರ ಎಂ.ವಿ., ಮುರಾಬಟ್ಟೆ, ಪುಟ-೩೯) ಇಲ್ಲಿಯ ಶಾಮಣ್ಣನ ಮಾತುಗಳು ಎಷ್ಟು ಪ್ರಸ್ತುತವೆನಿಸುತ್ತವೆ ಎಂದರೆ ಸ್ವಾತಂತ್ರ್ಯದಿಂದ ತಮ್ಮ ಬಾಳು ಕತ್ತಲೆಯಿಂದ ಹೊರ ಬರಬಹುದೆಂಬ ಆಶಯವನ್ನು ಹೊಂದಿದ್ದರು. ಸ್ವಹಿತಾಸಕ್ತಿಯನ್ನು ಕಡೆಗಣಿಸಿ, ಆಂದೋಲನದಲ್ಲಿ ಧುಮಿಕಿದರವರಿಗೆ ಬರಬಹುದಾದ ತೊಡಕನ್ನು ಕಾದಂಬರಿಯಲ್ಲಿ ಗಮನಿಸಬಹುದು. ಇಲ್ಲಿ ಶಾಮಣ್ಣ ಎಂದರೆ ಅವನಂತೆ ದೇಶಪ್ರೇಮಿಯಾದ ಪ್ರತಿಯೊಬ್ಬ ಭಾರತೀಯನೂ ಎದುರಿಸಬೇಕಾದ ಸವಾಲುಗಳು ಎಂದರ್ಥ. ತನ್ನ ಆತ್ಮೀಯರ ಸಂಬಂಧ ಮತ್ತು ತನ್ನ ನಾಡಿನ ಸಂಬಂಧಗಳ ತಾಕಲಾಟಗಳಲ್ಲಿ ಉದ್ದೇಶ ಆದರ್ಶಗಳು ಹೇಗೆ ದುರ್ಬಲಗೊಳ್ಳುತ್ತವೆ ಎಂಬುದನ್ನು ಕಾದಂಬರಿ ತಿಳಿಸುತ್ತದೆ. ಇಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧದ ಜೊತೆಗೆ ದೇಶದ ಸಂಬಂಧ ಮುಖ್ಯ ಎಂದು ಕಾದಂಬರಿ ತಿಳಿಸುತ್ತದೆ.

ಸ್ವಾತಂತ್ರ್ಯ ಚಳುವಳಿಯನ್ನು ಪ್ರಮುಖ ವಸ್ತುವಾಗಿ ತೆಗೆದುಕೊಂಡು ಈ ಕಾದಂಬರಿಯು ಜೊತೆಗೆ ಪ್ರೇಮ ಕತೆಯೊಂದನ್ನು ಸೇರಿಸಿಕೊಂಡಿದೆ. ಕಲ್ಪನೆಯನ್ನದೆ ವಾಸ್ತವವಾದಿತನವನ್ನು ಪ್ರಗತಿಶೀಲ ಧೋರಣೆಯನ್ನು ತೋರುತ್ತಾರೆ. ಗಾಂಧಿ, ನೆಹರು ಸರದಾರ್ ಪಟೇಲ್ ಮೊದಲಾದವರ ಭಾಷಣಗಳು ರಾಷ್ಟ್ರಕಲ್ಪನೆಯು ಜೀವಂತ ಚಿತ್ರಣವನ್ನು ಕಾದಂಬರಿ ಕೊಡುತ್ತದೆ. ಎದುರಿಸಬೇಕಾದ ಸನ್ನಿವೇಶದ ಪ್ರಬಲತೆಯಿಂದಲೋ ಅಲ್ಲಿನ ಮಾನಸಿಕ ದೌರ್ಬಲ್ಯದಿಂದಲೋ ವ್ಯಕ್ತಿ ತನ್ನ ಉದ್ದೇಶದಿಂದ ವಿಮುಖನಾಗಬೇಕಾದ ದುಃಸ್ಥಿತಿ ಹೇಳಿ, ಸ್ವಾತಂತ್ರ್ಯ ಹೋರಾಟಗಾರರ ಹೀನ ಸ್ಥಿತಿಯನ್ನು ವಿವರಿಸುತ್ತಾರೆ. ಇದನ್ನು ಮೀರಿ ನಿಲ್ಲಬೇಕಾದ ಅನಿವಾರ್ಯತೆಯನ್ನು ಕಾದಂಬರಿಕಾರರು ಧ್ವನಿಸುತ್ತಾರೆ.

ಮಾಡು ಇಲ್ಲವೆ ಮಡಿ

ಸ್ವಾತಂತ್ರ್ಯ ಚಳುವಳಿಯ ಉಚ್ಛ್ರಾಯ ಕಾಲಘಟ್ಟದಲ್ಲಿ ರಚನೆಯಾದ ಕಟ್ಟಿಮನಿಯವರ 'ಮಾಡು ಇಲ್ಲವೆ ಮಡಿ' ಕಾದಂಬರಿಯು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯ ಕುರಿತು ನಿರೂಪಣೆಗೊಂಡದ್ದು. ಪುರಷರೆ ಅಂದಿನ ಸಮಾಜದ ಭಾಗವಾಗಿರುವ ಕಾಲಘಟ್ಟದಲ್ಲಿ ಹೇಮಾಳಂತ ಹೆಣ್ಣು ಮಗಳು, ಚಳುವಳಿಗೆ ಧುಮುಕಿ ಸ್ವಾತಂತ್ರ್ಯ ಚಳುವಳಿಗೆ ಸ್ತ್ರೀಯರ ಅವಶ್ಯಕತೆಯನ್ನು ನಿಭಾಯಿಸುತ್ತಾಳೆ. ವಿದ್ಯಾರ್ಥಿಯಾದ ಹೇಮಾಳ ಕ್ರಾಂತಿಯು ಕಿಚ್ಚು ಈ ಕಾದಂಬರಿಯಲ್ಲಿ ಕಲ್ಪನೆಯಾಗಿ ಬಂದದ್ದಲ್ಲ. ಅಂದಿನ ವಾಸ್ತವನೆ ಅಂತದ್ದು. ಇಂದು ಸ್ವಾತಂತ್ರ್ಯ ಹೋರಾಟಗಾರರೆಂದು ಗುರುತಿಸಿಕೊಳ್ಳುವವರೆಲ್ಲರೂ ವಿದ್ಯಾರ್ಥಿ ದೆಸೆಯಿಂದ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದವರೆ. ಈ ಕಾದಂಬರಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪರಿಸಸರವನ್ನು ಮಾತ್ರ ಒಳಗೊಂಡಿರಲು ಕೂಡ, ತಾಯ್ನೆಲದ ಬಿಡುಗಡೆಗಾಗಿ ಅವರಿವರೆನ್ನದೆ ಎಲ್ಲರೂ ಶ್ರಮಿಸುವ ಬದ್ಧತೆ ಬಗ್ಗೆ ಮಾತನಾಡುತ್ತದೆ. ಮುದುಕಪ್ಪ, ಶೇಖರಪ್ಪ, ಸಂಗಪ್ಪ, ವಿಶ್ವನಾಥ, ಬಾಳಪ್ಪನಂತವರು ಚಳುವಳಿಯನ್ನು ತಮ್ಮ ಬದುಕಾಗಿ ಸ್ವೀಕರಿಸಿದವರು. ಇಂತ ಚಳುವಳಿಗಾರರಿಗೆ ಮಠದ ಸ್ವಾಮಿಜಿಗಳು ಕೂಡಾ ಆಶ್ರಯವನ್ನು ನೀಡುವಂದ್ದನ್ನು ಕಾದಂಬರಿಯು ಚಳುವಳಿಯ ಭಾಗ ಎಂದೆ ಮನಗಂಡಿದೆ.

ಚಿರಸ್ಮರಣೆ

ಒಂದು ಸಿದ್ಧಾಂತದ ಹಿನ್ನೆಲೆಯಲ್ಲಿ ರಚನೆಗೊಂಡ ಕಾದಂಬರಿ ಚಿರಸ್ಮರಣೆ. ಯುರೋಪಿನ ಕೈಗಾರಿಕಾ ಕ್ರಾಂತಿಗಳ ನಂತರ ಭಾರತಕ್ಕೆ ಪರಿಚಿತವಾದ ಕಮ್ಯೂನಿಸಂ ಚಿಂತನೆಯ ವರ್ಗ ದೌರ್ಜನ್ಯದ ವಿರುದ್ಧ ಅಂಶವುಳ್ಳ ಕಾದಂಬರಿ, ಇದೊಂದು ಮಂಗಳೂರು ಪರಿಸರದ ನೈಜ ಚಲನೆಯನ್ನು ಒಳಗೊಂಡ ಪ್ರಮುಖ ಕಾದಂಬರಿ, ಸ್ವತಃ ಪತ್ರಕರ್ತ ಕಾದಂಬರಿಯ ಲೇಖಕರಾದ ನಿರಂಜನರು ಈ ಚಳುವಳಿಯಲ್ಲಿ ಭಾಗವಹಿಸಿದ ಹೋರಾಟಗಾರರನ್ನು ಸಂದರ್ಶಿಸಿ ಬರೆದಿದ್ದಾರೆ.

ಅದನ್ನು ಅವರೆ ಮುನ್ನುಡಿಯಲ್ಲಿ ಹೇಳಕೊಂಡಿದ್ದಾರೆ. ವಸಾಹತುಶಾಹಿ ಸಂಸ್ಕೃತಿಯ ಭಾಗವಾಗಿ ಭಾರತದಲ್ಲಿ ನಿರ್ಮಾಣಗೊಂಡ ಜಮೀನ್ದಾರ ವ್ಯವಸ್ಥೆಯ ವಿರುದ್ಧ ಶಾಲಾ ಮಾಸ್ತರ ಕಟ್ಟಿಯ ರೈತ ಹೋರಾಟವೆ ಚಿರಸ್ಮರಣೆಯ ವಸ್ತು. ಸಮಾಜವಾದ ಮತ್ತು ಸಮತಾವಾದ ಚಿಂತನೆಗಳಿಗೆ ಮಾರುಹೋದ ಅಪ್ಪು, ಚಿರಕುಂಡ, ಅಬೂಬುಕದರೆ ಈ ಚಳುಬಳಿಯ ನೇತಾರರು. ಭಾರತಕ್ಕೆ ಬ್ರಿಟಿಶರಿಂದ ಸಿಗುವ ಬಿಡುಗೆಯಷ್ಟೆ ಭಾರತದಲ್ಲಿ ಬ್ರಿಟಿಶರ ಪ್ರತಿನಿದಿಗಳಂತೆ ನಿರ್ಮಾಣಗೊಂಡ ಜಮಿನ್ದಾರಿ ವರ್ಗದಿಂದಲೂ ಸಿಗುವ ಬಿಡುಗಡೆಯು ಅಷ್ಟೆ ಪ್ರಮುಖವಾದದ್ದು. ಕಾರಣ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆ ನಿರ್ಮಾಣಗೊಳ್ಳುತ್ತಿದ್ದದ್ದು ಕೃಷಿಯಿಂದ ಮಾತ್ರ. ಹಾಗಾಗಿ ಭಾರತ ಸ್ವಾತಂತ್ರ್ಯ ಭಾರತವಾಗಬೇಕಾದರೆ ಭೂಮಿ ಎಲ್ಲರಿಗೂ ಹಂಚಿಕೆಯಾಗಬೇಕು ಎಂಬ ಕೂಗುಗಳು ಸ್ವಾತಂತ್ರ್ಯದ ಭಾಗವೆ ಆಗಿವೆ.(ಮುಖ್ಯವಾಗಿ ಇಂತ ಹೋರಾಟಗಳು ಮುಖ್ಯವಾಗಿ ಕಮ್ಯೂನಿಸ್ಟ್ ಚಿಂತನೆಗಳುಳ್ಳ ಆಂಧ್ರ, ಕೇರಳ, ಬಂಗಾಳ ಮುಂತಾದ ಪ್ರದೇಶಗಳಲ್ಲಿ ಹೆಚ್ಚಾಗಿ ನಡೆದವು) ಇಂತ ಹೋರಾಟಗಳು ಸ್ವತಂತ್ರ್ಯ ನಂತರದ ಭಾರತದಲ್ಲಿ ಭೂಮಿ ರಾಷ್ಟ್ರೀಕರಣಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿವೆ. ಆದರೆ ಅದರ ಸಫಲತೆ ವಿಫಲತೆ ಬೇರೆ.

ರಕ್ತತರ್ಪಣ

ವಸಾಹತುಶಾಹಿಯ ಭಾಗವಾಗಿ ಬಂದ ಬ್ರಿಟಿಶ್ ಶಿಕ್ಷಣವು ಭಾರತೀಯರಿಗೆ ರಾಷ್ಟ್ರೀಯತೆ, ಸ್ವಾತಂತ್ರ್ಯದಂತ ಚಿಂತನೆಗಳನ್ನು ಕಲಿಸಿದ್ದು ವಿಪರ್ಯಾಸವೆ. ತರಾಸು ಅವರ ರಕ್ತತರ್ಪಣ ಕಾದಂಬರಿ ಸ್ವಾತಂತ್ರ್ಯದ ಬಗ್ಗೆ ಅರಿವೇ ಇಲ್ಲದ ಕುಗ್ರಾಮಗಳಲ್ಲಿ ಇಂಗ್ಲಿಶ್ ಶಿಕ್ಷಣ ಪಡೆದ ವಿದ್ಯಾವಂತರು, ಸ್ವಾತಂತ್ರ್ಯದ ಅವಶ್ಯಕತೆ ಕುರಿತು ಜಾಗೃತಿ ಮೂಡಿಸುತ್ತಿದ್ದ ಘಟನೆಗಳನ್ನು ಕುರಿತದ್ದಾಗಿದೆ. ಸೋಮಲಾಪುರ ಎಂಬ ಹಳ್ಳಿಯಲ್ಲಿ ಚಂದ್ರಶೇಖರನೆಂಬ ಯುವ ಸರಕಾರಿ ನೌಕರನು, ಹಳ್ಳಿಯ ಜನರಿಗೆ ಭಾರತದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಚಿತ್ರಣಗಳನ್ನು ವಿವರಿಸುವ ಮೂಲಕ ದೇಶದ ಬಿಡುಗಡೆಗಾಗಿ ದೇಶಾದ್ಯಂತ ಹಳ್ಳಿಯ ಸಾಮಾನ್ಯ ಜನರನ್ನು, ಅಣಿಗೊಳಿಸುವ ಕಾರ್ಯದಲ್ಲಿ ತೊಡಗಿರುವ ಹಲವಾರು ಯುವ ಹೋರಾಟಗಾರರ ಆತ್ಮಕತೆಯನ್ನು ಈ ಕಾದಂಬರಿ ಬಿಚ್ಚಿಡುವ ಪ್ರಯತ್ನ ಮಾಡಿದೆ. ಹೋರಾಟಗಾರರ ಬೆನ್ನೆಲುಬಾಗಿ ದುಡಿದು ಮಡಿದ ಭಾರತೀಯ ಹೆಣ್ಣುಮಕ್ಕಳ ಕಥೆಗಳನ್ನು ನೆನಪಿಸುತ್ತದೆ. ಅಂದಿನ ಸಂದರ್ಭದಲ್ಲಿ ಒಂದೊಂದು ಹಳ್ಳಿಯೂ ಸ್ವಾತಂತ್ರ ಚಳುವಳಿಯ ಕೇಂದ್ರಗಳಾಗಿರುವುದನ್ನು ನೆನಪಿಸಿಕೊಳ್ಳಬಹುದು. ಏಸೂರು ಕೊಟ್ಟರು ಈಸೂರು ಬಿಡೆವು ಎಂಬ ಶಿವಮೊಗ್ಗ ಜಿಲ್ಲೆಯ ಈಸೂರಿನ ಜನರ ಕ್ರಾಂತಿಕಾರಿ ಮಾತುಗಳು ಹಳ್ಳಿಗಳಲ್ಲಿ ಬಲಗೊಂಡು, ಸ್ವಾತಂತ್ರ ಚಳುವಳಿಯ ಕಿಡಿಯನ್ನು ಮತ್ತಷ್ಟು ಬಲಗೊಳಿಸುತ್ತಿದ್ದವು. ಚಂದ್ರಶೇಖರನ ಮಾತಿನ ಕಡೆಗೆ ಸೊಮಲಾಪುರದಲ್ಲಿ ಒಂದು ಯುವಪಡೆ ನಿರ್ಮಾಣಗೊಂಡು 'ನಾವು ನಮ್ಮ ದೇಶಕ್ಕೊಸ್ಕರ ಪ್ರಾಣ ಕೊಡಲಿಕ್ಕು

ತಯಾರು. ಏನ್ ಬಂದ್ರು ಮೋಸಮಾಡಾಕಿಲ್ಲ' ಎಂಬ ದೇಶ ಪ್ರೇಮದ ಮಾತುಗಳನ್ನು ಈ ಕಾದಂಬರಿ ಮತ್ತೆ ಮತ್ತೆ ನೆನಪಿಸುತ್ತದೆ.

ಪ್ರತಿಸರಕಾರ

ವಸಾಹತುಶಾಹಿ ಆಡಳಿತದಿಂದ ಹೊಸದಾಗಿ ಆರಂಭಗೊಂಡಿದ್ದ ಜಮಿನ್ದಾರಿ ವ್ಯವಸ್ಥೆಯ ವಿರುದ್ಧ ಹೋರಾಟಕ್ಕಿಳಿಯುವ ಘಟನೆಗಳು ಪರೋಕ್ಷವಾಗಿ ಬ್ರಿಟಿಶ್ ವ್ಯವಸ್ಥೆಯ ವಿರುದ್ಧ ಹೋರಾಟಗಳೇ ಆಗಿದ್ದವು. ವಿಪರ್ಯಾಸವೆಂದರೆ, ಜಮಿನ್ದಾರಿ ಮಕ್ಕಳೆ ಇಂತ ಹೋರಾಟಗಳಿಗೆ ಮುಂದಾಳತ್ವ ವಹಿಸಿ ದೇಶ ಬಿಡುಗಡೆಗಾಗಿ ಹೋರಾಟಕ್ಕಿಳಿದ ಸನ್ನಿವೇಶಗಳು ಕಡಿಮೆ. ಮಿರ್ಜಿ ಅಣ್ಣಾರಾಯರ ಪ್ರತಿಸರಕಾರ ಕಾದಂಬರಿ ಇಂತಹ ಸನ್ನಿವೇಶಗಳ ಮೂಲಕ ಭಾರತಿಯ ಪ್ರಬಲ ವರ್ಗಗಳು(ಜಮೀನ್ದಾರಿ) ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮದೆ ಆದ ಕೊಡುಗೆಯನ್ನು ನೀಡಿರುವವರನ್ನು ಜಮೀನ್ದಾರನ ಮಗನಾದ ಬಾಬಾ ಸಾಹೇಬನ ಮೂಲಕ ಕಟ್ಟಿಕೊಟ್ಟಿದೆ. ಕ್ವಿಟ್ ಇಂಡಿಯಾ ಚಳುವಳಿಯ ನಂತರ ಸತಾರ ಜಿಲ್ಲೆಯಲ್ಲಿ ನಡೆದ ಚಳುವಳಿಯೆ ಈ ಕಾದಂಬರಿಯ ವಸ್ತು. ಈ ಜಿಲ್ಲೆಯ ಜನ ಸುತ್ತಮುತ್ತಲಿನ ಪ್ರದೇಶಗಳೊಂದಿಗೆ ಬ್ರಿಟಿಶ್ ಸರಕಾರದ ವಿರುದ್ಧ ಪ್ರತಿಕಾರವನ್ನು ಸ್ಥಾಪಿಸಿ ಆಡಳಿತ ನಡೆಸುತ್ತಿದ್ದರು. ಪ್ರತಿಸರಕಾರವೆಂಬದು ೧೯೪೨ರ ಚಳುವಳಿಯಲ್ಲಿ ಭಾಗವಹಿಸಿದ ಸಂಘಟಿತ ಜನರ ಗುಂಪು ಇದರ ಕಾರ್ಯಕರ್ತರೆ ಪ್ರತಿಸರಕಾರದ ಶಕ್ತಿಗಳಾಗಿದ್ದರು. ಪ್ರತಿಸರಕಾರದ ಸ್ವರೂಪವನ್ನು ತಾವೆ ನಿರ್ವಹಿಸಿಕೊಳ್ಳುತ್ತಿದ್ದರು. ಊರಿನ ಸಾಮಾನ್ಯ ಜನರು. ಮುಖ್ಯವಾಗಿ ಜಮೀನ್ದಾರರ ಮಕ್ಕಳು ಪ್ರತಿಸರಕಾರದ ಕಾರ್ಯಕರ್ತರಾಗಿದ್ದರು.

ಕನಸು–ನನಸು

ಭಾರತದ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ನಡೆದ ಹಲವಾರು ಹೋರಾಟಗಳಲ್ಲಿ ಕರಾನಿರಾಕರಣೆ ಚಳುವಳಿ ಪ್ರಮುಖವಾದದ್ದು. ೧೯೩೦ರಲ್ಲಿ ಗಾಂಧೀಜಿಯವರ ಭಾರತದಾದ್ಯಂತ ಈ ಚಳುವಳಿಗೆ ಕರೆ ನೀಡುತ್ತಾರೆ. ಹಳ್ಳಿಯ ಸಾಮಾನ್ಯ ಜನ, ವಿದ್ಯಾರ್ಥಿಗಳು ಈ ಚಳುವಳಿಗೆ ಅಪಾರ ಸಂಖ್ಯೆಯಲ್ಲಿ ಸೇರುತ್ತಿದ್ದರು. ಭೂಗತರಾಗಿಯು ಚಳುವಳಿಯನ್ನು ಕಟ್ಟಿದವರಿದ್ದಾರೆ. ಕಾರವಾರ ಜಿಲ್ಲೆ, ಶಿರಸಿ, ಸಿದ್ದಾಪುರ, ಅಂಕೋಲ ಈ ಪ್ರದೇಶಗಳಲ್ಲಿ ಕರಾನಿರಾಕರಣೆ ಚಳುವಳಿ ಗಂಭೀರವಾಗಿ ನಡೆಯುತ್ತಿತ್ತು. ಇಂತ ಸನ್ನಿವೇಶಗಳನ್ನ ಈ ಕಾದಂಬರಿ ಕಟ್ಟಿಕೊಡುತ್ತದೆ.

ಮಗಳ ಮದುವೆ

ಸ್ವಾತಂತ್ರ್ಯ ಪೂರ್ವದ ಕನ್ನಡ ಸಾಹಿತ್ಯವು ಗಾಂಧಿ ಪ್ರಭಾವಕ್ಕೆ ಹೊರತಾದದ್ದಲ್ಲ. ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಗಾಂಧೀಜಿ ಕೈಗೊಂಡ ಅನೇಕ ಚಳುವಳಿಗಳು ಕನ್ನಡ

ಸಾಹಿತ್ಯಕ್ಕೆ ವಸ್ತುಗಳಾಗಿವೆ. ೧೯೩೦ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ ಚಳುವಳಿ ಬೆಟಗೇರಿ ಕೃಷ್ಣಶರ್ಮರ ಮಗಳ ಮದುವೆ ಕಾದಂಬರಿಯ ವಸ್ತು. ಇಂತ ಚಳುವಳಿಗಳು ಭಾರತದ ಸ್ವಾತಂತ್ರ್ಯಕ್ಕಾಗಿ ಭಾರತದ ಜನರ ಆತ್ಮಸ್ಥೈರ್ಯ ತುಂಬುವಲ್ಲಿ ಶ್ರಮಿಸಿರುವುದನ್ನು ಈ ಕಾದಂಬರಿ ನಿರೂಪಿಸುತ್ತದೆ. ಹಳ್ಳಿಗಳೆ ಚಳುವಳಿಯ ಕೇಂದ್ರಗಳಾಗಿದ್ದವು. ಅವರೆ ಸ್ವಯಂ ಸೇವಕರಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಮನೆಯನ್ನು ಲೆಕ್ಕಿಸದೆ ಚಳುವಳಿಯಲ್ಲಿ ಧುಮುಕಿದ ಸಂದರ್ಭವನ್ನು ಚಿತ್ರಿಸುತ್ತದೆ. ಯುವಕರೆ ಈ ಕಾದಂಬರಿಯ ನಾಯಕರು. ಗಾಂಧೀಜಿಯವರ ಗ್ರಾಮೋದ್ಧಾರದಂತಹ ಕಾರ್ಯಕ್ರಮಗಳನ್ನು ಶಿಕ್ಷಣ ಪಡೆದ ಯುವಕರು ತಮ್ಮ ತಮ್ಮ ಹಳ್ಳಿಗಳಲ್ಲಿ ಕಾರ್ಯರೂಪಕ್ಕೆ ತಂದು ಹಳ್ಳಿಗಳು ಸ್ವಾವಲಂಬನೆಯಿಂದ ಬದುಕಲು ನೆರವಾಗುತ್ತಾರೆ. ಇಂತ ಚಲನೆಗಳನ್ನು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿಯೆ ನೋಡಬೇಕು. ಶಿಕ್ಷಣ ಪಡೆದ ರಂಗಣ್ಣನಂತ ಯುವಕರ ಮೂಲಕ ಚಳುವಳಿಗೆ ತೆರೆದುಕೊಂಡ ಹಳ್ಳಿಗಳಲ್ಲಿ ಚಳುವಳಿಗಳ ಬಗ್ಗೆ ಇದ್ದ ದ್ವಂದ್ವಗಳನ್ನು ಜೊತೆಗೆ ಉಪ್ಪಿನ ಸತ್ಯಾಗ್ರಹ ಚಳುವಳಿ ಸಂದರ್ಭದ ಉತ್ತರ ಕರ್ನಾಟಕದ ಜನ ಜೀವನವನ್ನು ಕಾದಂಬರಿ ಕಟ್ಟಿಕೊಟ್ಟಿದೆ.

ಆಂದೋಲನ

ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಪ್ರಮುಖವಾದದ್ದು. ಈ ಸಂದರ್ಭಕ್ಕಾಗಲೆ ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದ ಸ್ವಾತಂತ್ರ್ಯ ಹೋರಾಟ ಗಾಂಧೀಜಿ ನಾಯಕತ್ವ ಅಹಿಂಸೆಯಿಂದಲೇ ಆರಂಭಗೊಂಡಿದ್ದರೂ ೧೯೪೨ರಲ್ಲಿ "ಮಾಡು ಇಲ್ಲವೆ ಮಡಿ" ಎಂಬ ಭಾವನಾತ್ಮಕ/ಅವಶ್ಯಕತೆಯ ಅಂಶಗಳು ಉಗ್ರ ಸ್ವಾತಂತ್ರ್ಯ ಹೋರಾಟಗಾರರಿಂದ ಹಿಂಸೆಗೆ ತಿರುಗಿ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದ ಬ್ರಿಟಿಶ್ ಸರಕಾರದ ದಮನಕಾರಿ ನೀತಿಗಳಿಗೆ ಹೋರಾಟಗಾರರು, ವಿದ್ಯಾರ್ಥಿಗಳು ಬಲಿಯಾದರು. ಪ್ರಸ್ತುತ ವಸುದೇವ ಭೂಪಾಲನಂ ಅವರ 'ಆಂದೋಲನ' ಕಾದಂಬರಿಯು ೧೯೪೨ರ ಚಳುವಳಿಯಲ್ಲಿ ಭಾಗವಹಿಸಿ ಬ್ರಿಟಿಶರ ಕ್ರೂರತೆಗೆ ಬಲಿಯಾದ ವಿದ್ಯಾರ್ಥಿ ಬದುಕಿನ ಕಥನವಾಗಿದೆ. ಲೇಖಕರು ಸ್ವತಃ ಚಳುವಳಿಯಲ್ಲಿ ಭಾಗವಹಿಸಿದವರು, ಬ್ರಿಟಿಶರು ಮದ್ದುಗುಂಡುಗಳ ತಯಾರಿಕೆಗಾಗಿ ಸಲ್ಫೂರಿಕ್ ಆಸಿಡ್‌ನ್ನು ಶ್ರವಣಬೆಳಗೊಳದಿಂದ ತರಿಸಿಕೊಳ್ಳುತ್ತಿದ್ದರು. ಈ ವಿಷಯ ತಿಳಿದ ವಿದ್ಯಾರ್ಥಿಗಳು ಶ್ರೀರಂಗಪಟ್ಟಣದ ಬಳಿ ಇರುವ ಕಾವೇರಿ ಸೇತುವೆಯನ್ನು ಸ್ಫೋಟಿಸಲು ಕೈಗೊಂಡ ಕ್ರಮಗಳು ಬ್ರಿಟಿಶ್ ಪೋಲೀಸರಿಂದ ಸ್ಥಗಿತಗೊಳ್ಳುತ್ತದೆ. ವಿದ್ಯಾರ್ಥಿ ನಾಯಕರಾದ ವೀರೇಂದ್ರನು ಮೈಸೂರು ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಚಳುವಳಿಗಾಗಿ ಮುಖ್ಯವಾಗಿ ವಿದ್ಯಾರ್ಥಿಗಳ ಕುರಿತು ಸಭೆ ಸಮಾರಂಭಗಳನ್ನು ಏರ್ಪಡಿಸಿ ಚಳುವಳಿಯತ್ತ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದರು. "ಒಬ್ಬೊಬ್ಬ ವಿದ್ಯಾರ್ಥಿಯು ಒಬ್ಬೊಬ್ಬ ಯೋಧನಾಗಬೇಕು" ಎನ್ನುತ್ತಿದ್ದ(ವಸುದೇವ ಭೂಪಾಲನಂ ಅವರ ಆಂದೋಲನ).

ಸ್ವಾತಂತ್ರದೆಡೆಗೆ

ಪ್ರಗತಿಶೀಲ ಸಂದರ್ಭದಲ್ಲಿ ಬಂದ ಬಸವರಾಜ ಕಟ್ಟಿಮನಿ ಅವರ ಈ ಕಾದಂಬರಿಯು ಗಾಂಧಿ ಅವರ ಸ್ವರಾಜ್ಯ ಕಲ್ಪನೆಯ ಮೂಲಕ ಬ್ರಿಟಿಶ್ ಸಾಮ್ರಾಜ್ಯವಾದವನ್ನು ವಿರೋಧಿಸುವ, ಪ್ರತಿಭಟಿಸುವ ನೆಲೆಯಲ್ಲಿ ವ್ಯಕ್ತಗೊಂಡಿದೆ. ಕಮ್ಯೂನಿಸ್ಟ್ ಮಾದರಿಯ ಹೋರಾಟದ ಚಿಂತನೆಗಳನ್ನು ಒಳಗೊಂಡಿದೆ. ಶೇಖರ ಎಂಬ ವಿದ್ಯಾರ್ಥಿ ದೇಶಪ್ರೇಮವನ್ನು ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಇನ್ನು ಮುಂತಾದ ಐತಿಹಾಸಿಕ ವ್ಯಕ್ತಿಗಳ ಹೋರಾಟದ ಮುಂದುವರೆದ ಭಾಗದಂತೆ ಭಾವಿಸಿದೆ. ರಾಜಕೀಯ ಸ್ವಾತಂತ್ರ್ಯದ ಮೂಲಕ ಸಾಮಾಜಿಕ ಸ್ವಾತಂತ್ರ್ಯದ ಹೋರಾಟಕ್ಕೆ ಧುಮುಕುವ ಪ್ರಕ್ರಿಯೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು. ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳು ಎಷ್ಟು ಮುಖ್ಯ ಎಂಬುದನ್ನು ಹಾಗೂ ಈ ಎರಡು ನೆಲೆಯಲ್ಲಿ ಕಾದಂಬರಿ ಭಾರತೀಯ ಸ್ವಾತಂತ್ರ್ಯ ಚಳುವಳಿಯನ್ನು ಕಟ್ಟಿಕೊಟ್ಟಿದೆ.

ಇಂದಿರಾಬಾಯಿ

ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಕಾದಂಬರಿಯು ಸುಧಾರಣಾವಾದಿ ನೆಲೆಯಲ್ಲಿ ರಚನೆಗೊಂಡಿದೆ. ಬಂಗಾಲಿಯ ಶರಶ್ಚಂದ್ರ ಚಟರ್ಜಿಯವರ ಶೇಷ ಕಾದಂಬರಿಯು ಕಮತಿಯ ಮೂಲಕ ನಿರೂಪಿಸುವ ವಿಧವಾ ವಿವಾಹ ಸಮಸ್ಯೆಯಂತ ವಸ್ತುವನ್ನು ಗುಲ್ವಾಡಿಯವರ ಈ ಕಾದಂಬರಿಯು ಒಳಗೊಂಡಿದೆ. ಆದರೆ ಸಮಾಜ ಸುಧಾರಣಾ ಅಂಶಗಳು ಕರ್ನಾಟಕದಲ್ಲಿ ಬಂಗಾಳದಷ್ಟು ಬಲಗೊಂಡಿದ್ದಿಲ್ಲ. ಆದರೂ ಸಂಪ್ರದಾಯದ ಪರಂಪರೆಗೆ ಸೇರಿದ ವ್ಯಕ್ತಿಗಳಿಂದ ದಾರಿ ತಪ್ಪುವ ಇಂದಿರಾಬಾಯಿಯಂತೆ ಮಹಿಳೆಯರು ಆಧುನಿಕ ಶಿಕ್ಷಣ ಪಡೆದು ತಾನೂ ಹೆಣ್ಣು ಸಮಾಜದ ಮುಖ್ಯ ಭಾಗವಾಗಿ ನಿಲ್ಲಬೇಕೆಂಬ ಅಂಶಗಳನ್ನು ಈ ಕಾದಂಬರಿ ಮೂರ್ತವಾಗಿ ಪ್ರತಿಪಾದಿಸಿದೆ. ಸ್ವಾತಂತ್ರ್ಯದ ಸಂದರ್ಭದಲ್ಲಿ ಶಿಕ್ಷಣದ ಉತ್ಪನ್ನವಾಗಿ ಕಂಡುಬರುತ್ತದೆ.

ಚೋಮನದುಡಿ

ಶಿವರಾಮ ಕಾರಂತರ ಈ ಕಾದಂಬರಿ ಕರಾವಳಿ ಕರ್ನಾಟಕ ಭಾಗದಲ್ಲಿ ವಸಾಹತುಶಾಹಿಯ ಆರ್ಥಿಕ ವ್ಯವಸ್ಥೆಯ ಭಾಗವಾಗಿ ಸ್ಥಾಪನೆಗೊಂಡ ಕಾಫಿ ತೋಟಗಳ ಕೂಲಿ ಕಾರ್ಮಿಕರ ಸ್ಥಿತಿಗತಿ, ಅಸ್ಪೃಶ್ಯತೆ, ಮತಾಂತರ ಭೂಮಿಯ ಪ್ರಶ್ನೆ ಜಮೀನ್ದಾರಿ ವ್ಯವಸ್ಥೆ ಇವೆ ಮುಂತಾದ ಅಂಶಗಳನ್ನು ಒಳಗೊಂಡಿದೆ. ಆದರೆ ಭೂಮಿಯ ಪ್ರಶ್ನೆಯ ಈ ಕಾದಂಬರಿಯ ಜೀವಾಳವಾಗಿದೆ. ೧೯೩೧-೩೨ರಲ್ಲಿ ನಡೆದ ದುಂಡುಮೇಜಿನ ಸಭೆಗಳ ನಂತರ ಆರು ವರ್ಷಗಳ ತರುವಾಯ ರಚನೆಗೊಂಡ ಈ ಕಾದಂಬರಿಯು ಅಂಬೇಡ್ಕರ್ ಅವರ 'ದಲಿತ ಉದ್ಧಾರ'ದಂತ ನೀತಿಗಳ ಪ್ರಭಾವವನ್ನು ಈ ಕಾದಂಬರಿ ಒಳಗೊಂಡಿದೆ.

ಇದು ಸಮಾಜದ ಕೊನೆಯ ವ್ಯಕ್ತಿಯು ಪರಭಾವಿಸುವ ಸ್ವಾತಂತ್ರ್ಯ ಎಂದು ನೋಡಿದರೆ, ಸ್ವಾತಂತ್ರ್ಯ ಚಳುವಳಿಯ ಉದ್ದೇಶ ಏನಾಗಿತ್ತು ಎಂಬುದು ಮನಗಾಣಲು ಸಾಧ್ಯ. ಇದೇ ಸಂದರ್ಭದಲ್ಲಿ ಭೂಮಿಗಾಗಿ ತೆಲಂಗಾಣದಲ್ಲಿ ನಡೆದ ರೈತರ ಹೋರಾಟದ ಚರಿತ್ರೆಯನ್ನು ಗಮನಿಸಿದರೆ ಈ ಕಾದಂಬರಿಯು ಒಳಗೊಂಡ ಅಂಶಗಳು ಏನು ಎಂಬುದು ಗೊತ್ತಾಗುತ್ತದೆ. ಹಾಗೆ ಭೂಮಿಯು ಯಾರಿಗೆ ಸೇರಿದ್ದು ಎಂಬ ಪ್ರಶ್ನೆಯ ಮೂಲಕ ಅಂದಿನ ಸಂದರ್ಭದ ದ್ವಂದ್ವಗಳನ್ನು ಕೂಡ ಈ ಕಾದಂಬರಿ ತಿಳಿಸುತ್ತದೆ.

ಪುರುಷಾರ್ಥ

ಶ್ರೀರಂಗರ ಪುರುಷಾರ್ಥ ಕಾದಂಬರಿಯು ಅನಂತ, ಮಾಧವರ ಮೂಲಕ ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸುವಿಕೆ ಕುರಿತು ಇರುವ ದ್ವಂದ್ವಗಳಿಂದ ಆರಂಭಗೊಳ್ಳುತ್ತದೆ. ಮುಂದೆ ಈ ಚಳುವಳಿಯಲ್ಲಿ ಭಾಗವಹಿಸುವ ಮಾಧವನ ಅಲೆದಾಟ, ಅವನ ಚಳುವಳಿಯ ಸ್ವರೂಪದ ಸ್ವದೇಶಿ ಚಳುವಳಿ ಮೂಲಕ ಸ್ವಾತಂತ್ರ್ಯ ಚಳುವಳಿಯ ತೀವ್ರತೆ ಸ್ವರೂಪದ ಜೊತೆಗೆ ವಿದ್ಯಾರ್ಥಿಯಾಗಿದ್ದಾಗ ಮಾಧವನಿಗೆ. ಇತಿಹಾಸ ತಿಳಿಸದೇ ಇದ್ದ ಭಾರತದ ಇನ್ನೊಂದು ಚಿತ್ರಣ ಮನವರಿಕೆಯಾಗುತ್ತದೆ. ಮತ್ತು ಗಾಂಧಿ ತತ್ವದ ಮೂಲಕ ಭಾರತ ಸ್ವತಂತ್ರಗೊಳ್ಳುತ್ತದೆ ಎಂಬುದನ್ನು ಕಾದಂಬರಿ ಹಮ್ಮುವಿನಿಂದ ಹೇಳುತ್ತದೆ.

ಅಮರ್ ಅಗಸ್ಟ್

ಅನಕೃ ಅವರ ಈ ಕಾದಂಬರಿ ನಂದಿಗ್ರಾಮ ಎಂಬ ಹಳ್ಳಿಯಲ್ಲಿ ೧೯೪೨ರಲ್ಲಿ 'ಮಾಡು ಇಲ್ಲವೇ ಮಡಿ' ಎಂಬ ಚಳುವಳಿ ಆರಂಭವಾದ ನಂತರ ಆ ಗ್ರಾಮದಲ್ಲಾದ ಸ್ಥಿತಿಗಳ ಕುರಿತು ಚಿತ್ರಿಸುತ್ತದೆ. ಹಾಗೇ ಅಂದಿನ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಹಿಂದೂ-ಮುಸ್ಲಿಮರ ಐಕ್ಯತೆ ಎಷ್ಟು ಪ್ರಮುಖವಾಗಿತ್ತು ಎಂಬ ಅಂಶವು ಇಂದಿಗೂ ಪ್ರಸ್ತುತವೇ ಆಗಿದೆ. ಗಾಂಧೀಜಿಯವರ ಅಹಿಂಸೆ ಮತ್ತು ಅಸಹಕಾರ ತತ್ವಗಳು ಸ್ವಾತಂತ್ರ್ಯ ಚಳುವಳಿಗೆ ಪೂರಕವೇ ಎಂಬ ಅಂಶಗಳು ಹಳ್ಳಿಯಲ್ಲಿ ಚರ್ಚೆಗೆ ಒಳಗಾಗಿದ್ದನ್ನು ಕಾದಂಬರಿ ಉಲ್ಲೇಖಿಸಿದೆ. ಗಾಂಧೀ ವಿಚಾರದ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಬ್ರಿಟಿಶರಿಂದ ನಮಗೆ ಸ್ವತಂತ್ರ್ಯ ಎಷ್ಟು ಮುಖ್ಯ ಎಂಬುದನ್ನು ಮಾನಪ್ಪ ಮತ್ತು ಪುಟ್ಟಸ್ವಾಮಿ ಮೂಲಕ ನೋಡಬಹುದು. ಹಾಗೆ ಗಾಂಧೀ ಅವರ ಹರಿಜನೋದ್ಧಾರ ಹಾಗೆ ಅಧುನಿಕ ಶಿಕ್ಷಣಕ್ಕೆ ಹಳ್ಳಿಗಳು ನೀಡಿದ ಮಹತ್ವವನ್ನು ಕಾದಂಬರಿ ಚಿತ್ರಿಸಿದೆ.

ಶೇಷ ಪ್ರಶ್ನೆ

ಇದು ಬಂಗಾಲಿಯ ಪ್ರಮುಖ ಕಾದಂಬರಿಕಾರರಲ್ಲೊಬ್ಬರಾದ ಶರಶ್ಚಂದ್ರ ಚಟರ್ಜಿ ಅವರ ಅನುವಾದಿತ ಕಾದಂಬರಿ ಕನ್ನಡದಲ್ಲಿ ಗುಲ್ವಾಡಿ ವೆಂಕಟರಾವ್ ಅವರ

ಇಂದಿರಾಬಾಯಿಯು ಇದರ ಮುಂದುವರೆದ ಭಾಗ ಎಂದರೆ ತಪ್ಪಾಗಲಾರದು. ಇದೊಂದು ಸಾಮಾಜಿಕ ಸುಧಾರಣಾವಾದಿ ಅಂಶವುಳ್ಳ ಕಾದಂಬರಿ ಸುಧಾರಣಾ ಅಂಶಗಳು ರಾಷ್ಟ್ರೀಯತೆಯ ಕೊಡುಗೆಗಳೇ. ಯಾಕೆ ಅನುವಾದ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ ಎಂದರೆ ಕನ್ನಡ ಪರಿಸರಕ್ಕೆ ಹಲವಾರು ಚಿಂತನೆಗಳು ಎರವಲಾಗಿ ಬಂದಿವೆ. ಅದರಲ್ಲಿ ಬಂಗಾಲದಿಂದ ಬಂದ ಸುಧಾರಣಾವಾದ ಅಂಶಗಳು ಸ್ವಾತಂತ್ರ್ಯ ಚಳುವಳಿಯನ್ನು ರಾಜಕೀಯ ಆಯಾಮದ ಜೊತೆಗೆ ಸಾಮಾಜಿಕ ಆಯಾಮದಿಂದಲೂ ನೋಡುವ ಒಳವುಗಳನ್ನು ಕನ್ನಡ ಸಾಹಿತ್ಯಕ್ಕೆ ಒದಗಿಸಿವೆ. ಹಾಗಾಗಿ ಪ್ರಗತಿಶೀಲ ಸಂದರ್ಭದಲ್ಲಿ ಇಂಥ ವಸ್ತುಗಳನ್ನೊಳಗೊಂಡ ಕಾದಂಬರಿಗಳು ಸ್ವತಂತ್ರ ಅನುವಾದಿತ ರೂಪದಲ್ಲಿ ಕಂಡುಬರುತ್ತದೆ.

ಮುಖ್ಯವಾಗಿ ಈ ಕಾದಂಬರಿಯನ್ನು ಹೊಸತು ಹಳತುಗಳ ನಡುವಿನ ತಿಕ್ಕಾಟವಾಗಿ ನೋಡಬಹುದು. (ಅಧುನಿಕ–ಪರಂಪರೆ) ಇಲ್ಲಿ ಕಮಲಿಯ ಮೂಲಕ ಭಾರತೀಯ ಪರಂಪರೆ ಮತ್ತು ಅಧುನಿಕತೆ ಚರ್ಚೆಗೆ ಒಳಪಟ್ಟಿದೆ. ವಿದ್ಯಾವಂತೆಯಾದ ಕಮಲೆಯು ಸಂಪ್ರದಾಯದ ವಿರುದ್ಧ ಸಿಡಿದೆದ್ದು. ಮರುವಿವಾಹವಾಗುತ್ತಾಳೆ. ಇನ್ನೊಂದು ಕಡೆ ಆಶು ಬಾಬುಗಳು ತಮ್ಮ ಪತ್ನಿ ತೀರಿಕೊಂಡ ನಂತರ ಮರುವಿವಾಹವಾಗದೇ ಅದು ಆದರ್ಶ ಪ್ರೇಮ ಎಂದು ಹೇಳುತ್ತಾಳೆ. ಆದರೆ ಕಮಲೆಯು ಅದನ್ನು ಅದೊಂದು ರೀತಿ ಮಾನಸಿಕ ಮುಪ್ಪೆಂದು ಹೇಳುತ್ತಾಳೆ. ಇದೊಂದು ರೀತಿ ವ್ಯಕ್ತಿ ಸ್ವಾತಂತ್ರ್ಯದ ಹರಣ ಎಂದು ಹೇಳಬಹುದು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬಂಗಾಳದಲ್ಲಿ ಸುಧಾರಣಾವಾದಿ ಸ್ವಾತಂತ್ರ್ಯದ ಬದ್ಧತೆಯನ್ನು ನೆನಪಿಸಿವೆ. ಹಾಗಾಗಿ ಸಾಮಾಜಿಕ ಸ್ವಾತಂತ್ರ್ಯದ ಕೊಡುಗೆಯಲ್ಲಿ ಬಂಗಾಲದ ಪಾತ್ರ ಮುಖ್ಯ.

ಹತ್ತೊಂಬತ್ತನೆ ಶತಮಾನದಲ್ಲಿ ನಡೆದ ಸಾಂಸ್ಕೃತಿಕ ಪಲ್ಲಟಗಳಿಂದ ಜಗತ್ತಿನ ಸಾಹಿತ್ಯ ತನಗೆ ಕವಿದ ವಿಸ್ಮೃತಿಯ ಪರದೆಉನ್ನು ಕಳಚಿ ಸಾಹಿತ್ಯದಿಂದ ದೂರ ಸರಿದ ವಿಚಾರಗಳನ್ನು ತನ್ನ ಮೂಲಕ ಅಭಿವ್ಯಕ್ತಪಡಿಸಲು ಆರಂಭಿಸಿತು. ಕನ್ನಡದಲ್ಲಿ ಮುಖ್ಯವಾಗಿ ನಾಟಕ ಸಾಹಿತ್ಯವು ತನಗೆ ಕವಿದ ವಿಸ್ಮೃತಿಯ ಪರದೆಯನ್ನು ಕಳಚಿಗೊಂಡು ಸ್ವಾತಂತ್ರ್ಯ ಚಳುವಳಿಯಂತ ಘಟನೆಯನ್ನು ಯಾವಯಾವ ನೆಲೆಗಳಲ್ಲಿ ನಿರ್ವಚಿಸಿಕೊಂಡಿದೆ ಎಂಬ ಅಂಶಗಳನ್ನು ಈ ಅಧ್ಯಾಯದಲ್ಲಿ ಗ್ರಹಿಸಲಾಗಿದೆ.

* * *

ಅಧ್ಯಾಯ : ನಾಲ್ಕು

ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಅಭಿವ್ಯಕ್ತಿಯ ಸ್ವರೂಪ

೪.೧. ವ್ಯಕ್ತಿ ಕೇಂದ್ರಿತ ನೆಲೆ

೪.೨. ವಸ್ತು ಕೇಂದ್ರಿತ ನೆಲೆ

೪.೩. ಚಳುವಳಿ ಕೇಂದ್ರಿತ ನೆಲೆ

೪.೩.೧. ಸಾಮಾಜಿಕ ಚಳುವಳಿ

೪.೩.೨. ಏಕೀಕರಣ ಚಳುವಳಿ

ಅಧ್ಯಾಯ : ನಾಲ್ಕು

ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಅಭಿವ್ಯಕ್ತಿಯ ಸ್ವರೂಪ

ಆದಿಮ ಸಂಸ್ಕೃತಿಯಿಂದ, ಆಧುನಿಕ ಸಂಸ್ಕೃತಿಯ ಕಡೆಗೆ ಪ್ರಯಾಣ ಬೆಳೆಸುವ ಸಂದರ್ಭದಲ್ಲಿಯೇ ಮಾನವ ತನ್ನ ಜೊತೆಜೊತೆಗೆ ಕಲೆ, ಕ್ರೀಡೆ, ಸಾಹಿತ್ಯ, ಸಂಗೀತಗಳನ್ನು ತನ್ನ ಜೀವನದ ಅವಿಭಾಜ್ಯ ಅಂಗಗಳನ್ನಾಗಿ ಮಾಡಿಕೊಂಡ್ದಾನೆ. ಮನರಂಜನೆಯ ವಿವಿಧ ಆಯಾಮಗಳನ್ನು ಒಳಗೊಂಡಿರುವ ವಿಶಿಷ್ಟ ಕಲೆಗಳಲಿ ನಾಟಕವು ಒಂದೆಂದು ಪರಿಗಣಿಸಬಹುದಾಗಿದೆ. ಇದಕ್ಕೆ ಮುಖ್ಯವಾಗಿ ಹಲವು ಆಯಾಮಗಳನ್ನು ಕಾಣಬಹುದಾಗಿದೆ. ನಾಟಕವು ಒಂದು ಕಥಾವಸ್ತುವನ್ನು ಒಳಗೊಂಡಿರುವದರಿಂದ ಸಾಹಿತ್ಯದ ಒಂದು ಭಾಗವಾಗಿಯೂ, ಎರಡನೆಯದು ಹಾಡುಗಳನ್ನು ಒಳಗೊಂಡಿರುವದರಿಂದ ಸಂಗೀತದ ಭಾಗವಾಗಿಯೂ, ನಾಲ್ಕನೆಯದಾಗಿ ಆಂಗಿಕ ಚಲನವಲನಗಳನ್ನು ಒಳಗೊಂಡಿರುವದರಿಂದ ಕ್ರೀಡೆಯ ಒಂದು ಭಾಗವಾಯೂ ನಾಟಕವು ರೂಪುಗೊಂಡಿದೆ. ಇಂಥ ಅಪೂರ್ವವಾದ ಒಂದು ಕಲಾಮಾಧ್ಯಮದ ಪ್ರಾಚೀನತೆಯನ್ನು ಕುರಿತು ಅನೇಕ ಚರ್ಚೆಗಳು, ವಾಗ್ವಾದಗಳು ನಡೆದಿವೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಾಟಕಗಳು ಇದ್ದವೇ.? ಇದ್ದರೆ ಅವು ಯಾವ ಸ್ವರೂಪದವು? ಪ್ರಾಚೀನ ಕನ್ನಡ ಸಾಹಿತ್ಯವು ಸಂಸ್ಕೃತದ ದಟ್ಟ ಪ್ರಭಾವದಿಂದ ಸಾಹಿತ್ಯ ರೂಪವನ್ನು ಯಾಕೆ ಪಡೆಯಲಿಲ್ಲ? ಅಥವಾ ಕನ್ನಡದಲ್ಲಿ ನಾಟಕಗಳ ರಚನೆಯ ಯಾವ ಕಾಲಘಟ್ಟದಲ್ಲಿ ನಡೆದಿದೆ? ನಾಟಕ ಎಂಬ ಪರಿಕಲ್ಪನೆ ರೂಪವಾದ ನಾಟಕ ಎಂಬ ಶಬ್ದದ ಉಲ್ಲೇಖ ಅನೇಕ ಕಾವ್ಯಗಳಲ್ಲಿ ದೊರೆಯತ್ತದೆ. ಆದರೆ ಸ್ವತಂತ್ರ ನಾಟಕ ಕೃತಿಗಳ ರಚನೆಗಳು ಇಪ್ಪತ್ತನೆಯ ಶತಮಾನದ ಆರಂಭದವರೆಗೂ ಏಕೆ ದೊರೆತಿಲ್ಲ? ಎಂಬ ಹಲವು ಪ್ರಶ್ನೆಗಳನ್ನು ಕನ್ನಡ ನಾಟಕ ಸಾಹಿತ್ಯದ ಇತಿಹಾಸದ ಹಿನ್ನಲೆಯಲ್ಲಿ ಹಲವಾರು ವಿದ್ವಾಂಸರು ತಮ್ಮ ಅಭಿಪ್ರಯಗಳನ್ನು ಈಗಾಗಲೆ ಅಭಿವ್ಯಕ್ತಪಡಿಸಿದ್ದಾರೆ.

ಕನ್ನಡ ಸಂದರ್ಭದಲ್ಲಿ, ಕನ್ನಡ ನಾಟಕ ಸಾಹಿತ್ಯವನ್ನು ಕುರಿತು ಚರ್ಚಿಸುವ ಸಂದರ್ಭದಲ್ಲಿ 'ನಾಟಕ' ಮತ್ತು 'ರಂಗಭೂಮಿ' ಎಂಬ ಎರಡು ಪರಿಕಲ್ಪನೆಗಳನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ನಾಟಕ ಎನ್ನುವ ಪದ ನಟ್ ಎನ್ನುವ ಧಾತುವಿನಿಂದ ಬಂದಿದೆ. ನಟಿಸುವುದು ಎಂಬುದು ಇದರರ್ಥ. ನಟಿಸಲು ಕಾರಣವಾಗುವ ಇಲ್ಲವೆ ಆಶ್ರಯವನ್ನು

ನೀಡುವ ಸಳ್ಥವನ್ನು ರಂಗ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ರಂಗ ಎಂಬುದು ಒಂದು ವೇದಿಕೆಯಾಗಿದೆ. ಹೀಗೆ ರಂಗಭೂಮಿ ಎಂದರೆ ನಾಟಕವನ್ನು ಆಡುವ ಸ್ಥಳ ಎಂಬುದು ಸಾಮಾನ್ಯವಾದ ಅರ್ಥವಾಗಿದೆ. ನಾಟಕ ಎನ್ನುವ ಪದ ಅರ್ಥಕ್ಕಿಂತ ರಂಗಭೂಮಿ ಎನ್ನುವ ಪದದ ಅರ್ಥವ್ಯಾಪ್ತಿ ವಿಶಾಲವಾದುದಾಗಿದೆ. ಏಕೆಂದರೆ ನಾಟಕವು ಕೇವಲ ಕಥಾವಸ್ತುವನ್ನೊಳಗೊಂಡ ಸಾಹಿತ್ಯ ರೂಪವಾಗಿರಬಹುದು. ಆದರೆ ರಂಗಭೂಮಿ ಆ ನಾಟಕದ ಎಲ್ಲ ಆಯಾಮಗಳಿಗೆ ಜೀವ ತುಂಬುವ ವೇದಿಕೆಯಾಗಿರುವುದರಿಂದ ನಾಟಕದ ಪರಿಕಲ್ಪನೆಗಿಂತ ಈ ನಿಟ್ಟಿನಲ್ಲಿ ಹಿರಿದಾಗಿದೆ. ನಾಟಕ ಮತ್ತು ರಂಗಭೂಮಿಗಳೆರಡು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಗ್ರಹಿಸುವುದು ಸರಿಯನ್ನಿಸುತ್ತದೆ. ಕನ್ನಡದಲ್ಲಿ ನಾಟಕದ ಪ್ರಾಚೀನತೆಯ ಹೆಜ್ಜೆಯನ್ನು ಗುರುಸಲಾಗಿದೆ. ಮತ್ತು ಭಾಗವಾಗಿ ಅಧ್ಯಯನಗಳು ನಡೆದಿವೆ. ಕನ್ನಡದ ಪ್ರಾಚೀನ ಕಾವ್ಯವಾದ ೧೦ನೆಯ ಶತಮಾನದ ರನ್ನನ ಅಜಿತನಾಥಪುರಾಣ ಕಾವ್ಯದಲ್ಲಿ ನಾಟಕದ ವಿವರಣೆಯನ್ನು ಗಮನಿಸಬಹುದು. ಪೊನ್ನನು ತನ್ನ ಶಾಂತಿಪುರಾಣದಲ್ಲಿ ಚಂದ್ರೋದಯವನ್ನು ನಾಟಕದ ಆರಂಭಕ್ಕೆ ಹೋಲಿಸಿ, ನಕ್ಷತ್ರಗಳು ಸೂತ್ರಧಾರ ಪೋಣಿಸಿದ ಪುಷ್ಪಗಳಿಂದು, ಸರಿದು ಹೋಗುತ್ತಿರುವ ಕತ್ತಲೆಯು ಮೇಲೇರುತ್ತಿರುವ ತೆರೆಯೆಂದೂ, ರಾತ್ರಿಯ ನಾಲ್ಕು ಪ್ರಹರಗಳು ನಾಟಕದ ನಾಲ್ಕು ಅಂಕಗಳೆಂದೂ ಮಾರ್ಮಿಕವಾಗಿ ಪ್ರತಿಪಾದಿಸಿದ್ದಾನೆ. ಪಂಪನ ಆದಿಪುರಾಣ ಕಾವ್ಯದ ನೀಲಾಂಜನೆಯ ನೃತ್ಯಪ್ರಸಂಗದಲ್ಲಿ ಈ ರೀತಿಯಾಗಿದೆ.

"ಕೋಟಿ ತೆರದಿಂದ ಮೆಸೆದೀ
ನಾಟಕಮನೆ ತೋರಿ ಮಾಣ್ದಳಿಲ್ಲಳ್ ಬಗೆಯೊಳ್
ನಾಟುವಿನಮಮರಿ ಸಂಸ್ಕೃತಿ
ನಾಟಕಮುಮನೆನಗೆ ನೆರೆಯ ತೋರಿದಳೀಗಳ್"

ಎಂಬ ಈ ಪದ್ಯದಲ್ಲಿ ನಾಟಕ ಎಂಬ ಪದವು ಎರಡು ಬಾರಿ ಬಂದಿರುವುದನ್ನು ಕಾಣಬಹುದಾಗಿದೆ. ಶಿವಕೋಟ್ಯಾಚಾರ್ಯನ ಕೃತಿಯಲ್ಲಿ "ಮೂವತ್ತೆರಡು ನಾಟಕಗಳ್ ಮೂವತ್ತೆರಡು ಕೋಟಿ ಕಸವರಂ" ಎಂಬ ಉಲ್ಲೇಖವಿದೆ. ಮಹಾದೇವಿ, ರೂಪಾದೇವಿ ಎಂಬ ರಾಣಿಯರು ಸೀತೆ ರಾಮರಿಗಾಗಿ ಕೃತಕ ನಾಟಕಗಳನ್ನಾಡಿದ ರೀತಿಯನ್ನು ಪಂಚತಂತ್ರವನ್ನು ರಚಿಸಿದ ದುರ್ಗಸಿಂಹನು ತಿಳಿಸಿದ್ದಾನೆ. ಕವಿಕಾಮದೇವನು ತನ್ನ ಶೃಂಗಾರ ರತ್ನಾಕರ ಕೃತಿಯ ೩ನೆಯ ಆಶ್ವಾಸದ ೯೩ನೆಯ ಪದ್ಯದಲ್ಲಿ

"ಇದನೋದಿ ತಿಳಿದ ಕವಿ ಮೆರೆ
ವುದು ಪೇಳ್ದನಭಿನಯಿಸಿ ನಾಟಕಂಗಳ ನಂತ್ತೇಂ

ಪದೆದೊಡೆ ಬರ್ಕುಮೆ ಕಣ್ಣಿಂ

ಲ್ಲದೆಯುಂ ಬಗೆದೆಗೆವರೊಳರೆ ವರ್ಣಕ್ರಮಮಂ"

ಎಂದು ಈ ಪದ್ಯದಲ್ಲಿ ನಾಟಕವನ್ನು ಕುರಿತು ವಿವರಿಸಿದ್ದಾನೆ. ಮಲ್ಲಿನಾಥ ಪುರಾಣದ ೮ನೆಯ ಆಶ್ವಾಸದ ೬ನೆಯ ಪದ್ಯದಲ್ಲಿ "ಸಂಗೀತಕಾಲೋಕನೋತ್ಸವದಿಂ ನಾಟಕಶಾಲೆಗಂದು ಬಿಜಯಂಗಿಯ್ದುಂ ಮಹೀ ವಲ್ಲಭಂ" ಎಂದು ರಾಜನು ನಾಟಕ ಶಾಲೆಗೆ ಬಂದನು ಎಂಬುದನ್ನು ಕುರಿತು ಹೇಳಲಾಗಿದೆ. ವಚನಕಾರರು ಕೂಡ ನಾಟಕವನ್ನು ಕುರಿತು ಉಲ್ಲೇಖಿಸಿದೆ ಬಿಟ್ಟಿಲ್ಲ. ಸೊಡ್ಡಳ ಚಾಚರಸನು "ಮನವನೋಡಲೆಂದು ನಟ ನಾಟಕವನೊಡ್ಡಿದಡೆ ಅದಕ್ಕೆ ಸಹಜವಲ್ಲಾಗಿ ಹೆದರಲಿಲ್ಲ" ಮತ್ತು ಮುಕ್ಕಣ್ಣನಿಪ್ಪೆಡೆಯ ತೋರಿದ ಅಣ್ಣ ಬಸವಣ್ಣ ವಾಙ್ಮನಕ್ಕಗೋಚರ ಮುಕ್ಕಣ್ಣನ ಅವತಾರಂಗಳನು ನಾಟಕವೆಂದರಿದು ಮೆರೆದ" ಎಂದು ಉಲ್ಲೇಖಗಳನ್ನು ನೋಡಬಹುದಾಗಿದೆ. ಬಸವಪುರಾಣದ ಕರ್ತೃ ಭೀಮಕವಿಯು ಸೋಮಲದೇವಿಯನ್ನು ಕುರಿತು ಶೃಂಗಾರಗೊಂಡು ಒಡವೆಗಳಿಂದ ಅಲಂಕೃತವಾಗಿ ನಾಟಕಕೈಳವಟ್ಟು ರೀತಿಯೊಳಪ್ಪೆ ನಡೆತಂದ ಚದುರೆ ಎಂಬ ಮಾತುಗಳನ್ನು ಹೇಳಿದ್ದಾನೆ. ಹಾಗೆ ಕುಮಾರವ್ಯಾಸನು ನಾಟಕ ಎಂಬ ಪದವನ್ನು ಅನೇಕ ಕಡೆಗಳಲ್ಲಿ ಬಳಸಿರುವುದು ಕಂಡು ಬರುತ್ತದೆ.

ಕ್ರಿ. ಶ. ೧೭ನೆಯ ಶತಮಾನದಲ್ಲಿದ್ದ ಭಟ್ಟಾಕಳಂಕನು ಕಾವ್ಯ ನಾಟಕಾಲಂಕಾರಕಲಾಶಾಸ್ತ್ರ ವಿಷಯಾಣಾಂಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾಮುಷ ಲಭ್ಯಮಾನತ್ವಾತ್ ಎಂಬ ಮಾತುಗಳು ಹೇಳಿದ್ದಾನೆ. ಅಲ್ಲದೆ ಗೋವಿಂದ ವೈದ್ಯ ಮತ್ತು ರತ್ನಾಕರವರ್ಣಿಯ ಕಾವ್ಯಗಳಲ್ಲಿಯೂ ನಾಟಕ ಎಂಬ ಪದವೂ ಮತ್ತು ಅದರ ವರ್ಣನೆಯೂ ಕಂಡುಬರುತ್ತದೆ. ಈ ಎಲ್ಲ ವಿವರಗಳನ್ನು ನೋಡಿದಾಗ ನಾಟಕದ ಪ್ರಾಚೀನತೆಯನ್ನು ಕಂಡುಕೊಳ್ಳಬಹುದಾಗಿದೆ. ಆದರೆ ಕನ್ನಡದಲ್ಲಿ ನಾಟಕಗಳು ೧೦ನೆಯ ಶತಮಾನದಲ್ಲಿದ್ದವೆಂಬ ವಾದವನ್ನು ಬಸವರಾಜ ಮಲಶೆಟ್ಟರು ಅಲ್ಲಗಳೆಯುತ್ತಾರೆ. ಕನ್ನಡದಲ್ಲಿ ಆಭಿಜಾತ ನಾಟಕಗಳು ಆದಂಭಗೊಂಡದ್ದು ಕ್ರಿ.ಶ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಎಂಬ ಅಭಿಪ್ರಾಯುವನ್ನು ವ್ಯಕ್ತಪಡಿಸಬಹುದಾಗಿದೆ. ಸಿಂಗರಾರ್ಯನ "ಮಿತ್ರವಿಂದಾ ಗೋವಿಂದಾ" ನಾಟಕವು ಕ್ರಿ.ಶ. ೧೭ನೆಯ ಶತಮಾನದಲ್ಲಿ ರಚಿತವಾಗಿದ್ದು, ಅದು ಕನ್ನಡದ ಮೊದಲ ನಾಟಕವೆಂದು ಹೇಳಲಾಗುತ್ತದೆ. ಏಕೆಂದರೆ ಇದು ಸ್ವತಂತ್ರ ರಚನೆಯಲ್ಲಿ ಅನುವಾದಗೊಂಡದ್ದು. ನಂತರ ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಟಕಗಳಿರಲಿಲ್ಲ. ಸೋಮೇಶ್ವರನು ತನ್ನ ಮಾನಸೋಲ್ಲಾಸ ಕೃತಿಯಲ್ಲಿ ನಾಟಕಗಳ ಬಗ್ಗೆ ಪ್ರಸ್ತಾಪಿಸಿದ್ದರೂ ಅದು ಸಂಸ್ಕೃತ ನಾಟಕಗಳಿಗೆ ಸಂಬಂಧಿಸಿದ್ದಾಗಿದೆ. ಈ ಹಿನ್ನಲೆಯಲ್ಲಿ ಕ್ರಿ.ಶ. ೧೫ನೆಯ ಶತಮಾನಕ್ಕಿಂತ ಪೂರ್ವದಲ್ಲಿ ಕನ್ನಡ ನಾಟಕದ ಅಸ್ತಿತ್ವವನ್ನು ಗುರುತಿಸಲು ಆಗುವುದಿಲ್ಲ. ನಾಟಕಸಾಹಿತ್ಯದ ಪ್ರಾಚೀನತೆಯ ಕ್ರಿ.ಶ. ೧೯ನೆಯ

ಶತಮಾನವೆಂದು ಅಭಿಪ್ರಾಯಪಡುವ ಡಾ. ಮಲಶೆಟ್ಟಿ ಅವರ ಮಾತುಗಳು ನಾಟಕದ ಪ್ರಾಚಿನತೆಯ ಕುರಿತ ಅಭಿಪ್ರಾಯವೆಂದು ಭಾವಿಸಬಹುದಾಗಿದೆ. ಈ ನಿಟ್ಟಿನಲ್ಲಿ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಉಲ್ಲೇಖವಾಗಿರುವ 'ನಾಟಕ' ಎಂಬ ಪದವು ನಾಟಕಗಳಿಲ್ಲದೆ ಬರುವುದು ಸಾಧ್ಯವಿಲ್ಲ. ಆದ್ದರಿಂದ ನಾಟಕಗಳು ಈವರೆಗೆ ಏಕೆ ದೊರೆತಿಲ್ಲವೆಂಬ ಅಧ್ಯಯನಗಳು ನಡೆಯಬೇಕಿದೆ.

ಕನ್ನಡ ನಾಟಕಗಳ ರಚನೆಯ ಕುರುಹುಗಳಂತೆ ಕನ್ನಡದಲ್ಲಿ ನಾಟಕ ಶಾಲೆಗಳು ಇದ್ದವು ಎಂಬುದಕ್ಕೆ ಉದಾಹರಣೆಗಳಿವೆ. ಉದಾ: ಕ್ರಿ.ಶ ೧೬೩೮-೧೬೫೯ ಕಾಲಘಟ್ಟದಲ್ಲಿ ಮೈಸೂರನ್ನು ಆಳಿದ ಕಂಠೀರವ ನರಸರಾಜ ಒಡೆಯರ ಅರಮನೆಯಲ್ಲಿ ಮನೋಹರವಾದ ನಾಟಕ ಶಾಲೆ ಇದ್ದಿತು, ಎಂದು ಗೋವಿಂದ ವೈದ್ಯ ತನ್ನ ಕಂಠೀರವ ನರಸರಾಜ ವಿಜಯ ಕಾವ್ಯದಲ್ಲಿ ಹೇಳಿದ್ದಾನೆ. ಲಿಂಗಣ್ಣ ಕವಿಯ ತನ್ನ ಕೆಳದಿನೃಪ ವಿಜಯ ಕಾವ್ಯದಲ್ಲಿ ಕೆಳದಿಯ ವೆಂಕಟಪ್ಪನಾಯಕ ಇಕ್ಕೇರಿಯರ ಮನೆಯೊಳ್ ಚಿತ್ರಾಕಾರ ರಚನಾಕೌಶಲ್ಯದಿಂದ ನಾಟಕ ಶಾಲೆಯ ನಿರ್ಮಿಸಿದನು ಎಂದು ನಾಟಕ ಶಾಲೆಯ ಬಗೆಗೆ ವಿವರಿಸಿದ್ದಾನೆ. ಹಾಗೆ ವಿಜಯನಗರ ಸಾಮ್ರಾಜ್ಯದಲ್ಲಿ ನಾಟಕಶಾಲೆಯು ಇದ್ದಿತು ಎಂಬ ಉಲ್ಲೇಖ ಇದೆ. ರತ್ನಾಕರವರ್ಣಿಯು ತನ್ನ ಭರತೇಶ ವೈಭವದಲ್ಲಿ ಪೂರ್ವನಾಟಕಸಂಧಿ, ಉತ್ತರನಾಟಕ ಸಂಧಿಗಳಲ್ಲಿ ಶೃಂಗಾರಮಯವಾದ ನಾಟಕ ಶಾಲೆಯ ವರ್ಣನೆಯನ್ನು ನೀಡಿದ್ದಾನೆ. ಇದಕ್ಕೂ ಪ್ರಾಚೀನವಾದ ಅಂದರೆ ಕ್ರಿ.ಶ. ೧೦೪೫ರಲ್ಲಿ ಧಾರವಾಡದ ಸಮೀಪವಿರುವ ಮುಳಗುಂದ ಶಾಸನದಲ್ಲಿ '

"ಶ್ರೀಮಿನ್ಮಹಾಸಾಮನ್ತಂ ಮಾರ್ತಾನ್ಡಯ್ಯಂ
ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ
ನಾಟಕ ಶಾಲೆಯಂ ಮಾಡಿಸಿ, ತನ್ನ ಕೀರ್ತಿಶಿಲಾಸ್ತಂಭಮಂ
ಆಚಂದ್ರರ್ಕತಾರಾಂಬರಂ ನಿಲಿಸಿದಂ"

ಎಂಬ ಈ ಪದ್ಯ ನಾಟಕ ಶಾಲೆಯ ಪ್ರಾಚೀನತೆಯನ್ನು ಗುರುತಿಸುತ್ತಾರೆ.

ಪ್ರಾಚೀನ ಕಾಲದಲ್ಲಿ ನಾಟಕಗಳು ಈಗಿನ ಸ್ವರೂಪದಲ್ಲಿ ಇರಲಿಲ್ಲ. ನಾಟಕ, ಹಾಡು, ಕುಣಿತ ಮುಂತಾದ ಈ ಮೂರು ಅಂಶಗಳನ್ನೊಳಗೊಂಡಿರಬೇಕು ಎಂಬುದು ವಿದ್ವಾಂಸರ ಅಭಿಪ್ರಾಯ. ಇಂದು ಈ ಮೂರು ನಿಯಮಗಳು ಕಡ್ಡಾಯವೆಂಬುದಿಲ್ಲ. ಏಕೆಂದರೆ ಕೆಲವು ಆಧುನಿಕ ನಾಟಕಗಳ ಪ್ರಯೋಗಗಳಲ್ಲಿ ಹಾಡು ಮತ್ತು ಮಾತುಗಳಿದ್ದು ನೃತ್ಯಗಳಿಲ್ಲದ ನಾಟಕಗಳು ಪ್ರಯೋಗವಾಗುವುದನ್ನು ಕಾಣುತ್ತೇವೆ. ಅಥವಾ ನೃತ್ಯ ಮತ್ತು ಹಾಡುಗಳಿದ್ದು, ಸಂಭಾಷಣೆಗಳಿಲ್ಲದೆ ಮೂಕಾಭಿನಯದ ನಾಟಕಗಳನ್ನೂ ಕಾಣಬಹುದಾಗಿದೆ. ಆದರೆ ಪ್ರಾಚೀನ ಕನ್ನಡ ನಾಟಕಗಳ ಸ್ವರೂಪ ಹೀಗಿರಲಿಲ್ಲ. ಹಾಡು, ಕುಣಿತ, ಮಾತು ಕಡ್ಡಾಯವಾಗಿದ್ದವು.

ಕ್ರಿ.ಶ. ೧೩೭೮ರ ಕಾಲಘಟ್ಟದ ಅಭಿನವ ಮಂಗರಾಜನ 'ಅಭಿನವಾಭಿದಾನ' ಎಂಬ ನಿಘಂಟಿನಲ್ಲಿ "ನೃತ್ಯರೊಳು ಹಸ್ತಾಂಗ ದೃಷ್ಟಿಗತಿ ಪದ್ದತಿಯೊಳಾಡೆ ನಾಲಕಮೆನಿಕ್ಕುಂ" ಎಂಬ ಮಾತು ನಾಟಕಗಳ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಪಂಪನು ತನ್ನ ಆದಿಪುರಾಣದಲ್ಲಿ ಕೃತಾನುಕರಣಮೆ ನಾಟಕಮಪ್ಪುದು ಎಂದು ಹೇಳಿರುವಲ್ಲಿ ನಾಟಕವೆಂದರೆ ಅನುಕರಣವೆಂಬ ಮಾತನ್ನು ಇಲ್ಲಿ ಲಕ್ಷಿಸಬೇಕಾಗಿದೆ. ಗೋವಿಂದ ವೈದ್ಯ ಅಥವಾ ರತ್ನಾಕರವರ್ಣಿ ಇವರಿಬ್ಬರು ತಮ್ಮ ಕಾವ್ಯದಲ್ಲಿ ವಿವರಿಸಿರುವ ಅಂಶಗಳನ್ನು ಗಮನಿಸಿದರೆ, ನಾಟಕವು ನಾಟ್ಯ ಅಥವಾ ಭಾವಪ್ರಧಾನವಾದ ನೃತ್ಯದ ವರ್ಣನೆ ಇಲ್ಲದಿರುಗಹುದೇ ಎಂಬ ಅನುಮಾನ ಮೂಡಿಸುತ್ತಾರೆ. ರತ್ನಾಕರವರ್ಣಿಯು ಚಿತ್ರಿಸಿದ ತಾಳ ಹಿಡಿದ ಸೂತ್ರದಾರ, ಬಸವಪುರಾಣದಲ್ಲಿ ಬರುವ ನಾಟಕ ಮಾಡಿದಂತೆ ಅಥವಾ ಇಂದಿನ ಯಕ್ಷಗಾನದ ಭಾಗವತನನ್ನು ನೆನಪಿಸುತ್ತಾರೆ. ಇಟ್ಟು ಜಡೆಬೊಲ್ಲ ಹವಮರ್ದಿರೆ, ತೊಟ್ಟು ಕುಚುಕಮಂ ದುಕೂಲವನ್ನುಟ್ಟು ಚಲ್ಲಣಮಿಂ ರಚಸಿ, ಮಣಿಖಚಿತ ಸಿಂಜಿನಿಯ ಕಟ್ಟಿಕೊಂಡು ಎಂಬ ಬಸವಪುರಾಣದಲ್ಲಿ ಬರುವ ಸೋಮಲದೇವಿಯನ್ನು ವರ್ಣಿಸುವ ಸಾಲುಗಳು ಆಕೆ ನರ್ತಕಿ ಎಂಬ ಭಾವನೆಯನ್ನು ಮತ್ತು ಗಟ್ಟಿಗೊಳಿಸುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸಿದರೆ ನಮ್ಮ ಪ್ರಾಚೀನ ಕನ್ನಡ ನಾಟಕಗಳು ಭಾವ ಮತ್ತು ಗೀತ ಪ್ರಧಾನವಾಗಿದ್ದು, ಸಂಭಾಷಣೆಗಳನ್ನು ಗೌಣವಾಗಿಸಿಕೊಂಡಂತೆ ತೋರುತ್ತದೆ.

ನಮ್ಮ ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಕಲೆಗಳ ಪಂರಂಪರೆಗಳೆಲ್ಲವೂ ದೈವದ ಹಿನ್ನೆಲೆಯಲ್ಲಿಯೇ ಮೂಡಿಬಂದಿರುವುದು ಕಂಡುಬರುತ್ತಾರೆ. ಅಚ್ಚರಿಯೆಂದರೆ ಕಲೆ ಮತ್ತು ಸಾಹಿತ್ಯಗಳಿಗಿಂತ ವೈಜ್ಞಾನಿಕ ಮತ್ತು ಪ್ರಾಯೋಗಿಕವಾದ ವೈದ್ಯಶಾಸ್ತ್ರಗಳಂತಹ ಶಾಸ್ತ್ರಗಳ ಮೂಲವನ್ನು ನಮ್ಮ ಹಿರಿಯರು ದೈವವ ಮೂಲದೊಂದಿಗೆ ಗುರುತಿಸಿಕೊಳ್ಳವ ಪ್ರಯತ್ನ ಮಾಡಿದರು. ಸಂಸ್ಕೃತಿಯ ಒಂದು ಭಾಗವಾದ ರಂಗಭೂಮಿಯನ್ನು ಕುರಿತ ಆರಂಭದ ಇತಿಹಾಸ ದೈವಿಕ ಹಿನ್ನೆಲೆಯಿಂದಲೇ ರೂಪಿತಗೊಂಡಿರುವುದು ಕಂಡು ಬರುತ್ತದೆ. ಸಂಸ್ಕೃತದ ಹಿನ್ನಲೆಯ ಈ ಕಥಾನಕವು ಒಟ್ಟಾರೆಯಾಗಿ ಭಾರತೀಯ ರಂಗಭೂಮಿಗೆ ಸಂಬಂಧಿಸಿದ್ದಾಗಿದೆ. ಭರತನ ನಾಟ್ಯಶಾಸ್ತ್ರದಲ್ಲಿ ನಾಟಕವನ್ನು ಕುರಿತ ಎರಡು ಸಂದರ್ಭಗಳ ಉಲ್ಲೇಖವನ್ನು ಇಲ್ಲಿ ನೋಡಬಹುದು. ಪ್ರಾರಂಭದಲ್ಲಿ ಋಷಿಗಳು ನೀವು ನಾಟ್ಯದಲ್ಲಿ ತಜ್ಞರು, ನಾಟ್ಯವೇದ ಎಂಬ ಗ್ರಂಥವನ್ನು ಬರೆದಿರಿ, ಹೇಗೆ ರಚಿಸಿದಿರಿ? ಯಾರ ಸಲುವಾಗಿ ರಚಿಸಿದಿರಿ? ಮುಂತಾಗಿ ನಮಗೆ ಕುತೂಹಲ ಆ ಬಗ್ಗೆ ಮಾಹಿತಿಯನ್ನು ಕೊಡುವಿರಾ? ಎಂದು ಕೇಳುತ್ತಾರೆ. ಆಗ ಭರತ ಅವರಿಗೆ ಹೇಳಿದ್ದು ನಾಟ್ಯವೇದವನ್ನು ಬರೆದವನು ನಾನಲ್ಲ ಸಾಕ್ಷಾತ್ ಬ್ರಹ್ಮ, ಆ ಕತೆ ಹೀಗಿದೆ. ಕೃತಯುಗ ಮುಗಿದು ತ್ರೇತಾಯುಗ ಪ್ರಾರಂಭವಾಗುವುದರಲ್ಲಿದ್ದಿತು. ಆ ಮಧ್ಯಂತರ ಸಮಯದಲ್ಲಿ ಎಂದರೆ ಕೃತಯುಗದ ಮೌಲ್ಯಗಳು ನಿರೂಪಯುಕ್ತ ತ್ರೇತಾಯುಗದ

ಹೊಸ ಮೌಲ್ಯಗಳು ಅಸ್ತಿತ್ವದಲ್ಲಿ ಬರುವ ಮುಂಚಿತದ ಸಮಯದಲ್ಲಿ ಸ್ವರ್ಗದ ಜನರಲ್ಲಿ ಗ್ರಾಮ್ಯಪ್ರವೃತ್ತಿ ಬೆಳೆಯಿತು. ನಡೆ ನುಡಿಗಳಲ್ಲಿ ಅಸಭ್ಯತೆ ಎದ್ದು ಕಾಣತೊಡಗಿತು. ಆಗ ಇಂದ್ರಾದಿ ದೇವತೆಗಳೂ ಬ್ರಹ್ಮನ ಕಡೆ ಹೋಗಿ ದೇವಾ ಈಗ ಪರಿಸ್ಥಿತಿ ಹದಗೆಟ್ಟಿದೆ, ಜನರು ರಂಜನಕ್ಕಾಗಿ ಗ್ರಾಮ್ಯತೆ ಅಸಭ್ಯತೆಗಳನ್ನು ಮೆಚ್ಚುತ್ತಿದ್ದರು. ಇವರಿಗೆ ಮನರಂಜನೆಯ ಜೊತೆಯೇ ಜ್ಞಾನ ಮತ್ತು ಶಿಕ್ಷಣವನ್ನು ಏಕಕಾಲಕ್ಕೆ ಯಾವುದಾದರೊಂದು ಹೊಸ ಆಚರಣೆಯನ್ನು ಕೊಡು, ಇವರು ಕಾಮ, ಲೋಭ, ಈರ್ಷ್ಯಾದಿಗಳಿಂದ ಮುಕ್ತರಾಗಿರಲಿ ಎಂದು ಕೇಳಿಕೊಂಡರಂತೆ. ಆಗ ಬ್ರಹ್ಮನು ಐದನೆಯದಾದ ನಾಟ್ಯ ವೇದವನ್ನು ರಚಿಸಿದನಂತೆ ಈ ವೇದದ ವೈಶಿಷ್ಟ್ಯವೆಂದರೆ ಇದನ್ನೋದುವ, ಇಲ್ಲವೆ ಬಳಸುವ ಅಧಿಕಾರ ಬರೀ ದ್ವಿಜರಿಗೆ ಮಾತ್ರ ಅಲ್ಲ, ಎಲ್ಲ ವರ್ಣದವರಿಗಿದ್ದಿತು. ಆ ನಾಟ್ಯವೇದವನ್ನು ಇಂದ್ರಾದಿ ದೇವತೆಗಳು ಓದಿ ತಿಳಿದುಕೊಳ್ಳಲು ಅಸಮರ್ಥರಾಗಿ ಇದನ್ನು ತಿಳಿದುಕೊಳ್ಳಬಲ್ಲವರಿಗೆ ಕೊಟ್ಟರೆ ಅವರು ಇದನ್ನು ಬಳಕೆಯಲಿ ತರಲು ಸಮರ್ಥರಾಗುವರು ಎಂದು ಬ್ರಹ್ಮನನ್ನು ಕೇಳಿಕೊಂಡಾಗ ಬ್ರಹ್ಮನು ಅದನ್ನು ಭರತಮುನಿ ಒಪ್ಪಿದನಂತೆ. ಭರತನು ತನ್ನ ನೂರು ಮಕ್ಕಳ ಸಹಾಯದಿಂದ ಪ್ರಯೋಗವನ್ನು ಮಾಡತೊಡಗಿದನು.

ಇಲ್ಲಿ ಉಕ್ತಗೊಂಡ ಕಥಾನಕಕ್ಕು ಮತ್ತು ಕನ್ನಡ ರಂಗಭೂಮಿಯ ಇತಿಹಾಸಕ್ಕೂ ನೇರ ಸಂಬಂಧವಿಲ್ಲದಿದ್ದರೂ, ರಂಗಭೂಮಿಯ ಕುರಿತಾದ ಪ್ರಾಥಮಿಕ ಮಾಹಿತಿಗಳನ್ನಷ್ಟೆ ಇಲ್ಲಿ ಪರಿಗಣಿಸಬೇಕಾಗಿದೆ. ಕನ್ನಡ ರಂಗಭೂಮಿಯು ಹೀಗೆ ದೈವಿಕವಾಗಿ ಬೆಳೆದುಬಂದಿದೆ ಹಾಗಾಗಿ ವಿವಿಧ ಸಮುದಾಯಗಳ ಆಚರಣೆಗಾಗಿ ರೂಪಗೊಂಡಿತು. ದಾಸರ ಆಟ, ಮಲೆಯರ ಕುಣಿತ, ಕೋಲಾಟ, ಪುರವಂತರ ಕುಣಿತ, ಬೀರದೇವರ ಕುಣಿತ, ಹಾಗೆ ಕೋಲೆಬಸವ, ಗಂಗೇಗೌರಿ ಸಂವಾದ, ಹಗಲುವೇಷ, ತೊಗಲುಗೊಂಬೆ ಆಟ ಇವೆ ಮುಂತಾದ ಮಾದರಿಗಳಲ್ಲಿ ನಾಟ್ಯ ಬೆಳೆಯಿತು.

೧೯ನೇ ಶತಮಾನದ ಅಧುನಿಕ ರಂಗಭೂಮಿ(ಪ್ರೊಸೀನಿಯಂ) ಬಂಗಾಳಕ್ಕೆ ಮೊದಲು ಪ್ರವೇಶ ಪಡೆದು ನಂತರ ಮಹಾರಾಷ್ಟ್ರದ ಮೂಲಕ ಪಾರ್ಸಿ ಕಂಪನಿಗಳಿಂದ ಕರ್ನಾಟಕಕ್ಕೆ ಬಂದಿತು. ಇದು ಬರಲಿಕ್ಕೆ ಮೂರು ಕಾರಣಗಳಿವೆ ಒಂದು, ಪರಂಪರೆಯಿಂದ ಇದ್ದ ಸ್ಥಳಿಯ ರಂಗಭೂಮಿ, ಮತ್ತೊಂದು ಇಂಗ್ಲಿಶ್ ಶಿಕ್ಷಣ ಪಡೆದುಕೊಂಡಿದ್ದ ವರ್ಗ. ಹಾಗೂ ವಸಾಹತುಶಾಹಿಯಿಂದ ಆರಂಭವಾದ ಮಧ್ಯಮ ವರ್ಗ ಮತ್ತು ಬ್ರಿಟಿಶ್ ನಾಯಕರ ಮನರಂಜನೆಗಾಗಿ. ನಂತರ ಪಾರ್ಸಿ ಕಂಪನಿಯವರು ಭಾರತದಾದ್ಯಂತ ಈ ಮಾದರಿಯ ರಂಗಭೂಮಿಯನ್ನು ವಿಸ್ತರಿಸಿದರು. ಇದರ ಪ್ರಭಾವ ಹೇಗಿತ್ತೆಂದರೆ ೧೮೭೨ರ ಹೊತ್ತಿಗೆ ಅಲ್ಲಿಯ ಜನರು ಪ್ರೋಸೆನಿಯಂ ಮಾದರಿಯ ಒಂದು ರಂಗಮಂದಿರವನ್ನು ಸ್ಥಾಪಿಸಿದರು. ಇಂದಿಗೂ ಆ ಕಾಲದ ರಂಗಮಂದಿರವನ್ನು ನೋಡಬಹುದು. ನಾಟಕ ಕಲೆ ಭಾರತಕ್ಕೆ

ಹೊಸತೇನಲ್ಲ. ಪ್ರಾಚೀನ ಕಾಲದಿಂದಲೂ ಭಾರತೀಯರು ಸಂಸ್ಕೃತದ ಮೂಲಕ ನಾಟಕದ ನಿಕಟ ಸಂಪರ್ಕವನ್ನು ಹೊಂದಿದ್ದರು. ಆದರೆ ಅದು ಸಮಾಜದ ಕೆಳವರ್ಗದವರ ಪರವಿರಲಿಲ್ಲ. ಅಲ್ಲಿ ಸಾಮಾಜಿಕ ಅಂಶಗಳು ಗೌಣವಾಗಿದ್ದವು.

ಧಾರ್ಮಿಕ ಸಂವೇದನೆ ಮತ್ತು ಮನರಂಜನೆಗಳಿಂದ ಅಂದಿನ ರಂಗಪ್ರಯೋಗಗಳು ನಡೆಯುತ್ತಿದ್ದವು. ಸಾಮಾಜಿಕ ಅಂಶಗಳನ್ನು ರಂಗಭೂಮಿ ಗಮನಿಸದ ಸಂದರ್ಭದಲ್ಲಿ ಬಂಗಾಳದಲ್ಲಿ ಮೊದಲ ಬಾರಿಗೆ ಡಿ.ಎಲ್.ರಾಯ್ ಅವರು ಅಂತಹ ಪ್ರಯತ್ನಕ್ಕೆ ಕೈ ಹಾಕಿದರು. ೧೮೮೪ರಲ್ಲಿ ಇಂಗ್ಲೆಂಡಿಗೆ ಹೋಗಿ ಮರಳಿ ಬಂದಾಗ ಅಲ್ಲಿಯ ಸಂಪ್ರದಾಯಸ್ಥರು ಸಮುದ್ರ ಪ್ರಯಾಣ ಅಪವಿತ್ರ ಎಂದು ತಿಳಿದು ಅವರ ಮೇಲೆ ಧಾರ್ಮಿಕ ಕಟ್ಟಳೆಗಳನ್ನು ಹೇರಿದ್ದರಿಂದ ಹಿಂದು ಸಂಪ್ರದಾಯವನ್ನು ಖಂಡಿಸುವಂತೆ 'ಕಲ್ಕಿ ಅವತಾರ' ಎಂಬ ನಾಟಕವನ್ನು ಬರೆದರು. ಈ ಮೂಲಕ ಹಿಂದೂ ಧರ್ಮದ ಮತೀಯರನ್ನು ಮತ್ತು ಮತೀಯ ಅಂಶಗಳನ್ನು ಖಂಡಿಸಿದರು. ರಾಯ್ ಅವರು ಪ್ರಚಲಿತ ಮಾನವೀಯ ಹಾಗೂ ಲೌಕಿಕ ದೃಷ್ಟಿಕೋನವನ್ನು ಬದಲಿಸಿಕೊಂಡು, "ತಮ್ಮ ನಾಟಕಗಳಲ್ಲಿ ಧಾರ್ಮಿಕತೆಯ ಪುನರುತ್ಥಾನ ಅಥವಾ ಆಧ್ಯಾತ್ಮಿಕತೆಯ ಬಗ್ಗೆ ಹೆಚ್ಚಿನ ಒತ್ತುಕೊಟ್ಟು, ಹೇಳದೆ ಮಾನವನ ಕಾರ್ಯಕ್ಷಮತೆ ಹಾಗೂ ಭವಿಷ್ಯದ ಗೊತ್ತು ಗುರಿಗಳ ಬಗ್ಗೆ ನಿಚ್ಚಳ ನಂಬಿಕೆಯಿಟ್ಟ ಮನೋಧರ್ಮವನ್ನು ಒತ್ತಿ ಹೇಳುತ್ತಿದ್ದರು. ಡಿ.ಎಲ್.ರಾಯ್ ಅವರು ಸ್ವದೇಶಿ, ಸ್ವಾತಂತ್ರ್ಯ ಚಳುವಳಿ ಬಗ್ಗೆ ಅತೀವ ಕಳಕಳಿ ಹೊಂದಿದ್ದರೂ, ಅವರ ದೇಶಭಕ್ತಿ ಯುರೋಪಿನ ಪ್ರಜ್ಞೆಯಿಂದ ಪ್ರೇರಿತವಾಗಿತ್ತು. ಆದ್ದರಿಂದ ಅವರಿಗೆ ಈ ದೇಶದ ಜನ ಕುರುಡಾಗಿ ಜಾರಿದ ಜಾಗದಲ್ಲಿ ಎದ್ದು ನಿಲ್ಲುವ ಶಕ್ತಿ ಬಂದಿತ್ತು.(ಕಿರಣ್ ರಾಹಾ,(ಅನು)ರಂಗನಾಥ ಎಲ್.ಕೆ, ಪು–೮೧) ರಾಯ್ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿದವರು ಮತ್ತು ಆ ಹಿನ್ನೆಲೆಯಲ್ಲಿ ನಾಟಕಗಳನ್ನು ರಚಿಸಿ ಜನರಲ್ಲಿಯೂ ಸ್ವಾತಂತ್ರ್ಯದ ಬಗ್ಗೆ ಅರಿವು ಮೂಡಿಸಿದರು. ಕೇವಲ ಸ್ವಾತಂತ್ರ್ಯ ಬಂದರೆ ಸಾಲದು ಎಂದು ಹೇಳಿದರು. ೧೯೦೫ರ ಬಂಗಾಳ ವಿಭಜನೆ ಸಂದರ್ಭದಲ್ಲಿ ಧರ್ಮಿಕ ಕಲಹಗಳಾಚೆ ಬದುಕುವ ಕನಸುಗಳನ್ನು ಕಟ್ಟಲು ನಾಟಕಗಳನ್ನು ರಚಿಸಿ, ಜಾಗೃತಿ ಮೂಡಿಸಿದರು. ಮೇವಾರ ಪತನ ನಾಟಕದಲ್ಲಿ ಒಂದು ಮಾತು ಹೀಗಿದೆ. "ದೇಶ ಭಕ್ತಿ ಆತ್ಮಕ್ಕಿಂತ ದೊಡ್ಡದು ನಿಜ; ಆದರೆ ಮಾನವೀಯತೆ ದೇಶಭಕ್ತಿಗಿಂತ ಹಿರಿದಾದದ್ದು."(ಅದೇ, ಪು–೮೨) ಈ ಮಾತು ಇಂದಿನ ಕಾಲಕ್ಕು ಅನ್ವಯಿಸುತ್ತದೆ.

ಯುರೋಪಿನ ಆಗಮನ, ವಸಾಹತುಶಾಹಿ ಆಡಳಿತದ ಪ್ರಭಾವದಿಂದ ಭಾರತವು ಸಂಪ್ರದಾಯದಿಂದ ಆಧುನಿಕತೆಗೆ ಹೊರಳುತ್ತಿರುವ ಸಂದರ್ಭದಲ್ಲಿ ಕನ್ನಡ ಸಾಹಿತ್ಯವು ತನ್ನ ಕಲಾತ್ಮಕ ಕ್ರಿಯೆಯನ್ನು ಸೂಕ್ಷ್ಮತೆಗಳನ್ನು ಮನನ ಮಾಡುತ್ತಲೇ ಅಂದಿನ ರಾಜಕೀಯ, ಸಾಮಾಜಿಕ ಒತ್ತಡಗಳನ್ನು ಸ್ವೀಕರಿಸುವ ಅವುಗಳನ್ನು ಪ್ರತಿಕ್ರಿಯಿಸಲು ಆರಂಭಿಸಿತು. ಈ

ಪರಿಸರ ಕನ್ನಡ ನಾಟಕಗಳ ನಾಟಕ ಸಾಹಿತ್ಯ ಚರಿತ್ರೆಯ ಬೆಳವಣಿಗೆಗೂ ಕಾರಣವಾಗಿರಬಹುದು. ಇಲ್ಲಿಂದ ಭಾರತೀಯ ನಾಟಕವು ತನ್ನ ಪರಂಪರೆಗೆ ಹೊಸ ವೇಷವನ್ನು ಧರಿಸಿಕೊಂಡಿತು ಎಂದರೆ ತಪ್ಪಾಗಲಾರದು. ಅದು ತನ್ನ ಅಸ್ತಿತ್ವದ ಜೊತೆಗೆ ಸಾಂಸ್ಕೃತಿಕ ಜವಾಬ್ದಾರಿಯನ್ನು ನಿಭಾಯಿಸಿತು. ಜೊತೆಗೆ ಲಾಭದಾಯಕ ವ್ಯವಹಾರವಾಗಿ ಬೆಳೆಯಲು ಪ್ರಾರಂಭವಾಯಿತು.

೧೮೫೭ ರಿಂದ ೧೯೪೭ರವರೆಗೆ ಭಾರತದ ಸ್ವಾತಂತ್ರ್ಯಕ್ಕಾಗಿ ತೊಂಬತ್ತು ವರ್ಷಗಳ ಕಾಲ ನಡೆದ ಈ ಚಳುವಳಿ ಆಧುನಿಕ ಚರಿತ್ರೆಯ ಮಹತ್ವದ ಘಟ್ಟವಾಗಿದೆ. ಇಂಗ್ಲೀಶ್ ಶಿಕ್ಷಣ ಪಡೆದುಕೊಂಡಿದ್ದ ಭಾರತದ ಮೊದಲ ತಲೆಮಾರಿನ ವಿದ್ಯಾವಂತರು ಸ್ವಾತಂತ್ರ್ಯ ಚಳುವಳಿಯಲ್ಲಿ ತಾವು ಪಾಲ್ಗೊಂಡು ಜನಸಾಮಾನ್ಯರಿಗೆ ಚಳುವಳಿಯಲ್ಲಿ ಪಾಲ್ಗೊಳ್ಳಲು ರಾಜಕೀಯ ಪ್ರಜ್ಞೆಯ ತಿಳುವಳಿಕೆಯನ್ನು ಮೂಡಿಸಿದರು. ಇದರಲ್ಲಿ ಕನ್ನಡ ಸಾಹಿತ್ಯದ ಪಾತ್ರವೂ ಇದೆ. ಬಹುತ್ವದ ಸಾಂಸ್ಕೃತಿಕ ನೀತಿಗಳನ್ನು ಮರೆತು ವಿಸ್ಮೃತಿಗೆ ಒಳಗಾಗಿದ್ದ ಭಾರತೀಯ ಪರಿಸರವನ್ನು ಅರಿತುಕೊಂಡಿದ್ದು, ವಸಾಹತುಶಾಹಿಯ ಕೊಡುಗೆ ಎಂದರೆ ತಪ್ಪಾಗಲಾರದು. ಇದನ್ನು ಸಾಮಾಜಿಕ ಸ್ವಾತಂತ್ರ್ಯ ಎನ್ನಬಹುದು. ಇದು ಸ್ವಾತಂತ್ರ್ಯ ಚಳುವಳಿಯ ಒಂದು ಆಯಾಮವೂ ಹೌದು. ಸ್ವಾತಂತ್ರ್ಯಕ್ಕಾಗಿ ಜಗತ್ತಿನಲ್ಲಿ ನಡೆದಂತೆ ಕ್ರಾಂತಿಗಳು ಭಾರತದಲ್ಲಿ ನಡೆಯಲಿಲ್ಲ. ಆದರೆ ಸಾವು ನೋವುಗಳು ಸಂಭವಿಸಿವೆ ಅದು ಬ್ರಿಟೀಶರ ಕ್ರೂರತೆಯಿಂದ ವಸಾಹತು ಶಾಹಿಯ ಆಡಳಿತದ ವಿರುದ್ಧ ನಡೆದ ಚಳುವಳಿಯು ಭಿನ್ನ ಭಿನ್ನ ಚಿಂತನೆಗಳ ಮೂಲಕ ಭಾರತದಲ್ಲಿ ಸಮಾನತೆಯ ವಾತಾವರಣವನ್ನು ನಿರ್ಮಿಸಲು ಪ್ರಯತ್ನಿಸಿತು. ಆದರೆ ಆ ಸಮಾನತೆಯ ವಾತಾವರಣ ಸ್ವಾತಂತ್ರ್ಯ ನಂತರದ ಭಾರತದಲ್ಲಿ ಇಂದಿಗೂ ಕುಂಟುತ್ತಾ ಸಾಗುತ್ತಿದೆ. ಯುರೋಪಿನಲ್ಲಿ ೧೮ನೇ ಶತಮಾನದ ಕೊನೆಗೆ ಆರಂಭವಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಕಲ್ಪನೆಗಳು ರಾಷ್ಟ್ರೀಯತೆಯ ನೆಪದಲ್ಲಿ ಭಾರತದ ಸಮಾಜವನ್ನು ಪ್ರವೇಶಿಸಿ ಸ್ವಾತಂತ್ರ್ಯದ ಕಡೆಗೆ ಎಚ್ಚರ ವಹಿಸಿದುವು.

ಅಂದಿನ ಸಮಕಾಲೀನ ವಿದ್ಯಮಾನಗಳಿಗೆ ಕನ್ನಡ ಸಾಹಿತ್ಯವು ಸ್ಪಂದಿಸಿತು. ಮುಖ್ಯವಾಗಿ ನಾಟಕ ಸಾಹಿತ್ಯವು ಚಳುವಳಿಯ ನಾಯಕರನ್ನು ಕುರಿತು. ಆ ಕಾಲದ ಘಟನೆಗಳ ಕುರಿತು ಮತ್ತು ಚಳುವಳಿಯ ಭಾಗವಾಗಿ ಇತರೆ ಹೋರಾಟಗಳನ್ನು ಮತ್ತು ಅವುಗಳ ಪ್ರಾಮುಖ್ಯತೆಯನ್ನು ಪ್ರದರ್ಶನದ ಮೂಲಕ ಜನಸಾಮಾನ್ಯರಿಗೂ ಸ್ವಾತಂತ್ರ್ಯ ಚಳುವಳಿಯ ಪ್ರಾಮುಖ್ಯತೆಯನ್ನು ತಿಳಿಸಿ ಜನರಲ್ಲಿ ಅರಿವು ಮೂಡಿಸಿತು. ಹಾಗಾಗಿ ಮೇಲ್ವರ್ಗ ಮತ್ತು ಮೇಲ್ಜಾತಿಗಳ ಪ್ರಾಮುಖ್ಯತೆಯಿಂದ ಜನಸಾಮಾನ್ಯರವರೆಗೂ ಸ್ವಾತಂತ್ರ್ಯದ ಹರಿವು ವಿಸ್ತರಿಸಲು ಕನ್ನಡ ನಾಟಕಗಳ ಪಾತ್ರ ದೊಡ್ಡದು. ರಾಜಾಶ್ರಯದಿಂದ ಬಿಡುಗಡೆ ಹೊಂದಿ "ಸಮಾಜಕ್ಕೆ ತಾನು ತನಗೆ ಸಮಾಜ" ಎಂಬ ತತ್ವದಡಿಯಲ್ಲಿ ಕನ್ನಡ ಸಾಹಿತ್ಯ ರಚನೆಗೊಂಡಿದೆ. ೧೯ನೇ ಶತಮಾನದ ಉತ್ತರಾರ್ಧದಿಂದ ರಾಜಾಶ್ರಯದಲ್ಲೂ ಕೂಡಾ ಸಾಹಿತ್ಯ ಪರೋಕ್ಷವಾಗಿ

ಅಂದಿನ ಚಲನೆಗಳಿಗೆ ಪ್ರತಿಕ್ರಿಯಿಸಿದ ಉದಾಹರಣೆಗಳೂ ಇವೆ. ಮುಖ್ಯವಾಗಿ ಇಂಗ್ಲಿಶ್ ಶಿಕ್ಷಣದಿಂದ ಪರಿಚಿತವಾದ ಯುರೋಪಿನ ಚಿಂತನಾ ಕ್ರಮಗಳು ರಾಜಾಶ್ರಯಕ್ಕಿಂತ ಭಿನ್ನ ದಾರಿ ತುಳಿಯಲು ಕನ್ನಡ ಸಾಹಿತ್ಯಕ್ಕೆ ಅಥವಾ ಭಾರತೀಯ ಸಾಹಿತ್ಯಕ್ಕೆ ಮಾರ್ಗದರ್ಶಿಯಾಗಿ ನಿಂತವು. ಸಾಹಿತ್ಯದ ಇತರೆ ಪ್ರಕಾರಗಳಿಗಿಂತ ಭಿನ್ನವಾದ ನಾಟಕ ಸಾಹಿತ್ಯವು ಹತ್ತೊಂಬತ್ತನೇ ಶತಮಾನದ ಕೊನೆಯಿಂದ ಇಪ್ಪತ್ತನೆ ಶತಮಾನದ ಮಧ್ಯದ ಘಟನಾವಳಿಗಳನ್ನು ತನ್ನ ಮೂಲಕ ಪರಿಚಯಿಸುವ ಮತ್ತು ಸ್ವಾತಂತ್ರ್ಯಕ್ಕಾಗಿ ಮತ್ತು ಐಕ್ಯತೆಗಾಗಿ ಜನರಲ್ಲಿ ಅರಿವನ್ನು ಮೂಡಿಸಿತು. ಅಂತ ಅಂಶಗಳುಳ್ಳ ನಾಟಕಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಿ ಆ ಕಾಲದ ಚಾರಿತ್ರಿಕ ಚಲನೆಗಳೊಂದಿಗೆ ವಿಶ್ಲೇಷಿಸಲಾಗಿದೆ.

೧೯-೨೦ನೇ ಶತಮಾನವನ್ನು ಸಂಕ್ರಮಣ ಕಾಲವೆಂದು ಕರೆಯಬಹುದು. ಸಾಂಸ್ಕೃತಿಕವಾಗಿ ಮತ್ತು ಸಂಪ್ರದಾಯಿಕ ಚಿಂತನೆಗಳ ಜೊತೆಗೆ ವೈಚಾರಿಕ ಸಮಾಜದ ಅಂಶಗಳು ಮುನ್ನೆಲೆಗೆ ಬಂದವು. ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಹಿತ್ಯಿಕ ಕೊಡುಕೊಳ್ಳುವಿಕೆಗಳು ಆರಂಭಗೊಂಡು ಹೊಸ ಸಂವೇದನೆಗಳು ಹರಿಯತೊಡಗಿದವು. ಹಾಗಾಗಿ ಸ್ವಾತಂತ್ರ್ಯ, ಅಸ್ಪೃಶ್ಯತೆ ನಿವಾರಣೆ ಮತ್ತು ಏಕೀಕರಣದಂತ ಅನೇಕ ಚಳುವಳಿಗಳು ಆರಂಭಗೊಂಡವು. ಕನ್ನಡ ಸಾಹಿತ್ಯವು ಇದರ ಭಾಗವಾಗಿ ಕೆಲಸ ನಿರ್ವಹಿಸಿದ್ದನ್ನು ಗುರುತಿಸಬಹುದು.

ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಅಭಿವ್ಯಕ್ತಿಯ ಸ್ವರೂಪ ಎಂಬ ಈ ಅಧ್ಯಾಯದಲ್ಲಿ ಕನ್ನಡ ನಾಟಕಗಳಲ್ಲಿ ಅಭಿವ್ಯಕ್ತಗೊಂಡ ಸ್ವಾತಂತ್ರ್ಯ ಚಳುವಳಿಯ ಸಂದರ್ಭವನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

- ೪.೧. ವ್ಯಕ್ತಿ ಕೇಂದ್ರಿತ ನೆಲೆ
- ೪.೨. ವಸ್ತು ಕೇಂದ್ರಿತ ನೆಲೆ
- ೪.೩. ಚಳುವಳಿ ಕೇಂದ್ರಿತ ನೆಲೆ
  - ೪.೩.೧. ಸಾಮಾಜಿಕ ಚಳುವಳಿ
  - ೪.೩.೨. ಏಕೀಕರಣ ಚಳುವಳಿ

೪.೧. ವ್ಯಕ್ತಿ ಕೇಂದ್ರಿತ ನೆಲೆ

ಪ್ರಸ್ತಾವನೆ

ಇಂದು ಪರಿಭಾವಿಸುತ್ತಿರುವ ಅರ್ಥದಲ್ಲಿ ಭಾರತವನ್ನು ರಾಜಕೀಯವಾಗಿ ವಸಾಹತುಶಾಹಿಗಳಿಂದ ಬಿಡುಗಡೆಗೊಳಿಸಲು ಹೋರಾಟ ನಡೆದಿದ್ದು ೧೮೫೭ರ ದಂಗೆಯ

ನಂತರ. ಅದಕ್ಕಿಂತ ಪೂರ್ವದಲ್ಲಿ ನಡೆದ ಹೋರಾಟಗಳು ಸ್ವರಾಜ್ಯ ಪಾಲನೆಗಾಗಿ ಆಯಾ ಪ್ರಾಂತ್ಯದ ರಾಜರುಗಳು, ಸಂಸ್ಥಾನಿಕರು, ದೇಶಮುಖರು, ಜಮೀನ್ದಾರರು ಮತ್ತು ಪಾಳೆಗಾರರು ಬ್ರಿಟಿಶರ ವಿರುದ್ಧ ನಡೆಸಿದ ಹೋರಾಟಗಳಾಗಿವೆ. ಇವರ್‍ಯಾರು ಸಮಗ್ರ ಭಾರತದ ಬಿಡುಗಡೆಗಾಗಿ ಹೋರಾಡಿದವರಲ್ಲ. ೧೮೫೭ರಲ್ಲಾದ ಹೋರಾಟವು ಕೂಡ ಭಾರತದ ಬಿಡುಗಡೆಗಾಗಿ ನಡೆದದ್ದಲ್ಲ. ಆದರೆ ಆ ಹೋರಾಟ ಸ್ವಾತಂತ್ರ್ಯ ಚಳುವಳಿಗೆ ವೇದಿಕೆಯಾಯಿತು. ೧೮೫೭ರ ವಿಜಯದ ನಂತರ ಮತ್ತೆ ಮೊಘಲರನ್ನು ದೆಹಲಿಯ ರಾಜನನ್ನಾಗಿ ನೇಮಿಸಲಾಯಿತು. ಆದರೆ ಇವರೆಲ್ಲರ ಹೋರಾಟಗಳು ಬ್ರಿಟಿಶರ ವಿರುದ್ಧ ನಡೆದವು ಹಾಗಾಗಿ ಈ ಒಮ್ಮತದ ಐಕ್ಯತೆಯ ಹೋರಾಟಗಳು ೧೮೫೭ರ ದಂಗೆಗೆ ಕಾರಣವಾಗಿ ಬ್ರಿಟಿಶರನ್ನು ಎಚ್ಚರಿಸಿದವು. ಭಾರತದ ಸ್ವಾತಂತ್ರ್ಯ ಹೋರಾಟವು ಹತ್ತೊಂಬತ್ತನೆಯ ಶಶತಮಾನ ಉತ್ತರಾರ್ಧ ಕಾಲದಿಂದ ಒಂದು ರಾಜಕೀಯ ಹೋರಾಟವಾಗಿ ಆರಂಭಗೊಂಡಿತು. ಬ್ರಿಟಿಶ್ ದಾಸ್ಯದಿಂದ ಮುಕ್ತಿಯಾಗುವುದೇ ಇದರ ಮುಖ್ಯ ಉದ್ದೇಶವಾಗಿತ್ತು.

ಆಧುನಿಕ ಪೂರ್ವದಲ್ಲಿ ಪೌರಾಣಿಕ ಕಥೆಗಳ ವಸ್ತುವನ್ನಾಗಿಟ್ಟುಕೊಂಡು, ಕನ್ನಡ ಸಾಹಿತ್ಯ ರಚನೆಗೊಂಡಿದೆ. ಅದನ್ನು ಚರಿತ್ರೆ ಮತ್ತು ಸಾಹಿತ್ಯದ ಅಂತರ್‌ಸಂಬಂಧ ರೀತಿಯಲ್ಲಿ ಅಧ್ಯಯನಗಳು ನಡೆದಿವೆ. ಆದರೆ ಚರಿತ್ರೆ ಮತ್ತು ಪುರಾಣಗಳ ನಡುವೆ ಸಾಕಷ್ಟು ವ್ಯತ್ಯಾಸವಿದೆ ಎಂದು ಚರಿತ್ರಕಾರರು ಅಭಿಪ್ರಾಯ ಪಡುತ್ತಾರೆ. ೧೯ನೇ ಶತಮಾನದ ಕೊನೆಯ ಮತ್ತು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಪೌರಾಣಿಕ ವಸ್ತುಗಳಿಂದ ರಚನೆಗೊಳ್ಳುತ್ತಿದ್ದ, ಕನ್ನಡ ಸಾಹಿತ್ಯ ತದನಂತರ ಐತಿಹಾಸಿಕ ವಿಚಾರಗಳಿಗೆ ಸಮಕಾಲೀನ ಸಂದರ್ಭದ ಸ್ಥಿತಿಗಳನ್ನು ಸಂಯೋಜಿಸಿ ರಚನೆಗೊಂಡಿತು. ಪ್ರಮುಖವಾಗಿ ನಾಟಕವು ಈ ಮಾದರಿಯನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿತು. ಐತಿಹಾಸಿಕ ವ್ಯಕ್ತಿಗಳನ್ನು ಚಳುವಳಿಯ ನಾಯಕರುಗಳಿಗೆ, ಹೋರಾಟಗಾರರಿಗೆ ಹೋಲಿಸಿ ಅಂದಿನ ಘಟನೆಗಳನ್ನು ಜೀವಂತವಾಗಿರಿಸುವಲ್ಲಿ ಕನ್ನಡ ನಾಟಕಗಳ ಪಾತ್ರ ದೊಡ್ಡದು. ಈ ಮೂಲಕ ಇತಿಹಾಸದ ಘಟನೆಗಳು ಮರು ನಿರೂಪಣೆಗೊಳ್ಳುತ್ತಲಿದ್ದವು. ಈ ಕಾರಣಕ್ಕಾಗಿ ಕನ್ನಡ ನಾಟಕಗಳನ್ನು ಇತಿಹಾಸದ ಸಂಕಥನಗಳನ್ನಾಗಿ ನೋಡಬಹುದು. ಪೌರಾಣಿಕ ವಸ್ತುವನ್ನು ನಾಟಕವಾಗಿ ನಿರೂಪಿಸುವಾಗ ಕಾಲ್ಪನಿಕ ತೊಡಗಿಗೆ ತುಂಬಾ ಅವಕಾಶವಿರುತ್ತದೆ. ಆದರೆ ಐತಿಹಾಸಿಕ ವಸ್ತುವಿಗೆ ಅವಕಾಶಗಳು ವಿರಳ. ಕನ್ನಡದಲ್ಲಿ ಸಂಸರಿಂದ ಮೊದಲು ಐತಿಹಾಸಿಕ ನಾಟಕ ರಚನೆಗೊಂಡಿತು.(ಬೆಟ್ಟದರಸು–೧೯೨೩) ಕನ್ನಡದಲ್ಲಿ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳಿಗಿಂತ ಐತಿಹಾಸಿಕ ನಾಟಕಗಳು ಹೆಚ್ಚಾಗಿ ರಚನೆಗೊಳ್ಳಲಿಲ್ಲ. ಕಾರಣ ಭಾರತೀಯ(ಕನ್ನಡ) ಮನಸುಗಳು ಪೌರಾಣಿಕ ಮತ್ತು ಸಾಮಾಜಿಕ ವಸ್ತುಗಳಿಗೆ ಒಗ್ಗಿಕೊಂಡಷ್ಟು ಐತಿಹಾಸಿಕ ವಸ್ತುಗಳಿಗೆ ಒಗ್ಗಿಕೊಳ್ಳಲಿಲ್ಲ. ಆದರೆ ಕನ್ನಡದಲ್ಲಿ ವೃತ್ತಿರಂಗಭೂಮಿಯ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳು ಉತ್ತುಂಗತೆಯನ್ನು ಕಂಡವು.

ಎಚ್ಚಮ್ಮ ನಾಯಕ

ಕನ್ನಡದಲ್ಲಿ ಬಿ. ಪುಟ್ಟಸ್ವಾಮಿಯವರು ಷಹಜಹಾನ್ ಹಾಗೂ ಪ್ರಚಂಡ ಚಾಣಕ್ಯ ಎಂಬ ನಾಟಕಗಳನ್ನು ಬಂಗಾಳದ ನಾಟಕಕಾರರಾದ ವಿಜೇಂದ್ರ ಲಾಲ್ ಅವರನ್ನು ಅನುಸರಿಸಿ ಬರೆದಿದ್ದಾರೆ. ಬಿಚ್ಚುಗತ್ತಿಯೆಂಬ ಈ ನಾಟಕ ಮದಕರಿನಾಯಕನ ಜೀವನ ಕುರಿತು ರಚನೆಗೊಂಡಿದೆ. ವೃತ್ತಿರಂಗಭೂಮಿಯಲ್ಲಿ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳಂತೆ ೧೯೨೯ರಲ್ಲಿ ಎಚ್ಚಮನಾಯಕ ಎಂಬ ನಾಟಕ ಬರೆದರು.(ಮೇವುಂಡಿ ಮಲ್ಲಾರಿಯವರು ಎಚ್ಚಮ್ಮ ನಾಯಕನ ಕುರಿತು ಬರೆದ ಕಥೆಯನ್ನು ಗರುಡರು ನಾಟಕವಾಗಿಸಿದರು) ವಿಜಯನಗರ ಸಾಮ್ರಾಜ್ಯದ ದೊರೆ ವೆಂಕಟರಾಯರ ನಂತರ ಉತ್ತರಾಧಿಕಾರಕ್ಕಾಗಿ ನಡೆಯುತ್ತಿರುವ ಕುತಂತ್ರ ನೀತಿಗಳೇ ಈ ನಾಟಕಗಳ ಕೇಂದ್ರ. ಈ ಸಂದರ್ಭವನ್ನಿಟ್ಟುಕೊಂಡು ಗರುಡ ಸದಾಶಿವರಾಯರು ಸ್ವಾತಂತ್ರ್ಯ ಚಳುವಳಿ ಕಾಲದಲ್ಲಿ ಬ್ರಿಟಿಶರು ಭಾರತದ ಅಧಿಕಾರಕ್ಕಾಗಿ(ತಮ್ಮ ಸ್ವಹಿತಕ್ಕಾಗಿ) ಭಾರತೀಯ ಸಾಮ್ರಾಜ್ಯಗಳ, ಸಂಸ್ಥಾನಗಳ ಸ್ವಾಧೀನಕ್ಕಾಗಿ ಜಾರಿ ತಂದ ಕ್ರೂರ ನಿಯಮಗಳ ವಿರುದ್ಧ ರಾಜರುಗಳು, ಸಂಸ್ಥಾನಿಕರು ನಡೆಸಿದ ಹೋರಾಟದ ಮಾದರಿಯಲ್ಲಿ ಎಚ್ಚಮನಾಯಕ ನಾಟಕವನ್ನು ಚಿತ್ರಿಸಿದ್ದಾರೆ. ಈ ಮೂಲಕ ಪ್ರೇಕ್ಷಕರಿಗೆ(ಜನರಿಗೆ) ಎಚ್ಚಮನಾಯಕ ಸ್ವಾತಂತ್ರ್ಯ ಹೋರಾಟಗಾರನಾಗಿ ಅಭಿವ್ಯಕ್ತಗೋಳ್ಳುತ್ತಿದ್ದತ್ತಿದ್ದನು.

ವಿಜಯನಗರ ಸಾಮ್ರಾಜ್ಯದ ರಾಜ ವೆಂಕಟರಾಯನಿಗೆ ಉತ್ತರಾಧಿಕಾರಿ ಇರಲಿಲ್ಲ. ವೆಂಕಟರಾಯರು ಇರುವಾಗಲೇ ಅವರ ಮಾವ ಜಗದೇವನು ಅಧಿಕಾರಕ್ಕಾಗಿ ತನ್ನ ತಂಗಿ ಬಾಯಮ್ಮ ಬಸುರಿ ಎಂಬ ಸುಳ್ಳು ಹೇಳಿ ಅವಳ ಮಗನ ಮೂಲಕ ಅಧಿಕಾರದ ಚುಕ್ಕಾನಿ ಹಿಡಿಯುವ ಅಮಲಿನಲ್ಲಿರುತ್ತಾನೆ. ಇವರಿಬ್ಬರ ಕುತಂತ್ರ ನೀತಿಗಳು ಅಧಿಕಾರ ದಾಹದಿಂದ ಕೂಡಿರುವಂತವು. ಬ್ರಿಟಿಶರು ಭಾರತ ಅಧಿಕಾರಕ್ಕಾಗಿ ಜಾರಿಗೆ ತಂದ ಕಾನೂನುಗಳನ್ನು ಈ ನಾಟಕದಲ್ಲಿ ಬಾಯಮ್ಮ ಮತ್ತು ಜಗದೇವನ ಅಧಿಕಾರ ದಾಹಕ್ಕೆ ಹೋಲಿಸಲಾಗಿದೆ. ಹಾಗೆ ಇವರ ಕುತಂತ್ರಗಳ ನೀತಿಗಳ ವಿರುದ್ಧ ಹೋರಾಡಿ ಅಂದಿನ ರಾಜ ಸಂಸ್ಥಾನಿಕರ ಪ್ರತಿನಿಧಿಯಾಗಿ ಎಚ್ಚಮನಾಯಕನನ್ನು ಚಿತ್ರಿಸಲಾಗಿದೆ. ಇಲ್ಲಿ ಎಚ್ಚಮನಾಯಕ ಇಬ್ಬರ ದುಷ್ಟ ಕಾರ್ಯವನ್ನು ಬಯಲಿಗೆಳೆದು ಒಬ್ಬ ದೇಶ ಸೇವಕನಂತೆ, ಹೋರಾಟಗಾರನಂತೆ ಕಾಣುತ್ತಾನೆ. ವಿಜನಗರ ಸಾಮ್ರಾಜ್ಯ ಕುರಿತು ರಚನೆಗೊಂಡ ಈ ನಾಟಕದ ಉಪಶೀರ್ಷಿಕೆ 'ಕನ್ನಡದ ಕಡುಗಲಿ'.

ರಾಷ್ಟ್ರೀಯತೆಯ ಚಿಂತನೆಯ ಫಲವಾಗಿ ರಾಜ್ಯಗಳು(ಪ್ರಾಂತೀಯ) ರಚನೆಗೊಳ್ಳಬೇಕು ಎಂಬ ಆಶಾಭಾವನೆಯನ್ನು ಈ ನಾಟಕ ಒಳಗೊಂಡಿದೆ. ಎಚ್ಚಮನಾಯಕನ ಸಂಭಾಷಣೆ(ಮಾತುಗಳು)ಯಲ್ಲಿ ಕರ್ನಾಟಕ ಎಂಬ ಪದ ಮರಳಿ ಮರಳಿ ಧ್ವನಿಸುತ್ತಿರುವದು, ಕನ್ನಡ ಒಂದು ಭಾಷಿಕವಾಗಿ, ಭೌಗೋಳಿಕವಾಗಿ ಏಕೀಕರಣಗೊಳ್ಳುವ ಜರೂರನ್ನು ಮತ್ತು

ಆ ಭಾಗವಾಗಿ ಸ್ವಾತಂತ್ರ್ಯ ಚಳುವಳಿಯ ಜೊತೆಗೆನೆ ನಡೆಯುತ್ತಿರುವ ಹೋರಾಟಗಳನ್ನು ಈ ನಾಟಕ ಉದ್ಗರಿಸುತ್ತದೆ.

ಎಚ್ಚಮನಾಯಕನ ಒಂದು ಮಾತು ಹೀಗಿದೆ. ಎಚ್ಚಮನಾಯಕನ ಇನ್ನೊಂದು ಹೆಸರು ಲಕ್ಷ್ಮಣನಾಯಕ.

ಲಕ್ಷ್ಮಣ : ಇದೆ ಖಡ್ಗ ರಾಜ ಶಾಸನಕ್ಕೆ ಭಂಗವನ್ನುಂಟು ಮಾಡುವ ಆ ಜಗ ದೇವನ ರುಂಡವನ್ನು ಹಾರಿಸುವರು ಇದೇ ಖಡ್ಗ! ಪವಿತ್ರವಾದ ಕರ್ನಾಟಕ ಸಿಂಹಾಸನದ ಅಪಮಾನ ಮಾಡಲುದ್ಯುಕ್ತನಾದ ಮತ್ತು ಆತನ ಅನುಯಾಯಿಗಳು ರಕ್ತವನ್ನು ಗಟ ಗಟ ಕುಡಿದು ಝೇಂಕರಿಸುವದಿದೆ ಖಡ್ಗ! ಕರ್ನಾಟಕ ಭೂಮಾತೆ ಹಿತವನ್ನು ಹಾಳು ಮಾಡಬೇಕೆನ್ನುವ ಸ್ವಾರ್ಥಿಗಳ ಹೊಟ್ಟೆಯನ್ನು ಹರಿದುಬಡಿಯುವದಿದೆ ಖಡ್ಗ । ಸ್ವರ್ಗಸ್ಥ ಮಹಾರಾಜರ ಕೋರಿಕೆಯನ್ನು ನೆರವೇರಿಸಿ ಅವರ ಆತ್ಮಕ್ಕೆ ಶಾಂತಿಯನ್ನೀಯುವದಿದೆ ಖಡ್ಗ! ಒಟ್ಟಿನಲ್ಲಿ ಈ ಖಡ್ಗದೇವಿಯಿಂದ ಮುಂದೆ ಅನೇಕಾನೇಕ ಕಾರ್ಯಗಳಾಗತಕ್ಕವಿದೆ ದೇವಿ.

(ರಮಾಕಾಂತ ಜೋಶಿ, ಪ್ರಕಾಶ ಗರುಡ, ಗರುಡ ಸದಾಸಿವರಾಯರ ಸಮಗ್ರ ನಾಟಕ, ಸ-೨, ಪು-೧೨)

ಹೀಗೆ ಈ ನಾಟಕದಲ್ಲಿ ಹಲವಾರು ಸಲ ಕರ್ನಾಟಕ, ಕರ್ನಾಟಕ ಸಿಂಹಾಸನ ಎಂಬ ಪದಗಳು ಮರುಕಳಿಸುತ್ತವೆ. ಈ ನಾಟಕವು ಭಾರತದ ಸ್ವಾತಂತ್ರ್ಯದ ಜೊತೆಗೆ ಕರ್ನಾಟಕವು ಸ್ವಾತಂತ್ರ್ಯಗೊಳ್ಳಬೇಕೆಂಬ ಆಶಯಗಳನ್ನು ಜನರಲ್ಲಿ ಬಿತ್ತರಿಸುವ ಕೆಲಸ ಮಾಡಿದೆ.

ರಕ್ತರಾತ್ರಿ

೧೯೩೬ರಲ್ಲಿ ರಕ್ತರಾತ್ರಿ ನಾಟಕವನ್ನು ರಚಿಸಿದ ಕಂದಗಲ್ ಹನುಮಂತರಾಯರು ಅಕ್ಷಯಾಂಬರ ನಾಟಕಕ್ಕಿಂತ ಭಿನ್ನವಾದ ನಿಲುವನ್ನು ಈ ನಾಟಕದಲ್ಲಿ ತೋರುತ್ತಾರೆ. ಭಾರತದ ಬಿಡುಗಡೆಗಾಗಿ ಬ್ರಿಟಿಶರ ವಿರುದ್ಧ, ಅಹಿಂಸಾತ್ಮಕ ಹೋರಾಟಗಳನ್ನು ರೂಪಿಸಿದ ಗಾಂಧೀಜಿಯವರ ಇಂಥ ಹೋರಾಟಗಳಿಗಿಂತ ಸ್ವಾತಂತ್ರ್ಯ ಹೋರಾಟದ ತೀವ್ರಗಾಮಿ ಹೋರಾಟಗಾರರಾದ ಭಗತ್ ಸಿಂಗ್, ಚಂದ್ರಶೇಖರ್ ಆಜಾದ್ ಮುಂತಾದವರ ಹೋರಾಟದ ಮನೋಭಾವಗಳನ್ನು ಕಂದಗಲ್ಲರು ರಕ್ತರಾತ್ರಿ ನಾಟಕದ ಮೂಲಕ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಚರಿತ್ರೆಯಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಈ ತರಹದ ಭಿನ್ನಾಭಿಪ್ರಾಯಗಳನ್ನು ಹಲವಾರು ಚರಿತ್ರಕಾರರು ವ್ಯಕ್ತಪಡಿಸಿದ್ದಾರೆ. ಕುರುಕ್ಷೇತ್ರದಲ್ಲಿ ಅಭಿಮನ್ಯು ಮರಣದ ನಂತರ ಭೀಮ ಮತ್ತು ಧರ್ಮರಾಯನ ನಡುವೆ ನಡೆಯುವ ಸಂಭಾಷಣೆ. ಈ ರೀತಿ ಇದೆ.

ಧರ್ಮ : ವಿಷಯದಲ್ಲಿ ಅಮೃತ ಇಚ್ಚಿಸಿ ಕಾದಿರಬೇಕೆ ಕಣ್ಣೀರ ತುಂಬಿ ಭೀಮಾ! ಎನಿತು ಪರರ ಮಸ್ತಕಗಳೆಲ್ಲ ನೆತ್ತರದೊಳು ಮುಳುಗಿ ಮಾಯವಾಗಿಹುವು ನಿಲ್ಲಿಸಿಲಾರಿರಾ ನರಮೇಧ ಯಜ್ಞವನ್ನು ಕಟ್ಟಕಡೆಗೆ ಸತ್ತವರಿಗಾಗಿ ಅತ್ತು, ಅತ್ತು ಬಾಡಿಬತ್ತಿದ ಮುಖಗಳನ್ನು ನೋಡಿಯಾದರೂ ತಡೆಯಲಾರಿರಾ ನಿಮ್ಮ ಕೊಲೆಯ ಕೈಯ

ಭೀಮ : ಇದು ಇದುವೇ ಭೂತದಯಾ ಭೂತದವಾಣಿ! ಬೇಡೆನಗೆ ನಿನ್ನ ಮಸ್ತಕದ ಜ್ಞಾನೋಪದೇಶ ಹೇಡಿಯನ್ನಾಗಿ ಮಾಡುವ ಗೊಡ್ಡುತತ್ವದ ಕುರಿಯ ದಡ್ಡಿಯಲ್ಲಿ ಪುರುಷ ಸಿಂಹವನ್ನು ಮನುಜ ಕುರಿಯನ್ನಾಗಿರಿಸುವ ಬಲಾಬಲ ತತ್ವವನ್ನು ಸವಿದು ಸನ್ಯಾಸಿಯ ಜ್ಞಾನೋಪದೇಶ ಬೇಡನೆಗೆ ಈ ಭರತನಿಗ! ಭೋರ್ಗರೆವ ಕಡಲ ವಾಣಿಯಲಿ ಮನುಷ್ಯ ಕುರಿಗಳಿಗೆ ಸಿಂಹದೆದೆಯನು ತೊಟ್ಟು ಯಮನ ಕೋಣವ ಕುಟ್ಟಿಕೊಲ್ಲುವ ಮಧ್ಯ ತಿಳುಹಿಸಿಕೊಡುವಂತಹ ಉದ್ದಂಡ ತತ್ವವನ್ನುಂಡ ಪ್ರಚಂಡ ಪ್ರವಾದಿಯ ಪ್ರಬೋಧನೆ ಬೇಕೆನಗೆ ಈ ಭಾರತನಿಗೆ, ಧರ್ಮಜ ನಮ್ಮ ಸ್ವಾತಂತ್ರ್ಯದೊಳಗಡೆ ಭಾರತೀಯ ಸ್ವಾತಂತ್ರ್ಯ...!

ದ್ರೌಪದಿ : ಭೀಮದೇವನ ನುಡಿಯೇ ಈ ಭಾರತೀಯ ನುಡಿ ಧರ್ಮಾವತಾರ ಕೌರವ ಕೊಟ್ಟ ಕೋಟಲಿಗೆ ನಾಡಿನ ನಗೆ ಬಾಡಿತು. ಕೌರವೇಶನ ಕುಟಿಲನೀತಿ ದೇಶದೊಳು ತಂದಿಟ್ಟಿತು ದುರ್ಗತಿ. ಮನುಷ್ಯತ್ವವನ್ನು ಮಣ್ಣುಗೂಡಿಸಿಕೊಂಡ ಮಾನವರೆದೆಯ ಮಸಣದಲ್ಲಿ ಮನೆ ಮಾಡಿತು ಕದನ ಕುತೂಹಲದ ಕೀಳುಬಾಳು. ಸಮಸ್ತ ಮನುಷ್ಯ ಕುಲಕ್ಕೆ ದಿಕ್ಕು ತಪ್ಪಿಸಿದನಾ ಭೇದ ಕಲಾಪಂಡಿತ ಶಕುನಿ.(ಅದೆ, ಪುಟ.೧೩)

ಮಹಾಭಾರತದ ಕುರುಕ್ಷೇತ್ರ ಯುದ್ಧದಲ್ಲಿ ನನಗೆ ಜಯಬೇಕಾದರೆ ನಿನ್ನ ಶಾಂತಿಯ ಮಾತುಗಳು ಬೇಡೆನಗೆ, ಸಿಂಹದೆದೆಯನ್ನು ತೊಟ್ಟು ಯಮನ ವಾಹನವಾದ ಕೋಣವನ್ನು ಕೊಲ್ಲುವಂಥ ವೀರನ ಮಾತುಗಳು ಬೇಕಾಗಿದೆ. ಇದರಿಂದ ಮಾತ್ರ ಕುರುಕ್ಷೇತ್ರದಲ್ಲಿ ಗೆಲ್ಲಲು ಸಾಧ್ಯ ಎಂದು ಭೀಮ ಧರ್ಮರಾಯನನ್ನು ಕುರಿತು ಆಡುತ್ತಾನೆ. ಇಲ್ಲಿ ಸಿಂಹದೇಹ ತೊಟ್ಟ, ಕೋಣವನ್ನು ಕೊಲ್ಲುವಂತ ಉಪಮೆಗಳನ್ನು ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್‌ಸಿಂಗ್ ಚಂದ್ರಶೇಖರ್ ಆಜಾದ್ ಅವರಿಗೆ ಹೋಲಿಸಬಹುದು.

ಇದೇ ನಾಟಕದ ಇನ್ನೊಂದು ಸನ್ನಿವೇಶದಲ್ಲಿ ಮೇಲಿನ ಸನ್ನಿವೇಶಕ್ಕೆ ವಿರುದ್ಧವಾದ ಘಟನೆಯನ್ನು ಕಂದಗಲ್ಲರು ಹೆಣೆದಿದ್ದಾರೆ. ಜಗತ್ತಿನಲ್ಲಿ ಕ್ರಾಂತಿಯಿಂದ ಸ್ವಾತಂತ್ರ್ಯ ಪಡೆದ ದೇಶಗಳಲ್ಲಿ ಆದ ಸಾವುನೋವು, ಮತ್ತೆ ಎರಡು ಮಹಾಯುದ್ಧಗಳಿಂದ ಜಗತ್ತು ಕಂಡ

ಕ್ರೌರ್ಯವನ್ನು ಮನಗಂಡ ಲೇಖಕರು ನಾಟಕದ ಆರಂಭದಲ್ಲಿಯೆ ಒಂದು ಪದ್ಯದಲ್ಲಿ ಯುದ್ಧವಾಗುವ ಸ್ಥಿತಿಯನ್ನು ಹೀಗೆ ಕಟ್ಟಿಕೊಟ್ಟಿದ್ದಾರೆ. ಆ ಪದ್ಯ ಹೀಗಿದೆ.

"ಏಳೇಳು ಜನುಮಕೆ ಬೇಡಾ । ಈ ಘೋರ ಯುದ್ಧದ ಸುದ್ದಿ ॥ಪ॥
ಬಟ್ಟೆಗಿಲ್ಲದ ಗೋಳಾಟ । ಹೊಟ್ಟೆಪಾಡಾ । ರಾಜರಾಜರ
ಯುದ್ಧದಲ್ಲಿ ಜನಸಂಹಾರ ॥
ಬಡವ ಸತ್ತನೋ ಬಡವಿ ಸತ್ತಳೊ ಬಾಲಕರ ಗೋಳು
ಸಾಲದಲೇ ಕೂಳಾ
ಹರೆಯದವರ ಸಾಳಾ ಸುರಿಸುವಳು ತಾರಿ ಕಣ್ಣಿರಾ
ರುಂಡ ಮುಂವು ಹೆಣದ ಬಣವೆ ನಾಯಿ ನರಿಗಳ
ಮುದ್ದಾ ಈ ಯುದ್ದ
ಸತ್ತ ಸುದ್ದಿ ಹೇಳುವರಿಲ್ಲ ಸತ್ತರ್ದ ಸಂಖ್ಯೆ
ಕೇಳುವವರಿಲ್ಲ."(ಕಂದಗಲ್ಲ ಹನುಮಂತರಾಯ, ರಕ್ತರಾತ್ರಿ, ಪು–೩)

ಯಾವುದೇ ಒಂದು ದೇಶದ ಸ್ವಾತಂತ್ರ್ಯಕ್ಕಾಗಿ ನಡೆಯುವ ಯುದ್ದದಿಂದಾದ ಆ ಪ್ರದೇಶದ ಜನರ ಸ್ಥಿತಿಯನ್ನು ಈ ಪದ್ಯ ಚಿತ್ರಿಸಿದೆ. ಯುದ್ದ ಸ್ವಾತಂತ್ರ್ಯಕ್ಕೆ ದಾರಿಯು ಅಲ್ಲ ಎಂಬುವದನ್ನು ಈ ಪದ್ಯ ಅರ್ಥೈಸುತ್ತದೆ. ಮತ್ತು ಅಂದು ಅಹಿಂಸಾ ತತ್ವವೆ ಭಾರತದ ಸ್ವಾತಂತ್ರ್ಯ ಚಳುವಳಿಯ ಆತ್ಮ ಎಂಬುದನ್ನು ಜನರಿಗೆ ತಿಳಿಸುತ್ತದೆ. ಮತ್ತು ಇಂದಿಗೂ ಆ ನಾಟಕ ಹೆಚ್ಚು ಪ್ರದರ್ಶನಗೊಳ್ಳುತ್ತಿರುವದು ಇಂತ ಕಾರಣಗಳಿಗಾಗಿಯೆ.

೪.೨. ವಸ್ತು ಕೇಂದ್ರಿತ ನೆಲೆ

ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಮರು ಕಟ್ಟುವಿಕೆಯಲ್ಲಿ ಕನ್ನಡ ನಾಟಕಗಳ ಪಾತ್ರ ಗಣನೀಯವಾದದ್ದು. ಜಲಮಾರ್ಗ ಶೋಧನೆಯ ನಂತರ ಯುರೋಪಿಯನ್ನರ ವ್ಯಾಪಾರದ ನೀತಿಗಳು ಬಂಡವಾಳಶಾಹಿಗೆ ಪ್ರಾಮುಖ್ಯತೆ ಕೊಟ್ಟವು. ಅದಕ್ಕಾಗಿ ಬ್ರಿಟಿಶರು ಭಾರತವನ್ನು ವಸಾಹತುವನ್ನಾಗಿ ನಿರ್ಮಿಸಿ, ಮಾರುಕಟ್ಟೆಯ ಕೇಂದ್ರವನ್ನಾಗಿ ಮಾರ್ಪಡಿಸಿಕೊಂಡರು ತಮಗೆ ಅನುಕೂಲವಾಗಲು ಸ್ಥಳೀಯ ಆಡಳಿತಕ್ಕೂ ತಮ್ಮನ್ನು ವಿಸ್ತರಿಸಿಕೊಂಡು, ಅನೇಕ ಕಾನೂನುಗಳನ್ನು ಜಾರಿಗೆ ತಂದರು. ಈ ಕಾನೂನುಗಳು ಸ್ಥಳೀಯ ಆಡಳಿತಕ್ಕೆ ಮಾರಕವಾಗಿದ್ದವು. ಪರಿಣಾಮವಾಗಿ ಭಾರತದ ಹಲವಾರು ಸಂಸ್ಥಾನಗಳು ಬ್ರಿಟಿಶ್ ಆಡಳಿತಕ್ಕೆ ಒಳಪಟ್ಟವು. ೧೮೫೭ರಲ್ಲಿ ನಡೆದ ದಂಗೆಗೆ ಮುಖ್ಯ ಕಾರಣ ಇವೇ

ನೀತಿಗಳು. ಇಂತಹ ವಿಷಯ ವಸ್ತುಗಳನ್ನು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಕನ್ನಡ ನಾಟಕ ಸಾಹಿತ್ಯ ಮರು ನಿರೂಪಿಸುವುದರ ಮೂಲಕ ಜನಸಾಮಾನ್ಯರ ಕಡೆಗೆ ಸ್ವಾತಂತ್ರ್ಯ ಚಳುವಳಿಯನ್ನು ತೆಗೆದುಕೊಂಡು ಹೋಯಿತು.

ನಾಟಕ ಪ್ರಕಾರ ವಸಾಹತುಶಾಹಿ ಸಂದರ್ಭದ ಕೂಸು, ಇದಕ್ಕಿಂತ ಮೊದಲು ಮಿತ್ರವಿಂದ ಗೋವಿಂದ ಹೊರತುಪಡಿಸಿದರೆ ನಾಟಕ ಸೃಷ್ಟಿಯಾದುದ್ದು ವಸಾಹತು ಸಂದರ್ಭದಲ್ಲಿಯೇ ಕಾದಂಬರಿ ಮತ್ತು ನಾಟಕ ಇವೆರಡಕ್ಕೂ ಈ ಮಾತಿದೆ. ಅಂತಹ ನಾಟಕ ಪ್ರಕಾರವನ್ನು ಅನುವಾದದ ಮೂಲಕ ಇದಿರುಗೊಂಡ ಕನ್ನಡ ಸಂದರ್ಭ ಸೃಜನಶೀಲ ನೆಲೆಯನ್ನು ನಂತರ ಪಂಥಾಹ್ವಾನವಾಗಿ ಸ್ವೀಕರಿಸಿತು. ಇಂಥ ತುರ್ತಿನಲ್ಲಿ ಪೌರಾಣಿಕ ಹಿನ್ನೆಲೆಯುಳ್ಳ ನಾಟಕಗಳು ವಸ್ತುವಿಷಯಗಳಾಗಿ ರಾರಾಜಿಸಿದವು. ನಂತರ ಸಾಮಾಜಿಕ ಕೌಟುಂಬಿಕ ಆಶಯಗಳುಳ್ಳ ನಾಟಕಗಳು ಸೇರ್ಪಡೆಯಾದವು.

ಸಾಮಾಜಿಕ ಕೌಟುಂಬಿಕ ನಾಟಕಗಳಲ್ಲಿ ಅನೇಕ ವಿಭಿನ್ನ ವಸ್ತುವಿಷಯ ಆಶಯಗಳು ಗೋಚರಿಸಿದವು. ಅಂದು ಒದಗಿಬಂದ ಶಿಕ್ಷಣಕ್ರಮ, ಪತ್ರಿಕೆ, ಅಂಚೆ, ದೂರವಾಣಿ, ಸಾರಿಗೆ ಸೌಕರ್ಯಗಳು ಏಕಕಾಲಕ್ಕೆ ಅಗತ್ಯವನ್ನು ಪೂರೈಸುತ್ತಲೆ ಅನಿವಾರ್ಯವನ್ನು ಸೃಷ್ಟಿಸಿದವು. ಹೀಗಾಗಿ ವಿಧವಾವಿವಾಹ, ಅಸ್ಪೃಶ್ಯತೆ, ಸಾಮಾಜಿಕ ಕಳಕಳಿ, ಸಾಮಾಜಿಕ ಬದ್ಧತೆ ಇತ್ಯಾದಿ ವಿಚಾರಗಳು ನಾಟಕದ ವಸ್ತುವಿಷಯಗಳಾದವು

ಬದಲಾದ ಸಂದರ್ಭದಲ್ಲಿ ಆದರ್ಶ ಮತ್ತು ವಾಸ್ತವಗಳ ತಾಕಲಾಟ, ಗೊಂದಲಗಳಿಂದಾಗಿ ಜನರಲ್ಲಿ ವಿಚಾರಪರತೆ ಹೆಚ್ಚಾಯಿತು. ಇನ್ನೂ ಕೆಲವು ಸಂದರ್ಭಗಳಲ್ಲಿ ಪರಿಸರ ಮತ್ತು ಪರಿಸ್ಥಿತಿ ಒತ್ತಡದಿಂದಾಗಿ ಜನರಿಗೆ ತಮ್ಮ ತನದ ಜಾಗೃತಿ ಉಂಟಾಯಿತು. ಆ ಅಸ್ಮಿತೆಯ ಕಾರಣದಿಂದಾಗಿ ರಾಷ್ಟ್ರೀಯತೆ ಮತ್ತು ದೇಶದ ಬಗೆಗೆ ಕರ್ತವ್ಯಪರತೆ ಹೆಚ್ಚಾಯಿತು. ಇನ್ನೊಂದು ಕಾರಣ ವಸಾಹತು ಸಂದರ್ಭದಲ್ಲಿ ಪರದಾಡದೇ ತಮ್ಮ ಅಸ್ಮಿತೆಯನ್ನು ಗುರುತಿಸುವ ಪ್ರಕ್ರಿಯೆ(ಪ್ರತ್ಯಭಿಜ್ಞಾನ) ಆರಂಭಗೊಂಡಿತು. ಈ ಎಲ್ಲಾ ಕಾರಣಗಳಿಂದಾಗಿ ಸ್ವಾತಂತ್ರ್ಯ ಸಂದರ್ಭ ಕೇವಲ ರಾಜಕೀಯಕ್ಕೆ ಮಾತ್ರ ಸೀಮಿತವಾಗದೆ ಸಾಹಿತ್ಯಿಕ, ಭಾಷಿಕ, ಸಾಮಾಜಿಕ, ಶೈಕ್ಷಣಿಕ, ಚಾರಿತ್ರಿಕ ಇತ್ಯಾದಿ ಕ್ಷೇತ್ರಗಳಲ್ಲೂ ತನ್ನ ಛಾಪು ಮೂಡಿಸಿತು.

ಈ ಸಂದರ್ಭವನ್ನು ಭಾರತೀಯ ಭಾಷೆಗಳಂತೆ ಕನ್ನಡವು ಕೂಡ ಅಭಿವ್ಯಕ್ತಿಸಲು ಪ್ರಾರಂಭಿಸಿತು. ಅಂತೆಯೇ ಕನ್ನಡದ ಎಲ್ಲಾ ಪ್ರಕಾರಗಳಲ್ಲಿ ಸ್ವಾತಂತ್ರ್ಯ ಸಂದರ್ಭ ಅನುರಣಿಸಿತು. ನಾಟಕ ಪ್ರಕಾರವು ಕೂಡಾ ಅದನ್ನು ತನ್ನ ಆಶಯವಾಗಿ ಸ್ವೀಕರಿಸಿತು. ಸ್ವಾತಂತ್ರ್ಯ ಸಂದರ್ಭವನ್ನು ನೇರ ಭೂಮಿಕೆಯಾಗಿ ಕೆಲವು ಕೃತಿಗಳು ನಿರೂಪಿಸಿದರೆ, ಕೆಲವು ಅದರ ಆಶಯವನ್ನು ಗ್ರಹಿಸಿದ, ಇಲ್ಲವೇ ವಿಸ್ತರಿತ ಭೂಮಿಕೆಗಳಾಗಿ ರೂಪುಗೊಂಡಿದೆ. ಅಲ್ಲದೇ ನಾಟಕ ಪ್ರಕಾರಕ್ಕಿರುವ

ಅಸಂಖ್ಯಾತ ಪ್ರೇಕ್ಷಕ ಅಥವಾ ಓದುಗ ವರ್ಗ ಇವೆರಡು ನೆಲೆಯಿಂದ ಇದನ್ನು ಗ್ರಹಿಸುವ ಅಗತ್ಯವಿದೆ.

ತೊಗಲುಗೊಂಬೆ ಸಣ್ಣಾಟ, ಮೂಡಲಪಾಯ, ಯಕ್ಷಗಾನ, ತಾಳಮದ್ದಲೆ, ಬಯಲಾಟಗಳು ಮೇಲಿನವುಗಳಂತೆ ಭಿನ್ನ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವು. ನಂತರ ಬ್ರಿಟಿಶ್ ಆಗಮನ, ವಸಾಹತುಶಾಹಿಯ ಪರಿಸರದ ಪ್ರಭಾವ ಪ್ರವೇಶಗಳಿಂದ ಕನ್ನಡ ಸಾಹಿತ್ಯ ಪ್ರೇರಣೆಗೊಂಡಂತೆ, ನಾಟಕ/ರಂಗಭೂಮಿಯು ಅದರ ಪ್ರಭಾವಕ್ಕೆ ಒಳಗಾಯಿತು. ಆ ಕಾಲದ ಪರಿಸ್ಥಿಯನ್ನು ತನ್ಮೂಲಕ ಪ್ರೇಕ್ಷಕರಿಗೆ ತಿಳಿಸುವ ದೊಡ್ಡ ಜವಾಬ್ದಾರಿಯನ್ನು ಕನ್ನಡ ರಂಗಭೂಮಿ/ನಾಟಕಗಳು ನಿಭಾಯಿಸಿದವು. ಸ್ವಾತಂತ್ರ್ಯ ಚಳುವಳಿ ಸಂದರ್ಭದಂತ ಸಂದಿಗ್ಧ ಪರಿಸ್ಥಿತಿಯಲ್ಲಿ ಆಧುನಿಕತೆಗೆ ತೆರೆದುಕೊಂಡ ಕನ್ನಡ ನಾಟಕಗಳು ವಸ್ತು, ಸಂಗೀತ, ತಾಂತ್ರಿಕತೆ, ಭಾಷೆ ಇವೆ ಮುಂತಾದ ಅಂಶಗಳನ್ನು ಅಂದಿನ ಕಾಲದ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಹೊಂದಿಕೆಯಾಗುವಂತೆ ರಚನೆಗೊಳಿಸಿಕೊಂಡವು. ರಾಷ್ಟ್ರೀಯತೆ, ದೇಶಭಕ್ತಿ, ದೇಶಪ್ರೇಮ, ಸ್ವಾತಂತ್ರ್ಯ, ಸಾಮಾಜಿಕ ಅಸ್ಪೃಶ್ಯತೆ, ಏಕೀಕರಣದಂತ ಸಮಸ್ಯೆಗಳನ್ನು ತನ್ಮೂಲಕ ಪ್ರದರ್ಶಿಸಿ ಜನರಿಗೆ ಇವುಗಳ ಕುರಿತು ಅರಿವು ಮೂಡಿಸುವ ಪ್ರಯತ್ನ ಮಾಡಿದವು. ಆ ಭಾಗವಾಗಿ ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ತಮ್ಮನ್ನು ತೊಡಗಿಸಿಕೊಂಡಿವೆ. ಹಾಗೇ ನಾಟಕಕಾರರು ಸ್ವಾತಂತ್ರ್ಯ ಚಳುವಳಿಗೆ ನಾಟಕಗಳ ಮೂಲಕ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರತಿಕ್ರಿಯಿಸಿದ್ದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಕನ್ನಡದ ಕಾವ್ಯ ಕಥನ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಬಂಗಾಳ ಸಾಹಿತ್ಯವು ಕನ್ನಡ ರಂಗಭೂಮಿಯ ಮೇಲೂ ಪ್ರಭಾವ ಬೀರಿದ್ದು ಗಮನಾರ್ಹ. ಹಾಗೆ ಪಾಶ್ಚಾತ್ಯರ ಆಗಮನವೂ ಭಾರತದ ಪರಿಸರಕ್ಕೆ ಸಾಹಿತ್ಯ, ಸಂಸ್ಕೃತಿ, ಧರ್ಮದ ಜೊತೆಗೆ ಕಲೆಗಳನ್ನು ಬೆಸೆಯಿತು. ಈ ವಸಾಹಶಾಹಿ ಆಗಮನದಿಂದ ವಸಾಹತು ಭಾರತದಲ್ಲಾದ ಬದಲಾವಣೆಗಳು ಕನ್ನಡ ರಂಗಭೂಮಿ, ನಾಟಕ ಸಾಹಿತ್ಯಕ್ಕೆ ಬೇಕಾದ ಪರಿಸರವನ್ನು ನಿರ್ಮಿಸಿತು. ಇದರಿಂದ ರಂಗಭೂಮಿ ತನ್ನ ಸ್ವರೂಪದಲ್ಲಿ ಹಲವಾರು ಬದಲಾವಣೆಗಳನ್ನು ಕಂಡುಕೊಂಡಿತು. ರಚನೆಯಲ್ಲಿ ಮೊದಲಿಗಿದ್ದ ಭಕ್ತಿ, ಪೌರಾಣಿಕ ವಸ್ತುಗಳ ಜೊತೆಗೆ ಐತಿಹಾಸಿಕ ಮತ್ತು ಸಾಮಾಜಿಕ ವಸ್ತುಗಳನ್ನು, ಘಟನೆಗಳನ್ನು ಅಳವಡಿಸಿಕೊಂಡೇ ಭೌತಿಕವಾಗಿ ಥೇಟರ್ ಎಂಬ ಕಲ್ಪನೆಯ ರಂಗ ಮನೆಯನ್ನು ನಿರ್ಮಿಸಿಕೊಂಡಿತು. ಜೊತೆಗೆ ಆರ್ಥಿಕವಾಗಿಯೂ ವ್ಯವಹಾರಕ್ಕಿಳಿಯಿತು. ಅಂದರೆ ಹಣವನ್ನು ಕೊಟ್ಟು ನಾಟಕಗಳನ್ನು ನೋಡುವ ಪದ್ದತಿ ಜಾರಿಗೆ ಬಂದಿತು. ಚಳುವಳಿಯ ಭಾಗವಾಗಿ ರಾಷ್ಟ್ರೀಯ ಜಾಗೃತಿ, ಗಾಂಧೀ ಪ್ರಣಿತ ಅಸ್ಪೃಶ್ಯತಾ ನಿವಾರಣೆ, ಸ್ವದೇಶ ಪ್ರೇಮ, ವಿದೇಶಿ ವಸ್ತು ಬಹಿಷ್ಕಾರ, ಚಲೇಜಾವ್ ಚಳುವಳಿ, ಅಹಿಂಸಾತ್ಮಕ

ಹೋರಾಟ, ಖಾದಿ ಪ್ರಚಾರ, ಪ್ರಗತಿಪರ ಸಾಮಾಜಿಕ ಬದಲಾವಣೆಗಳು, ೧೮೦೦ ರಿಂದ ೧೯೪೭ರವರೆಗೆ ನಡೆದ ಹೋರಾಟಗಳು ನಾಟಕದ ಪ್ರಮುಖ ವಸ್ತುಗಳಾದವು. ಇವುಗಳಿಗೆ ಕನ್ನಡ ನಾಟಕ ಸಾಹಿತ್ಯ ಹೇಗೆ ಪ್ರತಿಕ್ರಿಯಿಸಿತು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಕಂಸವಧ

ಭಾರತದ ರಾಷ್ಟ್ರೀಯ ಚಳುವಳಿಯ ಉಚ್ಛ್ರಾಯ ಕಾಲಘಟ್ಟದಲ್ಲಿ ನಾಟಕ ರಚನೆಗೆ ತೊಡಗಿದ ಗರೂಡರು ತಮ್ಮ ಎಲ್ಲ ನಾಟಕಗಳಲ್ಲೂ ರಾಷ್ಟ್ರೀಯ ಚಳುವಳಿಯ ಅಂಶಗಳನ್ನು ಪರೋಕ್ಷವಾಗಿ ಬಿತ್ತುತ್ತಿದ್ದರು. ಅವರ ನಾಟಕಗಳ ಉಪಶೀರ್ಷಿಕೆಗಳೆ ಆ ಮಾತನ್ನು ಪುಷ್ಟೀಕರಿಸುತ್ತವೆ. ಅದಕ್ಕಾಗಿ ಗರೂಡರ ನಾಟಕಗಳು ಬ್ರಿಟಿಶರ ಕೆಂಗಣ್ಣಿಗೆ ಗುರಿಯಾಗಿದ್ದುಂಟು. ಹೆಚ್ಚಾಗಿ ಪೌರಾಣಿಕ ನಾಟಕಗಳನ್ನು ಬರೆದಿದ್ದರೂ ಅವುಗಳ ದೃಶ್ಯ ಸಂಯೋಜನೆ, ಪಾತ್ರಗಳ ವಿನ್ಯಾಸ, ಸಂಭಾಷಣೆಗಳಲ್ಲಿ ಅಂದಿನ ದೇಶದ ವಾಸ್ತವ ಸ್ಥಿತಿಯನ್ನು ಪ್ರತಿನಿಧಿಸುತ್ತಿದ್ದರು. ವೃತ್ತಿರಂಗ ನಾಟಕಗಳ ಉಪರ್ಶಿಕೆಗಳೆ ಕನ್ನಡ ನಾಟಕಗಳ ಧ್ವನಿಯಾಗಿತ್ತು. ಉದಾಹರಣೆಗೆ ಕಂಸವಧ ನಾಟಕಕ್ಕೆ ಮಾತೃಬಂಧ ವಿಮೋಚನೆ, ಕೀಚಕವಧಕ್ಕೆ ಅಜ್ಞಾತವಾಸ, ಲಂಕಾದಹನಕ್ಕೆ ಸ್ವಜನೋದ್ಧಾರ ಮುಂತಾದವುಗಳನಗನ್ನು ಗಮನಿಸಬಹುದು.

ರಾಷ್ಟ್ರೀಯ ಪ್ರಜ್ಞೆ ಉಚ್ಛ್ರಾಯಗೊಂಡ ಕಾಲದಲ್ಲಿಯೆ ರಚನೆಗೊಂಡ ಕಂಸವಧ ನಾಟಕವು ಬಾಲಗಂಗಾಧರ ತಿಲಕರ 'ಸ್ವರಾಜ್ಯ' ಚಳುವಳಿಯ ಪ್ರೇರಣೆಯಿಂದ ರಚನೆಗೊಂಡಿದ್ದರೂ ವ್ಯಕ್ತಿ ಹಿನ್ನೆಲೆಯಲ್ಲಿಯೇ ಈ ನಾಟವನ್ನು ಗಮನಿಸಬಹುದು. ಗರುಡ ಸದಾಶಿವರಾಯರು ಈ ನಾಟಕ ರಚನೆಗೆ ಪೌರಾಣಿಕ ಕಥೆಯನ್ನು ತೆಗೆದುಕೊಂಡಿದ್ದಾರೆ. ಪೌರಾಣಿಕ ಕತೆಯ ಸಾಮಗ್ರಿಗಳ ಮೂಲಕ ವರ್ತಮಾನದ ಆಶಗಳನ್ನು ಕಟ್ಟಿಕೊಟ್ಟಿದ್ದಾರೆ. 'ಕಂಸವಧ' ಎಂಬುದು ಪೌರಾಣಿಕ ಕತೆಯ ಒಂದು ಸನ್ನಿವೇಶವಾಗಿದ್ದರೂ ಇಲ್ಲಿ ಕಂಸನನ್ನು ಬ್ರಿಟಿಶ್ ಅಧಿಕಾರಿಗಳಿಗೆ ಹೋಲಿಸಿ ಅವರ ನಿರ್ನಾಮದಿಂದಲೇ ಭಾರತದ ಬಿಡುಗಡೆ ಹೊಂದಲು ಸಾಧ್ಯ, ಹಾಗಾಗಿ ಈ ನಾಟಕಕ್ಕೆ ಮತ್ತೊಂದು ಹೆಸರೆಂದರೆ 'ಮಾತೃಬಂಧ ವಿಮೋಚನೆ'.

ಕನ್ನಡ ನಾಟಕಗಳು ಬ್ರಿಟಿಶ್ ವಿರೋಧಿ ಭಾವನೆಗಳನ್ನು ಜನರಲ್ಲಿ ಮೂಡಿಸುತ್ತಿರುವುದನ್ನು ಮನಗಂಡು ಬ್ರಿಟಿಶ್ ಸರಕಾರವು ಕನ್ನಡ ನಾಟಕಗಳ ಪ್ರದರ್ಶನಕ್ಕೆ ಅನುಮತಿ ನೀಡುತ್ತಿರಲಿಲ್ಲ. ಹಾಗಾಗಿ ನಾಟಕಕಾರರು ನಾಟಕದ ಮುಖ್ಯ ಶೀರ್ಷಿಕೆಗೊಂದು ಉಪಶೀರ್ಷಿಕೆಯಾಗಿ ಮತ್ತೊಂದು ಹೆಸರನ್ನು ಇಡುತ್ತಿದ್ದರು. ಈ ಉಪ ಶೀರ್ಷಿಕೆಯೇ ನಾಟಕದ ಆಶಯಗಳನ್ನು ಒಳಗೊಂಡಿರುತ್ತಿತ್ತು. ಹೀಗೆ ಬ್ರಿಟಿಶರ ಕೆಂಗಣ್ಣಿಗೆ ಗುರಿಯಾದ ಎಷ್ಟೋ ಕನ್ನಡ ನಾಟಕಗಳು, ನಾಟಕ ಕಂಪನಿಗಳು ಸೆನ್ಸಾರಿಗೆ ಒಳಗಾಗಿದ್ದವು.

ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಸಾತಂತ್ರ್ಯವನ್ನು ತಮ್ಮ ನಾಟಕಗಳ ಮೂಲಕ ಸಂಘಟನಾತ್ಮಕ ಸಾಮಾಜಿಕ ಚಳುವಳಿಯ ಪ್ರಯತ್ನವನ್ನು ರಂಗಭೂಮಿಯಲ್ಲಿಯೇ ನಡೆಸಿದ ಗರುಡ ಸದಾಶಿವರಾಯರು 'ಸಮಾನತೆ'ಯ ಆಶಯವುಳ್ಳ ಸನ್ನಿವೇಶಗಳನ್ನು ತಮ್ಮ ನಾಟಕಗಳಲ್ಲಿ ಚಿತ್ರಿಸುತ್ತಿದ್ದರು. ಬೇದ-ಭಾವ ಇಲ್ಲದೆ ಎಲ್ಲರೂ ಸಮಾನರು ಎಂಬ ತತ್ವವು ಭಾರತೀಯ ಸ್ವಾತಂತ್ರ್ಯಕ್ಕೆ ವೇದಿಕೆಯಾಗಬಲ್ಲುದು ಎಂಬ ಆಶಯಗಳನ್ನು ಜಪಿಸುವ ಒಂದು ಸನ್ನಿವೇಶ ಹೀಗಿದೆ - ಶ್ರೀಕೃಷ್ಣನು ಶಕಟ ಎಂಬ ಕಂಸನ ಪರಿವಾರವನ್ನು ಕೊಂದು ಹಾಕಿದ್ದಕ್ಕಾಗಿ ವಿಜಯ ಮತ್ತು ಅವರ ವಾರಿಗೆಯವರು ಕೃಷ್ಣನಿಗಾಗಿ ವಿಶೇಷ ಕೂಟವನ್ನು ಏರ್ಪಡಿಸುತ್ತಾರೆ. ಆಗ ಎಲ್ಲರೂ ತಮ್ಮ ತಮ್ಮ ಬುತ್ತಿಗಳನ್ನು ಬಿಚ್ಚಿ ಕೃಷ್ಣನಿಗೆ ಕೊಡಲು ಹೋದಾಗ ಕೃಷ್ಣ ಹೀಗೆ ಹೇಳುವನು.

'ವರಮಿತ್ರರೇ ಕೇಳಿರಯ್ಯ ಒರೆವೆನ್ನಚಿತ ವಚನವೀಗ ತೋರಿಹುದು
ಮನಕೆರೆಯಾ ಬೆರೆಸಿ ಸಕಲ ಖಾದ್ಯನೊಂದಾಗಿ ಪರಮಾನಂದದಿ
ಭೋಜನವ ಮಾಡಿ ಪರಿಕ್ಷಿಸುವಾ ರುಚಿಯಾ'

(ರಮಾಕಾಂತ ಜೋಷಿ, ಪ್ರಕಾಶ ಗರುಡ,(ಸಂ) ಗರುಡ ಸದಾಶಿವರಾಯರ ಸಮಗ್ರ ನಾಟಕ ಸಂಪುಟ, ಪುಟ-೩೭೧) ಎಂದು ಹಾಡಿ ಹೇಳುವನು. ಎಲ್ಲರೂ ತಮ್ಮ ತಮ್ಮ ಬುತ್ತಿಗಂಟನ್ನು ಬಿಚ್ಚಿ ಕಲೆಸುವರು ಸಾಗಲಿ; ಮಿತ್ರರೆ ಈಗ್ಗೇ ನೋಡಿದಿರಾ ಈ ಬುತ್ತಿಗಳ ಸಮ್ಮೀಲನಕ್ಕೊಂದು ಸ್ವರ್ಗೀಯ ರುಚಿಯು ಬಂದಿರುವುದು.(ಅದೆ, ಪು-೩೭೧)

ಇಂಥ ಸಾಂಕೇತಿಕ ಸನ್ನಿವೇಶ, ಸಂಭಾಷಣೆಗಳಿಂದ ಆ ಕಾಲದ ವರ್ತಮಾನದ ರಾಜಕೀಯ ನೆಲೆಗಳಿಗಾಗಿ ಜನಸಾಮಾನ್ಯರನ್ನು ಅಣಿಗೊಳಸುವಲ್ಲಿ ಕಂಸವಧ ನಾಟಕವ ಪ್ರಯತ್ನಿಸಿದೆ. ಮತ್ತೊಂದು ಸನ್ನಿವೇಶವಾದ ವಸುದೇವ ಮತ್ತು ದೇವಕಿಯ ಕಾರ್ಯಾಗೃಹದ ಸಂದರ್ಭವು ಬ್ರಿಟಿಶರ ಹಿಂಸೆಯ ರೂಪಕವಾಗಿ ಚಿತ್ರಿತಗೊಂಡಿದೆ. ದೇವಕಿ ಹಾಡಿನ ಮೂಲಕ ಬಂಧನದ ವೇದನೆಯನ್ನು ಹೀಗೆ ಹೇಳುವಳು.

'ದೇವಕಿ : ತೀರುವುದೆಂದಿಗೆ ಕಾರಾಗೃಹದಾ ದಾರುಣವಾಸವು ಭೋ ಪರಮೇಶಾ ಯಾವಪರಾಧಕೆ ದೇವನೆಯೆವಗೆ ನೀ ವಿಧಿಸಿದ್ಯೆ ಈ ಶಿಕ್ಷೆಯನು'.(ಅದೆ, ಪುಟ-೩೮೨)

"ವಸುದೇವ ದೇವಕಿಯನ್ನು ಬಂಧನದಲ್ಲಿಟ್ಟು ಹಿಂಸಿಸುವರು ಕಂಸನ ಸರ್ವಾಧಿಕಾರಿ ಮನೋಭಾವದ ಪ್ರತಿಕಾರವಾದಂತೆ ಕಾಣುತ್ತದೆ. ಅದು ಬ್ರಿಟಿಶರ ದಬ್ಬಾಳಿಕೆಯ ಸಂಕೇತವೆಂಬುದನ್ನು ಜನ ಸುಲಭವಾಗಿ ಅರಿತರು. ಬಿಜಾಪುರ ಕ್ಯಾಂಪಿನಲ್ಲಿ ಈ

ನಾಟಕ ನಡೆಯುತ್ತಿದ್ದಾಗ ಅದರಲ್ಲಿನ ಸಂಭಾಷಣೆಗಳ ಮರ್ಮವನ್ನರಿತ ಬ್ರಿಟಿಶ್ ಕಲೆಕ್ಟರರು ನಾಟಕವನ್ನು ಆಡದಂತೆ ತಡೆಯೊಡ್ಡಿದ್ದ ನಿದರ್ಶನವೂ ಉಂಟು"(ಬಸವರಾಜ ಜಗಜಂಪಿ, ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ಪು-೨೩೬)

ಸಮಕಾಲೀನ ಸಮಸ್ಯೆಯ ಬಿಂಬದಂತೆ ಗೋಚರಗೊಂಡ ಮರಾಠಿಯ ಕೆ.ಪಿ.ಖಾಡಿಲ್ಕೆರರ ಈ ನಾಟಕವನ್ನು ಗರುಡರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಲಂಕಾದಹನ

ರಾಷ್ಟ್ರೀಯ ಚಳುವಳಿಯ ರಾಜಕೀಯ ಪ್ರಜ್ಞೆಯ ಅಂಶಗಳನ್ನು ತಮ್ಮ ಪೌರಾಣಿಕ ವಸ್ತುವುಳ್ಳ ನಾಟಕಗಳ ಮೂಲಕ ಪ್ರಚುರಪಡಿಸುತ್ತಿದ್ದ ಗರುಡ ಸದಾಶಿವರಾಯರು, ಹೆಚ್ಚಾಗಿ ಪೌರಾಣಿಕ ವಸ್ತುಗಳನ್ನು ಸ್ವಾತಂತ್ರ್ಯ ಚಳುವಳಿಯ ಸಮಕಾಲೀನ ಸಂದರ್ಭಗಳಿಗೆ ದುಡಿಸಿಕೊಂಡ ನಾಟಕಕಾರರಲ್ಲಿ ಪ್ರಮುಖರು. ಗಾಂಧಿ ಚಿಂತನೆಗಳ ಪ್ರಭಾವಕ್ಕೆ ಒಳಗಾದ ಗರುಡರ ನಾಟಕಗಳಲ್ಲಿ ಆ ನಾಯಕರ ಪರೋಕ್ಷ ಪ್ರತಿನಿಧಿಸುವಿಕೆಯನ್ನು ಢಾಳವಾಗಿ ಕಾಣಬಹುದು. ಅಂತಹ ನಾಟಕಗಳಲ್ಲಿ 'ಲಂಕಾದಹನ'ವೂ ಒಂದು. 'ಸ್ವಜನೋದ್ಧಾರ' ಈ ನಾಟಕದ ಮತ್ತೊಂದು ಹೆಸರು. ರಾಮಾಯಣದ ಕಥೆಯನ್ನು ಒಳಗೊಂಡ ಈ ನಾಟಕ ರಾಮಾಯಣದ ಲಂಕಾಪ್ರವೇಶದ ಒಂದು ಸನ್ನಿವೇಶದ ಮೂಲಕ ಬ್ರಿಟಿಷರ ವಿರುದ್ಧ ಭಾರತದ ಬಿಡುಗಡೆಗಾಗಿ ಚಳುವಳಿಗಾರರ ಶ್ರಮ, ಅವರ ಮಾತಿನ ವೈಖರಿ ಇವೆ ಮುಂತಾದ ಅಂಶಗಳನ್ನು ಇಲ್ಲಿ ರಾವಣ ಮತ್ತು ಹನುಮಂತನ ನಡುವೆ ನಡೆಯುವ ಸಂಭಾಷಣೆಯ ಮೂಲಕ ಗುರುತಿಸಬಹುದು. ರಾವಣನನ್ನು ಬ್ರಿಟಿಶ್ ಅಧಿಕಾರಿಯಾಗಿ, ಹನುಮಂತನನ್ನು ಸ್ವಾತಂತ್ರ್ಯ ಹೋರಾಟದ ಚಳುವಳಿಗಾರರನ್ನಾಗಿ ಚಿತ್ರಿಸಿದ್ದಾರೆ. ಸೀತೆಯನ್ನು ಭಾರತಾಂಬೆಯಾಗಿ ಪ್ರತಿನಿಧಿಯಂತೆ ಭಾವಿಸಿಕೊಳ್ಳಬಹುದು. ಬ್ರಿಟಿಷರ ಕಪಿಮುಷ್ಟಿಯಿಂದ ಭಾರತಾಂಬೆಯ ವಿಮೋಚನೆಯಂತ ಅಂಶಗಳು ನಾಟಕಗಳಲ್ಲಿ ಗರುಡರು, ಹನುಮಂತ ಮತ್ತು ರಾವಣನ ಪಾತ್ರಗಳ ಮೂಲಕ ಎದುರು ಮಾಡಿದ್ದಾರೆ. ರಾವಣನ ಸೈನಿಕರು ಹನುಮಂತನನ್ನು ಬಂಧಿಸಿ ರಾವಣನಲ್ಲಿಗೆ ತಂದಾಗ ನಡೆಯುವ ಸಂಭಾಷಣೆ ಹೀಗಿದೆ.

ರಾವಣ ಮತ್ತು ಹನುಂತನ ನಡುವಿನ ಸಂಭಾಷಣೆ

ಸಭಾಸದರು : ನಮ್ಮ ಅಶೋಕವನವನ್ನು ಹಾಳುಮಾಡಿದ್ದು ಇದೆ ಮಂಗವೇ?.

ಹನುಮಂತ : ಮೂರ್ಖರು, ಮಾನವನಿಗೆ ಮಂಗನೆನ್ನುವರು.

ರಾವಣ : ಎಲೋ, ಆ ಕಪಿಯ ಕಟ್ಟುಗಳನ್ನ ಬಿಚ್ಚಿರಿ.

ಸೇವಕ : ಬೇಡಿರಿ ಪ್ರಭು. ಕಟ್ಟು ಬಿಚ್ಚಿದರೆ... ಇಲ್ಲಿಯೂ ಹಾಳು ಮಾಡೀತು.

ಹನುಮಂತ : ಎಲವೋ ರಾವಣ, ಶ್ರೀರಾಮಚಂದ್ರನ ನೇತೃತ್ವದಲ್ಲಿ ಕಂಕಣಬದ್ಧವಾದ ಈ ದೇಹವು ಯಮಪಾಶವನ್ನೇ ಮೀರಿರುವುದು. ಭವಪಾಶವನ್ನಂತೂ ಚಟಚಟನೆ ಹರಿದು ಹಾಕಿರುವುದು. ಹೀಗಿರಲಿ ಈ ನಿನ್ನ ಜೇಡರ ಹುಳದ ಪಾಶವನ್ನು ಲೆಕ್ಕಿಸುವುದೆ? ಇದೋ...ಜೈ ರಘುವೀರ ಸಮರ್ಥ! (ಕಟ್ಟಿದ ಹಗ್ಗವನ್ನು ಹರಿದೊಗೆಯುವನು)

ರಾವಣ : ಎಲೋ ಕಪಿಯೇ, ನಿಮ್ಮ ಆರ್ಯಾವರ್ತದಲ್ಲಿ ಹೊಟ್ಟೆ ಹೊರೆಯಲು ಗತಿ ಇಲ್ಲದೆ ಬಂದಿದ್ದರೆ, ಈ ಲಂಕಾ ಪಟ್ಟಣದಲ್ಲಿ ಅಷ್ಟಕ್ಕೆ ಅವಕಾಶ ಇದ್ದೆ ಇತ್ತು.

ಹನುಮಂತ : ನಾನು ಕ್ಷುಲ್ಲಕನೆಂಬ ಆತ್ಮವಿಶ್ವಾಸದಿಂದ ಬಂದಿರುವೇನಲ್ಲದೆ, ಹೊಟ್ಟೆ ಹೊರೆಯುವುದಕ್ಕಾಗಿ ಬಂದಿಲ್ಲ.

ರಾವಣ : ಹಾಗಾದರೆ ಬಂದಿದ್ದೇಕೆ ಮತ್ತೆ?

ಹನುಮಂತ : ಅನ್ಯಾಯದಿಂದ ಕದ್ದು ತಂದ ನಮ್ಮ ಆರ್ಯರ ಅಭಿಮಾನ ನಿಧಿಯನ್ನು ತಿರುಗಿ ಕೊಂಡೊಯ್ಯಲು ಬಂದಿರುವೆ.

ರಾವಣ : ನಿಮ್ಮ ಆರ್ಯರ ಅಭಿಮಾನನಿಧಿಯನ್ನು ಇಲ್ಲಿಗಾರು ಕದ್ದು ತಂದರೋ?

ಹನುಮಂತ : ದುರಾತ್ಮನಾದ ನೀನು ಅತಿಥಿಯಂತೆ ಆಶ್ರಮಕ್ಕೆ ಬಂದು ಮೋಸದಿಂದ ರಾಮಚಂದ್ರನ ಮಡದಿಯನ್ನು ಕದ್ದು ತಂದಿಲ್ಲವೇ?

ರಾವಣ : ನಾನು ಅವನ ಮಡದಿಯನ್ನು ಹಿಡಿದು ತಂದರೆ ನಿನ್ನ ಹೊಟ್ಟೆಯಲ್ಲಿ ಏನು ಕಾರಣ ಬೆಂಕಿ ಬೀಳಲಿಕ್ಕೆ?

ಹನುಮಂತ : ನಾವು ಆರ್ಯರಲ್ಲವೇ? ಅಲ್ಲಿಯ ಭೂಮಿ, ಭಾಗ್ಯ, ಭಾಮೆಯ ರಕ್ಷಣೆ ಮಾಡುವುದು ನಮ್ಮ ಕರ್ತವ್ಯವಲ್ಲವೆ?

ಇಂದ್ರಜಿತ : ಸಾರ್ವಭೌಮನಾದ ರಾವಣ ಜಾಜೇಂದ್ರನಿಗೆ ಭೂಮಂಡಲದಲ್ಲಿಯ ಸಕಲ ಸದ್ವಸ್ತುಗಳು ಸೇರತಕ್ಕವು.

ಹನುಮಂತ : ಏನು? ಈ ರಾವಣನು ಸಾರ್ವಭೌಮನೇ! ಅನ್ಯರ ಸೊತ್ತನ್ನು ಅನ್ಯಾಯದಿಂದ ಅಪಹರಿಸುವ ಈ ಆಕ್ರಮಣಶೀಲ ಅಧಮನು ಸಾರ್ವಭೌಮನೇ!

(ಶ್ಯಾಮಸುಂದರ ಬಿದರಕುಂದಿ, ಸ್ವಾತಂತ್ರ್ಯ ಹೋರಾಟ ಮತ್ತು ಕನ್ನಡ ರಂಗಭೂಮಿ, ಪು-೧೪೪)

ಲಂಕಾದಹನದ ಈ ಸಂಭಾಷಣೆಗಳನ್ನು ಕೇಳಿದ ಪ್ರೇಕ್ಷಕರು ಚಪ್ಪಾಳೆಯ ಸದ್ದಿನ ಕುರಿತು ಗರುಡ ಸದಾಶಿವರಾಯರ ಮಗ ಶ್ರೀಪಾದರಾಯರು ನೆನೆಪಿಸಿಕೊಂಡಿದ್ದನ್ನು ಶ್ಯಾಮಸುಂದರ ಬಿದರಕುಂದಿಯವರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. "ಈ ವಾಕ್ಯ ಕಿವಿಗೆ ಬಿಳುತ್ತಲೆ ಪ್ರೇಕ್ಷಕ ವೃಂದರಲ್ಲಿ ಚಪ್ಪಾಳೆಯ ಗಡಚಿಕ್ಕುವ ಸದ್ದು ಬ್ರಿಟಿಶರ ಹೆಸರು ಗುರುತುಗಳಿಲ್ಲದೆ ಅವರ ರಾಜಕೀಯ ಕುಹಕ, ದುರಾಕ್ರಮಣದ ಕ್ರೌರ್ಯವನ್ನು ಹೀನಾಯವಾಗಿ ಬಯಲಿಗೆಳೆಯುವ ಮಾತುಗಾರಿಕೆಗೆ ಗರುಡರ ಈ ನಾಟಕೀಯ ದೃಶ್ಯ ಪರಿಣಾಮಕಾರಿ ಉದಾಹರಣೆ. ಹನುಮಂತನ ಪಾತ್ರಧಾರಿಯಾಗಿ ನಟಿಸುತ್ತಿದ್ದವರು ಸದಾಶಿವರಾಯರೆ, ರಾವಣನ ಆಸ್ಥಾನದಲ್ಲಿ ಉತ್ಸಾಹದಿಂದ ಹನುಮಂತನ ಅಭಿನಯದ ಉದ್ದೇಶ ತುಂಬುತಿತ್ತು. (ಶ್ಯಾಮಸುಂದರ ಬಿದರಕುಂದಿ, ಸ್ವಾತಂತ್ರ್ಯ ಹೋರಾಟ ಮತ್ತು ಕನ್ನಡ ರಂಗಭೂಮಿ, ಪು-೧೫) ಈ ಮೇಲಿನ ಸಂಭಾಷಣೆಗಳು ಆಗಿನ ಸನ್ನಿವೇಶವನ್ನು ವಾಸ್ತವದ ನೆಲೆಯಲ್ಲಿ ಆಲೋಚಿಸುವಂತೆ ಜನರನ್ನು ಎಚ್ಚರಿಸಿರುವುದು ಕಂಡುಬರುತ್ತದೆ.

ಈ ನಾಟಕವು ಬ್ರಿಟಿಶರನ್ನು ಮಾತ್ರ ವಿರೋಧಿಸುವುದಿಲ್ಲ ಅದರ ಜೊತೆಗೆ ಸ್ವಾತಂತ್ರ್ಯ ಚಳುವಳಿ ಭಾಗವಾಗಿ ಗಾಂಧಿ ನಾಯಕತ್ವದಲ್ಲಿ ಆರಂಭವಾದ ಮಧ್ಯಪಾನ ನಿಷೇದದ ಬಗ್ಗೆಯೂ ಸಹ ಮಾತನಾಡುತ್ತದೆ. ಹಾಗೆ ಆರ್ಯ ಮತ್ತು ದ್ರಾವಿಡ ಪರಿಕಲ್ಪನೆ ಹಿನ್ನೆಲೆಯಲ್ಲಿ ಆರ್ಯರು ದ್ರಾವಿಡರಿಗೆ ಮಾಡಿದ ಅನ್ಯಾಯದ ಬಗ್ಗೆಯೂ ಮಾತನಾಡುತ್ತದೆ. ಇಲ್ಲಿ ರಾಮ ಆರ್ಯರ ಪ್ರತಿನಿಧಿ, ಹನುಮಂತ ದ್ರಾವಿಡರ ಪ್ರತಿನಿಧಿ. ರಾಮನಿಗಿಂತ ಹನುಮಂತನೇ ಈ ನಾಟಕದ ಕೇಂದ್ರಬಿಂದುವಾಗಿದ್ದರೂ. ಹನುಮ ರಾಮನ ಸೇವಕನಾಗಿಯೇ ಇಲ್ಲಿ ಕಾಣುತ್ತಾನೆ.

ಮಾತೃ ಬಂದ ವಿಮೋಚನೆಗಾಗಿ ರಚನೆಗೊಂಡ ಈ ನಾಟಕವು ಭಾರತೀಯತೆಯ ಪ್ರತಿಪಾದನೆಗೆ ಮಹತ್ವ ಕೊಟ್ಟಿದೆ. ರಾವಣನ ಧೂತರು ಹನುಮಂತನನ್ನು ಬಂಧಿಸಿ ತಂದಾಗ, ಮಾರುತಿ ರಾವಣನ್ನು ಕುರಿತು ಆಡುವ ಮಾತುಗಳು ಬ್ರಿಟಿಶರ ಆಕ್ರಮಣ ನೀತಿಗಳನ್ನು ಕುರಿತ ಮಾತುಗಳೇ ಆಗಿವೆ. ವ್ಯಾಪಾರಕ್ಕಾಗಿ ಜಗತ್ತಿನ ಇತರೆ ದೇಶಗಳಿಗೂ ಹೋದ ಬ್ರಿಟಿಶರು ಆ ದೇಶಗಳನ್ನು ವಸಾಹತು ಭಾಗವಾಗಿ ಆಕ್ರಮಿಸಿಕೊಂಡಿರುವದನ್ನು ಹನುಮಂತ ಹೀಗೆ ಮೂದಲಿಸುತ್ತಾನೆ "ದಾಖಲೆಗಳ ಪ್ರಕಾರ ಮೊದಲು ಈ ಹಾಡು ಮಾತಿನ(ಸಂಭಾಷಣೆ) ರೂಪದಲ್ಲಿತ್ತಂತೆ. ಆಗಿನ ಬ್ರಿಟಿಶರ ಆಡಳಿತಾಧಿಕಾರಿಗಳು ಇದಕ್ಕೆ ತಡೆಯೊಡ್ಡಿದಾಗ ನಂತರ ಅದನ್ನು ಹಾಡಾಗಿ ಪರಿವರ್ತಿಸಿ ಸನ್ನಿವೇಶದಲ್ಲಿ ಸೇರಿಸಲಾಯಿತಂತೆ".(ರಮಾಕಾಂತ ಜೋಷಿ, ಪ್ರಕಾಶ ಗರುಡ,(ಸಂ) ಗರುಡ ಸದಾಶಿವರಾಯರ ಸಮಗ್ರ ನಾಟಕ ಸಂಪುಟದ ಮುನ್ನುಡಿ) ಆ ಹಾಡು ಹೀಗಿದೆ.

"ದಾನವನೀವ ಸಾರ್ವಭೌಮ ನೃಪನೆ
ಘನತಮ ದುರಾಚಾರಿ
ಮುನಿಜನಗಳಿಗನವರತ ಬಾಧಿಸುವ
ನ್ಯಾಯನೀತಿ ಮೊದಲಾದ ಸುಗುಣಗಳ ನಾವನೋ
ತಾಯಿ ಮಗುವ ಸಂಗೋಪಿಸುವತರೆ ಕಾಯ್ವನು
ಆಯುಷ್ವಾನ್ ಸಾಮ್ರಾಟನಲ್ಲವೆ
ಹೇಯು ಕರ್ಮರತನಾದ ಪತಿತ ಖಲ॥ಸ॥
ಅಕ್ಕರತೆಯನುಭವಿಸತಕ್ಕ ಭೂಮಿಯೋಳ್ಮರಾ
ಚಿಕ್ಕ ಚಿಕ್ಕ ದೇಶಗಳ ಕಸಿದು ಆ ಸರ್ವರಾ
ಅಕ್ಕರತೆಯ ಮುರಿದಕ್ಕೆ ಪರವದೊಳಿಕ್ಕಿದೆ
ಸೊಕ್ಕಿದ ಠಕ್ಕ ಶಿಖಾಮಣಿ"(ಅದೇ, ಮುನ್ನುಡಿ)

ಈ ಹಾಡು ಮುಗಿಯುತ್ತಿದ್ದಂತೆ ನಾಟಕ ನೋಡಲು ಕುಳಿತ ಪ್ರೇಕ್ಷಕರು ಬ್ರಿಟಿಶರ ವಿರುದ್ಧ ಕೂಗಲು ಆರಂಭಿಸಿದ್ದರಂತೆ. "ಬೋಲೋ ಭಾರತ್ ಮಾತಾಕಿ, ಮಹಾತ್ಮ ಗಾಂಧೀಕಿ ಜಯ್ ಎಂದು ಕೂಗುತ್ತಿದ್ದರು. ಒಮ್ಮೆ ಒಬ್ಬ ಪ್ರೇಕ್ಷಕ ರಂಗವೇದಿಕೆಯನ್ನೇರಿ ತನ್ನ ತಲೆ ಮೇಲಿನ ಗಾಂಧೀ ಟೊಪ್ಪಿಗೆಯನ್ನು ಗರುಡರ ತಲೆಯ ಮೇಲಿಟ್ಟು 'ಹನುಮಂತನ' ಪಾದಗಳಿಗೆ ಶಿರಸಾಷ್ಟಾಂಗ ಹಾಕಿಬಿಟ್ಟನಂತೆ. ಇದು ನಡೆದದ್ದು ೧೯೨೯ರಲ್ಲಿ.

ಗರುಡರ ಈ ನಾಟಕದ ವಸ್ತು ರಾಮಾಯಣದ ಲಂಕಾದಹನ ಸನ್ನಿವೇಶವನ್ನು ಮಾತ್ರ ಒಳಗೊಂಡಿದ್ದು. ಲಿಖಿತ ಪೌರಾಣಿಕ ಕಥೆಯೊಂದಿಗೆ ಅಂದಿನ ಸಮಕಾಲೀನ ರಾಜಕೀಯ ಚಿತ್ರಣವನ್ನು ಪ್ರಯೋಗದ ಮೂಲಕ ತಿಳಿಯಪಡಿಸುತ್ತಿತ್ತು. ಮಾರುತಿಯ ಮಾತುಗಳು ರಾವಣನನ್ನು ಕುರಿತು ಆಡುವ ಮಾತುಗಳೇ ಆಗಿದ್ದರೂ ಬ್ರಿಟಿಶರ ದಮನಕಾರಿ ನೀತಿ, ಕಾನೂನುಗಳ ವಿರೋಧಿ ಮಾತುಗಳಾಗಿದ್ದವು. ಇಲ್ಲಿ ರಾವಣನು ಬ್ರಿಟಿಶರಂತೆ ಆಕ್ರಮಣಕಾರಿಯಾಗಿರುತ್ತಾನೆ. ಇಂತ ತೀಕ್ಷ್ಣವಾದ ವಿಚಾರಗಳನ್ನೊಳಗೊಂಡ ಈ ನಾಟಕದ ಪ್ರದೇಶಕ್ಕೆ 'ವಿಜಾಪುರ ಜಿಲ್ಲಾ ಕಲೆಕ್ಟರ್' ತಡೆಯೊಡ್ಡಿದ್ದರಂತೆ.(ಬಸವರಾಜ ಜಗಜಂಪಿ, ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ಪುಟ-೨೭೩)

ದತ್ತಾತ್ರೇಯ ನಾಟಕ ಮಂಡಳಿ ಸ್ಥಾಪಿಸಿ, ನಾಟ್ಯಾಭಿನಯವನ್ನು ವೃತ್ತಿಯಾಗಿಸಿಕೊಂಡ ಗರುಡ ಸದಾಶಿವರಾಯರು, ನಾಟಕ ಮಾಧ್ಯಮವನ್ನು ಸಾಮಾಜಿಕ ಸುಧಾರಣೆಗಾಗಿ ದುಡಿಸಿಕೊಂಡವರಲ್ಲಿ ಪ್ರಮುಖರು. ವಸಾಹತುಶಾಹಿ ಆಗಮನದಿಂದ ಭಾರತದಲ್ಲಿ ಆದ ಮುಖ್ಯವಾಗಿ ರಾಜಕೀಯ ದುರಾಕ್ರಮಣ ನೀತಿಗಳನ್ನು ತಮ್ಮ ನಾಟಕಗಳಲ್ಲಿ ಪ್ರಯೋಗಿಸಿ ಕನ್ನಡಿಗರಲ್ಲಿ ಸ್ವಾತಂತ್ರ್ಯ ಚಳುವಳಿಯ ಪಾಠ ಮಾಡುತ್ತಿದ್ದರು. ತಮ್ಮ ನಾಟಕಗಳಿಗೆ ಪೌರಾಣಿಕ ಕಥಾವಸ್ತುಗಳನ್ನು ಆಯ್ಕೆ ಮಾಡಿಕೊಂಡು ಪೌರಾಣಿಕರ ಚೌಕಟ್ಟಿಗೆ ಅವತ್ತಿನ ಭಾರತೀಯ ಸಾಮಾಜದ ತಲ್ಲಣಗಳನ್ನು ಹೊಂದಿಸುತ್ತಿದ್ದರು. ಕನ್ನಡ ರಂಗಭೂಮಿ ಅಧುನಿಕ ರಂಗಭೂಮಿಯ ಪ್ರಭಾವಕ್ಕೆ ಒಳಗಾಗಿದ್ದರೂ ಯಾಕೆ ಸಮಕಾಲೀನ ವಿಷಯಗಳನ್ನು ಹೇಳಲು ಪೌರಾಣಿಕ ವಸ್ತುಗಳನ್ನು ಆಯ್ಕೆ ಮಾಡಿಕೊಂಡೆ ನಾಟಕ ಚೌಕಟ್ಟಿನಲ್ಲೇ ಆಗಬೇಕಾದ ಬದಲಾವಣೆಗಳೇನು ಹಾಗೆ ನಾಟಕ ರಚನೆ, ವಸ್ತು, ತಂತ್ರ ಮತ್ತು ರಂಗಭೂಮಿ ಪ್ರದರ್ಶನ ಕುರಿತು ಗರುಡರು ಮತ್ತು ಹುಯಿಲುಗೊಳು ನಾರಾಯಣರಾಯರು ನಡುವೆ ಸಂವಾದ ಮತ್ತು ಚರ್ಚೆಗಳು ನಡೆದಿವೆ. "ನಾಟಕಗಳು ಸಮಾಜದ ಕುಂದುಕೊರತೆಗಳನ್ನು ಪ್ರತಿಬಿಂಬಿಸುವ ಕನ್ನಡಿಯಾದರೆ, ಪೌರಾಣಿಕ ನಾಟಕಗಳಿಗಿಂತ ಸಧ್ಯದ ಸಮಾಜದಲ್ಲಿಯ ವ್ಯತ್ಯಾಸಗಳನ್ನು ತೋರಿಸಲು ಸಾಮಾಜಿಕ ನಾಟಕಗಳು ರಂಗದ ಮೇಲೆ ಪ್ರಯೋಗಿಸುತ್ತಿದ್ದಲ್ಲಿ ಉತ್ತಮ ಪರಿಣಾಮ ಬೀರಬಹುದಲ್ಲ" ಎಂದು ನಾರಾಯಣರಾಯರು ಅಭಿಪ್ರಾಯ ಪಟ್ಟರು. ಗರುಡರು "ನಿಮ್ಮ ಅಭಿಪ್ರಾಯವೇನೋ ಸರಿಯೇ, ಸಾಮಾಜಿಕ ನಾಟಕಗಳಲ್ಲಿ ವೈಚಾರಿಕ ಸಂಭಾಷಣೆಗಳನ್ನು ವಿಶೇಷವಾಗಿ ಹೆಣೆದು ನಟನೆಯ ಭಾವಾಭಿನಯವನ್ನು ಕಡೆಗಣಿಸಿದರೆ, ನಾಟಕ ಮಂಡಳಿಗಳು ಬದುಕುವುದು ಕಠಿಣ. ನಾಟಕಕಾರ ಚುರುಕಿನ ಸಂಭಾಷಣೆಯ ಜೊತೆಗೆ, ನಟನ ಭಾವ ಪ್ರಕಟಣೆಗೆ ತಕ್ಕಂತ ಘಟನೆಗಳನ್ನೊಳಗೊಂಡ ನಾಟಕಗಳಾದರೆ ಅಗತ್ಯವಾಗಿ ನಾನು ಪ್ರಯೋಗಿಸುತ್ತೇನೆ." ಎಂದು ಹೇಳಿ ನಾರಾಯಣರಾಯರು "ಶಿಕ್ಷಣ ಸಂಭ್ರಮ ಮತ್ತು ಸ್ತ್ರೀ ಧರ್ಮ ರಹಸ್ಯ ನಾಟಕಗಳನ್ನು ತಮ್ಮ ಮಂಡಳಿ ನಡೆಯುವವರೆಗೆ ಆಗಾಗ ಅಭಿಮಾನದಿಂದ ಪ್ರಯೋಗಿಸುತ್ತಿದ್ದರು."(ಜಿ.ಡಿ.ಜೋಶಿ, ಹುಯಿಲಗೊಳ ನಾರಾಯಣರಾಯರು ಜೀವನ ಹಾಗೂ ಸಾಹಿತ್ಯ, ಪು.೩೩) ಇದು ವೃತ್ತಿರಂಗಭೂಮಿಯ ಸಮಸ್ಯೆ ಮಾತ್ರ ಆಗಿತ್ತು. ಇದೇ ಸಂದರ್ಭದಲ್ಲಿ ಶ್ರೀರಂಗ ಮತ್ತು ಕೈಲಾಸಂ ಅವರು ಹವ್ಯಾಸ ರಂಗಭೂಮಿಗೆ ಹೆಚ್ಚಿನ ಗಮನ ಹರಿಸಿದರು. ಗದಗದಲ್ಲಿಯು ಕೂಡ ಯೆಂಗ್ಮನ್ಸ್ ಪುಟಬಾಲ್ ಕ್ಲಬ್ ಅಮೆಚೂರು ಎಂಬ ವಿಲಾಸಿ ನಾಟಕ ತಂಡವು ಇತ್ತು. ಇಲ್ಲಿ ಹುಯಿಲುಗೊಳರ ನಾಟಕಗಳು ಪ್ರದರ್ಶನಗೊಂಡಿವೆ.

ಶ್ರೀರಾಮ ಪಾದುಕಾ ಪಟ್ಟಾಭಿಷೇಕ ನಾಟಕವು 'ಭಾರತೀಯ' ಪರಿಚಿತ ಪರಂಪರೆಯ ಪುರಾಣದ ಕಥೆಯ ಒಂದು ಭಾಗವನ್ನು ಒಳಗೊಂಡಿದೆ. ೧೯೨೨ರಲ್ಲಿ ರಚನೆಗೊಂಡ ಈ ನಾಟಕ ಕೀಚಕವಧ, ಕಂಸವಧ ನಾಟಕಗಳಂತೆ ಕಲಾತ್ಮಕ ಹಾಗೂ ನಿರೂಪಣಾ ತಂತ್ರಗಳನ್ನು ಮತ್ತು ಸಂಭಾಷಣೆಗಳ ದೃಷ್ಟಿಯಿಂದ ಮಹತ್ವದ ನಾಟಕವಾಗಿದೆ. ಈ ನಾಟಕ ಕುರಿತು ಶಿವರಾಮ ಕಾರಂತರು "ಪಾದುಕ ಪಟ್ಟಾಭಿಷೇಕದ ಸೃಷ್ಟಿಯ ಮೂಲಕ ರಾಮಾಯಣದ ಕಥಾವಸ್ತುವಿಗೆ ಶುದ್ಧ ನಾಟಕದ ಸ್ವರೂಪವನ್ನು ಕೊಟ್ಟವರೆಂದರೆ ಗರುಡ ಸದಾಶಿವರಾಯರು" ಎಂದು ಹೇಳಿದ್ದಾರೆ. ಪೌರಾಣಿಕ ಕಥಾ ವಸ್ತುವನ್ನೇ ಒಳಗೊಂಡಿದ್ದರೂ ರಾಮನ ಪಟ್ಟಾಭಿಷೇಕಕ್ಕೆ ತಡೆಯೊಡ್ಡಿದ ಕೈಕೇಯಿಗೆ ದಶರಥ ಹೇಳಿದ ಮಾತುಗಳು ಗರುಡರ ಇನ್ನುಳಿದ ನಾಟಕಗಳಂತೆ ಈ ನಾಟಕವು ಸಮಕಾಲೀನ ರಾಜಕೀಯವನ್ನು ನಿರೂಪಿಸುತ್ತದೆ. ಕೈಕೇಯಿ ರಾಜದಂಡದ ಶ್ರೇಷ್ಠತೆಯ ಮಾತುಗಳು ಇಲ್ಲಿ ಬ್ರಿಟಿಶ್ ರಾಣಿಯ ನೀತಿಗಳಂತೆ ತೋರಿರಬಹುದು.

ಗರುಡರ ಈ ನಾಟಕ ಹೆಸರೇ ಸೂಚಿಸುವಂತೆ ರಾಜ್ಯದ ಅಧಿಕಾರವನ್ನು ಕುರಿತದ್ದಾಗಿದೆ. ಕೈಕೇಯಿ ಮತ್ತು ಭರತನ ನಡುವೆ ನಡೆಯುವ ಸಂಭಾಷಣೆಯು, ರಾಜ್ಯದ ದಂಡಾಧಿಕಾರ ಯಾರ ಸಂಪಾದನೆ ಎಂಬುದನ್ನು ಈ ನಾಟಕ ನಿರ್ಧರಿಸುತ್ತದೆ. ಇಲ್ಲಿ ದಂಡಾಧಿಕಾರ ಎಂಬುದು ಅಂದಿನ ಭಾರತದ ರಾಜಕೀಯ ಸ್ಥಿತಿ ಅಂದರೆ ರಾಜಕೀಯ ಅಧಿಕಾರಕ್ಕಾಗಿ ಬ್ರಿಟಿಶರು ಮತ್ತು ಭಾರತೀಯರ ನಡುವೆ ನಡೆಯುತ್ತಿದ್ದ ರಾಷ್ಟ್ರೀಯ ಹೋರಾಟವೇ ಈ ನಾಟಕದ ಒಳತಿರುಳಾಗಿದೆ. ಇದನ್ನು ನಾಟಕದ ಮುನ್ನುಡಿಯಲ್ಲಿ ಬರೆದಿರುವಂತೆ ಜಯಚಾಮಚಾರ್ಯರೆ ಸ್ಪಷ್ಟಪಡಿಸಿದ್ದಾರೆ. "ಈ ಹೊಸ ಮಾದರಿಯ ನಾಟಕವು ಇಪ್ಪತ್ತನೆಯ ಶತಮಾನವನ್ನನುಸರಿಸಿ ನಿದ್ರಿಸುತ್ತಿರುವ ಜನಾಂಗವನ್ನು ಎಚ್ಚರಗೊಳಿಸಲು ತಕ್ಕಂತೆ ಬಹಳ ಉತ್ತಮ ರೀತಿಯಲ್ಲಿ ಬರೆಯಲ್ಪಟ್ಟಿದೆ. ಈ ಒಂದು ವಾಕ್ಯವು ಇಪ್ಪತ್ತನೆ ಶತಮಾನದ ಆರಂಭದ 'ಭಾರತದ ರಾಜಕೀಯ ವಾತಾವರಣವನ್ನು ಪ್ರತಿನಿಧಿಸುತ್ತದೆ. ಇದು ಭಾರತೀಯ ಪ್ರಜೆಗಳ ಮೇಲಿನ ಬ್ರಿಟಿಶರ ದಮನಕಾರಿ ನೀತಿಯೂ ಆಗಿತ್ತು. ಹಾಗಾಗಿ ಭಾರತದ ರಾಜನೀತಿ(ರಾಜಕೀಯ ಅಧಿಕಾರ)ಯ ಭಾಗವಾಗಿ ಮತ್ತು ಬ್ರಿಟಿಶರು ಭಾರತಿಯ ಪ್ರಜೆಗಳನ್ನು ಪರಿಭಾವಿಸಿದ ರೀತಿಯನ್ನು ಕೈಕೆಯ ಮಾತು(ಸಂಭಾಷಣೆ) ಗುರುತಿಸುತ್ತದೆ.

ಕೈಕೆಯಾ : ಈ ಪ್ರಜಾ ಜನರ ಸಹಾನುಭೂತಿಯಿಂದ ನನಗೇನಾಗಬೇಕಾಗಿದೆ? ರಾಜದಂಡ ಸಹಾಯದಿಂದ ಪ್ರಜಾ ಸಹಾನುಭೂತಿಯನ್ನು ಸಹಜ ಸಂಪಾದಿಸಬಹುದು.

ಭರತ : ಏನು? ರಾಜದಂಡ ಸಹಾಯದಿಂದ ಪ್ರಜಾ ಸಹಾನುಭೂತಿಯನ್ನು ಸಂಪಾದಿಸಬೇಕೆನ್ನುವಿಯಾ? ಆ ರಾಜನೀತಿಯನ್ನು ನೀನೆಲ್ಲಿ ಕಲಿತು ಬಂದೆ ಮಾರಿ!

ದಂಡ ನೀತಿಯನ್ನು ಮನಬಂದಂತೆ ನಡೆಸಿಕೊಳ್ಳಲಿಕ್ಕೆ ಪ್ರಜರು ನಿನ್ನ ಪಾಲಿಗೆ ಕುರಿಗಳಾದರಲ್ಲಾ!(ರಮಾಕಾಂತ ಜೋಶಿ, ಪ್ರಕಾಶ ಗರುಡ, ಗರುಡ ಸದಾಸಿವರಾಯರ ಸಮಗ್ರ ನಾಟಕ, ಸಂ-೧, ಪು-೩೪)

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಈ ನಾಟಕ ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಪ್ರದರ್ಶನ ಕಂಡು, ಇಂತಹ ಸಮಕಾಲೀನ ರಾಜಕೀಯ ಅಂಶಗಳ ವಿರುದ್ಧ ಮಾತನಾಡುವ ಚಾತಿಯನ್ನು ಜನರಲ್ಲಿ ತುಂಬುತ್ತಿತ್ತು.

ಇದೇ ನಾಟಕದಲ್ಲಿ ಇನ್ನೊಂದು ಸನ್ನಿವೇಶದಲ್ಲಿ ರಾಮನ ಪಟ್ಟಾಭಿಷೇಕವನ್ನು ತಡೆದು, ಭರತನಿಗೆ ಸಾಕೇತ ರಾಜ್ಯದ ಪಟ್ಟಕಟ್ಟಬೇಕು ಎಂಬ ಮಾತಿಗೆ ದಶರಥನ ಮಾತುಗಳು ರಾಜ್ಯದ ಜನರ ಸೌಮ್ಯತೆಯನ್ನು ಎತ್ತಿಹಿಡಿಯುತ್ತವೆ. ಗಾಂಧೀಜಿಯ ಅಹಿಂಸಾ ತತ್ವವು ಭಾರತೀಯರನ್ನು ಪ್ರಭಾವಿಸಿದ ಸಮಯ ಅದು. ಕೈಕೇಯಿ ಮತ್ತು ದಶರಥನ ಮಾತುಗಳು ಈ ಕೆಳಗಿನಂತಿವೆ.

ಕೈಕೇಯಿ : ಆಗುವುದೇನು? ಸಕಲರೆಲ್ಲರೂ ರೊಚ್ಚಿಗೆದ್ದು ನನ್ನ ಮೇಲೆಯೂ ಮತ್ತು ನನ್ನ ಪರಿವಾರದ ಮೇಲೆಯೂ ಸಾಗಿ ಬಂದು ಎಲ್ಲರನ್ನೂ ನಾಶ ಮಾಡುವ ಆಲೋಚನೆಯನ್ನು ಮಾಡ್ಯಾರು, ಮತ್ತೇನು ಮಾಡುವರು?

ದಶರಥ : ಥೂ! ಏನು ಹೀನಮಾತನಾಡುವೆ? ನನ್ನ ಪ್ರಜಾರನ್ನು ನೀನು ಶ್ವಾಪದಗಳೆಂದು ಭಾವಿಸಿದೆಯಾ? ಸದ್ಧರ್ಮರತರಾದ ನನ್ನ ಸಾಕೇತರಾಜ್ಯದ ಜನರನ್ನು ರಕ್ಕಸರೆಂದು ತಿಳಿದುಕೊಂಡಿಯಾ? ನನ್ನ ಪ್ರಜಾಜನರು ನನ್ನನ್ನು ವಿಶ್ವಾಸದಿಂದ ವಿಷ್ಣು ಸ್ವರೂಪದಲ್ಲಿ ನೋಡಿತ್ತುರುವರು. ನನ್ನ ಬಂಧುಬಾಂಧವ, ಆಪ್ತೇಷ್ಟ ಪರಿವಾರವನ್ನು ಜಯವಿಜಯ ಶಂಖಚಕ್ರ ಗದಾಪದ್ಮ ಮೊದಲಾದ ಶ್ರೀಮನ್ನಾರಾಯಣನ ಸುಚಿಹ್ನೆಗಳ ಸ್ವರೂಪಗಳಲ್ಲಿ ನೋಡುತ್ತಿರುವರು. ರಾಜನು ತಮ್ಮ ಮನಸ್ಸಿನ ವಿರುದ್ಧವಾಗಿ ಆಚರಿಸಿದರೆ ಗುಂಪು ಗುಂಪಾಗಿ ಎದ್ದು ಪಿಶಾಚಿಗಳಂತೆ ಅವನ ಮೇಲೆ ಸಾಗಿ ಪವಿತ್ರವಾದ ಅವನ ಪ್ರಾಣವನ್ನು ತೆಗೆದುಕೊಳ್ಳುವ ರಾಕ್ಷಸ ವೃತ್ತಿಯವರು ನನ್ನ ಪ್ರಜಾಜನರಲ್ಲ. ಪ್ರಜರು ಕೇವಲ ಧಾರ್ಮಿಕರು; ನಾವು ಅವರ ಮೇಲೆ ಬೇಕಾದ ಅನ್ಯಾಯಗಳನ್ನು ಮಾಡಿದರೂ ಸಹನ ಮಾಡಿಕೊಳ್ಳತಕ್ಕವರು.(ಗರುಡ ಸದಾಶಿವರಾಯ, ಶ್ರೀರಾಮ ಪಾದುಕಾ ಪಟ್ಟಾಭೀಷೆಕ ಪು.೨೯)

ಕೈಕೇಯಿಗೆ ದಶರಥನ ಈ ಮಾತುಗಳು ವಸಾಹತುಶಾಹಿಯ ಬ್ರಿಟಿಶರ ಕ್ರೂರ ನೀತಿಗಳ ವಿರುದ್ಧ, ಭಾರತ ಗಾಂಧಿ ನಾಯಕತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಕಟ್ಟಿಕೊಂಡ ಅಹಿಂಸಾ ಮಾರ್ಗದ ಚಳುವಳಿಯನ್ನು ನೆನಪಿಸುತ್ತವೆ. ಇಂತ ರಾಜಕೀಯದ ಜ್ವಲಂತ ಸಮಸ್ಯೆಗಳನ್ನು ಗರುಡರು ತಮ್ಮ ಪೌರಾಣಿಕ, ಐತಿಹಾಸಿಕ ನಾಟಕಗಳ ಮೂಲಕ ಉದ್ದೇಶ ಪೂರ್ವಕವಾಗಿಯೇ

ಕಟ್ಟಿಕೊಟ್ಟಿದ್ದಾರೆ ಎಂದೆನಿಸುತ್ತದೆ. ಗರುಡರ ಬದ್ಧತೆ ವ್ಯಕ್ತಿತ್ವ ಮತ್ತು ಚಿಂತನೆಗಳ ಪ್ರಭಾವ ಅವರ ನಾಟಕಗಳನ್ನು ಹೀಗೆ ನಿರೂಪಿಸಿರಬಹುದು. ಉದಾಹರಣೆಗೆ ಇದೆ ನಾಟಕದಲ್ಲಿ ರಾಮನು ವನವಾಸಕ್ಕೆ ಹೋದ ನಂತರ ದಶರಥನ ಸಾವು ಸಂಭವಿಸುತ್ತದೆ. ಭರತ ಅಯೋಧ್ಯೆಗೆ ವಾಪಾಸಾದಾಗ ಭರತ ಮತ್ತು ಕೈಕೇಯಿ ನಡುವೆ ನಡೆಯುವ ಮಾತುಗಳು ಬ್ರಿಟಿಶ್ ರಾಣಿಯ ಆಡಳಿತ ಭಾರತದಲ್ಲಿ ಬ್ರಿಟಿಶರು ಭಾರತೀಯರನ್ನು ನೋಡುವ ರೀತಿಯನ್ನು ಮತ್ತು ಭಾರತೀಯ ಮನಸ್ಥಿತಿಯನ್ನು ಚಿತ್ರಿಸುತ್ತವೆ.

ಭರತ : ಈಗ್ಗೆ ಮಾತ್ರ ನೀನು ನಿನ್ನ ಬೊಗಸೆಯಲ್ಲಿಯೇ ನೀರು ಕುಡಿಯುವೆಯಲ್ಲವೇ? ಸಿಂಹಾಸನದ ಸ್ವಾಮಿಯಾದ ದಶರಥ ಮಹಾರಾಜನ ಮೇಲೆಯೂ ಮತ್ತು ರಾಮಭದ್ರನ ಮೇಲೆಯೂ ಇರುವಂತೆ ಸಾಕೇತ ರಾಜ್ಯದ ಪ್ರಜಾಜನರ ಪ್ರೇಮವು ನಿನ್ನ ಮೇಲಿರುವುದೆಂದು ಭಾವಿಸುವೆಯಾ? ಹಾಗಿದ್ದರೆ ಅದು ನಿನ್ನ ಭ್ರಮವು. ನೀನು ಪ್ರಜರ ಕಣ್ಣುಗಳಿಗೆ ಮೃತ್ಯುದೇವತೆಯಂತೆ ಕಾಣುವೆ. ನಿನ್ನ ಪರಿವಾರವು ನನ್ನ ಸಾಕೇತ ಪ್ರಜಾಜನಗಳ ಕಣ್ಣುಗಳಿಗೆ ಭೂತ-ಬೇತಾಳ ಬ್ರಹ್ಮರಾಕ್ಷಸಗಳಂತೆ ಕಾಣುತ್ತಿರುವುದು. ಧರ್ಮವಂತ ರಾಜನನ್ನು ಮರಣಕ್ಕೆ ಗುರಿಮಾಡಿ ಪಟ್ಟಬಾಧ್ಯನಾದ ರಾಜಪುತ್ರನನ್ನು ಅಡವೀಪಾಲು ಮಾಡಿ ಪ್ರಜಾಜನರ ಅಂತಃಕರಣಕ್ಕೆ ಬಲವಾದ ಗಾಯವನ್ನು ಮಾಡಿದೆ. ಇಂತಹ ಸಂದರ್ಭದಲ್ಲಿ ನಿನ್ನ ವಿಷಯದ ಸಹಾನುಭೂತಿಯು ಪ್ರಜಾರಲ್ಲುಳಿಯಬಹುದೇ?

ಕೈಕಯಾ : ಉಳಿಯದಿದ್ದರಿಲ್ಲ. ಆ ಪ್ರಜಾಸಹಾನುಭೂತಿಯಿಂದ ನನಗೇನಾಗಬೇಕಿದೆ? ರಾಜದಂಡ ಸಹಾಯದಿಂದ ಪ್ರಜಾಸಹಾನುಭೂತಿಯುನ್ನು ಸಹಜವಾಗಿ ಸಂಪಾದಿಸಬಹುದು.

ಭರತ : ಏನು? ರಾಜದಂಡ ಸಹಾಯದಿಂದ ಪ್ರಜಾಸಹನಾಭೂತಿಯುನ್ನು ಸಂಪಾದಿಸಬೇಕೆಂದೆನ್ನುವೆಯಾ? ಈ ರಾಜನೀತಿಯನ್ನು ನೀನೆಲ್ಲಿ ಕಲಿತು ಬಂದೆ ಮಾರೀ? ದಂಡ ನೀತಿಯನ್ನು ಮನಬಂದಂತೆ ನಡೆಸಿಕೊಳ್ಳಲಿಕ್ಕೆ ಪ್ರಜರು ನಿನ್ನ ಪಾಲಿಗೆ ಕುರಿಗಳಾದರಲ್ಲಾ! ಸಾಕು ಮಾಡು. ನಿನ್ನ ಅಮಂಗಲುಪದೇಶವನ್ನು ಕೇಳುವುದು ನನ್ನ ಆಪೇಕ್ಷೆಯಲ್ಲ. ನೀನೂ ನಿನ್ನ ಪರಿವಾರವೂ ಸುಖರೂಪವಾಗಿ ರಾಜ್ಯಭಾರವನ್ನು ಮಾಡಿಕೊಂಡು ಕಾಲಹರಣ ಮಾಡಿರಿ. ನಾನು ನನ್ನ ಪಿತೃಸಮಾನನಾದ ಅಣ್ಣನಗೂಡ ವನವಾಸಿಯಾಗುವೆನು.(ಅದೆ, ಪು-೫೮-೫೯)

ಕೈಕಯಾ ಮಾತಿನಲ್ಲಿ ಬ್ರಿಟಿಶ್ ರಾಣಿಯ ಅಧಿಕಾರ ದಂಡನೆಯ ಕ್ರೂರ ಆಡಳಿತದಿಂದ ಕೂಡಿದಂತಿದೆ ಎಂಬುದು ಗೊತ್ತಾಗುತ್ತದೆ. ಅವರ ಅಧಿಕಾರದ ಲಾಲಸೆಗೆ ಇಡೀ ಭಾರತ ಸಮಾಜ ತತ್ತರಿಸುವದನ್ನು ಗುರುತಿಸಬಹುದು.

ನರಗುಂದ ಬಂಡಾಯ

೧೮೫೭ರ ದಂಗೆಗಿಂತ ಮುಂಚೆ ಕಂಪನಿ ಸರಕಾರದ ಭಾರತೀಯ ಸಂಸ್ಥಾನಗಳ ವಿರೋಧಿ ನೀತಿಗಳ ವಿರುದ್ಧ ಹೋರಾಡಿದ ಸಂಸ್ಥಾನಗಳಲ್ಲಿ ಕಿತ್ತೂರ ಸಂಸ್ಥಾನದ ನಂತರದ ಹೆಸರೆ ನರಗುಂದ ಸಂಸ್ಥಾನದ್ದು. ನರಗುಂದದ ಬಾಬಾಸಾಹೇಬರ ಹೋರಾಟದ ಜೀವನವನ್ನು ನಾಟಕವಾಗಿಸಿ ಆ ಮೂಲಕ ಕನ್ನಡಿಗರಿಗೆ ಸ್ವಾತಂತ್ರ್ಯದ ಕುರಿತು ಅರಿವು ಮೂಡಿಸಿದ ಅಚ್ಯುತ ಕೃಷ್ಣರಾವ್ ಹುಯಿಲುಗೋಳರ ಈ ನಾಟಕ, ಕರ್ನಾಟಕದ್ದಲ್ಲಿ ದಾಖಲೆ ನಿರ್ಮಿಸಿತ್ತು. ಬ್ರಿಟಿಶರ ಕುತಂತ್ರಗಳನ್ನು, ದುರಾಕ್ರಮಣ ನೀತಿಗಳನ್ನು ಭಾವಾವೇಶ ತುಂಬಿದ ಸಂಭಾಷಣೆಗಳಿಂದ ಟೀಕಿಸುತ್ತಿದ್ದ ಈ ನಾಟಕ, ಬ್ರಿಟಿಶರ ವಿರೋಧದಿಂದ ಮೇಲಿಂದ ಮೇಲೆ ಸೆನ್ಸಾರಿಗೆ ಒಳಗಾಗುತ್ತಿತ್ತು. ಹೀಗೆ ಬ್ರಿಟಿಶರ ಕೆಂಗಣ್ಣಿಗೆ ಗುರಿಯಾಗಿ, ನಂತರ ಬ್ರಿಟಿಶರ ಅನುಮತಿಯಿಂದ 'ಮಾಲ್ಕಂ ವಿಜಯ' ಎಂಬ ಹೆಸರಿನಲ್ಲಿಯೂ ಈ ನಾಟಕ ಪ್ರದರ್ಶನಗೊಳ್ಳುತಿತ್ತು. ಹಾಗೆ ಕೆಲವು ನಾಟಕ ಕಂಪನಿಗಳು 'ಸ್ವರಾಜ್ಯ ಸಮರ' ಎಂಬ ಹೆಸರಿನಿಂದಲೂ ಪ್ರದರ್ಶಿಸಿವೆ. ನಾಟಕದಲ್ಲಿ ಮೆನಸನ್ ಕೊಲೆಯ ನಂತರ ಪ್ರೇಕ್ಷಕರು ಬ್ರಿಟಿಶ್ ವಿರೋಧಿ ಕೂಗುಗಳನ್ನು, ದೇಶಭಕ್ತಿಯ ಘೋಷಣೆಗಳನ್ನು ಹಾಕುತ್ತಿದರ್ದಂತೆ. ಭಾಗ್ಯೋದಯ ಕಂಪನಿಯಲ್ಲಿ ಹೆಮರೆಡ್ಡಿ ಮಲ್ಲಮನ ನಾಟಕದ ನಂತರ ನರಗುಂದ ಬಂಡಾಯ ಅತ್ಯಂತ ಯಶಸ್ವಿ ನಾಟಕವೆಂದು ಹೆಸರು ಮಾಡಿತು. ಅಂದಿನ ಸನ್ನಿವೇಶ ಕುರಿತು ಕಲಾವಿದೆ ಕಾಶಿಭಾಯಿ ಅವರು ಹೀಗೆ ಹೀಳಿದ್ದಾರೆ. "ಹುಬ್ಬಳ್ಳಿ ಕ್ಯಾಂಪಿನಲ್ಲಿ ಈ ನಾಟಕ ದಾಖಲೆ ನಿರ್ಮಿಸಿತು. ನಾಟಕದಲ್ಲಿ ಮೆನಸನ್ ಕೊಲೆಯ ದೃಶ್ಯ ಅತ್ಯಂತ ರೋಮಾಂಚನಕಾರಿಯಾಗಿ ಅಭಿನಯಿಸಲ್ಪಡುತ್ತಿತ್ತು.. ದಂಗೆ ಎದ್ದ ಬಾಬಾ ಸಾಹೇಬನನ್ನು ಸೆರೆ ಹಿಡಿಯಲು, ಮೆನಸನ್ ಅವನ ಜಾಡು ಹಿಡಿದು ಸುರೇಬಾನರತ್ತ ಧಾವಿಸುತ್ತಾನೆ. ಬಾಬಾಸಾಹೇಬನನ್ನು ಹಿಡಿಯಲು ಸೈನಿಕರನೆಲ್ಲ ಅಟ್ಟಿ ತಾನು ಮಾರುತಿ ದೇವರ ಗುಡಿಯಲ್ಲಿ ಅಡಗಿ ಕೂಡುತ್ತಾನೆ. ಮೆನಸನ್‌ನ ಕಾರ್ಯಾಚರಣೆಯ ಸುಳಿವು ತಿಳಿದು ಬಾಬಾಸಾಹೇಬ ಮತ್ತು ಅವನ ಗೆಳೆಯ ವಿಷ್ಣುಪಂಥ ಇಬ್ಬರೂ ಮಾರುತಿ ದೇವರ ಗುಡಿಯನ್ನು ಸುತ್ತುವರಿಯುತ್ತಾರೆ. ವಿಷ್ಣುಪಂಥ ಗುಡಿಯಲ್ಲಿ ಕುಳಿತ ಮೆನಸನ್‌ನ್ನು ಕದನಕ್ಕೆ ಆಹ್ವಾನಿಸುತ್ತಾನೆ. ಮೆನಸನ್ ಹೆದರಿ ಓಡುತ್ತಾನೆ. ವಿಷ್ಣುಪಂಥ ಅವನನ್ನು ಬೆನ್ನಟ್ಟಿ ಸೆರೆಹಿಡಿಯುತ್ತಾನೆ. ಕೈಯೊಳಗಿನ ವೀರಗತ್ತಿ ಬೀಸಿ ಅವನ ರುಂಡವನ್ನು ಚೆಂಡಾಡುತ್ತಾನೆ. ನರಗುಂದದ ಅಗಸಿ ಬಾಗಿಲಿಗೆ ಅದನ್ನು ತೋರಣ ಮಾಡಿ ಕಟ್ಟಲು ಹೊರಡುತ್ತಾನೆ. ವಿಷ್ಣುಪಂಥನ ಈ ಅಭಿನಯಕ್ಕೆ ಪ್ರೇಕ್ಷಕರಿಂದ ಚಪ್ಪಾಳೆ, ಘೋಷಣೆಗಳು ಮೊಳಗುತ್ತವೆ. ನಾಟಕದ ಪರಿಣಾಮ ತಿಳಿದ ಬ್ರಿಟಿಶ್ ಅಧಿಕಾರಿಗಳು ನಾಟಕ ಕಂಪನಿಯ ಪರವಾನಿಗೆಯನ್ನು ರದ್ದುಪಡಿಸಿದರು. ನಂತರ ಬ್ರಿಟಿಶರ ಸೂಚನೆಗಳನ್ನು ಅನುಸರಿಸಿ ಕಂಪನಿಯ ಪರವಾನಿಗೆಯನ್ನು ರದ್ದುಪಡಿಸಿದರು. ನಂತರ ಬ್ರಿಟಿಶರ ಸೂಚನೆಗಳನ್ನು ಅನುಸರಿಸಿ ಕಂಪನಿಯ ಉಳುವಿಗಾಗಿ

ನಾಟಕದ ಹೆಸರನ್ನು ನರಗುಂದದ ಮುತ್ತಿಗೆ ಎಂದು ಬದಲಾಯಿಸಿದರು. ನಾಟಕದಲ್ಲಿಯ ಮೆನಸನ್ ಕೊಲೆಯ ಸನ್ನಿವೇಶವನ್ನು ತೆಗೆದು ಹಾಕಲಾಯಿತು"(ಕಾಶಿಬಾಯಿ ನಾಲತವಾಡ(ನಟಿ) ಅವರ ಸಂದರ್ಶನ- ರಾಮಕೃಷ್ಣ ಮರಾಠೆ)

ನಾಟಕದಲ್ಲಿ ಮೆನಸನ್ ಕೊಲೆಯ ಸನ್ನಿವೇಶವು ಬ್ರಿಟಿಶರ ಕ್ರೂರ ನೀತಿಗಳಿಗೆ ಪ್ರತಿಕಾರದಂತಿದೆ. ಹಾಗೆ ಬ್ರಿಟಿಶರ ವಿರುದ್ಧ ಭಾರತವನ್ನು ಸ್ವಾತಂತ್ರ್ಯಗೊಳಿಸಲು ಯುವಕರಲ್ಲಿ ಪ್ರೇರಣೆ ಬೀರಿದೆ. ಈ ನಾಟಕದಲ್ಲಿ ಹುಯಿಲಗೋಳರ ಒಂದು ಲಾವಣಿ ಜನರನುಚಳುವಳಿಗೆ ಅನಿಗೊಳಿಸುವ ರೀತಿಯಲ್ಲಿ ರಚನೆಗೊಂಡಿದೆ.

ಏಳ್ರೋ ಕಣಕೆ ಇನ್ನಾ, ಪೇಳ್ವೆ ವಿಶ್ವದಾಗಿನ ರನ್ನಾ।
ಎಮ್ಮ ನಾಡಿನ ಚಿನ್ನ ಚೆನ್ನಮ್ಮ ತೋರ್ದ ಶೌರ್ಯವನ್ನಾ ॥ಪ॥
ಹಗೆಯ ಭಾವ ತಿಳಿದು ಪೋದಳಾಕಿ ಮುನಿದು।
ಭರಭರನೆ ನಡೆದು ಕುಂಪಣಿಯ ಸೈನ್ಯ ಕಡಿದು॥
ಚಮಕ್ ಮಾಡಿ ಕಾಲ್ದಂಡು ಇಳಿದು ಬಂದಂತೆ ಕುಟ್ಟಿ ಒಯ್ದಂತೆ।
ಹುಲಿಯು ಸಿಟ್ಟಿಗೇರಿ ಬಂದು
ಕುತ್ತಿಗೆ ಹಿಡಿದಂತೆ ರಕ್ತ ಕುಡಿದಂತೆ॥
ಥ್ಯಾಕರೆ ಸಾಬನ ಕೊಂದವಳು ಗಂಡವಳು
ಶೌರ್ಯ ನೋಡಿ ಸೈನ್ಯಾ
ಮಣ್ಣನು ಮುಕ್ಕಿ ಬಿಟ್ಟಿತಣ್ಣಾ॥
ಶೌರ್ಯ ತೋರಿಸಿರಣ್ಣಾ
ಎಮ್ಮೆಯ ದೇಶ ಕಾಯಿರಣ್ಣ.

(ಶಾಮಸುಂದರ ಬಿದರಕುಂದಿ, ಸ್ವಾತಂತ್ರ್ಯ ಹೋರಾಟ ಮತ್ತು ಕನ್ನಡ ರಂಗಭೂಮಿ, ಪುಟ-೨೯)

ಅಕ್ಷಯಾಂಬರ

ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹಲವಾರು ಹೋರಾಟಗಳಲ್ಲಿ ಸ್ವದೇಶಿ ಹೋರಾಟವು ಒಂದು. ಗಾಂಧೀಜಿಯವರ ಮುಂದಾಳತ್ವದಲ್ಲಿ ಭಾರತದಾದ್ಯಂತ್ಯ ನಡದ ಹೋರಾಟವನ್ನು ಪೌರಾಣಿಕ ಕಥೆಯ ಮೂಲಕ ಕಂದಗಲ್ ಹನುಮಂತರಾಯರು ಕಟ್ಟಿಕೊಟ್ಟಿದ್ದಾರೆ.

ಮಹಾಭಾರತದ ಕಥೆಗಳಲ್ಲಿಯೇ(ಸನ್ನಿವೇಶ) ವಿಶಿಷ್ಟವಾಗಿದ ಮತ್ತು ಅತಿ ಹೆಚ್ಚು ವಿರೋಧಕ್ಕೆ ಗುರಿಯಾದ ದ್ರೌಪದಿಯ ವಸ್ತ್ರಾಪಹರಣವೇ ಈ ನಾಟಕದ ಕೇಂದ್ರ. ಮಹಾಭಾರತದಲ್ಲಿ ಈ ಸನ್ನಿವೇಶ ಇಲ್ಲದಿದ್ದರೆ ಕುರುಕ್ಷೇತ್ರ ನಡೆಯುತ್ತಿರಲಿಲ್ಲ ಎಂದು ವಾದಿಸುವರು ಇದ್ದಾರೆ. ಈ ಸನ್ನಿವೇಶದ ಮೂಲಕ ನಾಟಕಕಾರರು ಸ್ವದೇಶಿ ಚಳುವಳಿಯ ಮತ್ತು ಖಾದಿಯ ಮಹತ್ವವನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಖಾದಿಯನ್ನು ಭಾವನಾತ್ಮಕ ವಿಷಯವಾಗಿ ಚರ್ಚಿಸಿದ್ದಾರೆ. ಖಾದಿಯನ್ನು ಕುರಿತೆ ಈ ನಾಟಕದಲ್ಲಿ ನಾಲ್ಕು ಸನ್ನಿವೇಶಗಳನ್ನು ಸೃಷ್ಟಿಸಿ, ಆ ಮೂಲಕ ಭಾರತೀಯರಿಗೆ ಖಾದಿಯ ಮಹತ್ವದ ಮೂಲಕ ಗುಡಿಕೈಗಾರಿಕೆಯ ಕುರಿತು ಮನವರಿಕೆ ಮಾಡಿಸಿದ್ದಾರೆ. ವಸಾಹತುಶಾಹಿ ನಿರ್ಮಿತ ಮಾರುಕಟ್ಟೆಯ ಆಕ್ರಮಣಕ್ಕೆ ಒಳಗಾಗುತ್ತಿದ್ದ ಭಾರತದ ಸಮಾಜವನ್ನು ಎಚ್ಚರಿಸುವ ಹಾಗೆ ಈ ನಾಟಕ ನಿರೂಪಿತಗೊಂಡಿದೆ. ಉದಾಹರಣೆಗೆ ಮಹಾಭಾರತದ ಸಭಾಪರ್ವದಲ್ಲಿ ದುಶ್ಯಾಸನನಿಂದ ದ್ರೌಪದಿಯ ವಸ್ತ್ರಾಪಹರಣದ ಸನ್ನಿವೇಶದ ಮಾತುಗಳು ಹೀಗಿವೆ.

ದ್ರೌಪದಿ : ಅಖಿಲ ಜಗತ್ತೆ ಆದಿಮಾಯೆಯ ದಾಸ್ಯವನ್ನು ಸ್ವೀಕರಿಸುವುದು ಈ ಆದಿ ಮಾತೆಯನ್ನು ದಾಸ್ಯದ ದರಿಯಲ್ಲಿ ನೂಕಲು ಅದಾವ ಶಕ್ತಿಗೆ ಸಾಧ್ಯವಿರುವುದು? ಯಾವತ್ತು ಭಾರತಾಂಗನೆಯರ ಆಶೀರ್ವಾದದ ವಜ್ರ ಕವಚವು ಈ ದೇಹಕ್ಕಿರುವುದು. ಸಾಕ್ಷಾತ್ ಭಾರತ ಭೂಮಿಯ ಆಶೀರ್ವಾದದ ಮಣಿಮುಕಟವು ಮಸ್ತಕಕ್ಕೇರುವುದು. ಈ ಭಾರತೀಯ ಅವಮಾನಗೊಳಿಸಲು ಅದಾವ ದಾನವೀ ಶಕ್ತಿಗೆ ಸಾಧ್ಯವಿರುವುದು.

ದುರ್ಯೋಧನ : ದುಶ್ಯಾಸನ, ನೋಡುವೆ ಏನು? ದ್ರೌಪದಿಯ ಮಾನಭಂಗವಾಗಲಿ!

ದುಶ್ಯಾಸನ : (ದ್ರೌಪದಿಯ ಸೀರೆ ಹಿಡಿಯುವನು)

ದ್ರೌಪದಿ : ಕೃಷ್ಣಾ! ಕೃಷ್ಣಾ! (ಎಂದು ಕೈಮುಗಿದು ಕಣ್ಣು ಮುಚ್ಚುವಳು) ಪದ

ಬಾ ಮಾಧವಾ ಯದುನಂದನ ಬಾ ಚಕ್ರದಾರಿ
ದುರಂತ ಭವಾರ್ಣವ ತಾರವಿಭಾಕರ ವಾಮಣ
ಬಾ ಮಾಧವ ಕಮಲ ಸುಲೋಲಾ ಕರುಣಾ ವಿಶಾಲ ತ್ವರ ರಕ್ಷಿಸು
ಶುಭಪಕ್ಷಿ ಗಮನ ಸತಿ ಶುಭ್ರಮಾದ ತವ ಪಂಚಪ್ರಾಣ
ಪಾಡ್ವೆ ಮುರಾರಿ ಶುಭಚಂದ್ರ ವದನ

ದುರ್ಯೋಧನ : ದುಶ್ಯಾಸನ ಕ್ಷಿಪ್ರದಲ್ಲಿಯೇ ದ್ರೌಪದಿಯ ವಸ್ತ್ರಾಹರಣವಾಗಲಿ.

(ಕೃಷ್ಣ ದೃಶ್ಯ)

ದುಶ್ಯಾಸನ : ಸಹೋದರ ವಸ್ತ್ರ ಹರಣವಾಗದೆ ವರ್ಧನವಾಗುತ್ತಿರುವುದು (ಬೀಳುವನು)

ದೃತರಾಷ್ಟ್ರ : ವಿಧುರ, ಸಿಂಹಾಸನು ಅದುರುತ್ತಿರುವುದು. ನನ್ನ ಕುರುಡಾದ ಕಣ್ಣುಗಳಿಗೆ ಅದಾವುದೋ ಅದ್ಭುತ ಪ್ರಕಾಶ ಹೊಳಿಯಿತು. ಅಹ ಅಹ! ವಿದುರ ಅದಾವ ದೃಶ್ಯವು ಕಾಣುತ್ತಿರುವುದು.

ವಿದುರ : ಕುರು ಸಾಮ್ರಾಟ್ ಅಕ್ಷಯಾಂಬರ ದೃಶ್ಯ ! ಅಕ್ಷಯಾಂಬರ ದೃಶ್ಯ!

ದೃತರಾಷ್ಟ್ರ : ಅನಾಹುತವನ್ನು ನಿಲ್ಲಿಸಿರಿ.

ಬುದ್ಧಿ ಮತಿ : (ಪ್ರವೇಶಿಸಿ) ಅಕ್ಕ ಅಕ್ಷಯಾಂಬರದ ಪ್ರಕಾಶವು ಜಗತ್ತನ್ನು ಚಕಿತಗಳಿಸುತ್ತಿರುವುದು.

(ಕಂದಗಲ್ಲ ಹನುಮಂತರಾಯ, ಅಕ್ಷಯಾಂಬರ,ಪು–೧೨೭)

ಖಾದಿಯನ್ನು ಕುರಿತು ಮತ್ತೊಂದು ಸನ್ನಿವೇಶ ಈ ರೀತಿ ಇದೆ. ಕೃಷ್ಣ ಪಲ್ಲೆ(ತರಕಾರಿ)ಯನ್ನು ಹೆಚ್ಚುತ್ತಿರುವಾಗ ನಡೆಯುವ ಘಟನೆ.

ಸತ್ಯಭಾಮೆ : ಕಾಂತಾ, ಕರಾಂಗುಲಿಯಿಂದ ರಕ್ತವೇಕೆ ಬರುತ್ತಿರುವದು?

ಕೃಷ್ಣ : ಆಗಲೇ ಪಲ್ಯವನ್ನು ಹೆಚ್ಚುತ್ತಿದ್ದೆ.

ರುಕ್ಮಿಣಿ : ಅಪರಿಚಿತ ಕಾರ್ಯದಲ್ಲಿ ಕೈ ಹಾಕಿದ್ದಕ್ಕೆ ಇದೇ ಪರಿಣಾಮ

ಸತ್ಯಭಾಮ : ಸೇವಾವೃತ್ತಿಯ ಇದೇ ಓನಾಮ

ಕೃಷ್ಣ : ರಕ್ತಸ್ರಾವವನ್ನು ನಿಲ್ಲಿಸುವುದ ಗಾಯವನ್ನು ಕನಸು ಮನಸುಗಳಲ್ಲಿ ಸಹ ಕಾಣದ ದನಗಾಯಿಗೆ ಇದೇ

ಸತ್ಯಭಾಮ: ಹಸ್ತಿನಾವತಿಯಲ್ಲಿರುವ ವಿದುರನ ಮನೆಯಲ್ಲಿ ಮಾತ್ರ ಸಿಕ್ಕಬಹುದು.

ದ್ರೌಪದಿ : (ಪ್ರವೇಶಿಸಿ) ಈ ಇಂದ್ರ ಪ್ರಸ್ಥದಲ್ಲಿ ಅದಾವ ವಸ್ತು ದೊರೆಯದೆಂದು ಹೇಳಿದಿರಿ?

ಸತ್ಯಭಾಮ : ಆ ವಸ್ತುವು ತಮ್ಮ ಇಂದ್ರಪ್ರಸ್ಥದಲ್ಲಿ ನಿಜವಾಗಿ ದೊರೆಯಲಾರದು

ದ್ರೌಪದಿ : ಅದಾವ ವಸ್ತು?

ರುಕ್ಮಿಣಿ : ಬಹುಬೆಲೆಯುಳ್ಳ ವಸ್ತು. ತಮ್ಮ ಧರ್ಮ ಬಂಧುವಿಗೆ ಬೇಕಾಗಿರುವ ವಸ್ತುವು ಇಲ್ಲಿ ಹೇಗೆ ದೊರೆಯಬೇಕು?

ಕೃಷ್ಣ : ದೃಪಜಾ, ಇವರು ನಿನ್ನೊಡನೆ ಪರಿಹಾಸ್ಯವನ್ನು ಪ್ರಾರಂಭಿಸಿರುವರು ಬೆರಳಿಗೆ ಸ್ವಲ್ಪ ಗಾಯವಾಗಿರುವುದರಿಂದ!

ದ್ರೌಪದಿ : ಇದು ಸಣ್ಣ ಗಾಯವೆ? (ಪಿತಾಂಬರ ಹರಿದು) ಅತ್ತಿಗೆಯವರೆ! ಈ ಪವಿತ್ರ ಮೂರ್ತಿಯ ದೇಹದ ಒಂದೇ ಒಂದು ರಕ್ತ ಬಿಂದುವಿಗೆ ಅಖಂಡ ಬ್ರಹ್ಮಾಂಡದ ಬೆಲೆಯು ಸರಿಯಾಗಲಾರದು. ನಂದನವನದಲ್ಲಿಯ ಅಮೃತ ಸರೋವರದ ಮೌಲ್ಯವು ಕೂಡಾ ಈ ರಕ್ತದ ಹನಿಯು ಬೆಲೆಯನ್ನು ಸರಿಗಟ್ಟಲಾರದು. ಯಾವ ಪವಿತ್ರ ಮೂರ್ತಿಯ ಇಚ್ಛಾ ಮಾತ್ರದಿಂದ ಸಕಲ ಸೃಷ್ಟಿಯು ನಿರ್ಮಾಣವಾಗಿರುವದೋ, ಸಪ್ತ ಶರಧಿಗಳು ಪಂಚ ಮಹಾಸಾಗರಗಳು ಪ್ರವಹಿಸುತ್ತಿರುವವೋ, ಯಾವ ಶಾಮಲಾಂಗನ ದಿವ್ಯ ಶಕ್ತಿಯಿಂದ ಗಗನ ಗೋಳವು ತಾರಾಮಂಡಲ ಚಂದ್ರ, ಸೂರ್ಯ, ನವಗ್ರಹಗಳ ನಿರ್ಮಾಣವಾಗಿರುವದೋ, ಆ ದಿವ್ಯ ಶಕ್ತಿಯ ಸಾಕಾರ ಮೂರ್ತಿಯಾದ, ಈ ಶಾಮಲಾಂಗನ ಶುಭ ದೇಹದ ಒಂದೇ ಒಂದು ಬಿಂದು ರಕ್ತ ಬಿಂದುವಿನ ಬೆಲೆಯನ್ನು ಕಟ್ಟುವದು ದೇವಾಧಿದೇವತೆಗಳಿಗೂ ಕೂಡಾ ಅವಶ್ಯಕವಾಗಿರುವುದು.(ಅದೆ, ಪುಟ. ೪–೫)

ಈ ಸನ್ನಿವೇಶವು ಖಾದಿಯ ಮಹತ್ವವನ್ನೇ ಹೇಳುತ್ತದೆ. ಮತ್ತು ಶಸ್ತ್ರಾಸ್ತ್ರಗಳಿಂದ ಗಾಯವನ್ನು ಕನಸು ಮನಸುಗಳಲ್ಲಿ ಸಹ ಕಾಣದ ದನಗಾಯಿಗೆ ಇದೇ ದೊಡ್ಡ ಗಾಯ ಎಂಬ ರುಕ್ಮಿಣಿಯ ಮಾತಿನಲ್ಲಿ ಕೃಷ್ಣನನ್ನು ಅಹಿಂಸಾ ಮೂರ್ತಿಯನ್ನಾಗಿ ಚಿತ್ರಿಸಲಾಗಿದೆ. ಮೇಲೆ ಹೇಳಿದ ಹಾಗೆ ಕೃಷ್ಣನನ್ನು ಮಹಾತ್ಮ ಗಾಂಧಿಯ ಪ್ರತಿಯಾಗಿ ಮತ್ತು ಗಾಂಧಿಯ ಅಹಿಂಸಾ ನೀತಿಗಳನ್ನು ಈ ನಾಟಕದಲ್ಲಿ ಮುನ್ನೆಲೆಗೆ ತರಲಾಗಿದೆ. ಈ ಮೂಲಕ ಗಾಂಧಿ ಮತ್ತು ಗಾಂಧಿಯ ಈ ಅಹಿಂಸಾ ನೀತಿಗಳಿಂದ ಭಾರತದ ಬಿಡುಗಡೆಗಾಗಿ ನಡೆಯುತ್ತಿರುವ ಹೋರಾಟಗಳನ್ನು ನಾಟಕದ ಮೂಲಕ ಜನರಿಗೆ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಸಂದರ್ಭದಲ್ಲಿ ರಚನೆಯಾದ ಬಹುತೇಕ ನಾಟಕಗಳು ಬ್ರಿಟಿಶ್ ನಿರ್ಮಿತ ವಸಾಹತುಶಾಹಿಗೆ ಪ್ರತಿಕ್ರಿಯಿಸುವುದನ್ನು ಗಮನಿಸಬಹುದು.

ದ್ರೌಪದಿಯ ಮಾತುಗಳು ಗಾಂಧಿಯ ವ್ಯಕ್ತಿತ್ವ ಮತ್ತು ಮಹತ್ವವನ್ನು ಸಾರುತ್ತವೆ. ಈ ಪವಿತ್ರ ಮೂರ್ತಿಯ ದೇಹದ ಒಂದೇ ಒಂದು ರಕ್ತ ಬಿಂದುವಿಗೆ ಅಖಂಡ ಬ್ರಹ್ಮಾಂಡದ ಬೆಲೆಯು ಸರಿಯಾಗಲಾರದು. ನಂದನವನದಲ್ಲಿ ಆವೃತ್ತ ಸರೋವರದ ಮೌಲ್ಯವು ಕೂಡ ಈ ರಕ್ತದ ಹನಿಯ ಬೆಲೆಯನ್ನು ಸರಿಗಟ್ಟಲಾರದು. ಈ ಶಾಮಲಾಂಗನ ಶುಭ ದೇಹದ ಒಂದೇ ಒಂದು ರಕ್ತದ ಬಿಂದುವಿನ ಬೆಲೆಯನ್ನು ಕಟ್ಟುವುದು ದೇವಾನುದೇವತೆಗಳಿಗೆ

ಕೂಡ ಅವಶ್ಯವಾಗಿರುವುದು.(ಕಂದಗಲ ಹನುಮಂತರಾಯರ ಅಕ್ಷಯಂಬರ, ಪುಟ-೫) ಎಂಬ ಈ ಮಾತುಗಳು ಭಾರತದ ಸ್ವಾತಂತ್ರ್ಯ ಚಳುವಳಿಗೆ ಗಾಂಧಿಯ ಮಹತ್ವವನ್ನು ಕೃಷ್ಣನ ಮೂಲಕ ಸ್ಪಷ್ಟೀಕರಿಸುತ್ತಾರೆ ಮತ್ತು ಕೃಷ್ಣ ತರಕಾರಿ ಹೆಚ್ಚುವುದನ್ನು ಗಾಂಧಿಯ ಸರಳತೆಯನ್ನು ಗಾಂಧಿ ವ್ಯಕ್ತಿ ಮತ್ತು ಮನುಷ್ಯ ಎಷ್ಟೇ ದೊಡ್ಡವನಾದರೂ ಅವರವರ ಕೆಲಸವನ್ನು ಅವರೇ ನಿಭಾಯಿಸಿಕೊಳ್ಳುವುದು ಮುಖ್ಯ ಎಂಬುದನ್ನು ಹೇಳುತ್ತದೆ.

ವಿದ್ಯಾರಣ್ಯ ಕೀರ್ತನ

ಆಧುನಿಕ ಕನ್ನಡ ನಾಟಕ ಸಾಹಿತ್ಯ ಚರಿತ್ರೆಯಲ್ಲಿ ಶಾಂತ ಶಾಂತರಸರದು ಪ್ರಮುಖವಾದ ಹೆಸರು. ಮರಾಠಿ ಮತ್ತು ಇಂಗ್ಲಿಶ್ ಪ್ರಾಬಲ್ಯವಿರುವ ಕಾಲದಲ್ಲಿ ಕನ್ನಡ ಮತ್ತು ಭಾರತದ ಸ್ವಾತಂತ್ರ್ಯ ಕುರಿತು ತಮ್ಮ ಸಾಹಿತ್ಯದ ಮೂಲಕ ಮಾತನಾಡಿದಗಟ್ಟಿಗ. ಕನ್ನಡದಲ್ಲಿ ಸಣ್ಣಾಟ, ದೊಡ್ಡಾಟ, ಯಕ್ಷಗಾನ ಪಾರಿಜಾತ ಎಂಬ ನಾಟಕ ಪರಂಪರೆಗಳ ಇದ್ದರು ಯಾಕೆ ಕನ್ನಡ ನಾಟಕ ಪರಂಪರೆ ಯುರೋಪ್ ಮಾದರಿಯನ್ನು ಅನುಸರಿಸಿತು ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಪ್ರಭಾವ ಪ್ರೇರಣೆಗಳ ಜೊತೆಗೆ ಮರಾಠಿ ಮತ್ತು ಇಂಗ್ಲಿಶಿನ ಹೇರಿಕೆಯನ್ನು ತಡೆಯಲು ರಂಗಭೂಮಿ ಅಂತ ಮಾಧ್ಯಮಗಳು ಅವಶ್ಯಕ ಎಂದು ಹೇಳಿದ್ದಾರೆ. ಈ ಪದ್ಯ ಕಂಪನಿ ರಂಗಭೂಮಿಯ ಹುಟ್ಟು ಮತ್ತು ಅದರ ಉದ್ದೇಶದ ಬಗ್ಗೆ ಸ್ಪಷ್ಟಪಡಿಸುತ್ತದೆ.

> "ಎಲ್ಲಿ ನೋಡಲು ಕನ್ನಡ ಭಾಷೆಯಟ್ಟಿಯದ
> ರಲಿಲ್ಲ ಮೃದು ಶಬ್ದವಿಲ್ಲ ಭಾಷಾಸರಣಿ
> ಯಿಲ್ಲವೈ ಸ್ವಾರಸ್ಯವಿಲ್ಲ ನಾಟಕವಿಲ್ಲ ನಟ ನಟಿಗಳಿಲ್ಲವಿನ್ನು
> ಇಲ್ಲವವು ಮುಂದಾಗುವ ಆಸೆ ಕೂಡ ಇಲ್ಲ
> ವಿಲ್ಲದೆಂದೀ ಧಾರವಾಡ ಸೀಮೆಯ ಜನರು
> ಸೋಲಿಸುವ ಕಾಲದಲ್ಲಿ ನಾಟಕಂ ಪಟ್ಟಿದುದು ಕೃತಪುರದೊಳು"

(ರಾಮಕೃಷ್ಣ ಮರಾಠೆ, ತೆರೆಮರೆ, ಪುಟ-೧)

ಅಂದು ನಿರ್ಮಾಣಗೊಂಡ ಒತ್ತಡದ ಪರಿಸರವೇ ನಾಟಕ ಹುಟ್ಟಿಗೆ ಕಾರಣವಾಯಿತು. ಶಾಂತಕವಿಗಳೆ ಗದಗಿನಲ್ಲಿ ಒಂದು ವೃತ್ತಿರಂಗಭೂಮಿ ಕಂಪನಿ ಆರಂಭಿಸಿ ಅದರ ಮೂಲಕ ಕನ್ನಡ, ಭಾರತದ ಸಂಕಷ್ಟಗಳಿಗೆ ಸ್ಪಂದಿಸಿದರು. ಭಾರತದ ಬಿಡುಗಡೆಗಾಗಿ ಅಂದು ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಸನ್ನಿವೇಶಗಳನ್ನು ತಮ್ಮ ನಾಟಕಗಳ ಮೂಲಕ ಪ್ರದರ್ಶಿಸಿ ಜನರಲ್ಲಿ ಅರಿವು ಮೂಡಿಸಿದರು. ಅವರ 'ವಿದ್ಯಾರಣ್ಯ ಕೀರ್ತನ' ನಾಟಕ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕಥೆಯ ಮೂಲಕ ಬ್ರಿಟಿಶ್ ಮುಕ್ತ ಭಾರತ ಕಟ್ಟುವ ಕುರಿತು ಚಿಂತಿಸುತ್ತದೆ.

೧೯೧೮ರಲ್ಲಿ ರಚನೆಗೊಂಡ ಈ ನಾಟಕವು ವಿಜಯನಗರ ಸ್ಥಾಪನೆಯ ಸಂದರ್ಭವನ್ನು ವಸ್ತುವಾಗಿಸಿಕೊಂಡಿದೆ. ತಕ್ಕಡಿ ಹಿಡಿದು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಬ್ರಿಟಿಶರು ಕಾಲಕ್ರಮೇಣ ಭಾರತವನ್ನೇ ತಮ್ಮ ವಸಾಹತುವನ್ನಾಗಿ ಮಾರ್ಪಡಿಸಿಕೊಂಡರು. ನಂತರ ಭಾರತದ ಆಡಳಿತ ಕ್ಷೇತ್ರಕ್ಕೂ ತಮ್ಮನ್ನು ವಿಸ್ತರಿಸಿಕೊಂಡರು. ಇಂತಹ ಚಾರಿತ್ರಿಕ ಘಟನೆಗಳನ್ನು ವಿಜನಗರ ಸಾಮ್ರಾಜ್ಯಕ್ಕೆ ಸಮೀಕರಿಸುವದರ ಮೂಲಕ ಈ ನಾಟಕದಲ್ಲಿ ವಿರೋಧಿಗಳನ್ನು ಓಡಿಸಲು ಒಗ್ಗಟ್ಟಿನ ಇಚ್ಛಾಶಕ್ತಿ ಅವಶ್ಯಕತೆಯನ್ನು ಕುರಿತು ಸಾಯಣನಿಗೆ ವಿದ್ಯಾರಣ್ಯರು ಹೇಳುವ ಮಾತುಗಳು ಗಂಭೀರತೆಯಿಂದ ಕೂಡಿವೆ.

> "ಏಳು ಸಾಯಣ ಕಟ್ಟು ಗ್ರಂಥವ ಏಳು ಪಂಪಾ
> ಕ್ಷೇತ್ರಕ್ಕೆ; ಗಾಳಿಗಂಟುಗಳ ಓದಿದೇತಕೆ?
> ಏಳು ಈ ಕ್ಷಣ ಮಾತ್ರಕೆ"

ಎಂಬ ವಿದ್ಯಾರಣ್ಯ ಮಾತುಗಳು ಅಂದಿನ ಪರಿಸ್ಥಿತಿಯನ್ನು ಎದುರಿಸುವ ಅನಿವಾರ್ಯತೆಯನ್ನು ಶಾಂತಕವಿಗಳು ಈ ನಾಟಕದ ಮೂಲಕ ಕನ್ನಡಿಗರಿಗೆ ತಿಳಿಸಿದ್ದಾರೆ. ಇಂತ ಸಮಕಾಲಿನ ಸಮಸ್ಯೆಗಳ ಕುರಿತು ಇದೇ ನಾಟಕದ ಇನ್ನೊಂದು ಸನ್ನಿವೇಶ ಹೀಗಿದೆ.

> ಲಕ್ಷಣ ಶಾಸ್ತ್ರಗಳೇಕೆ ಸಾಯಣ
> ಲಕ್ಷ ಸೂತ್ರಗಳೆತಕೆ ?
> ಮೋಕ್ಷ ಸಂಪಾದನೆಕೆ ನಿಶ್ಚಯ
> ಮೋಕ್ಷ ಕೇಳು ಸ್ವತಂತ್ರತೆ"

ಎಂಬ ವಿದ್ಯಾರಣ್ಯರ ಮಾತುಗಳು ಭಾರತೀಯರಿಗೆ ಮೋಕ್ಷ ಎಂದರೆ ಅದು ಸ್ವಾತಂತ್ರ್ಯವೇ ಎಂದು ಭಾವನಾತ್ಮಕ ಮೂಲಕ ಕನ್ನಡಿಗರನ್ನು ಎಚ್ಚರಿಸಿದ್ದಾರೆ. ಭಾರತ ಸ್ವಾತಂತ್ರ್ಯ ಚಳುವಳಿಯು ಭಾವನಾತ್ಮಕದ ಮೂಲಕ ಭಾರತೀಯರನ್ನು ನಾಟಿತ್ತು ಎಂದು ಹೇಳಬಹುದು. ಕೀರ್ತನೆಗಳನ್ನು ಒಂದು ಮಾಧ್ಯಮವನ್ನಾಗಿಸಿಕೊಂಡು ಅದರ ಮೂಲಕ ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕದ ಏಕೀಕರಣದಂತ ವಿಷಯಗಳನ್ನು ಜನರಿಗೆ ತಲುಪಿಸುವಲ್ಲಿ ಶಾಂತಕವಿಗಳ ಶ್ರಮ ಅಪಾರವಿದೆ.

ಕಿತ್ತೂರ ಕೇಸರಿ

ಶಿವಲಿಂಗ ಶಾಸ್ತ್ರಿ ಎಂದೆ ಗುರುತಿಸಿಕೊಂಡಿರುವ ಚಿಕ್ಕೋಡಿ ಮಠದ ಶಿವಲಿಂಗ ಸ್ವಾಮಿಗಳು ವೃತ್ತಿರಂಗ ನಾಟಕಕಾರರಲ್ಲಿ ಪ್ರಮುಖ ಹೆಸರು. ವೃತ್ತಿರಂಗಭೂಮಿಯು ಪೌರಾಣಿಕ ನಾಟಕಗಳಿಂದ ಕಂಗೊಳಿಸುತ್ತಿದ್ದ ಕಾಲದಲ್ಲಿಯೇ ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು

ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಣಿ ಚೆನ್ನಮ್ಮನ ಕುರಿತು ಕಿತ್ತೂರ ಕೇಸರಿ ಎಂಬ ನಾಟಕವನ್ನು ಬರೆದರು. ಅಂದು ಪ್ರದರ್ಶನಗೊಳ್ಳುತ್ತಿದ್ದ ಈ ನಾಟಕವು ಬ್ರಿಟಿಶ್ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿ ಪರವಾನಿಗೆಯನ್ನು ಕಳೆದುಕೊಂಡಿತ್ತು. ನಾಟಕದ ಈ ರಚನೆಗಾಗಿ ೧೯೨೭-೨೮ರವರೆಗೆ ಶಿವಲಿಂಗ ಸ್ವಾಮಿಗಳು ಕಿತ್ತೂರಿನಲ್ಲಿ ಆರು ತಿಂಗಳ ಕಾಲ ಇದ್ದು, ಚೆನ್ನಮ್ಮ ವಂಶಜರಿಂದ ಮತ್ತು ಬೇರೆ ಬೇರೆ ಬೇರೆ ಬೇರೆ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿದ್ದರಂತೆ.(ಶಾಮ ಸುಂದರ ಬಿದರಕುಂದಿ) ಪ್ರಸ್ತುತ ನಾಟಕವು ಕಿತ್ತೂರು ದೇಶಗತಿಯು ತನ್ನ ಸ್ವಾತಂತ್ರ್ಯಕಾಗಿ ಬ್ರಿಟಿಶರ ವಿರುದ್ಧ ಹೋರಾಡಿದ ಕಥನವನ್ನು ಒಳಗೊಂಡಿದೆ. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾನೂನಿನ ವಿರುದ್ಧ ಯುದ್ಧ ಸಾರಿದ ಚನ್ನಮ್ಮ, ಕಂಪನಿ ಸರ್ಕಾರವನ್ನು ಮೊದಲ ಯುದ್ಧದಲ್ಲಿ ಸೋಲಿಸುತ್ತಾಳೆ. ಮತ್ತೊಂದು ಯುದ್ಧಕ್ಕೆ ಸಿದ್ಧಳಾಗಿ ಮರಣ ಹೊಂದಿದ ಚೆನ್ನಮ್ಮನ ಕಥೆಯು ನಾಟಕ ನೋಡುತ್ತಿದ್ದ ಪ್ರೇಕ್ಷಕರಿಗೆ ದೇಶಾಭಿಮಾನದ ಸಂಕೇತದಂತೆ ತೋರುತ್ತದೆ. ಚನ್ನಮ್ಮನ ವೀರಾವೇಶದ ಮಾತುಗಳು ಜನರಲ್ಲಿ ಆತ್ಮಬಲವನ್ನು ತುಂಬುತ್ತಿದ್ದವು. ಕರ್ನಾಟಕದಲ್ಲಿ ಈ ನಾಟಕದ ಪ್ರಭಾವ ದಿನದಿಂದ ದಿನಕ್ಕೆ ಅಧಿಕವಾಗುತ್ತಿದ್ದಾಗ ಈ ನಾಟಕದಲ್ಲಿನ ಚನ್ನಮ್ಮನ ಮಾತುಗಳು ಕಂಪನಿಯ ಅಧಿಕಾರಿಗಳ ನಿದ್ದೆಗೆಡಿಸಿತು. ತದನಂತರ ಈ ನಾಟಕ ಪ್ರದರ್ಶನದ ಪರವಾನಿಗೆ ಕಳೆದುಕೊಂಡಿತು. ಮೊದಲ ಬಾರಿಗೆ ಭಾರತದಲ್ಲಿ ನಾಟಕ ಪ್ರದರ್ಶನಕ್ಕೆ ಪರವಾನಿಗೆ ಪದ್ಧತಿ ಜಾರಿಯಾಗಿದ್ದು ಮೊದಲು ಕಲ್ಕತ್ತದಲ್ಲಿ. ನೀಲಿ ಬೆಳೆಗಾರರ ಕುರಿತು ರಚನೆಗೊಂಡ ನಾಟಕವು ಪರವಾನಿಗೆಯನ್ನು ಕಳೆದುಕೊಂಡಿತ್ತು.

ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟಿದ್ದ ಭಾರತವು ಬಿಡುಗಡೆಗಾಗಿ ಬ್ರಿಟಿಶರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕಿಳಿಯಿತು. ಸ್ವಾತಂತ್ರ್ಯಕ್ಕಾಗಿ ಅಸಹಕಾರ, ಸ್ವದೇಶಿ, ಕಾನೂನು ಭಂಗ, ಉಪ್ಪಿನ ಸತ್ಯಾಗ್ರಹದಂತ ಹೋರಾಟಗಳು ಜರುಗಿದವು. ಈ ಹೋರಾಟಗಳ ಬಗ್ಗೆ ಜನರಿಗೆ ಅರಿವು ಮೂಡಿಸುವಲ್ಲಿ ಕನ್ನಡ ನಾಟಕಗಳ ಪಾತ್ರ ಪ್ರಮುಖವಾದದ್ದು. ಪ್ರಸ್ತುತ ನಾಟಕ ಬ್ರಿಟಿಶ್ ಕಂಪನಿಯ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ವಿರುದ್ಧ ತನ್ನ ಸಂಸ್ಥಾನದ ಉಳಿವಿಗಾಗಿ ಹೋರಾಡಿದ ರಾಣಿ ಚೆನ್ನಮ್ಮನ ಕುರಿತು ರಚನೆಗೊಂಡಿದೆ. ಈ ನಾಟಕದ ಪ್ರದರ್ಶನಕ್ಕಾಗಿ ಅಬ್ಬಿಗೇರಿಯ ಬಸನಗೌಡರು ಹೊಸದಾಗಿ ನಾಟಕ ಕಂಪನಿಯನ್ನು ಗದಗದಲ್ಲಿ ಪ್ರಾರಂಭಿಸಿದರು. ಈ ನಾಟಕ ನೋಡಿ ಹೊರ ಬಂದ ಪ್ರೇಕ್ಷಕರು ಥೇಟರ್ ಎದುರಿನಲ್ಲಿಯೆ ವಿದೇಶಿ ಬಟ್ಟೆ-ವಸ್ತುಗಳನ್ನು ಸುಟ್ಟು ಹಾಕಿದ್ದರು. ಸುತ್ತಮುತ್ತಲಿನ ಹಳ್ಳಿಗಳಿಂದ ನಾಟಕ ನೋಡಲು ಬಂದ ಜನ ಹಿಂದಿರುಗುವಾಗ ದಾರಿಯಲ್ಲಿದ್ದ ಸೇಂದಿ ಗಿಡಗಳನ್ನು ಕಡಿದು ಹಾಕುತ್ತಿದ್ದರು. ಗಾಂಧೀಜಿ ಕಿ ಜೈ ಎಂದು ಘೋಷಣೆ ಕೂಗುತ್ತಿದ್ದರು. ಈ ಸನ್ನಿವೇಶವನ್ನು ಗಮನಿಸಿದ ಬ್ರಿಟಿಶ್ ಪೊಲೀಸ್ ಅಧಿಕಾರಿಗಳು ಈ ನಾಟಕವನ್ನು

ನಿಷೇಧಿಸಿದರು. ಮುಖ್ಯವಾಗಿ ಬಾಂಬೆ ಕರ್ನಾಟಕದ ಪ್ರಾಂತ್ಯದಲ್ಲಿ ಗಾಂಧಿ ಅವರ ಅಸಹಕಾರ ಚಳುವಳಿಗೆ ಬೆಂಬಲವಾಗಿದದ್ದಿಂತ ನಾಟಕಗಳನ್ನು ಪ್ರದರ್ಶಿಸದಂತೆ ಬ್ರಿಟಿಶ್ ಸರಕಾರ ಆದೇಶ ಹೊರಡಿಸುತ್ತಿತ್ತಂತೆ.(ರಾಮಕೃಷ್ಣ ಮರಾಠೆ)

ಬಲಿದಾನ

೧೯೪೮ರಲ್ಲಿ ರಚನೆಗೊಂಡ ಕುವೆಂಪು ಅವರ ಈ ನಾಟಕವು ೩ ಕಾಲಘಟ್ಟಗಳನ್ನು ಕುರಿತು ರಚನೆಗೊಂಡಿದೆ. ಅಂದರೆ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯ ಕಾಲ ಮತ್ತು ಸ್ವಾತಂತ್ರ್ಯ ನಂತರದ ಈ ಮೂರು ಕಾಲಘಟ್ಟಗಳು ದೇಶದ ಪರಿಸ್ಥಿತಿಯನ್ನು ಈ ನಾಟಕ ಕಟ್ಟಿಕೊಡುತ್ತದೆ. ಬ್ರಿಟಿಶರ ಆಳ್ವಿಕೆಯಿಂದ ಸ್ವತಂತ್ರಗೊಂಡ ಭಾರತವು ಮತ ಪೀಡೆಯಿಂದ ಇನ್ನೂ ಸ್ವತಂತ್ರಗೊಂಡಿಲ್ಲ ಎಂಬ ನೋವು 'ಬಲಿದಾನಕುಂಟೆ' ಕೊನೆ ಎಂಬ ಮಾತು ಯುದ್ಧ ನಿರಾಕರಣೆಯನ್ನು ಸೂಚಿಸುತ್ತದೆ. ಬಲಿಪರಂಪರೆಯತ್ತ ಸ್ವಾತಂತ್ರ್ಯ ಜೀವನಂ ಕುವೆಂಪು ಅವರ ಮಾತು ಇಲ್ಲಿಮುಖ್ಯವಾಗುತ್ತದೆ. ಸಾತಂತ್ರ್ಯ ಪೂರ್ವದಲ್ಲಿ ಭಾರತ ದೇಶವೂ ಬ್ರಿಟಿಶರ ವಸಾಹತುಶಾಹಿಯ ಅಡಿಯಲ್ಲಿ ನರಳುತ್ತಿದೆ ಎಂಬುದನ್ನು ಅಂದಿನ ಎಲ್ಲ ಬರಹಗಾರರು ಬಿಂಬಿಸಿರುವುದು ಸಹಜವಾಗಿದೆ. ಆದರೆ ಕುವೆಂಪು ಅವರ 'ಬಲಿದಾನ' ನಾಟಕದಲ್ಲಿ ವಾಸ್ತವವಾಗಿ ಭಾರತಮಾತೆ ಬಂಧಿತವಾಗಿರುವುದು ಬ್ರಿಟಿಶರಿಂದ ಎನ್ನುವುದಕ್ಕಿಂತ ನಮ್ಮವರಿಂದಲೇ ಎಂಬ ಒಳನೋಟವನ್ನು ಭಾರತಾಂಬೆಯ ಪಾತ್ರದಮೂಲಕ ಸೂಚನೆ ನೀಡಿದ್ದಾರೆ. ಮೊದಲನೇ ದೃಶ್ಯದಲ್ಲೇ ಭಾರತ ಮಾತೆಯನ್ನು ಬಿಡುಗಡೆಗೊಳಿಸಲು ಕೀಲಿಕೈಯನ್ನು ತಂದು ಬಿಡಿಸುವೆನು ಎಂದು ಭರತಸುತ(ಭಾರತದ ಪ್ರಜೆ ಹೋರಾಟಗಾರ) ಹೇಳುತ್ತಾನೆ.

ಮತ್ತೊಂದು ದೃಶ್ಯದಲ್ಲಿ ಕಾಳಿಕಾ ದೇವಾಲಯವೆ ವೇದಿಕೆಯಾಗುತ್ತದೆ. ಇಲ್ಲಿ ಕಾಳಿ ಭಾರತಾಂಬೆ, ದೇವಾಲಯದಿಂದ ಸ್ವಲ್ಪ ದೂರದಲ್ಲಿ ಕಬ್ಬಿಣ ಸಂಕೋಲೆಗಳಿಂದ ಬಿಗಿದ ಸ್ಥಿತಿಯಲ್ಲಿರುತ್ತಾಳೆ. ಆಕೆಯ ಬಟ್ಟೆ ಮಾಸಿ, ಚಿಂದಿ ಚಿಂದಿಯಾಗಿರುತ್ತವೆ. ಕಿರೀಟದ ಮುತ್ತುರತ್ನಗಳೆಲ್ಲ ಉದುರುತ್ತವೆ. ಇಂತಹ ಕಷ್ಟದಲ್ಲೂ ಭರತಸುತನನ್ನು ಎಂದಿಗೆ ಬರುವೆ ನೀನು ಎಂದು ನನ್ನ ಈ ಶೃಂಖಲೆಗಳನ್ನು ಬಿಡಿಸುವೆ, ಈ ಸಂಕಟದಿಂದ ಮುಕ್ತಿಪಡಿಸು, ಈ ದಾರಿದ್ರ್ಯವನ್ನು ತೋಲಗಿಸು ಎಂದು ಕೇಳಿಕೊಳ್ಳುತ್ತಾಳೆ. ಈ ಮಾತುಗಳು ಬ್ರಿಟಿಶರಿಂದ ಬಿಡುಗಡೆಗಾಗಿ ಕಾದಿರುವ ಭಾರತೀಯರ ಮನಸ್ಸುಗಳು ಎಂದು ಹೇಳಬಹುದು. ದೇವಾಲಯದ ಬದಿಯಿಂದ ಗೂಬೆ ಹಾರಿ ಹೋಗುವ ಸನ್ನಿವೇಶವು ಬ್ರಿಟಿಶರಿಂದ ಭಾರತದ ಬಿಡುಗಡೆಯ ಸಂಕೇತವಾಗಿದೆ. ಆದರೆ ಗೂಬೆ ಭಾರತೀಯರ ಪ್ರಕಾರ ಅಪಶಕುನ ಪಕ್ಷಿಯಾಗಿದೆ. ಬಿಡುಗಡೆಗಾಗಿ ಭಾರತಾಂಬೆ ತನ್ನ ಮಗ ಭರತಸುತನನ್ನು ಕಾಯುತ್ತಿರುತ್ತಾಳೆ. ದೂರದಿಂದ ಜಯಘೋಷ ಮತ್ತು ಹಾಡಿನ ಶಬ್ದ ಕೇಳುತ್ತದೆ ಈ ಮೂಲಕ ನಾಟಕ ಯುವಕರಲ್ಲಿ ಸಾತಂತ್ರ್ಯ ಸಂಗ್ರಾಮಕ್ಕೆ ದುಮುಕುವುದಕ್ಕೆ ಪ್ರೇರಣೆ ನೀಡುತ್ತದೆ. ಆ ಸನ್ನಿವೇಶ ಇಂತಿದೆ.

'ವಾಣಿ : ನಡೆ ಮುಂದೆ ! ನಡೆ ಮುಂದೆ !
ನುಗ್ಗಿ ನಡೆ ಮುಂದೆ!
ಜಗ್ಗದೆಯೆ ಕುಗ್ಗದೆಯೆ
ಹಿಗ್ಗಿ ನಡೆ ಮುಂದೆ!
ಬೆಚ್ಚ ಬಿಡು ನೆಚ್ಚ ನೆಡು
ಕೆಚ್ಚೆದೆಯ ಗುಡಿಯಲಿ
ಸೆರೆಯ ಹರಿ, ಅರಿಯನಿರಿ
ಹುಟ್ಟಳಿಸು ಹುಡಿಯಲಿ
ಅಳಿವೆ ನಾನ್ ಅಳಿವೆ ನೀನ್ ನಮ್ಮೆಲುಬುಗಳ ಮೇಲೆ
ಮೂಡುವುದು ನೋಡು ಅದೊ
ನವ ಭಾರತದ ಲೀಲೆ
ಆತ್ಮ ಅಚ್ಯುತವೆಂದು
ಮೃತ್ಯು ನಶ್ವರವೆಂದು
ಭಾರತಿಗೆ ಜಯವೆಂದು
ನಡೆ ಮುಂದೆ !'ನಡೆ ಮುಂದೆ!
ನುಗ್ಗಿ ನಡೆ ಮುಂದೆ !

(ಶೂದ್ರ ತಪಸ್ವಿ ಮತ್ತು ಬಲಿದಾನ–ಪುಟ–೫೬–೫೭)

ಮತ್ತೊಂದು ಸನ್ನಿವೇಶದಲ್ಲಿ ಅಗೋಚರವಾದ ಧ್ವನಿಯಮೂಲಕ ಬಿಡುಗಡೆಗಾಗಿ ಮತದ ಹೋರಾಟಗಾರರನ್ನು ನೆನಪಿಸುವ ಮೂಲಕ ಭಾರತದ ದಾಸ್ಯವನ್ನು ಹೋಗಲಾಡಿಸಲು ಹೋರಾಡುತ್ತಿರುವ ವೀರರಿಗೆ ಆತ್ಮ ಸ್ಥೈರ್ಯವನ್ನು ನೀಡುತ್ತದೆ.

'ಧ್ವನಿ: ಸತ್ತವರ ಕರೆಯು, ಓ ಕೂಗುತಿದೆ, ಅದೊ ಕೇಳು,
ಭೂತ ಕಾಲದ ಗರ್ಭಗೋರಿಯಿಂದ ;
ಆಲಿಸಿಯು ಅದನು ನೀ ಸುಮ್ಮನಿರುವೆಯ ಹೇಳು,
ದೇಶಮಾತೆಯು ಹಡೆದ ವೀರಕಂದಾ

ಏಳಿರೈ ಸೋದರರಿರ,ನಿಮಗಾಗಿ ಮಡಿದೆಮ್ಮ
ಮರೆಯದಿರಿ, ನಿಮ್ಮಣ್ಣ ತಮ್ಮಂದಿರನು
ಇರಲಿ ಹೂವಿನ ಮಾಲೆ, ಇರಲಿ ರೇಶ್ಮೆಯ ವಸನ,
ಇರಲಿ ಮುತ್ತಿನ ಹಾರ ! ಕೈಗತ್ತಿ ಬರಲಿ
ಇರಲಿ ಹೊಸ ಹೆಣ್ಣು ಮದುವೆಯ ಸೊಗಸು ಶೃಂಗಾರ
ಬರಲಿ ಕಾರಾಗಾರ ! ಮೃತ್ಯುವೈತರಲಿ
ರಕ್ತಹೃದಯದ ಬಿಸಿಯ ರಕ್ತತರ್ಪಣವಿತ್ತು
ತಣಿಸಿರೈ ಸತ್ತರಾ ಬಯಕೆ ತೆತ್ತು
ಇಲ್ಲದಿರೆ ನಿಮಗಾಗಿ ಸತ್ತೆಮಗೆ ಸೊಗವಿಲ್ಲ,
ಬದುಕಿರುವ ನಿಮಗುಮಾ ಬದುಕೆ ಮುತ್ತು
ಇಂದು ರಕ್ತದ ಬಿಂದು, ಮುಂದೆ ಸೌಖ್ಯದ ಸಿಂಧು
ಎಂದು ಸಾಹಸಕೇಳಿ ಹಿಂಜರಿಯಬೇಡಿ'(ಅದೆ,ಪುಟ-೬೦-೬೧)

ಕೊನೆಯ ಸನ್ನಿವೇಶ ಕಾಳಿಕಾ ದೇವಸ್ಥಾನದಲ್ಲಿಯೆ ನಡೆಯುತ್ತದೆ. ಇಲ್ಲಿ ಭಾರತಾಂಬೆಯ ಬಿಡುಗಡೆಗಾಗಿ ಭರತಸುತ ಮತ್ತು ತಾಯಿ ಭಾರತಂಬೆಯ ನಡುವಿನ ಸಂಭಾಷಣೆ ಹೀಗಿದೆ.

ಭರತಸುತ : ಸ್ವಾತಂತ್ರ್ಯದುತ್ಸವಕ್ಕೆ ಜನ ಸಮುದ್ರಂ ನೆರೆದು
ಸ್ವಸ್ತಿಯಂ ಘೋಷಿಸಿದೆ. ನಿನ್ನ ಕಾಣಲ್ಕಿವರ್
ಕಾತರದಿ ಕಾಯುತಿಹರಲ್ಲಿ ನೋಡಲ್ಲಿ ಕಾಣ್
ಇಲ್ಲಿ ನಿನ್ನನ್ ಕಾಣದೆಲ್ಲಿದಳ್ ತಾಯೆಂದು
ಕಾತರದಿ ಕೂಗಿದೆನ್

ಭಾರತಾಂಬೆ : (ನಗುತ್ತ)ನಾನಿನ್ ಅಶರೀರಿ
ಮೇಣ್ ವಿರಾಟ್ ಶರೀರಿ. ನನ್ನನೇನ್
ಆ ಅನ್ನರೆಸಗಿದೊಲ್ ಗುಡಿಯೊಳೆಯೆ ಸೆರೆಗೈದು
ಪೂಜಿಸಲ್ ಬಗೆವಾ? ಕಬ್ಬೋರ್ಣನ್ನ ಸಂಕೊಲೆಯಂ

ಕಳಚಿ ಚೆಂಬೊನ್ನ ಮಿಳಿಗಳಿಂ
ಸ್ವಾತಂತ್ರ್ಯದರ್ಥಮಂ ಬಂಧಿಸದಿರನರ್ಥದಿಂ
ನುಡಿವರೆಡೆಯಿಂ ಮಿಗಿಲ್ ದುಡಿವರೆಡೆ ಸೊಗಸೆನಗೆ
ಭರತಸುತ : ಮನ್ನಿಸೆನ್ನನ್ ಪೂಜ್ಯೆ ನಿನ್ನ ಸ್ವಾತಂತ್ರ್ಯಮಂ
ಬಂಧಿಸಲ್ ಬಗೆದಂದನಲ್ತು. ಉತ್ಸವಕೆ
ಬಿಜಯ ಗೆಯ್ ಎಂದು ಕೇಳಲ್ಕೆ ಬಂದೆನ್.
ಭಾರತಾಂಬೆ : ಆವುದುತ್ಸವಮೆನಗೆ?
ಭರತಸುತ : ಏಕಮ್ಮ ! ಸ್ವಾತಂತ್ರ್ಯದುತ್ಸವಂ
ಭಾರತಾಂಬೆ : ಆವುದಾ ಸ್ವಾತಂತ್ರ್ಯಂ ?
ಭರತಸುತ : ನಾಮೆಲ್ಲರಿತ್ತ ಬಲಿದಾನಗಳಿಂ ಪಡೆದ
ಭಾರತ ಸ್ವಾತಂತ್ರ್ಯಂ
ಭಾರತಾಂಬೆ : ಬಾಹ್ಯ ಬಂಧನಗಳಂ ಕಳಲ್ಚಿದಿರಿ ದಿಟಂ
ಆಂತರದ ಶೃಂಖಲೆಗಳೊಳವು ವಜ್ರೋಪಮಂ
ಅವುಗಳಂ ಕಡಿವ ದುಡಿಮೆಯೊಳಿರ್ಪನೆಡೆಗೆ
ನಾನೆಯ್ದಿದೆನ್ ನೆರವೀಯಲೆಂದಾತಂಗೆ.(ಅದೆ, ಪುಟ-೭೦-೭೧)

ಕುವೆಂಪು ಅವರ ಈ ಬಲಿದಾನ ನಾಟಕವು ಸ್ವಾತಂತ್ರ್ಯದ ಪರಿಕಲ್ಪನೆಗೆ ಬೇರೆ ಬೇರೆ ನೋಟಗಳನ್ನು ನೀಡಿದೆ. ಸ್ವಾತಂತ್ರ್ಯವೆಂದರೆ ದೇಶವನ್ನು ಬಿಡುಗಡೆಗೊಳಿಸುವದಲ್ಲ ಅಲ್ಲಿಯ, ಜನರ ಪ್ರಶ್ನೆಗಳು, ಅವರ ಅಸ್ತಿತ್ವವು ಇಲ್ಲಿ ಮುಖ್ಯವಾಗಿದೆ ಎಂಬುದನ್ನು ಗಮನಿಸಲಾಗಿದೆ. ಗಾಂಧಿಯ ವ್ಯಕ್ತಿತ್ವ ಕುರಿತು ಈ ನಾಟಕ ಮಾತನಾಡುತ್ತದೆ. ಸ್ವಾತಂತ್ರ್ಯ ಕನಸು, ರಾಷ್ಟ್ರೀಯತೆ ನೆಪದಲ್ಲಿ ದೇಶ ವಿಭಜನೆಯಾದಾಗ ನೋವುಗಳನ್ನು ಈ ನಾಟಕ ಕಟ್ಟಿಕೊಟ್ಟಿದೆ. 'ಬಲಿದಾನಕ್ಕೆ ಕೊನೆಯುಂಟೆ' ಎಂಬ ಮಾತು ಸ್ವಾತಂತ್ರ್ಯ, ರಾಷ್ಟ್ರೀಯತೆ, ಧರ್ಮ, ಜಾತಿಗಳ ತಿಕ್ಕಾಟದಿಂದಾಗುವ ಕ್ರೌರ್ಯವನ್ನು ಸೂಚಿಸುವಂತಿದೆ.

ಚಿತ್ರಭಾನು ಅಥವಾ ೧೯೪೨

ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿ ಮರಣ ಹೊಂದಿದ ಯುವಕನ ಸಾಹಸಗಳನ್ನು ದಿನಪತ್ರಿಕೆಯಿಂದ ತಿಳಿದುಕೊಂಡ ಗೋವಿಂದ ಪೈ ಅವರು 'ಚಿತ್ರಭಾನು' ಅಥವಾ '೧೯೪೨'

ಎಂಬ ನಾಟಕವನ್ನು ರಚಿಸಿದರು. ೧೯೪೨ರ ಮಾಡು ಇಲ್ಲವೇ ಮಡಿ ಎಂಬ ಚಳುವಳಿಯ ಹೆಸರನ್ನು ಈ ನಾಟಕಕ್ಕೆ ಇಡಲಾಗಿದೆ. ಗಾಂಧಿಯ ಕರೆಗೆ ಓಗೊಟ್ಟು, ದೇಶಾದ್ಯಂತ ಭಾರತ ಬಿಟ್ಟು ತೊಲಗಿ ಎಂಬ ಹೋರಾಟದಲ್ಲಿ ಸಾವಿರಾರು ವಿದ್ಯಾರ್ಥಿಗಳು ಹೋರಾಟಕ್ಕಿಳಿದಿರುತ್ತಾರೆ. ಹುಬ್ಬಳ್ಳಿಯಲ್ಲಿ ೧೯೪೨ರಲ್ಲಿ ವಿದ್ಯಾರ್ಥಿಗಳು ಬ್ರಿಟಿಶರ ವಿರುದ್ಧ ಹೋರಾಡುವ ಸಂದರ್ಭದಲ್ಲಿ ಪೋಲೀಸಿನವರ ಗುಂಡಿಗೆ ವಿರೇಂದ್ರನೆಂಬ ವಿದ್ಯಾರ್ಥಿ ಮರಣ ಹೊಂದುತ್ತಾನೆ. ಈ ಘಟನೆಯ ಮೂಲಕ ಗೋವಿಂದ ಪೈ ಯವರು ಪ್ರಸ್ತುತ ನಾಟಕವನ್ನು ರಚಿಸುತ್ತಾರೆ. ಇದರಲ್ಲಿ ಸ್ವಾತಂತ್ರ್ಯ ಹೋರಾಟಗಾರನಾದ ಯುವಕ ವೇಣುಗೋಪಾಲ ಮತ್ತು ಅವನ ತಾಯಿ ಯಶೋಧೆ ಮತ್ತು ಅವಳ ಸಾಕು ಮಗಳು ಜಾಹ್ನವಿ ಮುಂತಾದ ಪಾತ್ರಗಳ ಮೂಲಕ ಬ್ರಿಟಿಶರಿಗೆ ಪ್ರತಿಕ್ರಿಯಿಸಿದ್ದಾರೆ. ನಾಟಕದ ಆರಂಭದಲ್ಲಿ ಮಗ ವೇಣುಗೋಪಾಲ ಸತ್ತಂತೆ ಯಶೋಧೆಯು ಕನಸನ್ನು ಕಾಣುತ್ತಾಳೆ. ಇದು ವೇಣುಗೋಪಾಲನು ಅಪಾಯದಲ್ಲಿದ್ದಾನೆ ಎಂಬುದನ್ನು ನಿರೂಪಿಸುತ್ತದೆ.

ಇತ್ತ ಮಗ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿರುತ್ತಾನೆ. ಯಶೋದೆ ಮತ್ತು ಜಾನಕಮ್ಮ ಮಾತುಕತೆಯಲ್ಲಿ ತೊಡಗಿರುತ್ತಾರೆ. ಮಗನನ್ನು ಹುಡುಕಲು ಪೊಲೀಸರು ಪ್ರಯತ್ನಿಸುತ್ತಾರೆ. ಆದ್ದರಿಂದ ವೇಣುಗೋಪಾಲ ಕದ್ದು ಮುಚ್ಚಿ ಮನೆಗೆ ಬರುತ್ತಾನೆ. ಆಗ ತಾಯಿ ಕೂಡ ಮಹಾತ್ಮ ಗಾಂಧಿಯ ಅಹಿಂಸಾ ತತ್ವದ ಅನ್ವಯ ಚಳವಳಿಗೆ ಧುಮುಕಿದ ನೀವು ಪೊಲೀಸರಿಗೆ ಶರಣಾಗತ ಆಗ ಬೇಕಿತ್ತಲ್ಲವೆ ಎಂದು ಕೇಳುತ್ತಾಳೆ. ಆಗ ವೇಣುಗೋಪಾಲ ಹೀಗೆ ಹೇಳುತ್ತಾನೆ.

'ಅವ್ವ ಮಹಾತ್ಮರ ತತ್ವವೇ ಬೇರೆ, ಅದನ್ನು ಮಂದಿ ಆಚರಿಸುವ ವಿಧಾನ ಬೇರೆ ಇದನ್ನು ಮಹಾತ್ಮರೂ ಬಲ್ಲರು. ಏಕೆ ತಾಯಿ ಮಹಾತ್ಮರ ಸಹಚರರಾಗಿರುವ ನಮ್ಮ ಮುಂದಾಳುಗಳಲ್ಲಿ ಹಲವರು ತಾವು ಶತಪಾತಾಳವನ್ನು ಹೊಕ್ಕು, ನಮಗೂ ಪಾತಾಳಕ್ಕೆ ಸರಿರಿ ಎಂದು ಅಂಕಿಸಿರುವರಲ್ಲ? ಹಾರಿದ ಹಾರಿಕೆಗೆ ಬೇಟೆ ಸಿಗದಿದ್ದರೆ ಸಿಂಹ ಗವಿಯನ್ನು ಸೇರುವಂತೆ, ನಮ್ಮ ಕಾಯಕದಲ್ಲಿ ನಿರಾಶರಾದರೆ ಬೇರೆ ತೆರವು ದೊರೆವನಕಾ ಮತ್ತೇನು ಮಾಡಬೇಕು? ಹಾವಿನ ಡೊಂಕು ಹುತ್ತಕ್ಕೆ ಸಸಿಯಿದ್ದಂತೆ ತಾಯಿ, ನಮ್ಮ ಅವಿತ ಗುರಿಗೆ ಸಸಿನ ಹೇಗೋ ತಾಯಿ, ಮಹಾತ್ಮರ ಗುರಿಗೂ, ನಮ್ಮ ಗುರಿಗೂ, ಭೇದವೆಂದರೆ ತಣ್ಣೀರು ಮತ್ತು ಬೆನ್ನಿರಂತೆ ಆದರೆ ಎರಡು ಕೆಲಸವೂ ಮನೆಗೆ ಹತ್ತಿದ ಬೆಂಕಿಯನ್ನು ನಂದಿಸುವದೆ" ಎಂದು ಕೇಳುತ್ತಾನೆ. (ಎಂ ಗೋವಿಂದಪೈ, ಚಿತ್ರ ಭಾನುವಾರ ಮತ್ತು ೧೯೪೨, ಪುಟ.೨) ನಂತರ ಎಲ್ಲಿಗೆ ಹೋಗುವೆನೆಂದು ತಾಯಿಗೆ ಹೇಳುವಾಗ ಕಣ್ಸನ್ನೆಯಿಂದ ಜಾಹ್ನವಿ ಎದುರಿಗೆ ಹೇಳಬೇಡ ಎನ್ನುತ್ತಾಳೆ. ಕಾರಣ ಪೊಲೀಸರು ಅವಳ ಬಾಯಿಗೆ ಇಕ್ಕಳ ಪ್ರಯೋಗಿಸಿ ಹಿಂಸಿಸಿ ಬಾಯಿಬಿಡಿಸುವ ಸಾಧ್ಯತೆಯಿರುತ್ತದೆ. ಎಂದು ಹೇಳುತ್ತಾಳೆ. ಇವರನ್ನು ನೋಡಿದರೆ

ಅಂದಿನ ಬ್ರಿಟಿಶರ ಅಧೀನದಲ್ಲಿದ್ದ ಪೊಲೀಸರ ದೌರ್ಜನ್ಯ ಎಂತಹದು ಎಂದು ಗೊತ್ತಾಗುತ್ತದೆ. ಹೀಗೆ ತಾಯಿ ಮಗನ ಮಾತುಗಳು ಬ್ರಿಟಿಶರು ಭಾರತವನ್ನು ಏಕೆ? ಹೇಗೆ? ಆಕ್ರಮಿಸಿಕೊಂಡರು ಎಂದು ಚರ್ಚಿಸುತ್ತಾರೆ. ವೇಣು ಬ್ರಿಟಿಶರನ್ನು ಒಂದು ಮುಳ್ಳಿನ ಗಿಡಕ್ಕೆ ಹೋಲಿಸುತ್ತಾನೆ. ಮುಳ್ಳು ಗಿಡದ ಬೇರು ಬಲವಾಗಿರುತ್ತದೆ. ಹೂವು ಕೂಡ ಬೇಗ ಬಿಡುತ್ತದೆ. ಎಂದು ಹೇಳುತ್ತಾನೆ. ಹೀಗಾಗಿ ದೇಶದ ಬಿಡುಗಡೆ ಜಾತಿ-ಧರ್ಮಾತೀತವಾಗಿ ಎಲ್ಲರೂ ಹೋರಾಡುವ ಅವಶ್ಯಕತೆಯ ಬಗ್ಗೆಯೂ ಮಾತನಾಡುತ್ತಾನೆ. ಆ ಮಾತು ಇಂತಿದೆ "ಈ ದೇಶದಲ್ಲೆಲ್ಲಾ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗದಂತೆ ಜಾತಿಜಾತಿಗಳೊಳಗೆ ಕಬ್ಬಿಣದ ತೆರೆಗಳನ್ನು ಏರ್ಪಡಿಸಿ, ತಮಗೆ ಒಪ್ಪಿದವರ ಕೈಗೆ ಚಿನ್ನದ ಸಂಕೋಲೆ, ಒಪ್ಪದವರಿಗೆ ಕಬ್ಬಿಣದ ಸಂಕೋಲೆಯನ್ನು ತೊಡಿಸಿ, ಅಡವಿಯ ದೊಣ್ಣೆ ಬಡವನ ತಲೆ ಎಂದು ನಮ್ಮನ್ನು ಆಳುತ್ತಿದ್ದಾರೆ. ಇವರು ಬಂದಂದಿನಿಂದ ತಾಯಿ ಇಲ್ಲಿ ಹೊರಗೊಳಗೆ ಮುದೇವಿ ಕವಿದುಕೊಂಡಿದೆ ಹೆಬ್ಬಾವಿನ ತೆಕ್ಕೆಯಲ್ಲಿ ಸಿಲುಕಿದ ನಮಗೀಗ ದೇವರಿಲ್ಲ, ಧರ್ಮವಿಲ್ಲ, ಶಾಂತಿ ಇಲ್ಲ, ಹಗಲ ಸತ್ತರೆ ಅಕ್ಕಿ ಇಲ್ಲ, ಇರುಳು ಸತ್ತರೆ ದೀಪವಿಲ್ಲ ಹೊರಗೊಳಗೆ ಎಂತಹ ದಟ್ಟ ದರಿದ್ರ ಕವಿದಿದೆ. ಇನ್ನು ಕೆಲವೇ ಕಾಲ ಇವರು ಇಲ್ಲದಿದ್ದರೂ ಅವರ ಹಿಮ್ಮೇಳದ ಮೇಳದ ಕುಣಿತದಲ್ಲಿ ಲೋಲರಾಗಿ ಅದೇ ನಮ್ಮನ್ನು ನಾವು ಮರೆತು ಸಾಕೆಂದು; ಈಗಲೇ ವೇಷ ಭಾಷೆಗಳಲ್ಲಿ ಇಬ್ಬಂದಿಯಾಗಿ ಅರೆಯಾಂಗ್ಲರಾಗಿರುವ ನಾವು ನಮ್ಮ ವ್ಯಕ್ತಿತ್ವಗೆಟ್ಟು, ನಮ್ಮ ಪೂರ್ವ ಪೂರ್ವಗೆಟ್ಟ, ಧರ್ಮಭ್ರಷ್ಟರಾಗಿ ಕೊನೆಗೆ ನಮ್ಮ ದೇಶವೇ ನಮಗಿಲ್ಲದೇ ಆಂಗ್ಲಾಳವೇ ತಮ್ಮ ತವರ್ಮನೆಯಾವುದು. ನಮ್ಮ ಪಂಜರವಾಗುವುದು ಸರಿ. ನಮ್ಮ ಭಾರತತ್ವ ಕೆಟ್ಟ ಮೇಲೆ ಅವ್ವಾ, ನಮಗೆ ಬಿಡುಗಡೆ ದೊರೆತರೇನು ದೊರೆಯದಿದ್ದರೇನು? ಅವ್ವ ಇನ್ನವರು ಇಲ್ಲಿ ಇರೋದು ನಮ್ಮ ಮನಸ್ಸಿಗೊಪ್ಪದು. ಅವರಿಗೆ, ಅವರ ಆಳ್ವಿಕೆ, ಇಲ್ಲಿಂದ ಬೇಗನೆ ಬಿಳಿಯ ಅಕ್ಷತೆ ತಿಳಿಯಬೇಕು ತಾಯಿ" ಎನ್ನುತ್ತಾನೆ. (ಪುಟ. ೨) ವೇಣುವಿನ ಮಾತುಗಳು ಆಂಗ್ಲ ಧೋರಣೆಗಳು ಭಾರತವನ್ನು ಎಲ್ಲಾ ಆಯಾಮಗಳಿಂದಲೂ ದಾಸ್ಯಕ್ಕೆ ಒಳಪಡಿಸಿರುವ ಅಂಶಗಳಾಗಿ ಕಾಣುತ್ತವೆ.

ಮತ್ತೊಂದು ಸನ್ನಿವೇಶದಲ್ಲಿ ಬ್ರಿಟಿಶರು ನಮ್ಮನ್ನೇಕೆ ಶೋಷಣೆ ಮಾಡುತ್ತಿದ್ದಾರೆಂದು ತಾಯಿ ಕೇಳಿದಾಗ ಹೀಗೆ ಹೇಳುತ್ತಾನೆ. ಕಾಮಲೆ ರೋಗ ಬಂದವರಿಗೆ ಜಗತ್ತೆಲ್ಲವೂ ಹಳದಿಯಾಗಿ ಕಾಣುತ್ತದೆ. ಬ್ರಿಟಿಶರಿಗೆ ತಮ್ಮ ಜಗತ್ತು ತಮ್ಮ ಬಣ್ಣದಂತಾಗಬೇಕು, ತಮ್ಮ ಅಧೀನಕ್ಕೆ ಒಳಪಡಬೇಕು, ಅದರಲ್ಲೂ ತಾವು ಬೆಳೆದ ಬೆಳೆ ಅವರಿಗೆ ಸಾಲುವುದಿಲ್ಲ. ಅವರ ಕೈಗಾರಿಕೆಗಳಿಗೆ ಬೇರೆ ಬೇರೆ ನೆಲೆಗಳಿಲ್ಲ. ಊರ ಹೊರಗಿನ ಸಂತೆಗಳು ಬೇಕು. ಎನ್ನುತ್ತಾನೆ ಈ ಕಾರಣಗಳಿಂದ ಬ್ರಿಟಿಶರು ನಮ್ಮ ಭಾರತವನ್ನು ಒಂದು ಅಕ್ಷಯ ಪಾತ್ರೆ ಎಂದು ತಿಳಿದುಕೊಂಡಿದ್ದಾರೆ. ಹಾಗೂ ಅದು ಒಂದು ಬಾಗಿಲನ್ನು ಹಾಕಿದ ಅಥವಾ ಬಾಗಿಲಿಲ್ಲದ ಮನೆಯಂತಿದೆ ಎನ್ನುತ್ತಾನೆ.

ತಿರುಗುಪ್ಪ

ಚಿಂತನಶೀಲ ಬರಹಗಾರರಾಗಿ ನಾಡು ನುಡಿಯ ಪ್ರೇಮಿಯಾಗಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಕೃಷ್ಣಕುಮಾರ ಕಲ್ಲೂರು ಅವರ ಈ ನಾಟಕ 1942ರ ಕ್ವಿಟ್ ಇಂಡಿಯಾಘಟನೆಯನ್ನು ಕುರಿತು ರಚಿತಗೊಂಡಿರುವಂತದ್ದು, ಜಾಗೃತ ರಾಷ್ಟ್ರ ಎಂಬ ಹೆಸರಿನಿಂದಲೂ ಈ ನಾಟಕ ಅಂದಿನ ಘಟನೆಗೆ ಮುಖಾಮುಖಿಗೊಂಡಿದೆ. ಮಾಡು ಇಲ್ಲವೆ ಎಂಬ ಘೋಷಣೆಯೊಂದಿಗೆ ಆರಂಭವಾದ 1942 ಕ್ರಾಂತಿಯುತ ಚಳುವಳಿಯ ತಿವ್ರತೆಯನ್ನು ಕುರಿತು ನಾಟಕ ಆರಂಭದಲ್ಲಿಯೆ ಹಿಗೆ ಚಿತ್ರಿಸಿದ್ದಾರೆ.

"ಮೊದಲ ನೋಡೂ ಈ ಬಸ್ಸಿಗೇನು ಹೊತ್ತಿಲ್ಲಾ ಗೊತ್ತಿಲ್ಲಾ ಈಗಂತೂ ಮೂರು ತಿಂಗಳು ಆತು, ಅಲ್ಲೆ ಕೀಲಗಾಡಿ ಬಿತ್ತು ಮತ್ತಲ್ಲೆ ಪೋಲು ಮುರಿತು, ಆಕಡೆ ಸ್ಟೇಶನ್ ಸುಟ್ಟಿತು ಅಂತ ದೇಶದ ತುಂಬ ದಗದಗೀ ಹಬ್ಬೈತಿ. ಊರ ಜನರ ನಂಬಿಕೆ ಕಳಕೊಂಡ ಮ್ಯಾಗ ಯಾ ಸರಕಾರ ಏಟ ದಿ ನಿಂತೀತು ಇರಲಿ ಅದೆಲ್ಲಾ ನಮಗ್ಯಾಕ ನೀ ಹೊಗಿ ಇನ್ನೋಂದೆರಡು ಕೊಡಾ ನೀರು ತತಾ. ಬೆಳಗಾವಿ ಬಸ್ಸು ಬರೋ ಹೊತ್ತಾತು"(ಕೃಷ್ಣ ಕೊಲ್ಲಾರ ಕುಲಕರ್ಣಿ, ಕೃಷ್ಣಕುಮಾರ ಕಲ್ಲೂರ ಸಾಹಿತ್ಯವಾಚಿಕೆ. ಪುಟ-71)

ಭಾರತದ ಸ್ವಾತಂತ್ರ್ಯ ಚಳುವಳಿ ನಿಂತಿರುವುದು ತತ್ವದ ಮೇಲೆ ಅಲ್ಲ, ಅಲ್ಲಿಯು ಕ್ರಾಂತಿಗಳು, ಸಾವು ನೋವುಗಳು ಸಂಭವಿಸಿವೆ ಎಂಬುವುದನ್ನುನರಸಮ್ಮನ ಈ ಮಾತಿನಿಂದ ಗಮನಿಸಬಹುದು. ಹಾಗೆ ಭಾವನೆಗಳು ಯಾವುದೆ ಸರಕಾರ ಬಂದರು ಜನಸಾಮಾನ್ಯರ ಅವು ನಿಯೋಜನೆಗೊಳ್ಳುವುದು ಅಷ್ಟು ಸುಲಭದ ಮಾತಲ್ಲ ಎಂಬುವುದನ್ನು ಧ್ವನಿಸುತ್ತದೆ. ಮತ್ತೊಂದು ಸನ್ನಿವೇಶದಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ಸ್ಥಳಿಯರೆ ತಮ್ಮ ಅಧಿಕಾರದ ಆಸೆಗಾಗಿ ತೋರಿದ ಇಬ್ಬಂದಿ ತನದ ಕುರಿತು ಈ ನಾಟಕ ಮಾತಾನಾಡುತ್ತಾರೆ.

ಗಾಂಧೀಯ ನಾಯಕತ್ವದಲ್ಲಿ ಆರಂಭಗೊಂಡ ಭಾರತಿಯ ಸ್ವಾತಂತ್ರ್ಯ ಚಳುವಳಿಯು ಭಾರತದ್ಯಾಂತ 1942ರ ನಂತರ ಭಾರತದ್ಯಾಂತ ಪಡೆದುಕೊಥು ಉಗ್ರಸ್ವರೂಪವು ಹಳ್ಳಿಹಳ್ಳಗೂ ವಿಸ್ತರಿಸಿ ಹಲವಾರು ಸ್ವಾತಂತ್ರ್ಯ ಹೋರಾಟಗಾರರ ಪ್ರಾಣ ತ್ಯಾಗ ಮಾಡಿದ್ದಾರೆ. 'ನಾಳೆ ನಮ್ಮ ದೇಶ ಆದಮ್ಯಾಲ' ಎಂಬ ಮುದುಕಿ ನರಸಮ್ಮನ ಮಾತು ಭಾರತ ಎಂಬವುದು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಕಟ್ಟಲ್ಪಡತ್ತಿದ್ದ ಹೊಸ ಮಾದರಿಯ ದೇಶ ಎಂಬುವುದನ್ನು ನಾವು ಅರಿತುಕೊಳ್ಳಬೇಕಾಗಿದೆ.

ಪಂಜೆ ಮಂಗೇಶರಾಯರ ಕಮಾಲಾಪುರದ ಹೋಟೆಲ್ ಕಥೆಯಲ್ಲಿ ಹೋಟೆಲ್ಲಿನ ಪರಿಕಲ್ಪನೆ. ನಿರಂಜನರ ಚಿರಸ್ಮರಣೆ ಕಾದಂಬರಿಯಲ್ಲಿ ಬರುವ ಹೋಟೆಲ್ ಮತ್ತು ಈ

ನಾಟಕದಲ್ಲಿ ಬರುವ ಹೋಟೆಲ್ ಪರಕಲ್ಪನೆಗಳ ನಡುವೆ ಅನೇಕ ಸಾಮ್ಯತೆಗಳಿವೆ. ಹೋಟೆಲ್(ಚಹಾದ ಅಂಗಡಿ) ಎಂಬುವುದು ಅಂದು ಸ್ವಾತಂತ್ರ್ಯ ಚಳುವಳಿಯ ಕುರಿತು ಚಿಂತನೆಗೆ ಹೆಚ್ಚು ತಾಣಗಳಾಗಿದ್ದವು. ಈ ನಾಟಕ ಆರಂಭಗೊಳ್ಳುವುದೆ ಯರಗದ್ದಿಯ ಸ್ಟ್ಯಾಂಡಿನಲ್ಲಿರುವ ಚಹಾದ ಅಂಗಡಿಯ ಮೂಲಕ. ಹಾಗಾಗಿ ಹೋಟೆಲ್‌ಗಳು ಅಂದಿನ ಚಳುವಳಿಯ ಪೂರಕವಾಗಿಯೆ ಕೇಲಸ ನಿರ್ವಹಿಸಿವೆ. ಮಲ್ಲಣ್ಣ ಎಂಬ ಪಾತ್ರ ಸ್ವಾತಂತ್ರ್ಯಕ್ಕಾಗಿ ಮಡಿದ ಚಳುವಳಿಗಾರ ರೂಪಕವಾಗಿದೆ.

ಟೀಪು ಸುಲ್ತಾನ

ಬ್ರಿಟಿಶರ ವಿರುದ್ಧ ಹೋರಾಟ ನಡೆಸಿದ ಭಾರತೀಯ ರಾಜರು, ಸಂಸ್ಥಾನಿಕರಲ್ಲಿ ಟಿಪ್ಪು ಸುಲ್ತಾನ ವಿಭಿನ್ನವಾಗಿ ನಿಲ್ಲುತ್ತಾನೆ. ಮುಖ್ಯವಾಗಿ ಕರ್ನಾಟಕದ ರಾಜ್ಯಶಾಹಿ ಆಡಳಿತ ವ್ಯವಸ್ಥೆಯ ಪರವಾಗಿದ್ದರು ಸಮಾಜದಲ್ಲಿ ಎಲ್ಲರೂ ಸಮಾನರು ಎಂಬ ಚಿಂತನೆಗಳಿಂದ ಕೂಡಿದ ಆಡಳಿತ ನಡೆಸಿದ ಕಿರ್ತಿಗೆ ಪಾತ್ರನಾಗಿದ್ದ. 1757ರ ಪ್ಲಾಸಿ ಕದನ ನಂತರ ಭಾರತದ ಆಡಳಿತರಾಗಿ ಹಾತೋರೆಯುತ್ತಿದ್ದಕ್ಕಾಗಿ ಅಂದಿನ ರಾಜ ಪ್ರಭುತ್ವದ ಪರಧಿಯಲ್ಲಿ ಎಲ್ಲ ಧರ್ಮಗಳನ್ನು ಪ್ರೀತಿಸುವ ಅನಮ್ಯ ಪ್ರೇಮಿಯಂತೆ ಹಲವಾರು ಇತಿಹಾಸಕಾರರು ಚಿತ್ರಿಸಿದ್ದಾರೆ. ಉದಾಹರಣೆ. 1799ರ ಯುದ್ಧದ ಸಂದರ್ಭದ ಚಿತ್ರಣ

"(ಎದೆಗೆ ಕೈಹಿಡಿದುಕೊಂಡು) ಹಾಯರಂಗಾ, ಕೊನೆಗೂ ಈ ದೇಹದ ಅವಸಾನವು ನೀಚರ ಮೋಸದಿಂದಲೆ ಪ್ರಾಪ್ತವಾಯಿತೆ! ಬಾಂಧವರೆ ನೋಡಿ, ನಿಮ್ಮ ರಾಷ್ಟ್ರದ ಸೌಭಾಗ್ಯವನ್ನು ಪಹರಿಸಿದ ನೀಚರ ಕ್ರೂರಕರ್ಮಗಳನ್ನು ನೋಡಿ. ಧರ್ಮ ಯುದ್ಧ ಮಾಡುವಾಗ್ಗೆ ಮರೆಯಿಂದ ಗುಂಡು ಹಾಕಿದ, ರಾಷ್ಟ್ರಪ್ರೇಮಿಯ ಈ ಬಿಸಿ ರಕ್ತವನ್ನು ನೋಡಿ, ಇದು ಕಂಪನಿ ಸರಕಾರದವರ ಅನ್ಯಾಯವಲ್ಲಾ ನಮ್ಮ ನಮ್ಮವರಲ್ಲೆ ಹಿಂದೂ ಮುಸಲ್ಮಾನರ ಎಂಬ ಹೆಸರಿನಿಂದ ಮತ ದ್ವೇಷದ ಬೆಂಕಿಗೆ ರಾಷ್ಟ್ರದ ಆಹುತಿಯನ್ನು ಹಾಕುತ್ತಿರುವ, ಸ್ವಾರ್ಥಿಗಳ ಅನ್ಯಾಯವಿದು. ಎಲ್ಲಿಯ ತನಕ ಭಾರತ ದೇಶದಲ್ಲಿ ಜಾತಿ, ಮತ, ಬೇಧಗಳ ಚಿತ್ಕಾರ ಅಡಗುವುದಿಲ್ಲವೊ ಅಲ್ಲಿಯ ತನಕ ಧರ್ಮವಂತನಾದ ಪ್ರತಿಯೋರ್ವ ರಾಷ್ಟ್ರವೀರನಿಗೂ ಇದೆ ಶಿಕ್ಷೆ. ಬಾಂಧವರೆ.... ಮುಂದಿನ ಜನಾಂಗವು, ನಮ್ಮ ಇತಿಹಾಸವಮನ್ನು ಬೇಕಾದ ಹಾಗೆ ವಿದ್ರೂಪಗೊಳಿಸಲಿ, ನಾನು ನನಗಾಗಿ ಹೋರಾಡಿದವನಲ್ಲ, ನಾನು ಮತಾಭಿಮಾನಿಯಲ್ಲ. ಆದರೆ ಈ ಟಿಪ್ಪು ಸುಲ್ತಾನನು ಅಚ್ಚ ಕನ್ನಡಿಗನೆಂಬುವುದನ್ನು ಯಾರು ಮರೆಯಬಾರದು.(ಎಂದು ಕೈ ಮುಗಿಯುವನು. ಹಾಗೆಯೆ ರಕ್ತಸ್ರಾವ ಅಧಿಕವಾಗಿ ಭೂಮಿಯ ಮೇಲೆ ಮಲಗುವನು.) (ಆರ್. ಡಿ. ಕಾಮತ್, ಟೀಪುಸುಲ್ತಾನ, ಪುಟ-112)

೪.೩. ಚಳುವಳಿ ಕೇಂದ್ರಿತ ನೆಲೆ

೪.೩.೧. ಸಾಮಾಜಿಕ ಚಳುವಳಿ.

ಯುರೋಪಿನಲ್ಲಾದ ರಾಷ್ಟ್ರ ರಚನೆಯ ಮಾದರಿಗಳು ಭಾರತದ ರಾಷ್ಟ್ರೀಯ ಚಿಂತನೆಗೆ ನಾಂದಿ ಹಾಡಿದವು. ಪುನರುತ್ಥಾನದ ಭಾಗವಾಗಿ ಭಾರತಕ್ಕೆ ಎರವಲು ಬಂದ ಸಾಮಾಜಿಕ ಚಿಂತನೆಗಳ ಮತ್ತು ರಾಷ್ಟ್ರೀಯತೆಯ ಜೊತೆ ಜೊತೆಗೆ ಬಂದ ರಾಜ್ಯ ಪರಿಕಲ್ಪನೆಯ ಚಿಂತನೆಗಳನ್ನು ಮತ್ತು ಶಿಕ್ಷಣ, ಕೈಗಾರಿಕರಣ ಮುಖ್ಯವಾಗಿ ಭಾರತದ ಪರಂಪರೆ ಎಂಬಂತೆ ನಡೆದುಕೊಂಡು ಬಂದ ಅಸ್ಪೃಶ್ಯತೆಯ ಕುರಿತು ರಚನೆಗೊಂಡ ನಾಟಕಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯ ಪ್ರಮುಖ ಲೇಖಕರಲ್ಲಿ ಶಿವರಾಮ ಕಾರಂತರು ಒಬ್ಬರು. ಬಹುಮುಖ ವ್ಯಕ್ತಿತ್ವ ಉಳ್ಳವರು. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿಕೈಗೊಂಡಿರುವ ಶಿವರಾಮ ಕಾರಂತರು, ಅವುಗಳ ಮೂಲಕ ಅಂದಿನ ಪರಸ್ಥಿತಿಗೆ ಪ್ರತಿಕ್ರಿಯಿಸಿದವರು. ವಿಜ್ಞಾನರಂಗಕ್ಕೂ ತಮ್ಮನ್ನು ವಿಸ್ತರಿಸಿಕೊಂಡರು. ಗಾಂಧಿಜಿಯೊಂದಿಗೆ ಪತ್ರವ್ಯವಹಾರ ನಡೆಸಿ, ಸಮಾಜದ ಮುಖ್ಯ ಪಿಡುಗುಗಳನ್ನು ಹೋಗಲಾಡಿಸಲು ತೊಡಗಿದರು. 'ಗರ್ಭಗುಡಿ' ನಾಟಕವು ಅಸ್ಪೃಶ್ಯತೆಯ ಸುತ್ತ ಹೆಣೆದುಕೊಂಡ ನಾಟಕವಾಗಿದೆ. ಗಾಂಧಿಯ ಹೋರಾಟಗಳಿಂದ ಪ್ರಭಾವಿತರಾದ ಕಾರಂತರು ಗಾಂಧಿಯ ಚಿಂತನೆಗಳನ್ನು ಕರ್ನಾಟಕದಲ್ಲಿ ಸಾಹಿತ್ಯದ ಮೂಲಕ ಪ್ರದರ್ಶಿಸಿದರು. ಗಾಂಧಿ ಚಿಂತನೆಗಳಿಗೆ ತಮ್ಮನ್ನು ಅರ್ಪಿಸಿಕೊಂಡು ಖಾದಿ, ದಲಿತೋದ್ದಾರ, ಮದ್ಯಪಾನ ವಿರೋಧ ಮುಂತಾದ ಕಾರ್ಯಗಳನ್ನು ದಕ್ಷಿಣ ಕನ್ನಡದಾದ್ಯಂತ ವಿಸ್ತರಿಸಿ, ಭಾರತ ಸ್ವಾತಂತ್ರ್ಯಗೊಳ್ಳಲು ಬ್ರಿಟಿಶರನ್ನು ಭಾರತದಿಂದ ಹೊರಹಾಕುವುದು ಅಷ್ಟೆ ಪ್ರಮುಖವಾದದ್ದು ಎಂದು ಜನರಿಗೆ ತಿಳಿಸುತಿದ್ದರು. ಹಾಗೆ ಇವೇ ವಸ್ತುಗಳನ್ನು ಕೇಂದ್ರವಾಗಿಕೊಂಡು ಸಾಹಿತ್ಯವನ್ನು ರಚಿಸಿದರು. ಔದಾರ್ಯದ ಉರುಳಲ್ಲಿ, ಚೋಮನದುಡಿ ಅಂತ ಕಾದಂಬರಿಗಳನ್ನು ರಚಿಸಿದರು.

ಅಸ್ಪೃಶ್ಯತೆಯಂತೆ ಸಾಮಾಜಿಕ ಮೌಢ್ಯಗಳನ್ನು ನಾಟಕಗಳ ಮೂಲಕ ಜನರಿಗೆ ಅದರ ಕುರಿತು ಅರಿವು ಮೂಡಿಸಿದರು. ಕಂಪನಿ ನಾಟಕಗಳನ್ನು ಬರೆದು ಅವುಗಳನ್ನು ಪ್ರದರ್ಶಿಸುತ್ತಿದ್ದರು. ದೇಶಪ್ರೇಮ ಅಹಿಂಸೆ, ಅಸ್ಪೃಶ್ಯತೆಯನ್ನು ಶಿವರಾಮ ಕಾರಂತರು 'ಗರ್ಭಗುಡಿ' ನಾಟಕದ ಮೂಲಕ ಭಾರತೀಯ ಸಾಮಾಜಕ್ಕೆ ಕಳಂಕಪ್ರಾಯವಾದ ಅಸ್ಪೃಶ್ಯತೆಯನ್ನು ಭಾರತೀಯ ಸಮಾಜವನ್ನು ಮೌಢ್ಯತೆಗೆ ದೂರಿದ್ದ ವ್ಯವಸ್ಥೆಗಳ ವಿರುದ್ಧ ಹೋರಾಟಗಳು ನಡೆದವು. ಭಾರತೀಯ ಸಮಾಜಿಕವಾಗಿ ಸ್ವಾತಂತ್ರ್ಯಗೊಳ್ಳದೆ, ರಾಜಕೀಯವಾಗಿ ಸ್ವಾತಂತ್ರ್ಯಗೊಳ್ಳುವುದು ಸಮಂಜಸವಲ್ಲ ಎಂಬ ಚರ್ಚೆಗಳು ಅಂದು ಪ್ರಚಲಿತದಲ್ಲಿದ್ದವು. ಅದಕ್ಕಾಗಿ ಅಂಬೇಡ್ಕರಂತ ನಾಯಕರು ಕಾನೂನಾತ್ಮಕ ಹೋರಾಟಗಳನ್ನು ನಡೆಸಿದ್ದರು.

ಅಸ್ಪೃಶ್ಯತೆ 'ಹಿಂದೂಧರ್ಮಕ್ಕೆ' ಅಂಟಿರುವ ಒಂದು ರೋಗ. ಅದು ಅಳಿಯದೇ ದೇಶದ ಸ್ವಾತಂತ್ರ್ಯದ ಪ್ರಶ್ನೆಗಳು ಇಡೇರುವುದು ಅಸಾಧ್ಯ ಎಂದು ಅನೇಕ ಚಿಂತಕರು ಎಚ್ಚರಿಸಿದ್ದಾರೆ. ಶಿವರಾಮ ಕಾರಂತರು ಅಂದಿನ ಸಂದರ್ಭದ ಅಸ್ಪೃಶ್ಯತೆಯಂತಹ ಸಾಮಾಜಿಕ ಸಮಸ್ಯೆಯನ್ನು ಬಳಸಿಕೊಂಡು ರಚಿಸಿದ ಈ ನಾಟಕವು ಇಂದು ದಲಿತೋದ್ಧಾರ ಎಂದು ಮಾತನಾಡುವವರನ್ನು ವ್ಯಂಗವಾಗಿ ಗ್ರಹಿಸುತ್ತದೆ. ಪಾರುಪತ್ಯಗಾರರು ಯಾವ ರೀತಿಯ ಢಾಂಬಿಕವಾದ ಜೀವನವನ್ನು ಸಾಗಿಸುತ್ತಾರೆಂಬ ಚಿತ್ರವನ್ನು ಭಾನುಕೋಟಿ ಆಚಾರ್ಯರ ವ್ಯಕ್ತಿತ್ವದಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಭಾನುಕೋಟಿ ಆಚಾರ್ಯರ ದ್ವಂದ್ವನೀತಿ ಆಕ್ರೋಶವನ್ನುಂಟು ಮಾಡುತ್ತದೆ. ಶುದ್ಧಾಂಬರ ಮಠದ ಸನ್ಯಾಸಿ ಶ್ರೀಪಾದಗಳನ್ನು ಮುಗ್ಧಗೊಳಿಸುವಂತ ಮಾತರಿತವನು ಭಾನುಕೋಟಿ. ಆದರೆ ಅವರ ಲೋಪದೋಷಗಳನ್ನೆಲ್ಲ ಏಕಾಕ್ಷಿ ಬಲ್ಲವನಾಗಿರುತ್ತಾನೆ. ಅವರು ನಡೆಸುವ ಆಂತರ್ಯ ಜೀವನವು ವ್ಯಭಿಚಾರಗಳಿಗಿಂತಲೂ ಕೀಳಾಗಿರುತ್ತದೆ. ಸಮುದ್ರದಾಟಿ ಪ್ರವಾಸ ಮಾಡಿದ್ದಕ್ಕೆ ದಂಡ ಅಸ್ಪೃಶ್ಯತೆಯನ್ನು ಮುಟ್ಟಿ ಗುಡಿಯೊಳಗೆ ಹೊಕ್ಕು ಅಪವಿತ್ರಗೊಳಿಸಿದುದಕ್ಕೆ ದಂಡ ಶೀಲಭಂಗವಾರವಳಿಂದಲೇ ಅದು ತಪ್ಪಿದರೆ ಅವಳ ಮನೆತನದವರನ್ನು ಧರ್ಮಬಾಹಿರಗೊಳಿಸುವ ಕಾನೂನು ಇವೇ ಮುಂತಾದವುಗಳು ಸಮಾಜದ ಅನೇಕ ಹುಳುಕುಗಳನ್ನು ಈ ನಾಟಕದ ಮೂಲಕ ಬಯಲುಗೆಳದಿದ್ದಾರೆ. ಇದೇ ನಾಟಕದಲ್ಲಿ ಬರುವ ಮೇಲ್ಜಾತಿಯವರು ತಾವು ಚಂದ್ರಿಯಂತಹ ವೇಶ್ಯೆಯ ಸಂಗವನ್ನು ಬಯಸಿದರೂ ಶುದ್ಧರಾಗಿಯೇ ಉಳಿದಿರುತ್ತಾರೆ. ಚಂದ್ರಿಗೆ ಅನಾಥಬಂಧು ದೇವರ ಮುತ್ತಿನ ಸರವನ್ನು ಸಹ ಎತ್ತಿಕೊಡುವ ಮಹಾ ಉದಾರಿಗಳಗಳ ಸರಸ ಸಲ್ಲಾಪದ ಚಿತ್ರದ ನಿರೂಪಣೆಯನ್ನು ಇಲ್ಲಿ ಕಾಣಬಹುದುದಾಗಿದೆ. ಪಾಪವನ್ನು ಅಳೆದು ದಂಡವನ್ನು ವಿಧಿಸುವ ಭಾನುಕೋಟಿಗೆ ತನ್ನ ಕರ್ಮ ದೋಷಗಳ ಬಗೆಗೆ ಕಿಂಚಿತ್ತು ಚಿಂತೆಯಿಲ್ಲ. ದುಡ್ಡು ಕೊಡಿಸಲು ಮಾಡುವಂತಹ ಇಂತ ಮಸಲತ್ತುಗಳು ಅನಾಥಸ್ವಾಮಿಯ ಗರ್ಭಗುಡಿಯಲ್ಲಿಯೇ ಸಂಪತ್ತಿರುವುದನ್ನು ಕೇಳಿ, ತಿಳಿದು ಕಾಶ್ಯಪ ಹರಿಜನ ಕೇರಿಯಲ್ಲಿದ್ದರೂ ಆತನಿಗೆ ಅರ್ಧಭಾಗ ಹಣದ ಆಮಿಷ ಒಡ್ಡಿ ರಾತ್ರೋರಾತ್ರಿ ಗರ್ಭಗುಡಿಯ ಸಂಪತ್ತನ್ನು ದೋಚಿ, ಅಲ್ಲಿಯೇ ಕಾಶ್ಯಪನನ್ನು ತಗ್ಗಿನಲ್ಲಿ ಮುಚ್ಚಬೇಕೆಂದು ದುರಾಲೋಚನೆ ಹೊಂದಿರುವ ವ್ಯಕ್ತಿಗಳು ಧರ್ಮಗಳನ್ನು ಹೇಗೆ ಬೆಳೆಸಿಯಾರು ಎಂಬ ಸಂಶಯಗಳು ಹುಟ್ಟುತ್ತವೆ ಯಾವ ದೇವರ ಆಶ್ರಯದಲ್ಲಿ ಜಾತಿಕುಲ ಇರುವುದಿಲ್ಲ ಎಂದು ಜನ ನಂಬುತ್ತಾರೋ ಅಲ್ಲಿಯೇ ಅವುಗಳ ಮೇಲಿಂದ ಬಂದ ಭಕ್ತರನ್ನು ಆಕರ್ಷಿಸುವ, ಮೋಸಕಾರ್ಯವು ತೀರ್ಥಕ್ಷೇತ್ರದಲ್ಲಿ ಘಟಿಸುತ್ತದೆ ಎಂಬ ಮಾತನ್ನು ಈ ನಾಟಕ ನೀಡುತ್ತದೆ. ಉದಾ: ಏಕಾಕ್ಷಿ, ಮಾಣೇಶ, ಅಶ್ವಥ್, ಸಣ್ಣಪ್ಪ ಮುಂತಾದವರ ಕೆಲಸಗಳಿಂದ ಈ ಮಾತನ್ನು ಗಮನಿಸಬಹುದು. ಸೌಂದರ್ಯದ ಪ್ರಜ್ಞೆಯುಳ್ಳ ಕಾರಂತರು ದೇವರ ಸಹಜ ಮೂರ್ತಿಗಳಿಗೆ ಅಲಂಕಾರ ಮಾಡುವವರನ್ನು ಸಹ

ವಿಡಂಬಿರುತ್ತಾರೆ. ಸಮಾಜದ ಅಜ್ಞಾನ ಎನ್ನುತ್ತಾರೆ. ಪ್ರಾಚೀನ ಕಾಲದ ಋಷಿ ಕಶಪ್ಪನ ಪಾತ್ರ ಇಂದು ಬದಲಾಗುತ್ತಿರುವ ದೃಷ್ಟಿಯನ್ನು ಕುರಿತು ನಾಟಕಕಾರರಲ್ಲಿ ಚಿಂತಿಸಿದ್ದಾರೆ. ಈ ಪಾತ್ರದ ಮುಖಾಂತರ ಹೊಲೆಯರನ್ನು ಸೃಷ್ಟಿಸಿದವರು ಯಾರು? ಹುಟ್ಟಿದ ಮಕ್ಕಳಿಗೆ ದೇವರನ್ನು ಕಾಣುವ ಹಕ್ಕಿಲ್ಲವೇ.? ಎಂಬ ಮೂಲ ಪ್ರಶ್ನೆಯನ್ನು ನಾಟಕದ ಮೂಲಕ ಎತ್ತಿದ್ದಾರೆ. ಈ ಮೂಲಕ ಅಸ್ಪೃಶ್ಯತೆ ಸಾಮಾಜಿಕ ಸಮಸ್ಯೆಯನ್ನು ಭಾರತದ ಸಮಸ್ಯೆಯನ್ನಾಗಿಸಿಸುವುದರ ಮೂಲಕ ಸ್ವಾತಂತ್ರದ ಭಾಗವಾಗಿ ಗರ್ಭಗುಡಿ ನಾಟಕದಲ್ಲಿ ನಿರೂಪಿಸಿದ್ದಾರೆ.

ಸತ್ಯ ಸಂಕಲ್ಪ

ಬ್ರಿಟಿಶರಿಂದ ರಾಜಕೀಯವಾಗಿ ಬಿಡುಗಡೆಗೊಳ್ಳಲು ಭಾರತದಾದ್ಯಂತ ಹೋರಾಟಗಳು ನಡೆಯುತ್ತಿದ್ದ ಕಾಲವದು. ಸಾಮಾಜಿಕ ಅನಿಷ್ಟಗಳನ್ನು, ಭಾರತೀಯ ಕೆಳವರ್ಗದವರನ್ನು, ಮಹಿಳೆಯರುನ್ನು ಭಾರತಕ್ಕೆ ಧಾವಿಸಿದ ಪರಿಣಾಮವನ್ನಾಗಿ ಕೆಳವರ್ಗಗಳು ಪ್ರಶ್ನಿಸಲು ಆರಂಭಿಸಿದವು. ಈ ಪ್ರಶ್ನೆಗಳು 'ಭಾರತ'ದ ಪರಂಪರೆಯಿಂದ ಬಂದ ಸಾಮಾಜಿಕ ಅಸಮತೋಲನಗಳ ವಿರುದ್ಧವೇ ಇದ್ದವು. ಈ ನಾಟಕ ಕೂಡಾ ಅಂದು ರಾಷ್ಟ್ರವ್ಯಾಪಿ ಸಾಮಾಜಿಕ ಸುಧಾರಣೆಯ ಅಂದೋಲನಗಳ ವಸ್ತುವನ್ನೇ ಕೇಂದ್ರೀಕರಿಸಿಕೊಂಡು ರಚನೆಗೊಂಡಿದೆ. ಈ ನಾಟಕ ರಚನೆಯ ಹಿನ್ನೆಲೆಯನ್ನು ಕುರಿತು ಗರುಡರು ಹೀಗೆ ಹೇಳುತ್ತಾರೆ. "ಸಿರ್ಸಿಯ ಮಾರಿಕಾಂಬ ಜಾತ್ರೆಗೆ ಹೋದಾಗ, ಅಲ್ಲಿ ಒಬ್ಬ ಬ್ರಾಹ್ಮಣರು ಐದಾರು ಬಾಲ ವಿಧವೆರೊಂದಿಗೆ ಬಂದಿದ್ದನ್ನು ಕಂಡರು. ಅವರಲ್ಲಿ ಹೆಚ್ಚಿನವರು ಇಪ್ಪತ್ತನ್ನು ಮುಟ್ಟಿದವರು. ಕೆಲವರಂತೂ ಹತ್ತು-ಹನ್ನೆರಡನ್ನು ದಾಟದವರು; ಆದರೆ ಎಲ್ಲರೂ ಕೇಶಮಂಡನ ಮಾಡಿಸಿಕೊಂಡಿದ್ದರು. ಈ ಮೊದಲೇ ಸದಾಶಿವರಾಯರು ರಾಯಚೂರಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ, ಬ್ರಾಹ್ಮಣರ ಕೇರಿಯಲ್ಲಿರುವ ಭೋಜನಾಲಯಕ್ಕೆ ಊಟಕ್ಕೆ ಹೋಗುತ್ತಿದ್ದರು. ಅಲ್ಲಿಯೂ ಇದೇ ರೀತಿ ಕೇಶ ಮುಂಡನೆ ಮಾಡಿಸಿಕೊಂಡವರನ್ನು ಕಣ್ಣಾರೆ ಕಂಡಿದ್ದರು. ಆ ದೃಶ್ಯ ಈ ನಾಟಕ ರಚನೆಗೆ ಕಾರಣವಾಯಿತು ಎಂದಿದ್ದಾರೆ. (ಬಸವರಾಜ ಜಗಜಂಪಿ, ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ರಂಗಭೂಮಿಯ ಅಧ್ಯಯನ, ಪುಟ. ೨೫೧) ಹೀಗೆ ಸಮಾಜದ ಮೌಢ್ಯತೆಯ ವಸ್ತುವನ್ನು ಒಳಗೊಂಡ 'ಸತ್ಯ ಸಂಕಲ್ಪ' ನಾಟಕ, ಸಂಪ್ರದಾಯವಾದಿಗಳ ವಿರೋಧವನ್ನು ಕಟ್ಟಿಕೊಂಡಿತು. ಈ ನಾಟಕವು ಅಸ್ಪೃಶ್ಯತೆ ನಿವಾರಣೆ, ಪುನರ್ವಿವಾಹ, ಖಾದಿ ಮಹತ್ವ ವಿಷಯಗಳು ಭಾರತೀಯರನ್ನು ಒಂದುಗೂಡಿಸಿ ಕಾರ್ಯಗಳು ಎಂಬುದನ್ನು ಧ್ವನಿಸುತ್ತದೆ.

ಗಾಂಧಿಯ 'ಸರ್ವೋದಯ' ಆಶಯಗಳನ್ನು ಒಳಗೊಂಡ ಈ ನಾಟಕದಲ್ಲಿ ಗಾಂಧೀಜಿಯ ಪ್ರವೇಶವು ಇದೆ. ಈ ಸನ್ನಿವೇಶದಲ್ಲಿ ಪುನರ್‌ವಿವಾಹದ ಬಗ್ಗೆ ಗಾಂಧೀಜಿಯವರ ಮಾತುಗಳು ಹಿರಣ್ಯಗರ್ಭ ಮತ್ತು ನಾಗಭಟ್ಟರ ಜೊತೆ ಹೀಗಿದೆ.

ಮಹಾತ್ಮ : ಇನ್ನು ಪುನರ್ವಿವಾಹಾದಿಗಳ ವಿಷಯ. ಪ್ರೌಢವಿವಾಹವು ವಿಹಿತವಾದದ್ದೆಂದು ಮೊದಲಿನಿಂದಲೂ ಅನುಭವವಿದೆ. ಸೀತೆ, ದಮಯಂತಿ, ದ್ರೌಪದಿ, ರುಕ್ಮಿಣಿ ಮೊದಲಾದ ಪುರಾಣಕಾಲದ ಆದರ್ಶ ನಾರಿಯರು ಸುಜ್ಞಾಣಿಗಳಾದ ಮೇಲೆ ವಿವಾಹಿತರಾದರಲ್ಲವೇ? ಹಾಗಿರಲು ಆ ವಿಷಯವಾಗಿ ವಾದವೇಕೆ? ಇನ್ನು ಚಿಕ್ಕ ಹೆಣ್ಣುಮಕ್ಕಳನ್ನು ಹಣದಾಸೆಗಾಗಿ ಮುಪ್ಪಿನವರಿಗೆ ಕೊಡುವ ಘಾತುಕ ರೂಢಿಗಳು ಸಮಾಜದಲ್ಲಿ ರೂಢವಾಗಿರುವತನಕ ಪುನರ್ವಿವಾಹವನ್ನು ಸಮ್ಮತಿಸುವುದು ಜಾಣತನವು. ಅಥವಾ ತರುಣರು ಆ ಕಾಲದಲಿ ಸಾಯದಿದ್ದರೆ ಪುನರ್ವಿವಾಹದ ಪ್ರಶ್ನೇಯೆ ಉಂಟಾಗುವುದಿಲ್ಲವಲ್ಲಾ?

ಹಿರಣ್ಯ : ಅನಬಹುದು, ಅನಬಹುದು. ಏಕೆ ನಾಗಭಟ್ಟರೇ?

ನಾಗ: ಅಂದರೂ ಅನಬಹುದು.

ಮಹಾತ್ಮ: ಪುನರ್ವಿವಾಹದ ರೂಢಿ ಇಲ್ಲದ ಸಮಾಜಗಳ ಯುವಕರು ತಮ್ಮ ಸುವಿಚಾರ, ಸದಾಚಾರಗಳಿಂದ ನಿಸ್ಸಂದೇಹವಾಗಿ ದೀರ್ಘಜೀವಿಗಳಾಗುತ್ತಿದ್ದರು. ಆ ಕಾಲದಲ್ಲಿ ಬಾಲವಿಧವೆಯರನ್ನು ಕಾಣುವುದೇ ಅಪರೂಪವಾಗಿತ್ತು. ಪ್ಲೇಗ್ ಇನ್‌ಪ್ಲುಎಂಝಾ ಮೊದಲಾದ ಬೇನೆಗಳು ಕೊಚ್ಚಿ ಹಾಕುವ ಈಗಿನ ಮನ್ವಂತರದಲ್ಲಿ ಬಾಲವಿಧವೆಯರ ಸಂಖ್ಯೆಯು ಮಿತಿಮೀರಿದೆ. ಇಂತಹ ಕಾಲಕ್ಕನುಸಾರವಾಗಿ ಪುನರ್ವಿವಾಹಕ್ಕೆ ಸಮ್ಮತಿಯನ್ನಿಡುವದೇನು ಅಸಮಂಜಸವಾಗಲಿಕ್ಕಿಲ್ಲ. ಪು.೨೯) ಇಲ್ಲಿ ಸಮಾಜ ಬೆಳೆದು ಬಂದ ಒಂದು ವರ್ಗದ ಕಿಲುಬುಗಟ್ಟಿದ್ದ ಅನಿಷ್ಟ ಸಂಪ್ರದಾಯದತ್ತ ಸಮರ್ಥವಾದ ರೀತಿಯಲ್ಲಿ ಪರಿಹಾರವನ್ನು ಸೂಚಿಸಲಾಗಿದೆ. ಮುಂಡನ ಮಾಡಿಸಿ ಕುಂಕುಮ ಕಂಕಣ ತೆಗೆದ ಮಾತ್ರಕ್ಕೆ ಮನವ ಸುದ್ದಿಯಾಗುವುದಿಲ್ಲ. ಮದುವೆ ಬಗ್ಗೆ ಹೆಣ್ಣುಮಕ್ಕಳಿಗೆ ಒಂದು ರೀತಿಯ, ಗಂಡು ಮಕ್ಕಳಿಗೆ ಒಂದು ರೀತಿಯ ನ್ಯಾಯದ ಕ್ರಮ ಸಮಂಜಸವಲ್ಲ. ಕಾಲಕ್ಕೆ ಅನುಗುಣವಾಗಿ ಇಷ್ಟವಿದ್ದ ಬಾಲ ವಿಧವೆಯ ಪುನರ್‌ವಿವಾಹಕ್ಕೆ ಸಮ್ಮತಿಸುವುದು ಸೂಕ್ತವಾದದ್ದು ಇದು ಸಾಮಾಜಿಕವಾಗಿ ತಮ್ಮ ನ್ಯಾಯಸಮ್ಮತವು ಹೌದು.

ಮತ್ತೊಂದು ಸನ್ನಿವೇಶದಲ್ಲಿ ಪುನರ್ ವಿವಾಹವಾಗುವುದಕ್ಕೆ ತಯಾರಾದ ಮಾಧವ ಹೀಗೆ ಹೇಳುತ್ತಾನೆ.

ಮಾಧವ : ಶಾರದೇ, ನಾನು ಬಹಿಷ್ಕಾರಕ್ಕೆ ಹೆದರುವುದಿಲ್ಲ. ಮುಪ್ಪಿನ ಮುದುಕರಿಗೆ ಎಳೇ ಹುಡುಗಿಯರನ್ನು ಕೊಟ್ಟು ಲಗ್ನ ಮಾಡಲಿಕ್ಕೆ ಸಮ್ಮತಿಯನ್ನು ಕೊಡುವ ಈ ಅನ್ಯಾಯಿ ಸಮಾಜದ ಬಹಿಷ್ಕಾರಕ್ಕೆ ಬೆಲೆಯೇನು? ನಿಮ್ಮಪ್ಪನು ಹಣದಾಸೆಗಾಗಿ ನಿನ್ನನ್ನು ಆ

ಎಂಭತ್ತುವರ್ಷದ ಭುಜಂಗ ಸಫಾರನೆಂಬ ಹೆಣಕ್ಕೆ ಕೊಟ್ಟು ಲಗ್ನ ಮಾಡದಿದ್ದರೆ ನೀನು ಇಷ್ಟು ತೀವ್ರ ವಿಧವೆಯಾಗುತ್ತಿರಲಿಲ್ಲ. ವೈಧವ್ಯಕ್ಕೆ ನಿನ್ನ ತಾಯಿ ತಂದೆಗಳು ಮತ್ತು ಆ ನಿನ್ನ ಕಾಮಾಂಧ ಮುದುವ, ಮೃತಪತಿಯೇ ಕಾರಣರು. ಅವರು ಮಾಡಿದ ಪಾಪಕ್ಕೆ ನೀನೇಕೆ ಪ್ರಾಯಶ್ಚಿತ್ತ ಹೊಂದವದು? ಸುಖವಾಗಿ ಪುನರ್ವಿವಾಹವನ್ನು, ಮಾಡಿಕೊಂಡು ಧರ್ಮದಿಂದಿದ್ದು ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳುವಿಯಂತೆ.

ಶಾರದ : ಆಗಲಿ, ಪುನರ್ವಿವಾಹವಾದ ಮೇಲೆ ಮುಂದಿನ ವಿಚಾರ.

ಮಾಧವ : ಶಾರದೇ ಈಗ್ಗೆ ನಮ್ಮ ನಿಮ್ಮ ವಿವಾಹ ವಿಧ್ಯುಕ್ತವಾಗಿ ಆಗದಿದ್ದರೂ ಅದು ಮನಸ್ಸಿನಿಂದ ಆಗಿಯೇ ಹೋಗಿದೆ. ಹೀಗಿರಲು ಸಂಕೋಚಿತವೇಕೆ? ೨೭೯

'ಸತ್ಯ ಸಂಕಲ್ಪ' ನಾಟಕ ಪುನರ್ವಿವಾಹದ ಬಗ್ಗೆ ಮಾತನಾಡಿದಂತೆ ಅಸ್ಪೃಶ್ಯತೆ ನಿವಾರಣೆ ಕುರಿತು (ಸ್ವಾತಂತ್ರ ಚಳುವಳಿ ಕಾಲದಲ್ಲಿ) ಧ್ವನಿಸಿದೆ. ವಸಾಹತುಶಾಹಿಗಳಿಂದ ನಿರ್ಮಾಣವಾದ ಮಾರುಕಟ್ಟೆ ವ್ಯವಸ್ಥೆಯು ಭಾರತದಲ್ಲಿ ಪ್ರಾರಂಭವಾದಾಗ ಕೆಲವು ಸಂಪ್ರದಾಯವಾದಿಗಳು ಇದನ್ನು ವಿರೋಧಿಸಿದ್ದರು. ಕಾರಣ ಕೆಳಜಾತಿಯವರ ಸ್ಪರ್ಶದಿಂದಾಗುತ್ತಿದ್ದ ಮಡಿ ಮೈಲಿಗೆ ಅವರನ್ನು ಕಾಡಿತ್ತು. ನಂತರ ಅವಶ್ಯಕತೆಗಳಿಗೆ ತಕ್ಕಂತೆ ವ್ಯವಸ್ಥೆಯ ಜೊತೆಗೆ ಹೊಂದಾಣಿಕೆ ಮಾಡಿಕೊಂಡರು.

ಅಸ್ಪೃಶ್ಯತೆ ಕುರಿತು ಇಂತಹ ದ್ವಂದ್ವತ್ಮಕತೆಯ ಕುರಿತು ಒಂದು ಸನ್ನಿವೇಶ ಹೀಗಿದೆ.

ನಾಗಭಟ್ಟ : ಸ್ವಾಮಿ ಹಿರಣ್ಯಗರ್ಭಾಚಾರ್ಯರೇ, ನೋಡಿದಿರಾ, ಈ ದೇಶಭಕ್ತರು ಬರುಬರುತ್ತಾ ಧರ್ಮದಲ್ಲಿ ಸಹ ಕೈ ಹಾಕಲಾರಂಭಿಸಿದರು. ವೈದಿಕರಾದ ನಾವುಗಳು ಸುಮ್ಮನಿದ್ದರೆ ಇನ್ನು ಮೇಲೆ ಪರಿಣಾಮವಾಗುವುದಿದೆ.

ಹಿರಣ್ಯಗರ್ಭ : ನಾಗಭಟ್ಟರೆ ಇದೆಲ್ಲವು ಆ ಕಲಿರಾಯನ ಮಹಿಮೆ. ಏನೋ ಒಂದು ವಿನಾಶಕಾಲ ಬಂದಿದೆಯಂತೆ ಜನಗಳ ಬುದ್ಧಿಯು ಹೀಗೆ ವಿಪರೀತವಾಗಿಬಿಟ್ಟಿದೆ.

ನಾಗಭಟ್ಟ : ಸ್ವಾಮಿ, ಅಸ್ಪೃಶ್ಯನಿವಾರಣೆಯಾಗುವುದು ಸಾಧ್ಯವೇ? ಹೇಳೀ ನೋಡವಾ?

ಪದ್ಮನಾಭ: ಅದೇನಸಾಧ್ಯ? ಮುಟ್ಟಬಾರದವರನ್ನು ಮುಟ್ಟಿದರಾಯಿತು. ಅಸ್ಪೃಶ್ಯತೆ ನಿವಾರಣೆಯು ಆಗೇ ಹೋಗುವದು.

ಹಿರಣ್ಯ: ಅಲ್ಲವೋ ಕಾಣಾ ಕಾಣಾ ಹೊಲೆಯರನ್ನು ಮುಟ್ಟಿಸಿಕೊಂಡು ವ್ಯವಹಾರ ಮಾಡಬೇಕೆಂದು ಹೇಳುವದು ಬುದ್ದಿವಂತಿಕೆಯ ಲಕ್ಷಣವೋ?

ಪದ್ಮ: ಹಾಗಾದರೆ ಮೊದಲು ನನಗೀ ವರ್ಕಷಾಪಿನ ನೌಕರಿಯನ್ನು ಬಿಡುವುದಕ್ಕೆ ಟಿಪ್ಪಣೆಯಾಗಲಿ. ಯಾಕೆಂದರೆ ಅಲ್ಲಿ ನನ್ನೊಡನೆ ಕೆಲಸ ಮಾಡುವವರೆಲ್ಲರೂ

ಅಸ್ಪೃಶ್ಯರೇ ಇದ್ದಾರೆ. ನನ್ನ ವರಿಷ್ಠನೂ ಅಸ್ಪೃಶ್ಯನಿದ್ದಾನೆ. ಕೆಲಸಕ್ಕೆ ಹೋದ ತಕ್ಷಣವೇ ಮೊದಲಿಗನಿಗೆ ನಮಸ್ಕಾರ ಮಾಡಲೇಬೇಕಾವದು.

ನಾಗಾ: ಹಿಗಿದ್ದರೆ, ಹಿರಣ್ಯಗರ್ಭಾಚಾರ್ಯರೇ, ನೀವು ಪದ್ಮನಾಭನಿಗೆ ಮೊದಲ ವರ್ಕಷಾಪಿನ ನೌವಕರಿಯನ್ನು ಬಿಡಿಸುವುದುತ್ತಮ. ತಾವು ಅಗ್ನಿಹೋತ್ರಿ ಮನೆತನದವರು. ತಮ್ಮ ಮಗನು ಅಸ್ಪೃಷ್ಯರಿಗೆ ಶಿರಭಾಗುವುದೆಂದರೆ ಎಂಥ ಅನ್ಯಾಯ ? ಶಿವಶಿವಾ!

ಹಿರಣ್ಯ: ಅದು ವ್ಯವಹಾರವಾಯಿತು ನಾಗಭಟ್ಟರೇ. ವ್ಯವಹಾರದಲ್ಲಿ ಪ್ರಸಂಗವಶಾತ್ ಅವರ ಇವರಿಗೆ, ಇವರು ಅವರಿಗೆ ನಮಸ್ಕಾರವನ್ನು ಮಾಡಿದರೆ ದೋಷವೇನು? ಮನೆಗೆ ಬಂದು ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡರರೆ ಆ ದೋಷಗಳು ನಿವಾರಣೆಯಾಗಿಯೇ ಹೋಗುವವು.

ನಾಗಾ: ಅದು ನಿಜ॥ ಆಪೋ ಹಿಷ್ಠಾ ಮಯೋ ಭುವಃ ॥ ಎಂದು ಮಾರ್ಜನೆ ಮಾಡಿಕೊಂಡ ಮೇಲೆ ಯಾವದೋಷಗಳುಳಿಯುವವು?

ಪದ್ಮ : ಅಂಥ ಅನುಕೂಲತೆಗಳು ನಮಗಿರುವಾಗ್ಗೆ ನಾವು ಅಸ್ಪೃಶ್ಯರನ್ನು ಮುಟ್ಟುವುದಕ್ಕೆ ಭಯಪಡುವುದೇಕೆ?

ಹಿರಣ್ಯ : ವ್ಯವಹಾರದಲ್ಲಿ ಹೇಗಾದರೂ ಮಾಡಬಹುದು.

ಪದ್ಮ: ಅವರಾದರೂ ವ್ಯವಹಾರದ ಮುಟ್ಟಿಗೇನೇ ಹೇಳುತ್ತಿರುವರು. ಅಸ್ಪೃಶ್ಯರೊಡನೆ ಶರೀರ ಸಂಬಂಧವನ್ನು ಬೆಳೆಸಿದರೆಂದು ನಿಮಗಾರು ಆಗ್ರಹವ ಮಾಡುವರು.

ಹಿರಣ್ಯ : ಅದು ಹೋಗಲಿ ಅಸ್ಪೃಶ್ಯರನ್ನು ಗುಡಿಯೊಳಗೆ ಬಿಡಿರೆಂದು ಹೇಳುವ ಮಾತು ಸರಿಯೇ?

ಪದ್ಮ: ಅಪ್ಪಾ ನಾವು ನಮ್ಮ ಮನಸ್ಸಿನ ಸಮಾಧಾನಕ್ಕಾಗಿ ದೇವರನ್ನು ಅಭಿಷೇಕಾದಿಗಳಿಂದ ಶುದ್ಧಿ ಮಾಡಿಕೊಂಡರಾಯಿತು. ಸುಮ್ಮನೆ ಅದನ್ನು ಮುಟ್ಟಬೇಡ ಇದನ್ನು ಮುಟ್ಟಬೇಡ ಎಂದು ಗೊಂದಲವೆಬ್ಬಿಸಿ ಮಾನವಬಂಧುಗಳ ಮನ ನೋಯಿಸುವುದೇಕೆ?(ಪು. ೨೮೧-೨೮೩)

ಸಾಮಾಜಿಕ ಶೋಷಣೆಗೆ ತುತ್ತಾಗಿ ನೋವು ಅವಮಾನಗಳ ಕಂಡ ಶಾರದೆ ಎಂಬ ಪಾತ್ರ ಈ ನಾಟಕದ ಕೇಂದ್ರ. ಸ್ವತಂತ್ರ ಚಳುವಳಿಯ ಭಾಗವೇ ಆಗಿದ್ದ ಮೌಢ್ಯಚರಣೆಗಳಂತಹ ಸಮಸ್ಯೆಗಳ ಬಗ್ಗೆ ಜನರಿಗೆ ಅರಿವು ಮೂಡಿಸುವಲ್ಲಿ ಈ ನಾಟಕ ಯಶಸ್ವಿಯಾಗಿದೆ. ಸಾಮಾಜಿಕ ಕಳಕಳಿ ಹೊಸತು ಹಳತರ ಸಂಘರ್ಷ ಮತ್ತು ಆಧುನಿಕತೆಯನ್ನು ಪುರಸ್ಕರಿಸುವ ಮೌಲ್ಯಗಳನ್ನು ಈ ನಾಟಕ ಕಟ್ಟಿಕೊಟ್ಟಿದೆ. ೨೦ನೇ ಶತಮಾನದ ರಾಜಕೀಯ ಪ್ರಜ್ಞೆಯೊಂದಿಗೆ ಸಾಮಾಜಿಕ ಪ್ರಜ್ಞೆಗಳನ್ನು ಮೇಳಸಿಕೊಂಡಿದೆ

ಉದ್ಧಾರ

ವಸಾಹತುಶಾಹಿ ನೀತಿಗಳಿಗೆ ನರಬಲಿ ಕವನದಿಂದ ಪ್ರತಿಕ್ರಿಯೆ ಕೊಟ್ಟ ಬೇಂದ್ರೆ ಅವರು ಪ್ರಸ್ತುತ ನಾಟಕದ ಮೂಲಕ ಅಸ್ಪೃಶ್ಯತೆ ಹೋಗಲಾಡಿಸಲು ಪ್ರಯತ್ನಿಸಿದರು. ಅದಕ್ಕಾಗಿ ಬ್ರಿಟಿಶ್ ಸರ್ಕಾರದ ಅವಕೃಪೆಗೆ ಒಳಗಾಗಿ ಸೆರೆವಾಸ ಅನುಭವಿಸಿದರು. ಅಕ್ಷರ ಮುಂದಾಳುಗಳಾದ ದುರ್ಗಪ್ಪ, ಮಾರಿ, ಅದೇ ಬಣ್ಣ ತಮ್ಮ ಸಮಾಜವನ್ನು ಸಂಸ್ಕರಿಸಬೇಕೆಂದು ಕಂಕಣಬದ್ಧರಾಗಿರುತ್ತಾರೆ. ಆದರೆ ಕೋದಂಡರಾಯನ ಸುಧಾರಕ ವಿಚಾರದ ವಕೀಲನಾಗಿರುತ್ತಾನೆ. ಸ್ಪರ್ಶಾನಂದನು ಅಸ್ಪ್ರುಶ್ಯರ ಉದ್ಧಾರಕ್ಕಾಗಿ ಕಂಕಣಕಟ್ಟಿ ನಿಂತಿರುವ ಯುವಕ. ಇವರಿಬ್ಬರು ಸೇರಿ ಹರಿಜನರಲ್ಲಿ ಸವರ್ಣಿಯರು ವ್ಯವಹಾರಕ್ಕೆ ಅವಕಾಶಗಳನ್ನು ಒದಗಿಸಬೇಕೆಂದು ಪ್ರಯತ್ನಿಸುತ್ತಾರೆ. ಆದರೆ ವಕೀಲರ ಪುರೋಹಿತರಾದ ವಿಘ್ನೇಶ್ವರ ಭಟ್ಟರೂ, ಕಕ್ಷಿಗಾರರಾದ ರುದ್ರಯ್ಯನವರು ಸಂಪ್ರದಾಯವಾದಿಗಳಾಗಿದ್ದರಿಂದ ಇದನ್ನು ಪ್ರತಿಭಟಿಸುವ ಮನೋಭಾವವನ್ನು ಹೊಂದಿದವರಾಗಿರುತ್ತಾರೆ. ಊರಿನ ಸಭ್ಯ ಗೃಹಸ್ಥನೆಂದು ಹೆಸರು ಪಡೆದ ಹಯವದನರಾಯರು, ಅಹೋಬಲಾಚಾರ್ಯರೂ, ವೀರಭದ್ರಪ್ಪನವರು ಈ ವಿಚಾರದಲ್ಲಿ ಮಾತ್ರ ಇವರಿಗೆ ಸಹಾಯಕರಾಗಿ ಒದಗಿಸುತ್ತಾರೆ. ಅಸ್ಪೃಶ್ಯತೆಯಲ್ಲಿಯೇ ಒಬ್ಬನಾದ ಸಿದ್ದಪ್ಪ ಮಾತ್ರ ಸಂಪ್ರದಾಯವಾದಿಯ ಪರವಾಗಿರುತ್ತಾನೆ. ಎಂದೂ ಇಲ್ಲದ ಈ ಹೊಸ ಹವ್ಯಾಸ ತನಗೇಕೆ ಎಂದು ಉಳಿದವರನ್ನು ಹಿಂದಕ್ಕೆ ಸರಿಸುತ್ತಾನೆ.

ಊರಿನಲ್ಲಿ ಒಂದು ಭೈರವೇಶ್ವರನ ಗುಡಿಯಿರುತ್ತದೆ. ಮಹ್ಮದೀಯರು ಆ ಗುಡಿಯ ವಿಗ್ರಹವನ್ನು ಭಂಗ ಮಾಡಿರುತ್ತಾರೆ. ಆದ್ದರಿಂದ ಊರಿನವರೆಲ್ಲರೂ ತ್ಯಜಿಸಿರುವ ಗುಡಿಯದು. ಅದರಲ್ಲಿ ತಮ್ಮ ಈಶ್ವರನನ್ನು ಪ್ರತಿಷ್ಠಾಪನೆ ಮಾಡಬೇಕೆಂದು ಕೋದಂಡರಾಮ, ಸ್ಪರ್ಶಾನಂದರ ಮುಂದಾಳತ್ವದಲ್ಲಿ ಹರಿಜನರೆಲ್ಲ ಪ್ರಯತ್ನಿಸುತ್ತಾರೆ. ಗುಡಿಯ ವಿಷಯವಾಗಿ ನಡೆದ ಗಲಾಟೆಯಲ್ಲಿ ಹರಿಜನರ ಕಡೆ ದುರುಗಪ್ಪನೂ ಸವರ್ಣಿಯರ ಕಡೆಗೆ ಭಟ್ಟರು, ಅಯ್ಯನವರು ನೆಲಕ್ಕೆ ಬೀಳುತ್ತಾರೆ. ಅಷ್ಟರಲ್ಲಿ ಹರಿಜನರ ಹುಡುಗನೊಬ್ಬನಿಗೆ ಹಾವು ಕಚ್ಚುತ್ತದೆ. ಸಾಯುತ್ತಾ ಬಿದ್ದಿರುವ ಭಟ್ಟರೂ, ರುದ್ರಯ್ಯನೂ ಅದು ಅವರ ಪಾಪಕ್ಕಾಗಿ ಶಿವನು ಕೊಟ್ಟ ಶಿಕ್ಷೆ ಎಂದುಕೊಳ್ಳುತ್ತಾರೆ. ಆದರೆ ಅರಬಣ್ಣನು ತಮ್ಮ ಮೂರ್ತಿಯನ್ನು ಗುಡಿಯಲ್ಲಿ ಕೂಡಿಸಿ 'ಆಯಿತು ಉದ್ಧಾರ' ಎನ್ನುತ್ತಾನೆ. ಸಾಯುವ ಸನ್ನಿವೇಶದಲ್ಲಿದ್ದ ವಿಘ್ನೇಶ್ವರಭಟ್ಟ ಮತ್ತು ರುದ್ರಯ್ಯನೂ 'ನೀರು ನೀರು' ಎಂದೂ ಕೂಗಿಕೊಳ್ಳುತ್ತಾರೆ. ಸ್ಪರ್ಶಾನಂದರೂ ತಂದ ನೀರನ್ನು ಕುಡಿಯದಿದ್ದರೂ, ಸಿದ್ದಪ್ಪನೂ ಹಾಕಿದ ನೀರನ್ನು ಕುಡಿದು ಪ್ರಾಣಬಿಡುತ್ತಾರೆ. ಅಯ್ಯೋ ಉದ್ಧಾರ ಎಂದು ಮಾಡುವ ಉದ್ಧಾರದೊಂದಿಗೆ ನಾಟಕ ಮುಕ್ತಾಯವಾಗುತ್ತದೆ. ಅತ್ತ ಹರಿಜನರು ತಮ್ಮ ನಡೆತೆಯನ್ನು ಉತ್ತಮಗೊಳಿಸಿಕೊಂಡು ಮೇಲ್ಜಾತಿಗಳೊಡನೆ ಸೇರಲು ತಕ್ಕ ಯೋಗ್ಯತೆಯನ್ನು ಗಳಿಸಕೊಂಡರು. ಇತ್ತ ಸವರ್ಣಿಗಳು ತಮ್ಮ ಅರ್ಥವಿಲ್ಲದ ಅಂಧ

ಶ್ರೇದ್ಧೆಯನ್ನು ಸ್ವಲ್ಪ ಸಡಿಲಗೊಳಿಸಿಕೊಳ್ಳಬೇಕು. ಇದು ಕ್ರಮವಾಗಿ ನಡಯಬೇಕು ಎಂಬ ಆಶಯವನ್ನು ಈ ನಾಟಕ ಹೊಂದಿದೆ. ಇಲ್ಲಿ ಹಿಂದೂ ಮತದಲ್ಲಿರುವ ಒಳಪಂಗಡಗಳ ವಿಷಮತೆಯನ್ನು ಪರಿಣಾಮಕಾರಿಯಾಗಿ ನಾಟಕಕಾರರು ಕಟ್ಟಿಕೊಟ್ಟಿದ್ದಾರೆ.

ಜಲಗಾರ

ಭಾರತವನ್ನು ವಸಾಹತುಶಾಹಿಯಿಂದ ಬಿಡುಗಡೆಗೊಳಿಸಲು ಬ್ರಿಟಿಶರ ವಿರುದ್ಧ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿದ್ದ ಸಂದರ್ಭದಲ್ಲಿ ಭಾರತದ ನಾಯಕರಿಗೆ ಮತ್ತೊಂದು ಸಮಸ್ಯೆ ಎದುರಾಯಿತು. ಭಾರತದಲ್ಲಿಯೇ ಮನುಷ್ಯ ಮನುಷ್ಯರ ನಡುವೆ ಅಸ್ಪೃಶ್ಯ ಎಂಬ ಜಾತಿಯ ಕ್ರೌರ್ಯ ನೀತಿಗಳು ಚಾಲ್ತಿಯಲ್ಲಿದ್ದವು. ಈ ಸಮಸ್ಯೆಯನ್ನು ಬಗೆಹರಿಸದೆ ಭಾರತ ಬ್ರಿಟಿಶರಿಂದ ಸ್ವಾತಂತ್ರ್ಯಗೊಳ್ಳುವುದು ಬೇಡ ಎಂದ ನಾಯಕರುಗಳನ್ನು ಭಾರತದ ಜಾತಿ ವ್ಯವಸ್ಥೆ ದೂರ ತಳ್ಳಪಟ್ಟಿದ್ದು ಚಾರಿತ್ರಿಕ ಸಂಗತಿಯಾಗಿದೆ. ಅಂತಹ ನಾಯಕರುಗಳನ್ನು ಕನ್ನಡ ಸಾಹಿತ್ಯವು ಗಮನಿಸಲಿಲ್ಲ. ಆದರೆ ಯುರೋಪಿನಲ್ಲಿ ಆದ ಸಾಮಾಜಿಕ ಪುನರುಜ್ಜೀವನದ ಚಿಂತನೆಗಳ ಪ್ರಭಾವಕ್ಕೆ ಒಳಗಾಯಿತು. ಆ ಕುರಿತು ಭಾರತೀಯ ಕನ್ನಡದ ಸಾಹಿತ್ಯವಲಯವು ಗಮನಹರಿಸಿತು. ಮೊದಲಬಾರಿಗೆ ಕನ್ನಡದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರೀಕರಿಸಿ 'ಇಂದಿರಾಬಾಯಿ' ಕಾದಂಬರಿಯನು ರಚನೆಗೊಂಡಿತು.

ಕುವೆಂಪು ಅವರ 'ಜಲಗಾರ' ನಾಟಕ ದೇವರ ಇರುವಿಕೆ, ಅವನು ಇದ್ದದ್ದೇ ನಿಜವಾಗಿದ್ದರೆ ಅವನ ವಾಸಸ್ಥಳ ಯಾವುದು? ಎಂಬ ಪ್ರಶ್ನೆಗಳ ಮೂಲಕ ಅಂದು ದೇವರು ಮತ್ತು ದೇವಾಲಯಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡ ವ್ಯವಸ್ಥೆಗಳ ಕುರಿತು ಚರ್ಚಿಸಿದ್ದಾರೆ. ದೇವರನ್ನು ಕಾಯಕದ ಮೂಲಕವೇ ಕಾಣಲು ಸಾಧ್ಯ ಎಂದು ವಾಸ್ತವದ ಮಾತುಗಳನ್ನಾಡಿದ್ದಾರೆ. ಭಾರತದಲ್ಲಿ ಜಾತಿವ್ಯವಸ್ಥೆಯ ಕುರಿತು ಬುದ್ಧ, ಬಸವನ ಕಾಲದಿಂದಲೂ ಚಳುವಳಿಗಳು ನಡೆದಿವೆ.

ಜಲಗಾರ ನಾಟಕವು ಬೀದಿ ಗುಡಿಸುವ ಜಾಡಮಾಲಿಯನ್ನು ಕೇಂದ್ರವಾಗಿಟ್ಟುಕೊಂಡು ಭಾರತದ ಜಾತಿವ್ಯವಸ್ಥೆಯ ಕುರಿತು ಮಾಡನಾಡುತ್ತದೆ. ರೈತ ಮತ್ತು ಜಾಡಮಾಲಿಯ ನಡುವೆ ನಡೆಯುವಂತ ಮಾತುಗಳು ವೈಚಾರಿಕ ಚಿಂತನೆಗಳಿಂದ ಕೂಡಿವೆ. ೧೯೨೮ರಲ್ಲಿ ರಚನೆಯಾದ ಈ ನಾಟಕವು ರಷ್ಯಾಕ್ರಾಂತಿ, ಮೊದಲ ಮಹಾಯುದ್ಧದಿಂದ ಆದ ಅನಾಹುತಗಳನ್ನ ಪ್ರಭಾವಕ್ಕೆ ಒಳಗಾಗಿದೆ. ಕಾರಣ ಜಗತ್ತನ್ನು ದೇವರು ಕಾಯುತ್ತಿರುತ್ತಾನೆ ಎಂಬ ಧಾರ್ಮಿಕ ನಂಬಿಕೆಗಳನ್ನು ಈ ಯುದ್ಧಗಳು ಹುಸಿಗೊಳಿಸಿದ್ದವು. ಹಾಗೆ 'ದೇವರು ಸತ್ತ' ಎಂಬ ಮಾತುಗಳು ಜಗತ್ತಿನಾದ್ಯಂತ ಹರಿದಾಡಿದವು. ಹಾಗಾಗಿ ಈ ನಾಟಕಗಳನ್ನು ಧಾರ್ಮಿಕತೆಯನ್ನು ಪ್ರಶ್ನಿಸುವ ಕ್ರಾಂತಿ ಭಾಗವಾಗಿಯೆ ಗಮನಿಸಬೇಕು, ವ್ಯಕ್ತಿಯ

ಹಿರಿಮೆಯುಕಾಯಕದಲ್ಲಿಯೇ ಹೊರತು ಪೂಜೆಯಲ್ಲಲ್ಲ ಎಂಬ ದರ್ಶನವನ್ನು ಒಬ್ಬ ಕರ್ಮಯೋಗಿಯ ರೂಪದಲ್ಲಿ ತೋರಿಸಿದ್ದಾರೆ . ಜಲಗಾರನಿಗೆ ಎಲ್ಲಾ ಪೂಜೆಗಳಿಗಿಂತ ತನ್ನ ಕಾಯಕವೇ ಶ್ರೇಷ್ಠವಾಗುತ್ತದೆ. ದೇವಾಲಯಕ್ಕೆ ಹೊರಟಿರುವ ಇತರರು ನಡತೆಯಲ್ಲಿ ಕೀಳಾಗಿರಬಹುದು. ಆದರೆ ಕೀಳು ಎಂದು ಪರಿಭಾವಿಸಿದ ಜಲಗಾರ ಗುಣದಲ್ಲಿ ಅವನಿಗಿಂತಲೂ ಮಿಗಿಲಾಗಿದ್ದಾನೆ. ಶ್ರೇಷ್ಠತೆ ಎನ್ನುವುದು ಹುಟ್ಟಿನಿಂದ ಬಂದ ಗುಣವಲ್ಲ. ಅದು ಅವರವರು ರೂಢಿಸಿಕೊಂಡ ಹಾಗೆ ಎಂಬ ತತ್ವಗಳನ್ನು ಇಲ್ಲಿ ಗುರುತಿಸಬಹುದು. ರೈತನೊಬ್ಬ ಜಾತ್ರೆಗೆ ಹೊರಟಿರುವಾಗ ಜಲಗಾರನೊಬ್ಬ ದಾರಿಯಲ್ಲಿ ಕಸ ಗುಡಿಸುತ್ತಿರುವಾಗ, ಅವನನ್ನು ದೇವಾಲಕ್ಕೆ ಬಾ ಎಂದು ಕರೆದಾಗ ಜಲಗಾರ ಹೇಳುವ ಮಾತು.

ಜಲಗಾರ : ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು ದೇಗುಲದ ಒಳಗೆ ಸೇರಿಸರು.(ಕುವೆಂಪು, ಜಲಗಾರ, ಪುಟ–೫)

ಎಂಬ ಜಲಗಾರನ ಈ ಮಾತು ಭಾರತದಲ್ಲಿ ವರ್ಣವ್ಯವಸ್ಥೆಯ ಕ್ರೌರ್ಯದಿಂದ ಮನುಷ್ಯ ಮನುಷ್ಯನ ನಡುವೆ ಅಂತರ ಸೃಷ್ಟಿಯಾದ ಬಗ್ಗೆ ಹೇಳುತ್ತದೆ. ಮನುಷ್ಯತ್ವ ದೂರ ಸರಿದು ಜಾತಿಯೇ ಬಲಶಾಲಿಯಾದ ಸ್ಥಿತಿಯ ಬಗ್ಗೆ ಈ ನಾಟಕ ಚಿತ್ರಿಸಿದೆ.

೧೯೨೦ರ ನಂತರ ಭಾರತದಲ್ಲಿ ಸ್ಥಾಪನೆಗೊಳ್ಳುತ್ತಿದ್ದ ರಾಷ್ಟ್ರೀಯತೆಯಿಂದ ಆರಂಭವಾದ ಧಾರ್ಮಿಕ ರಾಷ್ಟ್ರೀಯತೆ ಮತ್ತು ಅವುಗಳಲ್ಲಿನ ಕ್ರೌರ್ಯಗಳನ್ನು, ಜಾತಿಯ ಸಮಸ್ಯೆಗಳನ್ನು ಅದ್ಕಕೆ ವಿಡಂಬನೆಯ ಸೂಕ್ಷ್ಮತೆಯನ್ನು ಮುಖ್ಯವಾಗಿ ತಮ್ಮ ತಮ್ಮ ಕಾಯಕದಲ್ಲಿ ದೇವರನ್ನು ಕಾಣುವ ಧಾರ್ಮಿಕ ಮನೋಭಾವನೆ ಇಂದು ಭಾರತದಲ್ಲಿ ಸ್ಥಾಪಿತವಾಗುವ ಅವಶ್ಯಕತೆ ಇದೆ ಎಂಬ ಸೂಚನೆಯನ್ನು ಜಲಗಾರ ನಾಟಕ ಸೂಚಿಸುತ್ತದೆ.

"ಜಲಗಾರ : ಕರ್ಮಾರಾಧನೆ, ಸೇವೆಯೇ ಪೂಜೆ.
ನನ್ನ ಭಾಗಕೆ ಪೊರಕೆ ಆರತಿ, ಗುಡಿಸುವುದೆ
ನನ್ನ ದೇವರ ಪೂಜೆ ! ನಿನ್ನೆ ದೇಗುಲದೆಡೆಗೆ
ಹೋದೆನ್ನ ಕಂದನಂ ಬೈದಿರಿದು ನೂಕಿದರು
ಶಿವಗುಡಿಯ ಶಿವನು ಜೋಯಿಸರ ಶಿವನಂತೆ ;
ನನ್ನ ಶಿವನೀ ಮಣ್ಣಿನಲ್ಲಿಹನು. ನನ್ನ ಶಿವ
ಕೊಳೆತ ಕಸದೊಳಗಿಹನು. ಕರ್ಪೂರದೊಳಿಲ್ಲ;
ಮಂಗಳಾರತಿಯೊಳಿಲ್ಲ; ಹೂವುಗಳಲಿಲ್ಲ ;

ಯಾವೆಡೆಯೊಳಾನಿಹೆನೊ ಅವನಲ್ಲಿಯೇ ಇಹನು.
ನನ್ನೆದೆಯ ದೇಗುಲ; ನನ್ನೊಲ್ಮೆಯದೆ ಪೂಜೆ.
ನಾನೆಲ್ಲಿ ಭಕ್ತಿಯಂ ಕೈಮುಗಿವೆನೋ ಅಲ್ಲಿ
ತಾನಿಹನು. ನಾನೆಲ್ಲಿ ಸತ್ಕರ್ಮವೆಸಗುವೆನೊ
ಅಲ್ಲಿ ಮೈದೋರುವನು. ಶಿವಗುಡಿಯದನಗೇಕೆ?
ನೀನೇನು ಶಿವಗುಡಿಗೆ ತೆರಳುತಿಹೆಯಾ?"

(ಕುವೆಂಪು, ಜಲಗಾರ, ಪುಟ-೫)

ಬ್ರಿಟಿಶ್ ಶಿಕ್ಷಣ ಪಡೆದ ಮೊದಲ ತಲೆಮಾರಿನ ಕೆಳವರ್ಗ ಯುವಕರನ್ನು ಜಲಗಾರ ಇಲ್ಲಿ ಪ್ರತಿನಿಧಿಸುವಂತೆ ಭಾಸವಾಗುತ್ತದೆ. ಯಾಕೆಂದರೆ ಜಲಗಾರನಿಂದ ಹೊರಹೊಮ್ಮುವ ವೈಚಾರಿಕ ವಿಚಾರಗಳು ಅದಕ್ಕೆ ಪುಷ್ಠಿ ನೀಡುತ್ತವೆ. ಈ ಅಸ್ಪೃಷ್ಯತೆ ನಿವಾರಣೆಗಾಗಿ ಭಾರತ ಹೋರಾಡಬೇಕಾಗಿದೆ ಎಂಬ ಸಂವೇದನೆಗಳನ್ನು ಈ ನಾಟಕ ನೀಡುತ್ತದೆ. ತಿರುಕನೊಬ್ಬ ಹಾಡುತ್ತಾ ಬರುತ್ತಾನೆ. ಭಟ್ಟನೊಬ್ಬ ಆತ ತನ್ನಮಡಿ ಮುಟ್ಟಿದನೆಂದು ಅದಕ್ಕೆ ದೇವರು ನಿನ್ನ ಕಣ್ಣಿಂಗಿಸಿದ್ದು! ಎಂದು ಚುಚ್ಚು ಮಾತನಾಡುತ್ತಾನೆ. ಈ ಸನ್ನಿವೇಶ ಕುರಿತು ತರುಣರಿಬ್ಬರು ಮಾತನಾಡುವ ಸಂಭಾಷಣೆಯು ಭಾರತದಲ್ಲಿ ನಿರೂಪಿಸಲಾಗಿರುವ ಧರ್ಮ, ದೇವರುಗಳ ದ್ವಂದ್ವಗಳು ಕುರಿತು ಇವೆ.

"ಮೊದಲನೆ ತರುಣ : ದೇಗುಲದೊಳವಿತುಕೊಂಡಿಹನಂತೆ ಪರಶಿವನು!
ಜಗವೆಲ್ಲ ದೇವನಿಹ ಗುಡಿಯಲ್ಲವೇ, ಗೆಳೆಯ?–
ಮತ ಮದ್ಯವ ಕುಡಿದು ತಲೆಕಟ್ಟಿಹುದು ಮಂದಿ!
ಎರಡನೆ ತರುಣ : ಮೊದಲ ಠಕ್ಕನು ಮೊದಲ ಬೆಪ್ಪನು ಸಂಧಿಸಲು
ಸಂಭವಿಸಿತೆಂಬರೀ ಮತ ಎಂಬ ಮತಿವಿಕಾರಂ.
ದೊರೆ ಪುರೋಹಿತರ್ ಅವಳಿಮೊಲೆಯೂಡಿ ಸಲಹಿದರದಂ:
ಮತದ ಮದಿರೆಯನೀಂಟಿ ಮಂಕುಬಡಿದಿದೆ ಜನಕೆ.
ಕೊನೆ ದೊರೆಯ ಕೊರಳಿಗಾ ಕೊನೆ ಪುರೋಹಿತನ ಕರುಳ್
ಉರುಳಾಗುವಾ ವರೆಗೆ ಸುಖವಿಲ್ಲ ಈ ಧರೆಗೆ!
ಮೊದಲನೆ ತರುಣ : ಪೂರ್ವಿಕರ ಮೂಢತನಕಾದಿಯೆಂಬುವುದೆಲ್ಲಿ?

ಅಂತವೆಂಬುದುದೆಲ್ಲಿ? ಹೇಳುವುದು ಒಂದು,
ಮಾಡುವುದು ಮತ್ತೊಂದು! ಜಗದೊಡೆಯನೆಲ್ಲಿಯುಂ
ಇರುವುನೆಂಬರು ಒಮ್ಮೆ! ಗುಡಿಯಲರಸುವರೊಮ್ಮೆ!
ನಾಕಾರನವನೆಂದು ಸಾರುವರು ಒಮ್ಮೆ;
ಮೂರ್ತಿಗಳ ಮಾಡಿ ಆರಾಧಿಸುವರಿನ್ನೊಮ್ಮೆ!
ಒಂದು ಸಲ ಸರ್ವರೊಳು ಅವನಿರುವನೆನ್ನುವರು;
'ಹೊಲೆಯ ನೀ ದೂರವಿರು' ಎಂದೆಂಬರಿನ್ನೊಮ್ಮೆ!
ನಡಿಗೂ ನಗಳ್ತೆಗೂ ಸಂಬಂಧವೇ ಇಲ್ಲ!
ಇದೆ ನಮ್ಮ ಭಾರತಾಂಬೆಯ ದುರ್ಗತಿಗೆ ಕಾರಣ.
ಬಡಜನರ ಕಣ್ಣೆತ್ತಿ ನೋಡದಿಹ, ಮರುಗದಿಹ
ಹಾಳುಪೂಜೆಯದೇಕೆ? ಹಸಿದ ಜನಗಳಿಗೆ
ಕಡರೊಂದು ಕಾಸ; ತಣ್ಣಗಿಹ ಕಲ್ಲುಗಳ
ಮೇಲೆ ಎಣ್ಣೆಯನು ಬೆಣ್ಣೆಯನು ಸುರಿಯುವರು.
ಕರ್ಪೂರದಾರತಿಯ ಬೆಳಗುವರು ವಿಗ್ರಹದ
ಮುಂದೆ ತಲೆಬಾಗಿ. ಸತ್ತ ದೇವರ ಪೂಜೆ
ಮಾಡುವರು. ಜೀವದ ದರಿದ್ರನಾರಾಯಣರ
ಸೇವೆಯಲ್ಲವೆ ಪರಮ ಪೂಜೆ?"

(ಕುವೆಂಪು, ಜಲಗಾರ, ಪುಟ-೧೦-೧೧)

ನಾಟಕದ ಕೊನೆಗೆ ಶಿವ ಮತ್ತು ಜಲಗಾರನ ನಡುವೆ ನಡೆಯುವ ಮಾತುಗಳು ದೇವರು ಮತ್ತು ಮನುಷ್ಯನನ್ನು ಮುಖ್ಯವಾಗಿ (ಮನುಷ್ಯರೆಲ್ಲರು ವಿಶ್ವಮಾನವರಾಗಿಯೇ ಹುಟ್ಟುತ್ತಾರೆ. ಆದರೆ ಈ ಪರಿಸರದ ಕ್ರೌರ್ಯಗಳು ಅವನನ್ನು ಜಾತಿ, ಧರ್ಮ ಸಂಕೋಲಗೆ ಸಿಕ್ಕಿಸುತ್ತವೆ.) ಮನುಷ್ಯರೆಲ್ಲರೂ ಒಂದೇ ಅವನ ನಡುವೆ ಯಾವ ಗೋಡೆಗಳು ನಿರ್ಮಾಣಗೊಳ್ಳಬಾರದು. ಸ್ವಾತಂತ್ರ್ಯ ಭಾರತವು ಹೀಗೆ ನಿರ್ಮಾಣಗೊಳ್ಳಲಿ ಎಂಬ ಆಶಯವನ್ನು ಈ ನಾಟಕ ವ್ಯಕ್ತಪಡಿಸುತ್ತದೆ.

ಹರಿಜನ್ವಾರ

ಆಧುನಿಕ ಕನ್ನಡ ನಾಟಕ ಸಾಹಿತ್ಯದಲ್ಲಿ ಶ್ರೀರಂಗ ಎಂದೇ ಪ್ರಸಿದ್ದರಾದ ಆದ್ಯ ರಂಗಾಚಾರ್ಯರ ಈ ನಾಟಕ ತುಂಬಾ ಪ್ರಯೋಗಶೀಲವಾದದ್ದು. ಈ ನಾಟಕವು ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಆಯಾಮವನ್ನು ಒಳಗೊಂಡಿದೆ. ಯುರೋಪಿಯನ್ನರ ಪ್ರಭಾವಕ್ಕೆ ಭಾರತೀಯ ಸಮಾಜ ಆಧುನಿಕವಾಗಿ ಒಳಗಾಗಿ, ಮತ್ತು ಕಾಯ್ದೆ ಕಾನೂನುಗಳು ಬಂದಿದ್ದರೂ ಭಾರತೀಯರಲ್ಲಿ ಇನ್ನೂ ಹೃದಯ ಪರಿವರ್ತನೆ ಆಗದೆ ಇರುವುದನ್ನು ಶ್ರೀರಂಗರು ಈ ನಾಟಕದ ಮೂಲಕ ವ್ಯಕ್ತಪಡಿಸಿದ್ದಾರೆ.

ರಾಜಕೀಯವಾಗಿ ಮುನ್ನೆಲೆಗೆ ಬಂದ ಸ್ವಾತಂತ್ರ್ಯ ಚಳುವಳಿ ಸಾಮಾಜಿಕವಾಗಿ ಸಮಾಜದ ಅಸ್ಪೃಶ್ಯತೆಯನ್ನು ತೊಲಗಿಸುವಲ್ಲಿ ಸಫಲತೆ ಕಾಣುತ್ತಿದ್ದರೂ ಸಮಾಜದ ಮೇಲ್ವರ್ಗಗಳು ಅಂತ ಸಮಾನತೆಯನ್ನು ತಿರಸ್ಕರಿಸುತ್ತಿದ್ದವು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಪ್ರಶ್ನೆಯೊಂದನ್ನು ಎತ್ತಿಕೊಂಡು ಅದನ್ನು ರಂಗಭೂಮಿಗೆ ಅಳವಡಿಸಿದ ಮಹತ್ವದ ನಾಟಕವಿದು. ಆ ಮೂಲಕ ಭಾರತೀಯ ಪರಂಪರೆಯ ಅನಿಷ್ಟತೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿತ್ತು. ಈ ಮೂಲಕ ಶ್ರೀರಂಗರು ಗಾಂಧಿ ಸ್ವಜನೋದ್ಧಾರದಂತಹ ಕಾರ್ಯಗಳ ಬಗ್ಗೆ ಪರಿಚಯಿಸುವ ಕೆಲಸ ಮಾಡಿದರು. ದೊಡ್ಡರಾಯರು ಅವರ ಹೆಂಡತಿ ವೀಣಕ್ಕ, ಮಗ ಶಾಮ, ಅಂತಪ್ಪ ಎಂಬ ಕಾರಕೂನ, ವಸಂತ(ಶಾಮನ ಗೆಳೆಯ)ಹಾಗೂ ನಟ ನಬೀಸಾಬಿ ಎಂಬ ಚಿಲ್ಲರೆ ವ್ಯಾಪಾರಿ, ತಾತ್ಯಾಚಾರಿ, ಯಮುನಾ(ಅಡುಗೆ ಕೆಲಸದವಳು) ಈ ಪಾತ್ರಗಳ ಮೂಲಕ ಅಂದಿನ ಸಾಮಾಜಿಕ ಸ್ವಾತಂತ್ರ್ಯವನ್ನು ಈ ನಾಟಕ ಎತ್ತಿ ಹಿಡಿದಿದೆ. ಅಧಿಕಾರದ ಆಸೆಯಿಂದ ದೊಡ್ಡರಾಯ ಎಂಬುವವರು ತನ್ನ ಕುಟುಂಬದ ಸುಖವನ್ನು ಬಲಿ ಕೊಡುತ್ತಾರೆ. ವೀಣಕ್ಕ ಹೃದಯವಂತ ಮಹಿಳೆ. ಗಟಾರದಲ್ಲಿ ಬಿದ್ದ ಹೊಲೆಯರ ಕೂಸನ್ನು ಎತ್ತುತ್ತಾಳೆ. ಇದೇ ಅವರ ಹೃದಯವಂತಿಕೆಗೆ ನಿದರ್ಶನ. ಹಾಗೆ ಬ್ರಾಹ್ಮಣ ಸಮುದಾಯದ ರಕ್ಷಣೆಗಾಗಿ ಗಂಡ ಸತ್ತ ಯಮುನೆಯನ್ನು ಹೊರಹಾಕುವಾಗ ಯಾರ ವಿರೋಧವನ್ನು ಲೆಕ್ಕಿಸದೆ ಯಮುನೆಯನ್ನು ರಕ್ಷಿಸುತ್ತಾಳೆ. ಆದರೆ ಪುರುಷ ಪ್ರಧಾನವಾದ ವ್ಯವಸ್ಥೆಯಲ್ಲಿ ಅವಳಿಗೆ ಮನೆಯಲ್ಲಿಯೂ ಕೂಡ ಅಧಿಕಾರವಿರುವುದಿಲ್ಲ. ಮೇಲುಜಾತಿ, ಕೀಳುಜಾತಿಗಳ ತಾರತಮ್ಯವನ್ನು ಶ್ರೀರಂಗರು ಈ ನಾಟಕದಲ್ಲಿ ತೋರಿಸಿದ್ದಾರೆ. ದೊಡ್ಡರಾಯರ ಮಗನಾದ ಶ್ಯಾಮನನ್ನು ಪ್ರಗತಿಪರ ಚಿಂತನೆಯುಳ್ಳ ವ್ಯಕ್ತಿಯನ್ನಾಗಿ ಈ ನಾಟಕದಲ್ಲಿ ಚಿತ್ರಿಸಿದ್ದಾರೆ. ಪರಂಪರೆಯಿಂದ ಬಂದ ಜಾತಿಪದ್ಧತಿಯನ್ನು ಮೆಟ್ಟಿ ನಿಲ್ಲುವ ಸಾಹಸ ಮಾಡುತ್ತಾನೆ. ಅಂತರ್ಜಾತಿ ವಿವಾಹವಾಗುವ ವಿಷಯವನ್ನು ತನ್ನ ಗೆಳೆಯ ವಸಂತ ನೊಂದಿಗೆ ಚರ್ಚಿಸುವ ಸನ್ನಿವೇಶದ ಮಾತುಗಳು ಇಂತಿವೆ.

ಶಾಮ : ಅಯ್ಯೋ, ನಿನ್ನ ವಿನೋದ ಹಾಳಾಗಲಿ! ಅದಲ್ಲ ನಾನು ಹೇಳುವುದು. ತಂದೆ ಮಾಡಿದ ಸತ್ಕಾರ್ಯ. ಈಗ ನನ್ನ ತಂದೆ ಹರಿಜನರ ಉದ್ಧಾರಕ್ಕೆ ಟೊಂಕ ಕಟ್ಟಿದ್ದಾರೆ–

ವಸಂತ : ಅದಕ್ಕೆ ನೀನು ತಲೆ ಸುತ್ಬೇಕೆನ್ನುವೆಯಾ?

ಶ್ಯಾಮ : (ಕೆರಳಿ) ಥೂ ನಿನ್ನ ತಲೆ ಕಡಿದುಬೀಳಲಿ! ಇಂದು ನಾನೂ ಹರಿಜನರ ಉದ್ಧಾರಕ್ಕೆ ಬದ್ಧಕಂಕಣನಾಗುವೆ.

ವಸಂತ : ಅಂದರೆ ಅದೂ ಟೊಂಕಕಟ್ಟುವದು ಎಂಬೋ ಅರ್ಥವೇ ಅಲ್ಲ?

ಶ್ಯಾಮ : (ಆವೇಶದಿಂದ) ಇಂದು ನಾನು ಹರಿಜನರ ಉದ್ಧಾರಕ್ಕೆ ಬದ್ಧಕಂಕಣನಾಗುವೆ. ಅದಕ್ಕಾಗಿ ಯಮುನಾನ ಮದುವೆ ಆಗುವೆ.

ವಸಂತ : (ಬೆರಗಾಗಿ)ಆಂ ಯಮುನಾನ ಕೂಡ ಮದುವೆ ಅದು ಹರಿಜನ ಉದ್ಧಾರ ಹೇಗೆ! (ಶ್ಯಾಮನು ಪಿಟ್ಟೆನ್ನುವ ಆವೇಶದಿಂದ ತನ್ನನ್ನು ದಿಟ್ಟಿಸಲು) ಹಂ ಹೀಗಿದ್ದರೆ ಇರಬಹುದು... ಹೆಂಗಸರೆಲ್ಲಾ ಹರಿಜನರು ...ತಾವೆಲ್ಲ ಸ್ವಚ್ಛ ಮಾಡುವ ಮನೆಯಲ್ಲಿಯೆ ತಮಗೆ ಅಧಿಕಾರವಿಲ್ಲ ಹೆಂಗಸರಿಗೆ (ಶ್ಯಾಮನ ಮುಖದಲ್ಲಿ ಗಾಂಭೀರ್ಯದ ಮುಳ್ನಗೆಯನ್ನು ನೋಡಿ) ಛೆ, ಹೀಗೆ ಇರಲಿಕ್ಕಿಲ್ಲ ಯಾಕೆಂದರೆ, ಇಂದಿಲ್ಲ ನಾಳೆ ಅಧಿಕಾರ ಬರೋದರಲ್ಲಿ ಹಂ... ಯಮುನಾಗೆ ಬುದ್ಧಿ ಇದೆ; ಬುದ್ಧಿ ಇದ್ದವರೆಲ್ಲರೂ ಹರಿಜನರು. ಯಾರೂ ಅವರನ್ನು ಮುಟ್ಟುವಂತಿಲ್ಲ.. ಛೆ– ಇದೂ ಅಲ್ಲ?

ಶ್ಯಾಮ : ಅಯ್ಯೊ! ನಿನಗೆ ಆ ವಿಷಯವೇ ತಿಳಿಯುವಂತಿಲ್ಲ ವಸಂತಾ, ಸಮಾಜಸೇವೆ ಅಂದರೆ ನಾಟಕದ ತಮಾಷೆ ಎಂದು ತಿಳಿದಿರುವೆಯಾ?...(ಗಂಭೀರವಾಗಿ) ಯಮುನಾ ವಿಧವಾ ಇದ್ದಾಳೆ ವಿಧವೆಯ ವಿವಾಹ ಎಂದರೆ ಪುರ್ವಿವಾಹ. ಪುನರ್ವಿವಾಹವು ಶಾಸ್ತ್ರಕ್ಕೆ ವಿರುದ್ಧವಂತೆ ಇರಲಿ–ನಾನು ಅವಳೊಡನಡನೆ ಪುನರ್ವಿವಾಹ ಮಾಡಿಕೊಂಡೆನೆಂದರೆ ನನಗೆ ಬಹಿಷ್ಕಾರ ಇಡುವರು... ಆಮೇಲೆ–

ವಸಂತ : (ಒಮ್ಮಲೆ ನಕ್ಕು)–ಆಮೇಲೆ ನೀನೂ ಹರಿಜನ... ಓಹೊ, ಈಗ ನನಗೆ ತಿಳಿಯಿತು.

ಶ್ಯಾಮ : ಅಲ್ಲೊ–

ವಸಂತ : (ಗಂಭೀರವಾಗಿ) ಆದರೂ ಒಂದು ವಿಚಾರ ನನಗೆ ತಿಳಿಯಲೊಲ್ಲದು. ಯ ಮು ನಾ ಗೆ ಪುನರ್ವಿವಾಹ ಆಯಿತು, ಆದರೆ ನಿನಗೆ ಇದು ಮೊದಲನೆಯ ಮದುವೆಯೆ ಅಲ್ಲ?... ಅಲ್ಲೊ–ನಿನಗ ಒಂದು ವೇಳೆ ಬಹಿಷ್ಕಾರ ಹಾಕಲಿಲ್ಲ ಅಂತ ತಿಳಿ, ಯಾಕೆಂದರೆ ಈ ಬ್ರಾಹ್ಮಣರು ಯಾವ ವೇಳೆಗೆ ಏನು ಮಾಡುವರು ಹೇಳಲಿಕ್ಕೆ ಬರುವುದಿಲ್ಲ–

ಶ್ಯಾಮ : ಇಲ್ಲವಾದರೆ ಇಲ್ಲ–ಒಂದು ವಿಧವೆಯ ಉದ್ಧಾರವಾದರೂ ಆಯಿತೊ ಇಲ್ಲವೊ?

ವಸಂತ : ಹಂ... ಅಂತೂ ಯಾರಾದರೊಬ್ಬರ ಉದ್ಧಾರದ ಬಾಣ ನಿನ್ನ ಬತ್ತಳಿಕೆಯೊಳಗೆ

ಉಳಿದೇ ಉಳಿಯುವುದು ಅಂದ ಹಾಗಾಯ್ತು... ಅಯ್ಯೋ! ಎಂತಹ ಹುಚ್ಚ ನಾನು ಹರಿಜನರ ಉದ್ಧಾರ ಮಾಡಬೇಕಾದರೆ ಮದಿವೆ ಮಾಡಿಕೊಳ್ಳಬೇಕು ಎಂಬೋ ಸಣ್ಣ ಮಾತು ತಿಳಿಯಬಾರದೆ ನನಗೆ? ಮೇಲಾಗಿ ನಾನು ದ್ವೈತ ಸಂಪ್ರದಾಯದವ. ಲೋಕಕಾರ್ಯದ ಸಂನ್ಯಾಸಕ್ಕ ಗೃಹಸ್ಥಾಶ್ರಮ ಮುಖ್ಯ. ಜಗತ್ತನ್ಯೊಳಗೆ ಗಂಡ, ಹೆಂಡತಿ ಎಂಬೋ ದ್ವೈತವೇ ಸತ್ಯ- ಎಂದು ಹೇಳುವುದು ನಮ್ಮ ಮತ... ಛೆ... ಶ್ಯಾಮೂ, ನನ್ನ ಕಲ್ಪನೆಯೆ ಬೇರೆ ಇದ್ದಿತು ನೋಡು... ಹಹ... ಇದುವರೆಗೆ ಹರಿಜನರು ಅಂದರೆ ಹತ್ತು ವರ್ಷ ರಿಜರ್ವ್‌ಸೀಟ್ ಇದ್ದ ಜನರು, ಉ ದ್ಧಾ ರಾ ಅಣದರೆ ಊಟದ ಆಧಾರ ಅಂತ ತಿಳಿದಿದ್ದೆ... ಹಹ...(ಶ್ರೀರಂಗ ಸಾರಸ್ವತ- ಸಂ-೩,ಪುಟ-೩೭೨-೩೭೪)

ಇಲ್ಲಿ ಪರಂಪರೆಯಿಂದ ಜಾತಿಯ ಕ್ರೌರ್ಯವನ್ನು ಕಾಪಾಡಿಕೊಂಡು ಬಂದ ಸಮುದಾಯದ ಪರವಾಗಿ ದೊಡ್ಡರಾಯರನ್ನು ನೋಡಬಹುದು. ಹಾಗೆ ವಸಾಹತುಶಾಹಿ ಶಿಕ್ಷಣದ ಪ್ರಭಾವದಿಂದ ಶಿಕ್ಷಿತರಾದ ಮತ್ತು ಅಂದಿನ ಸಮಸಮಾಜದ ಪ್ರತಿನಿಧಿಯನ್ನಾಗಿ ದೊಡ್ಡರಾಯರ ಮಗನಾದ ಶ್ಯಾಮನನ್ನು ಗಮನಿಸಬಹುದು. ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ, ಸಂಕರದ ಭಾಗವಾಗಿ ಶ್ರೀರಂಗರ ಹರಿಜನ್ವಾರ ನಾಟಕವನ್ನು ನೋಡಲಾಗಿದೆ. ಈಗಿನ ಸಂದರ್ಭದಲ್ಲಿ ರಾಜಕಾರಣಿಗಳು ಮಾಡುವ ಜಾತಿಗಳನ್ನು ಮತಗಳಾಗಿ ಪರಿವರ್ತಿಸುವ ವಿಧಾನವನ್ನು ಶ್ರೀರಂಗರು ಅಂದೆ ಚಿತ್ರಿಸಿದ್ದಾರೆ.

ದೊಡ್ಡರಾಯರು ತನ್ನ ರಾಜಕಾರಣದ ಜೀವನಕ್ಕಾಗಿ ಅಸ್ಪೃಶ್ಯರ ವೋಟುಗಳನ್ನು ಪಡೆಯಲು ಸಮಾಜಸುಧಾರಕ ಎಂಬ ಅಸ್ತ್ರ ಬಳಸುತ್ತಾನೆ. ಮುಂದೆ ತನ್ನ ಮಗ ತನ್ನ ಮನೆಯ ಕೆಲಸದವಳನ್ನು ಮದುವೆಯಾಗುವ ಸನ್ನಿವೇಶದಲ್ಲಿ ದೊಡ್ಡರಾಯರ ಜಾತಿಯ ಜನರು ವಿರೋಧ ವ್ಯಕ್ತಪಡಿಸುವಾಗ ದೊಡ್ಡರಾಯರಂತ ವ್ಯಕ್ತಿತ್ವಗಳ ಮುಖಗಳು ಗೋಚರವಾಗುತ್ತದೆ. ಇಂಥ ಮುಖಗಳು ಇಂದಿಗೂ ರಾಜಕಾರಣದಲ್ಲಿ ಕಾಣಸಿಗುತ್ತವೆ. ಇದೊಂದು ಸ್ವಾತಂತ್ರ್ಯ ನಂತರದ ಭಾರತದ ದೊಡ್ಡ ಸಮಸ್ಯೆಯಾಗಿದೆ. ಈ ನಾಟಕದ ಮೂಲಕ ಶ್ರೀರಂಗರು ಸಾಮಾಜಿಕ ವಿಚಾರಗಳನ್ನು ಸಮರ್ಥವಾಗಿ ಪ್ರತಿಬಿಂಬಿಸಲು ಪ್ರಯತ್ನಿಸುವ ಮೂಲಕ ಯಶಸ್ವಿಯಾಗಿದ್ದಾರೆ. ಆಧುನಿಕ ಸಮಾಜಿಕ ಜೀವನದಲ್ಲಿ ಪರಿವರ್ತನೆಯ ಘಟ್ಟದಲ್ಲಿ ಏರ್ಪಡಿಸುವ ಸಾಮಾಜಿಕ ದ್ವಂದ್ವಗಳನ್ನು ಪ್ರತಿಷ್ಠಿತ ಬ್ರಾಹ್ಮಣ ಕುಟುಂಬವೊಂದರ ಮೂಲಕ ಪ್ರಸ್ತುತ ನಾಟಕ ಚರ್ಚಿಸುತ್ತದೆ. ಒಂದುಕಡೆ ದೊಡ್ಡರಾಯ ಹರಿಜನೋದ್ಧಾರ, ಧಾಂಬಿಕತೆ, ಮತ್ತೊಂದು ಕಡೆ ಆತನ ಮಗನ ಆದರ್ಶವಾದಿ ಮನೋಭಾವಗಳಿಗಿಂತ ವೀಣಕ್ಕನ ಪಾತ್ರವು ವಾಸ್ತವಿಕ ಮತ್ತು ಮಾನವೀಯ ನೆಲೆಯಲ್ಲಿ ಚಿತ್ರಣವಾಗಿದೆ.

ಚುಣಾವಣೆಯಲ್ಲಿ ಗೆಲ್ಲುವುದಕ್ಕೊಸ್ಕರ ಮಾತ್ರವೇ ದೊಡ್ಡರಾಯನಂತಹ ನಾಯಕರು ಏಕಕಾಲದಲ್ಲಿ ಹರಿಜನೋದ್ಧಾರ, ಸನಾತನ ನಿಷ್ಠೆ, ಸೋದರತ್ವ ಮುಂತಾದ ವಿರೋಧಾಭಾಸಗಳ ನೆಲೆಗಳಲ್ಲಿ ಹೇಳಿಕೆಗಳನ್ನು ನೀಡುತ್ತಾರೆ. ಈ ತರಹದ ಹೇಳಿಕೆಗಳು ಇಂದಿನ ಪ್ರಜಾಪ್ರಭುತ್ವದ ಸಮರ್ಥ ವಿಡಂಬನೆಯಂತಿದೆ. ದೊಡ್ಡರಾಯನ ಮೂಲಕ ತನ್ನ ಸನಾತನವಾದಿ ಪ್ರತಿಷ್ಠೆಯನ್ನು ಮರೆಯಿಸುವ ಅಪೇಕ್ಷೆಯ ಅಂತಪ್ಪ ಮತ್ತು ತಾತ್ಯಾಚಾರಿಗಳ ಅಂತ ಮನಸ್ಸುಗಳು ಎಲ್ಲ ಕಾಲಕ್ಕೂ ಇರುವಂತವುಗಳು.

ಭಾರತದ ಸ್ವಾತಂತ್ರ್ಯ ಹೃದಯ ನಿರ್ಮಾಣಗೊಳ್ಳಬೇಕಾದರೆ ಈ ದೇಶದಲ್ಲಿ ಹಿಂದಿನಿಂದಲೂ ಪರಂಪರೆಯಾಗಿ ಮುಂದುವರೆದುಕೊಂಡು ಬಂದ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಬೇಕು ಎಂದು ಮಹಾತ್ಮ ಗಾಂಧೀಜಿ ಅವರ ಹರಿಜನೋದ್ಧಾರ ಅಂತಹ ಕಾರ್ಯಗಳು ಮುನ್ನೆಲೆಗೆ ಬಂದವು. ಈ ಚಳುವಳಿಯ ಭಾಗವಾಗಿ ಶ್ರೀರಂಗರ ಈ ನಾಟಕ ರಚನೆಗೊಂಡಿದೆ. ಅದರಲ್ಲಿಯ ನಾನಾ ಮುಖಗಳನ್ನು ಮುಖಾಮುಖಿಗೊಳಿಸುವ ಪ್ರಯತ್ನವನ್ನು ಈ ನಾಟಕದಲ್ಲಿ ನೋಡಬಹುದು.

ಸ್ವಾರ್ಥತ್ಯಾಗ

ಬಾಲ ಗಂಗಾಧರ ತಿಲಕರ ಪ್ರಭಾವಕ್ಕೆ ಒಳಗಾದ ಶ್ರೀರಂಗರು ರಾಷ್ಟ್ರೀಯ ಭಾವನೆಯುಳ್ಳ ಹಾಗೂ ಗಾಂಧಿಯ ಚಿಂತನೆಗಳುಳ್ಳ ನಾಟಕಗಳನ್ನು ರಚಿಸಿದ್ದಾರೆ. ಪ್ರಸ್ತುತ ನಾಟಕವು ಬ್ರಿಟಿಶರಿಂದ ಬಿಡುಗಡೆ ಹೊಂದಿ, ಏಕಾಧಿಕಾರ ಹೊಂದಬೇಕು. ಆದರೆ ಏಕಸ್ವಾಮ್ಯತ್ವಕ್ಕೆ ಒಳಗಾಗಬಾರದು ಎಂಬ ಅಂಶಗಳುಳ್ಳದ್ದು. ರಜಪೂತ ಸಾಮ್ರಾಜ್ಯದ ಇತಿಹಾಸವನ್ನು ಒಳಗೊಂಡಿದ್ದರು, ಪರೋಕ್ಷವಾಗಿ ರಾಜ ಪ್ರಭುತ್ವ ಮತ್ತು ಪ್ರಜಾ ಪ್ರಭುತ್ವದ ನಡುವಿನ ವ್ಯತ್ಯಾಸಗಳ ಕುರಿತು ಚರ್ಚೆಯನ್ನು ಈ ನಾಟಕ ಒಳಗೊಂಡಿದೆ. ಪ್ರೀತಿ, ಪ್ರೇಮದ ವಿಷಯುವನ್ನು ನಾಟಕ ಒಳಗೊಂಡಿದೆ. ವಿಜಯುಸೇನು, ಪದ್ಮಾವತಿ ಪುರದ ಸಾರ್ವಭೌಮನಾದತ್ತಿದ್ದ ರಜಪೂತ ರಾಜ ದುರ್ಜಯ ಒಬ್ಬ ಸರದಾರ. ಇವನು ಈ ನಾಟಕದ ನಾಯಕನು ಹೌದು. ಶಾಂತಸೇನನು ಪದ್ಮಾವತಿಯ ಮುಖ್ಯಮಂತ್ರಿ. ದುರ್ಮತಿ, ಅಜಿತಸಿಂಗ, ಶೂರಸಿಂಗ ಈ ಮೂವರು ಸರದಾರರು. ಧನಕ ದುರ್ಜಯನ ಮಿತ್ರ, ಸಿದ್ಧನ್ನು ದುರ್ಜಯ ಸೇವಕ. ವಿದ್ಯುಲ್ಲತೆ ಶಾಂತಸೇನನ ಮಗಳು. ವಿಜಯಸೇನ ಮಹಾರಾಜರನ್ನು ಕೊಂದು ರಾಜ್ಯಾಧಿಕಾರ ಹಿಡಿಯುವ ಹಂಬಲವುಳ್ಳವರು. ರಾಜ್ಯದಲ್ಲಿರುವ ವಿಷಯ ದುರ್ಜಯನಿಗೆ ತಿಳಿಯುತ್ತದೆ. ಹಾಗೆ ತನ್ನ ದೇಹದಲ್ಲಿ ಒಂದು ಹನಿ ರಕ್ತ ಇರುವವರೆಗೂ ರಾಜವಧೆಯನ್ನು ಮಾಡಲು ಬಿಡುವುದಿಲ್ಲ ಎಂದು ಮಾತನಾಡುತ್ತಾನೆ. ಇತ್ತ ದುರ್ಮತಿಯು ವಿದ್ಯುಲ್ಲತೆ ಪ್ರೇಮದ ಕನಸಿನಲ್ಲಿ ಇರುತ್ತಾನೆ. ಆದರೆ ವಿದ್ಯುಲ್ಲತೆ ದುರ್ಜಯನ ಪ್ರೇಮದಲ್ಲಿ ಇರುತ್ತಾಳೆ. ದುರ್ಜಯ ಅರಮನೆಗೆ ಬರುವ ಸಂದರ್ಭದಲ್ಲಿ ಇಬ್ಬರು ಸೇವಕರು ಬಿದ್ದಿರುವುದನ್ನು

ಕಂಡು ದುರ್ಗತಿಯನ್ನು ಬೈಯುತ್ತಾನೆ. ಆದರೆ ದುರ್ಜಯನೆ ಈ ಕೆಲಸ ಮಾಡಿರುವದೆಂದು ಅವನನ್ನೇ ಕಟ್ಟಿ ಹಾಕುತ್ತಾರೆ. ಆದರೆ ದುರ್ಮತಿಯ ದ್ರೋಹವನ್ನು ಹೇಳಲು ದುರ್ಜಯ ಬಂದಿರುತ್ತಾನೆ. ಆದರೆ ಮಹಾರಾಜರು ದುರ್ಜಯನೆ ಈ ಕೊಲೆಗಳನ್ನು ಮಾಡಿರುವುದೆಂದು ತಿಳಿದು ದುರ್ಜಯನನ್ನು ಶಿರಚ್ಛೇದ ಮಾಡಲು ಆಜ್ಞಾಪಿಸುತ್ತಾನೆ.

ಮಹಾರಾಜರ ತೀರ್ಪಿಗೆ ತಲೆಬಾಗಿ ಭೂಮಾತೆಗೆ ವಂದಿಸಿ, ರಾಜನ ಹಿತಕ್ಕಾಗಿ ಆಶೀರ್ವಾದ ಕೊಡು ತಾಯಿ ಎಂದು ಭಾವಿಸುತ್ತಾನೆ. ಈ ಸನ್ನಿವೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತೀಯ ಹೋರಾಟಗಾರರು ಬ್ರಿಟಿಶರ ದೃಷ್ಟಿಯಲ್ಲಿ ದ್ರೋಹಿಗಳಂತೆ ಕಂಡವರು. ಅದಕ್ಕಾಗಿ ಶಿಕ್ಷೆಗೆ ಗುರಿಯಾದವರು ಇವರಂತೆ ಇಲ್ಲಿ ದುರ್ಜಯನನ್ನು ನಿರೂಪಿಸಬಹುದು. ಆದರೆ ದುರ್ಜಯನು ಬಿಡುಗಡೆಹೊಂದಿ ಶಾಂತಸೇನರನ್ನು ಭೇಟಿಯಾಗಲು ಅರಮನೆಗೆ ಬರುತ್ತಾನೆ. ಆಗ ಅವರಿಬ್ಬರ ನಡುವೆ ನಡೆಯುವ ಮಾತುಕತೆಗಳು ದೇಶ ರಾಜಪ್ರಭುತ್ವದಲ್ಲಿ ಇರಬಾರದು. ಆದರೆ ಏಕಾಧಿಕಾರ ಹೊಂದಬೇಕು. ಏಕ ಸ್ವಾಮಿನಿಷ್ಠೆಗೆ ಒಳಗಾಗಬಾರದು ಎನ್ನುವ ವಿಷಯಗಳ ಕುರಿತ ಚರ್ಚೆ ಇಲ್ಲಿದೆ.

ಉದಾಹರಣೆಗೆ

ದುರ್ಜಯ : ಶಾಂತಸೇನ, ಇದನ್ನೆಲ್ಲ ನಿಮಗೆ ಹೇಳುವಷ್ಟು ಯೋಗ್ಯತೆಯು ನನ್ನಲ್ಲಿರುವುದಿಲ್ಲ. ಆದರೂ ಅನಿವಾರ್ಯ ಪಕ್ಷಕ್ಕೆಂದು ವ್ಯಕ್ತಮಾಡಿ ಹೇಳುವೆ. ಜನರ ಮನಸ್ಸು ಸ್ಥಿರವಲ್ಲವೆಂಬ ಸಂಗತಿಯನ್ನು ಮೊದಲೇ ಹೇಳಿರುವೆ. ನನ್ನ ಕೆಲವು ಕೃತ್ಯಗಳಿಗಾಗಲಿ, ವಕ್ತೃತ್ವಶಕ್ತಿಗಾಗಲಿ ಮನಸೋತು, ಅವರು ಇಂಸು ನನ್ನನ್ನು ಅರಸನನ್ನಾಗಿ ಮಾಡಬಹುದು.ಆದರೆ ಧನಮದ, ಅಧಿಕಾರಮದಗಳೆರಡೂ ಸ್ವಲ್ಪಾಂಶದಿಂದೇ ಅಗಲಿ ಸಹಜ ರೀತಿಯಿಂದ ನನ್ನಲ್ಲಿ ಸೇರಿಕೊಂಡವೆಂದರೆ ನನ್ನದಾದರೂ ಹಾಡು ಎಲ್ಲರಂತಯೇ ಆಗುವದು. ಇದರಲ್ಲಿ ಏನೂ ಸಂಶಯವಿಲ್ಲ. ಒಂದು ವ್ಯಕ್ತಿಯ ಮೇಲೆ ರಾಜ್ಯಭಾರವನ್ನವಲಂಬಿಸಿ ಬಿಡುವದು ನಮ್ಮ ಪೂರ್ವಜರ ದೊಡ್ಡ ತಪ್ಪೇ ಇರುವದು. ಅದರಿಂದಲೇ ಅವರು ತಮ್ಮ ರಾಜ್ಯವನ್ನು ಕಳೆದುಕೊಡಿರುವರು. ಈ ವ್ಯಕ್ತಿ ಪ್ರಾಧಾನ ರಾಜ್ಯ ಪದ್ಧತಿಯೇ ನಮ್ಮ ಸಮೂಲ ನಾಶಕ್ಕೆ ಕಾರಣವಾಗಿರುವದು. ಮೇಲಾಗಿ ಭಾರತ ಖಂಡದಂಥ ಅಘಾಟ ದೇಶಕ್ಕೆ ಒಂದು ವ್ಯಕ್ತಿಯ ಸ್ವಾಮಿತ್ವವೆಂದರೆ ಕೇವಲ ಅವ್ಯವಸ್ಥೆಯ ಕಾರಣವೇ ಸರಿ. ಇದಂತೂ ನನ್ನ ಮನಸ್ಸಿಗೆ ಸ್ವಲ್ಪಾದರೂ ಬರುವುದಿಲ್ಲ.

ಶಾಂತಸೇನ : ನೀನು ಹೇಳುವದೆಲ್ಲ ಯೋಗ್ಯವದೆ. ಆದರೆ ಮುಂದೆ ನಾವು ಮಾಡತಕ್ಕದ್ದಾದರೂ ಏನು? ಅಧಿಕಾರ ಬಲವಿಲ್ಲದ ಹೊರತು ಯಾರು ಯಾರನ್ನು ಕೇಳುವರು?

ದುರ್ಜಯ : ಶಾಂತಸೇನ ಇದೇನು? ಸಾಮಾನ್ಯ ಜನರಂತೆ ನೀವು ಹೀಗೇಕೆ ಪ್ರಶ್ನೆ ಮಾಡಹತ್ತಿರುವಿರಿ? ಅರಸನಿಲ್ಲದ್ದಿದ್ದರೆ ಅಧಿಕಾರವು ನಾಶವೇ ಹೊಂದುವುದೇನು? ಪ್ರಜೆಗಳ ಅನುಮತಿಯಿಂದ ಸುಶಿಕ್ಷಿತ ಮುತ್ಸದ್ದಿಗಳನ್ನಾಗಿಸಿ ಅವರಿಂದ ರಾಜ್ಯ ಸೂತ್ರವನ್ನು ನಡೆಸಿದರಾಯಿತು. ಯಾವ ಅಧಿಕಾರವನ್ನೂ ಯಾರಿಗೂ ಸ್ಥಿರವಾಗಿಡತಕ್ಕದ್ದಲ್ಲ. ಉಚ್ಚಾವಚಭಾವವನ್ನಿಡತಕ್ಕದ್ದಲ್ಲ. ಎಲ್ಲರೂ ಸಮಾನರೆಂದು ತಿಳಿದು ಪ್ರಜೆಗಳ ಅನುಮತಿಯಿಂದಲೇ ರಾಜ್ಯಸೂತ್ರವನ್ನು ನಡೆಯಿಸತಕ್ಕದ್ದು. ಇಲ್ಲದ್ದಿದ್ದರೆ ಇಂಥ ಕ್ರಾಂತಿಗಳು ದೇಸದಲ್ಲಿ ಮೇಲಿಂದ ಮೇಲೆ ಸಂಭವಿಸುವವು. (ಅದೆ, ಪುಟ–೬೦–೬೧)

ಈ ಸಂಭಾಷಣೆಲ್ಲಿ ದುರ್ಜಯನು ರಾಜ ಪ್ರಭುತ್ವ ಮತ್ತು ಅದರ ದೋಷಗಳನ್ನು ಸ್ಪಷ್ಟಪಡಿಸುತ್ತಾನೆ. ಅದರ ಬಗ್ಗೆ ತನ್ನ ಸಹಮತ ಇಲ್ಲದಿರುವುದನ್ನು ಶಾಂತಸೇನರಿಗೆ ತಿಳಿಸುತ್ತಾನೆ. ಇದು ೧೮೫೭ ದಂಗೆಯ ನಂತರ ಮತ್ತೆ ಮೊಘಲ ಮನೆತನದವರನ್ನೆ ರಾಜನನ್ನಾಗಿ ಮಾಡಿದ ಚಾರಿತ್ರಿಕ ಸನ್ನಿವೇಶವನ್ನು ವಿಡಂಬಿಸುವಂತಿದೆ. ಒಂದು ವೇಳೆ ನಾನು ರಾಜ ಪದವಿಯನ್ನು ಸ್ವೀಕರಿಸಿದಲ್ಲಿ ನನ್ನ ನಿರಂತರ ಶ್ರಮವೆಲ್ಲ ದೇಶದ ಕಲ್ಯಾಣದ ಸಲುವಾಗಿ, ಪ್ರಜೆಗಳ ಸಲುವಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಕಾರಣ ರಾಜ್ಯ ಪದವಿ ದೊರೆತ ಕೂಡಲೇ ಮನುಷ್ಯನಿಗೆ ಒಂದು ರೀತಿಯ ದರ್ಪ, ಅಹಂಕಾರ ಬರುವುದು ಸಹಜವಾದುದೇ ಆಗಿದೆ. ರಾಜ ಪದವಿಯು ಅಶಾಶ್ವತವಾದದ್ದು, ಸಿಂಹಾಸನವು ನರಕ ಸಾಧನವಾದದ್ದು ಎಂಬ ಸಮರ್ಥನೆಯನ್ನು ದುರ್ಜಯನು ಶಾಂತಸೇನನಿಗೆ ನೀಡುತ್ತಾನೆ.

ಕನ್ನಡ ನವೋದಯದ ಆರಂಭದ ಕಾಲದಲ್ಲಿ ಲೇಖಕರು ಈ ತರಹದ ಹೊಸ ತುಡಿತಗಳಿಗೆ, ಅನ್ವೇಷಣೆಗಳಿಗೆ ಬರವಣಿಗೆಯನ್ನು ಒಗ್ಗಿಸಿದ್ದಾರೆ. ಹಾಗಾಗಿ ಅಂದಿನ ತಲ್ಲಣಗಳು ಅವರ ಸಾಹಿತ್ಯದಲ್ಲಿ ಗೋಚರಿಸಲು ಸಾಧ್ಯವಾಗಿದೆ. ರಾಜಕೀಯ ಸ್ವಾತಂತ್ರ್ಯ ಅಷ್ಟೇ ಅಲ್ಲದೆ, ಸಾಮಾಜಿಕ ಸಮಸ್ಯೆಗಳಾದ ಅಸ್ಪೃಶ್ಯತೆ ಅಂತ ವಿಷಯಗಳನ್ನು ಸಾಹಿತ್ಯದ ಮೂಲಕ ಚರ್ಚಿಸಿದ್ದಾರೆ. ಸಾಂಪ್ರದಾಯಿಕ ವಿವಾಹ ಪದ್ಧತಿಗಳನ್ನು ಒಪ್ಪದೇ ಪ್ರೇಮ ವಿವಾಹಗಳನ್ನು ಸಾಹಿತ್ಯದಲ್ಲಿ ಮುಂದೆ ತಂದರು. ವಿವಾಹವೆಂದರೆ ದೇವರು, ಧರ್ಮ, ಕಾಯಿದೆ, ಸಮಾಜ ಯಾವುದರಿಂದಲೂ ಮಲೀನಗೊಳಿಸದಷ್ಟು ಪವಿತ್ರವಾದದ್ದು. ಇಂಥ ವಿವಾಹಗಳೆ ಸಮಸಮಾಜವನ್ನು ಕಟ್ಟಲು ಆಧಾರಗಳು ಎಂಬುದನ್ನು ಈ ನಾಟಕದಲ್ಲಿ ತೋರಿಸಿದ್ದಾರೆ. ಹಾಗಾಗಿ ಶ್ರೀರಂಗರ ನಾಟಕ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ, ಸ್ವಾರ್ಥರಹಿತ ಸಾಮಾಜಿಕ ಬದಲಾವಣೆಗಳ ನಿಲವುಗಳನ್ನು ಒಳಗೊಂಡಿದೆ ಎಂದು ಹೇಳಬಹುದು.

ಚವತಿಯ ಚಂದ್ರ

ಗರುಡರು ತಮ್ಮ ನಾಟಕ ರಚನೆಗೆ ಪೌರಾಣಿಕ ಕಥೆಗಳನ್ನು ಆಯ್ಕೆ ಮಾಡಿಕೊಂಡು ಆ ಮೂಲಕ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವುದು ಸಾಹಿತ್ಯದ ಕರ್ತವ್ಯವೆಂದು ನಂಬಿಕೊಂಡಿದ್ದರು. ಹಾಗೆಯೇ ಅಂತಹ ಸಮಸ್ಯೆಗಳನ್ನು ಜನಪರ ಸಮಸ್ಯೆಗಳನ್ನಾಗಿ ನಾಟಕಗಳ ಮೂಲಕ ಬಿತ್ತರಿಸಿ ಜನರಿಂದ ಪ್ರತಿಕ್ರಿಯೆಗಳನ್ನು ಬ್ರಿಟಿಶ್ ಸರಕಾರಕ್ಕೆ ನೀಡುವುದರ ಮೂಲಕ ಗರುಡರು ಸಾಹಿತ್ಯ ಮತ್ತು ಜನರ ಜವಾಬ್ದಾರಿಗಳು ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವಂತೆ ತಮ್ಮ ನಾಟಕಗಳ ಮೂಲಕ ತೋರಿಸಿದರು. ಅಂತ ನಾಟಕಗಳಲ್ಲಿ ಚವತಿಯ ಚಂದ್ರ ನಾಟಕವು ಒಂದು.

ಚವತಿಯ ಚಂದ್ರ ನಾಟಕವು ಪೌರಾಣಿಕ ಕತೆಯ ಮೂಲಕ ಭಾರತದ ಸ್ವಾತಂತ್ರ್ಯ ಚಳುವಳಿ ಕಾಲಘಟ್ಟದಲ್ಲಿದ್ದ ಜಾತಿ ವ್ಯವಸ್ಥೆಯ ಕುರಿತು ಮಾತನಾಡುತ್ತದೆ. ಜಾಂಬವಂತ ಮತ್ತು ಕೃಷ್ಣನ ನಡುವಿನ ಸಂಬಂಧ ಕುರಿತದ್ದಾಗಿದೆ. ಈ ನಾಟಕದ ಮುಖ್ಯ ಕೇಂದ್ರ 'ಶಮಂತಕ ಮಣಿ'. ಅಧುನಿಕ ಸಂದರ್ಭದಲ್ಲಿ ವಸಾಹತುಶಾಹಿಗಳ ರಾಜಕೀಯ ಆಡಳಿತ ಮತ್ತು ಅವರ ನೀತಿಗಳನ್ನು ವಿರೋಧಿಸುವುದಕ್ಕಷ್ಟೆ ಕನ್ನಡ ನಾಟಕಗಳು ಸೀಮಿತವಾಗಿರಲಿಲ್ಲ. ಭಾರತದಲ್ಲಿ ಪರಂಪರೆಯಿಂದ ಬೇರು ಬಿಟ್ಟ ಜಾತಿ, ಧರ್ಮ, ಜನಾಂಗಗಳ ಮೇಲೆ ನಡೆಯುತ್ತಿದ್ದ ಸ್ಥಳೀಯ ಸಮಸ್ಯೆಗಳನ್ನು ವಿರೋಧಿಸುವ ನಿಟ್ಟಿನಲ್ಲಿಯೂ ನಾಟಕಗಳು ರಚನೆಗೊಂಡವು. ಪುನರುಜ್ಜೀವನ ಚಿಂತನೆಗಳು ವಸಾಹತುಶಾಹಿ ದೇಶಗಳಿಗೂ ವಿಸ್ತರಿಸಿ ಅಲ್ಲಿಯ ಸಾಮಾಜಿಕ ಸಮಸ್ಯೆಗಳನ್ನು ಪ್ರಶ್ನಿಸಿದವು. ಗರುಡರ 'ಚವತಿಯ ಚಂದ್ರ' ನಾಟಕವು ಈ ಸಮೀಕ್ಷೆಯನ್ನು ಪೌರಾಣಿಕ ಕತೆಯ ಮೂಲಕ ಕಟ್ಟಿಕೊಟ್ಟಿದೆ. ಶಮಂತಕ ಮಣಿಯ ಕುರಿತು ಕೃಷ್ಣ ಮತ್ತು ಜಾಂಬವಂತನ ನಡುವೆ ನಡೆಯು ಸಂಭಾಷಣೆ ಹೀಗಿದೆ.

ಜಾಂಬುವಂತ : ಅಯ್ಯಾ ಆರ್ಯ ಮಹಾಶಯರೇ, ನೀವೆಂತಹ ನ್ಯಾಯಾನುವರ್ತಿಗಳು? ಕೇವಲ ಧರ್ಮಶ್ರವಣವನ್ನು ಮಾಡಿಸಲಿಕ್ಕೆ ಬಂದಿರುವಿರಿ. ನೀವು ವಾಸಿಸುವ ದೇಶವಾವುದು? ಮೂಲ ನಿವಾಸಿಗಳಾದ ನಮ್ಮದಲ್ಲದವೇ? ಅದು ಬಿಡಿ, ನೀವು ನಿಮ್ಮ ನಿಮ್ಮಲ್ಲಿಯೇ ಒಬ್ಬ ರಾಜರ ರಾಜ್ಯವನ್ನು ಮತ್ತೊಬ್ಬರು ಅಪಹರಿಸುತ್ತಿರುವಿರಲ್ಲವೇ? ಅದು ನ್ಯಾಯವೇ? ನಿಮ್ಮ ರಾಜನಾದ ಕೃಷ್ಣನು ಮೊದಲು ಗೊಲ್ಲನು, ಈಗ್ಗೆ ಬಂಗಾರದ ದ್ವಾರಕೆಯನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡಿರುವಂತೆ ಆ ಸಂಪತ್ತನ್ನು ಎಲ್ಲಿಂದ ತಂದನೋ? ಘನವಂತರಾಗಿ ಮೆರೆದಾಡುವ ನಿಮ್ಮ ಮೂಲಚರಿತ್ರೆಯನ್ನು ನೋಡಹೋದರೆ ಅಲ್ಲಿ ಅನ್ಯಾಯದ ಕತ್ತಲೆ ಮುಸುಕಿದೆ. ಕೊಲೆಯ ದುರ್ಗಂಧವೇ ತುಂಬಿದೆ. ಅಯ್ಯಾ ಸುಶಿಕ್ಷಿತರಾದ ಆರ್ಯ ಮಹಾಶಯರೇ, ದೇವರು ನಿರ್ಮಿಸಿಕೊಟ್ಟ ಸ್ವತಂತ್ರ ಜೀವಿಗಳನ್ನು ಪಾರತಂತ್ರ್ಯ ನರಕದಲ್ಲಿ ತುಳಿದು

ಮೇಲೆ ನೀತಿ ನಿರೂಪಣೆಯನ್ನು ಮಾಡುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೆ? ಈ ನಿಮ್ಮ ಹೇಯವಾದ ಮಹತ್ವಾಕಾಂಕ್ಷೆಯು ಕಲಿಯುಗವನ್ನು ಸಮೀಪಕ್ಕೆ ಕರಿಯುತ್ತಲಿದೆ. ಸಾಕು ಮಾಡಿ, ನಿಮ್ಮ ಧರ್ಮ ಶ್ರವಣವನ್ನು.

ಕೃಷ್ಣ : ಅಯ್ಯಾ ! ವನರಾಜನೇ ! ವಿದ್ವತ್ಪೂರ್ಣವಾದ, ಘನಗಂಭೀರವಾದ, ಆವೇಶಯುಕ್ತವಾದ ನ್ಯಾಯ ವಿಮರ್ಶೆ ಒತ್ತಟ್ಟಿಗಿರಲಿ. ಆ ಮಣಿಯು ನಮ್ಮದು. ನಮಗೆ ಕೊಟ್ಟುಬಿಡು. ನಮ್ಮ ಮೇಲೆ ನಿನಗೆ ವಿಶ್ವಾಸವಿಲ್ಲದಿದ್ದರೆ, ನೀನೆ ದ್ವಾರಕೆಯ ತನಕ ಬಂದು ಅಲ್ಲಿದಕ್ಕೆ ಬಾಧ್ಯಸ್ಥನಾದ ಸತ್ರಾಜಿತನೆಂಬ ಯಾದವ ಸರ್ದಾರನಿದ್ದಾನೆ, ಅವನ ಸ್ವಾದೀನಪಡಿಸು.

ಜಾಂಬುವಂತ: ಅಯ್ಯಾ ! ಪ್ರವಾಸಿಯೆ ! ಅತಿಥಿಯಾಗಿ ಬಂದಿರುವೆಯೆಂದು ನೀನಾಡುವ ಮಾತುಗಳನ್ನು ಧರ್ಮಕ್ಕೆ ಕಟ್ಟುಬಿದ್ದು ಸಹಿಸಬೇಕಾಗಿದೆ.(ಅದೆ, ಪು–೩೦೭)

ಮೂಲ ನಿವಾಸಿ ಹಾಗೂ ಕುಲಮೂಲ ಸಮಸ್ಯೆಯೇ ಈ ನಾಟಕದ ಮುಖ್ಯ ಕೇಂದ್ರ. ಕೃಷ್ಣ ಮತ್ತು ಜಾಂಬವಂತನ ನಡುವಿನ ಸಂಭಾಷಣೆ ಮೂಲಕ ನಾಟಕದ ಪ್ರಮುಖ ಅಂಶಗಳು ಚರ್ಚೆಗೆ ಒಳಗಾಗುತ್ತವೆ. 'ಶ್ಯಮಂತಕಮಣಿ' ಎಂಬ ಹರಳಿನಿಂದ ಆರಂಭಗೊಳ್ಳುವ ಈ ಚರ್ಚೆಯ ಭಾರತೀಯ ಪುರಾಣದ ಕಥೆಯಲ್ಲಿರುವ ಜಾತಿ/ಕುಲದ ಸಮಸ್ಯೆಯನ್ನು ಸಮಕಾಲೀನಗೊಳಿಸಿ ೨೦ನೆಯ ಶತಮಾನದ ಭಾರತೀಯ ಸಮಾಜದ ವಾಸ್ತವಸ್ಥಿತಿಯ ಜೊತೆಗೆ ತೆರೆದಿಡುತ್ತದೆ. ಕೃಷ್ಣ ಜಾಂಬವಂತನನ್ನು ಕುರಿತು ಶ್ಯಮಂತಕಮಣಿ ಆರ್ಯರ ಸೊತ್ತು. ಅದು ಆರ್ಯರಿಗೆ ಸೇರಬೇಕಾದದ್ದು ಎಂದು ಹೇಳುತ್ತಾನೆ. ಆಗ ಜಾಂಬವಂತನು ಶ್ಯಮಂತಕಮಣಿ ಕೇವಲ ಒಂದು ಮಣಿ ಅಲ್ಲ. ಅದು ಭಾರತೀಯ ಪ್ರತೀಕ ಎಂದು ಹೇಳುವ ಮಾತುಗಳು ಭಾರತದ ಆದಿಯಿಂದಲೂ ಪ್ರಾರಂಭವಾದ ಜನಾಂಗೀಯ ಸಮಸ್ಯೆಯನ್ನು ಗುರುತಿಸುತ್ತದೆ. ನಾಟಕದಲ್ಲಿ ಆರ್ಯ ಎಂಬ ಪದ ಉಲ್ಲೇಖಗೊಂಡಿದ್ದರೂ ದ್ರಾವಿಡ ಎಂಬ ಪದ ಎಲ್ಲೂ ಬಳಕೆಗೆ ಬಂದಿಲ್ಲ. ಆದರೆ ಆಯ್ಯ ಆರ್ಯ ಮಹಾಶಯರೇ ನೀವೆಂತಹ ನ್ಯಾಯಾನುವರ್ತಿಗಳು? ಕೇವಲ ಧರ್ಮ ಶ್ರವಣ ಮಾಡಿಸಲಿಕ್ಕೆ ಬಂದಿರುವಿರಿ. ನೀವು ವಾಸಿಸುವ ದೇಶ ಯಾವುದು? ಮೂಲ ನಿವಾಸಿಗಳಾದ ನಮ್ಮದಲ್ಲವೇ? ನಮ್ಮ ಜನಾಂಗದ ಕೊಲೆ ಮಾಡಿ ನೀವದನ್ನು ಸಂಪಾದಿಸಿಲ್ಲವೆ? ಎಂದು ಹೇಳುವ ಜಾಂಬವಂತನ ಮಾತುಗಳು ಭಾರತದಲ್ಲಿ ನಡೆದ ಜನಾಂಗೀಯ ಕೊಲೆಗಳನ್ನೇ ನಿರ್ಧರಿಸುತ್ತವೆ.(ಅಂದಿನ ಪಾಕ್ ಮತ್ತು ಭಾರತದ ಜನಾಂಗೀಕ ಘರ್ಷಣೆಯನ್ನು ತಿಳಿಸುತ್ತದೆ.) ಇಲ್ಲಿ ಆರ್ಯರನ್ನು ಬ್ರಿಟಿಶರಿಗೆ ಹೋಲಿಕೆ ಮಾಡಿ ಅರ್ಥೈಸಿಕೊಂಡರೂ, ಭಾರತದ ಮೂಲ ನಿವಾಸಿಗಳು ಯಾರು? ಈ ಹಿನ್ನೆಲೆಯಲ್ಲಿ ಆರ್ಯ ದ್ರಾವಿಡ ಪರಿಕಲ್ಪನೆಗಳು ಇಂದಿಗೂ ಚರ್ಚೆಗೆ ಒಳಪಡುತ್ತಿವೆ.

ಕನ್ನಡ ವೃತ್ತಿರಂಗ ಭೂಮಿಯು ಅಧುನಿಕ ರಂಗಭೂಮಿಯ ಭಾಗವಾಗಿ ಭಾರತಕ್ಕೆ ಬಂದು ಇಲ್ಲಿನ ವೃತ್ತಿರಂಗ ಭೂಮಿಯ ಪ್ರಭಾವಕ್ಕೆ ಒಳಗಾಗಿತ್ತು. ನಂತರ ಕನ್ನಡ ರಂಗಭೂಮಿ ವೃತ್ತಿ ಮತ್ತು ಹವ್ಯಾಸಿ ಎಂಬ ಭಿನ್ನ ದಾರಿಯಲ್ಲಿ ಚಲಿಸಲು ಆರಂಭಿಸಿತು. ಪ್ರಮುಖವಾಗಿ ಸಂಗೀತಕ್ಕೆ ಪ್ರಾಧಾನ್ಯತೆ ಕೊಟ್ಟಿದ್ದ ಕನ್ನಡ ವೃತ್ತಿರಂಗಭೂಮಿ(ಜನವಿರುವ)ಯು ಕಂದಗಲ್ಲ ಹನುಮಂತರಾಯರಿಂದ ಸಾಹಿತ್ಯ(ಸಂಭಾಷಣೆ) ಕಂಪನಿ ನಾಟಕಗಳ ಜೀವಾಳವಾಯಿತು. ಆದರೂ ಸಂಗೀತ ಪ್ರಧಾನ ನಾಟಕಗಳ ಪ್ರದರ್ಶನಗಳು ನಡೆಯುತ್ತಿದ್ದವು. ಕನ್ನಡ ನಾಟಕಗಳು ಸ್ವಾತಂತ್ರ್ಯ ಚಳುವಳಿಗೆ ಪ್ರತಿಕ್ರಿಯಿಸಲು ಸಂಭಾಷಣೆಯನ್ನು ತಂತ್ರದ ರೂಪದಲ್ಲಿ ಬಳಸಿಕೊಂಡವು. (ಹಾಡಿನ ರೂಪದ ಭಾಷೆ, ಸಂಭಾಷಣೆ ರೂಪದ ಭಾಷೆ) ಇಂಗ್ಲಿಶ್ ಮತ್ತು ಸಂಸ್ಕೃತ ಬಲ್ಲವರಾಗಿದ್ದ ಕಂದಗಲ್ಲರು ಭಾರತೀಯ ಪುರಾಣಗಳನ್ನು ನಾಟಕಕ್ಕೆ ಅಳವಡಿಸಿಕೊಂಡು, ಪುರಾಣದ ಘಟನೆಗಳನ್ನು ಸಮಕಾಲೀನ ಬಿಕ್ಕಟ್ಟುಗಳಿಗೆ ಸಮ್ಮಿಲನಗೊಳಿಸಿ, ಸ್ಫುಟವಾದ ಸಂಭಾಷಣೆಗಳಿಂದ ಅಂದಿನ ಜರೂರುಗಳಿಗೆ ಅಕ್ಷಯಾಂಬರ, ರಕ್ತರಾತ್ರಿ, ಕುರುಕ್ಷೇತ್ರ ಇವೆ ಮುಂತಾದ ನಾಟಕಗಳಿಂದ ಉತ್ತರಿಸಿದರು.

ಕುರುಕ್ಷೇತ್ರ

ಕಂದಗಲ್ಲರ ಪೌರಾಣಿಕ ನಾಟಕಗಳಲ್ಲಿ 'ಕುರುಕ್ಷೇತ್ರ' ನಾಟಕವು ಪ್ರಮುಖವಾದದ್ದು. ಈ ನಾಟಕದ ಕತೆಯ ಮೂಲಕ ಭಾರತದ ಸ್ವಾತಂತ್ರ್ಯ ಚಳುವಳಿಯ ಹರವನ್ನು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಎರಡು ನೆಲೆಯಲ್ಲಿ ವಿಸ್ತರಿಸಿದರು. ಭಾರತ ಎರಡು ರೀತಿಯಲ್ಲಿ ಬಂಧನಕ್ಕೊಳಗಾಗಿರೆ, ಒಂದು ವ್ಯಾಪಾರಕ್ಕಾಗಿ ಬಂದ ಬ್ರಿಟಿಶ್ ಮತ್ತೊಂದು ವರ್ಣ ಪರಿಪಾಲಕರಿಂದ ಭಾರತ ಜಾತಿಗಳ, ಅಸ್ಪೃಶ್ಯತೆಯ ಕೊಂಪೆಯಾಗಿದೆ. ಭಾರತ ಸ್ವಾತಂತ್ರ್ಯಗೊಳ್ಳಬೇಕಾದರೆ ಈ ಎರಡು ಬಂಧನಗಳಿಂದ ಭಾರತ ಹೊರಬರಬೇಕಾಗಿದೆ. ಆ ನಿಟ್ಟಿನಲ್ಲಿ ನಮ್ಮ ಹೋರಾಟಗಳು ನೆಲೆಗೊಳ್ಳಬೇಕು ಎಂದು ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಕುರುಕ್ಷೇತ್ರ ನಾಟಕದ ಮೂಲಕ ಕಂದಗಲ್ಲರು ನಿರ್ವಹಿಸಿದ್ದಾರೆ. ಪಾಂಡವರ ಅಧಿಕಾರಕ್ಕೆ ಕುರುಕ್ಷೇತ್ರ ಹೇಗೆ ಕಾರಣವಾಯಿತೋ, ಹಾಗೆ ಭಾರತೀಯರ ಗೆಲುವಿಗೆ ಬ್ರಿಟಿಶರ ವಿರುದ್ಧ ನಡೆಯುತ್ತಿರುವ ಈ ಹೋರಾಟ ಕಾರಣವಾಗಲಿ ಎಂಬುದನ್ನು 'ಪಾಂಚಾಲಿಯ' ಮಾತುಗಳು ಧ್ವನಿಸುತ್ತವೆ.

"ಪಾಂಚಾಲಿಯ ಪ್ರತಿಜ್ಞೆ ಎಂದರೆ ಸಾಕ್ಷಾತ್
ಭಾರತ ಭೂದೇವಿಯ ಪ್ರತಿಜ್ಞೆ'
"ಭಾರತ ಪೌರುಷ ಹೀನವಾಗಿ ಕುಳಿತುಕೊಳ್ಳುವ
ಪುರುಷರ ಮುಖಗಳನ್ನು ಭಾರತನಾರಿಯರು

ಎಂದೂ ನೋಡಿರಲಾರರು"

ಈ ನಯನೋತ್ಸವದ ನೋಟವು ಭಾರತ

ಪುತ್ರರ ಎದೆಗನ್ನಡಿಯಲ್ಲಿ ಪ್ರತಿಬಿಂಬಿಸಲಿ"

"ಭಾರತ ವೀರರು ಎಂದಿಗೂ ಭಿಕ್ಷೆಯನ್ನು ಬೇಡುವುದಿಲ್ಲ"

ಬ್ರಿಟಿಶರ ವಿರುದ್ಧ ನಡೆದ ಕುರುಕ್ಷೇತ್ರ ಭಾರತೀಯರ ಪಾಲಿಗೆ ಪಾಣಿಪತ್ತಾಗಲಿ ಎಂಬ ಆಶಯ ಕುರುಕ್ಷೇತ್ರ ನಾಟಕದ ಉಪಶೀರ್ಷಿಕೆ ಧ್ವನಿಸುತ್ತದೆ. ಈ ಯುದ್ಧ ಭಾರತೀಯರಿಗೆ ಅಂತಿಮವಾಗಲಿ, ಆ ನಿಟ್ಟಿನಲ್ಲಿ ಎಲ್ಲರೂ ಜಾಗೃತರಾಗೋಣ ಎಂಬ ಆಶಯವನ್ನು ಕುರುಕ್ಷೇತ್ರ ನಾಟಕ ಹೊಂದಿದೆ.

ಭಾರತದಲ್ಲಿ ವಸಾಹತುಶಾಹಿ ವಿರುದ್ಧ ನಡೆದ ಸ್ವಾತಂತ್ರ್ಯ ಚಳುವಳಿಗೆ ರಾಜಕೀಯ ಸ್ವಾತಂತ್ರ್ಯ ಎಷ್ಟು ಮುಖ್ಯವಾಗಿತ್ತೋ, ಸಾಮಾಜಿಕ ಸ್ವಾತಂತ್ರ್ಯವು ಆ ಚಳುವಳಿಯ ಮುಖ್ಯ ಅಂಗವೇ ಆಗಿತ್ತು. ಭಾರತದ ಸ್ವಾತಂತ್ರ್ಯ ಚಳುವಳಿ ಅದರ ಸಾಮಾಜಿಕ ಅಂಶಗಳ ಹಿನ್ನೆಲೆಯಲ್ಲಿ ರಾಜಕೀಯವಾಗಿ ಕಟ್ಟಲ್ಪಟ್ಟಿದೆ. ಹಾಗಾಗಿ ಭಾರತದ ರಾಷ್ಟ್ರೀಯ ಚಳುವಳಿಯನ್ನು ರಾಜಕೀಯ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ ಪರಿಭಾವಿಸುವ ಜರೂರು ಇದೆ. ಆದರೆ ಭಾರತೀಯ ಸ್ವಾತಂತ್ರ್ಯ ಚಳುವಳಿ ಸಮಸಮಾಜ, ಸಮರಾಜಕೀಯ ನೀತಿಗಳಿಂದ ರೂಪಗೊಂಡಿದ್ದರೂ, ಅದರ ಉದ್ದೇಶಗಳು ಮಂಜು ಮುಸುಕಿದ ವಾತಾವರಣದಲ್ಲಿಯೇ ಇಂದಿಗೂ ಉಸಿರಾಡುತ್ತಿವೆ.

ಕನ್ನಡ ವೃತ್ತಿ ರಂಗಭೂಮಿಗಾಗಿ ರಚನೆಗೊಂಡ ಬಹುತೇಕ ನಾಟಕಗಳ ಮೂಲ ಪುರಣಗಳೇ ಆಗಿದ್ದರೂ ಅವು ಧ್ವನಿಸುತ್ತಿರುವ ಧ್ವನಿ ಮಾತ್ರ ಸ್ವಾತಂತ್ರ್ಯ ಭಾರತೀಯ ಸಮಾಜದಲ್ಲಿ ವರ್ಣಭೇದ, ಜಾತಿಭೇದ, ಅಸ್ಪೃಶ್ಯತೆಯಂತ ಪಿಡುಗುಗಳ ವಿರುದ್ಧ, ಗಾಂಧೀಜಿ, ಕೈಗೊಂಡ ಕಾರ್ಯಕ್ರಮಗಳು ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಭಾಗಗಳಾಗಿದ್ದವು. ೧೯೩೪ರಲ್ಲಿ ಕಂದಗಲ್ಲರು ರಚಿಸಿದ ಕುರುಕ್ಷೇತ್ರ ನಾಟಕವು ಇಂತ ಅಂಶಗಳನ್ನು ಪೌರಾಣಿಕ ಕಥೆಯ ಮೂಲಕ ವಾಸ್ತವೀಕರಿಸುತ್ತದೆ. ಕೌರವರು ಮತ್ತು ಪಾಂಡವರ ನಡುವಿನ ಯುದ್ಧವನ್ನು ತಪ್ಪಿಸಲು ಸಂಧಾನಕ್ಕಾಗಿ ಹಸ್ತಿನಾಪುರಕ್ಕೆ ಬಂದ ಕೃಷ್ಣನನ್ನು ಹಸ್ತಿನಾಪುರದ ಅಸ್ಪೃಶ್ಯರಾದ ಕಲಿಯಾ, ಕನಕ, ಬಂಡಾರಿ ಮೊದಲಾದವರು ಎದುರುಗೊಂಡು ಕುಡಿಯಲು ಮಣ್ಣಿನ ಪಾತ್ರೆಯಲ್ಲಿ ಮಜ್ಜಿಗೆ ಕೊಟ್ಟು, ತಮ್ಮ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಕೃಷ್ಣನೆದುರು ಹೇಳಿಕೊಂಡಾಗ ಇನ್ನು ಕೃಷ್ಣನು ಸಮಾಜ ಸುಧಾರಕನಂತೆ ಭಾಸವಾಗುತ್ತಾನೆ. ಕೃಷ್ಣನೇ ಹಾಡುವ ಒಂದು ಹಾಡು ಈ ರೀತಿ ಇದೆ.

"ಮಣ್ಣಿನಿಂದಲೇ ಸಕಲ ವಿಶ್ವ
ಮಣ್ಣಿನೊಳಿಹುದು ಜಗ ಜನನಿ ಮಾತೃ ಭಾವಾ ॥
ಮುನ್ನಿದನು ಮನದಿ ಭಾವಿಸು
ಮಣ್ಣಲ್ಲಿಹುದು ಅಖಿಲ ಬ್ರಹ್ಮಾಂಡದ ಮೂಲತತ್ವ"

(ಕಂದಗಲ್ಲ ಹನುಮಂತರಾಯ, ಕುರುಕ್ಷೇತ್ರ, ಪು-೨೫)

ಕ್ರಾಂತಿ

ಗರುಡ ಸದಾಶಿವರಾಯರ 'ಕ್ರಾಂತಿ' ನಾಟಕವು ಸತ್ಯ ಸಂಕಲ್ಪ ನಾಟಕದಂತೆ ಸಾಮಾಜಿಕ ಸಮಸ್ಯೆಯನ್ನು ಒಳಗೊಂಡ ನಾಟಕವಾಗಿದೆ. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಎಲ್ಲರೂ ಸ್ವಾತಂತ್ರ್ಯ ಸಮಾನತೆಯುಳ್ಳವರಾಗಿರಬೇಕು ಎಂಬ ತತ್ವವನ್ನು ಒಳಗೊಂಡಿದೆ. ಹಾಗೆ ರಾಜಕೀಯ ಪ್ರಜ್ಞೆ ಎಷ್ಟು ಮುಖ್ಯವೋ, ಸಾಮಾಜಿಕ ಪ್ರಜ್ಞೆಯೂ ಅಷ್ಟೇ ಪ್ರಮುಖ ಎಂದು ಸಾಮಾಜಿಕ ಸಮಸ್ಯೆಗಳನ್ನು ಒಳಗೊಂಡ ಹೋರಾಟಗಳು ನಡೆದವು. ಅಂತ ಹೋರಾಟಗಳೇ ಈ ನಾಟಕ ವಸ್ತು. ಪ್ರಸ್ತುತವು ನಾಟಕ ವರದಕ್ಷಿಣೆ ಸಮಸ್ಯೆಯನ್ನು ಕೇಂದ್ರವಾಗಿರಿಸಿಕೊಂಡು ರಚನೆಗೊಂಡಿದೆ. ಒಂದು ದೇಶ ಸುಸ್ಥಿತಿಯಲ್ಲಿರಬೇಕೆಂದರೆ, ಅಲ್ಲಿಯ ಸಮಾಜ ಸರ್ವಾಂಗೀಣ ಅಭಿವೃದ್ಧಿಯ ಕಾರಣವಾಗಿರುತ್ತದೆ. ಆದರೆ ಸಮಾಜ ಆರೋಗ್ಯಕರವಾಗಿ ಬೆಳೆಯುವುದಕ್ಕೆ ಬಿಡದಂತೆ ವರದಕ್ಷಣೆಯಂತ ಪಿಡುಗುಗಳು ಅಂಟಿಕೊಂಡಿದ್ದರೆ ಅಂತ ಸಮಾಜ ಭೀಕರವಾಗಿರುತ್ತದೆ. ವಸಾಹತುಶಾಹಿಗಳ ವಿರುದ್ಧ ಭಾರತದ ರಾಜಕೀಯ ಪ್ರಜ್ಞೆ ಎಚ್ಚರಗೊಂಡ ಕಾಲದಲ್ಲಿಯೇ ಭಾರತದ ಸಾಮಾಜಿಕ ಪ್ರಜ್ಞೆಯ ಭಾಗವಾಗಿ ತನ್ನಲ್ಲಿಯೇ ಇದ್ದ ಅಸ್ಪೃಶ್ಯತಾ ನಿವಾರಣೆ ಪುನರ್ವಿವಾಹ ವರದಕ್ಷಿಣೆಯಂತಹ ಸಾಮಾಜಿಕ ಸಮಸ್ಯೆಗಳನ್ನು ತೊಲಗಿಸಲು, ಅನೇಕ ಹೋರಾಟಗಳು ನಡೆದವು. ಅಂತ ಹೋರಾಟಗಳನ್ನು ವಸ್ತುವಾಗಿಸಿಕೊಂಡು ಹಲವಾರು ನಾಟಕಗಳು ರಚನೆಗೊಂಡವು. ಈ 'ಕ್ರಾಂತಿ' ನಾಟಕವು ವರದಕ್ಷಿಣೆಯ ಸುತ್ತ ರಚಿತಗೊಂಡಿರುವವಂತಹದ್ದು.

ಬ್ಯಾಂಕರ್ ಕನಕರಾಯ ತಮ್ಮ ಮಗ ಶೂಲಪಾಣಿಗೆ ಧರ್ಮಣ್ಣವರ ಮಗಳು ಗೌರಿಯನ್ನು ವರದಕ್ಷಿಣೆಯ ಪಡೆದು ಮದುವೆ ಮಾಡುವ ವಿಚಾರದಲ್ಲಿರುತ್ತಾರೆ. ವರದಕ್ಷಿಣೆ ಕುರಿತು ಕನಕರಾಯ ಮತ್ತು ಸುಬ್ಬ ಜೋಯಿಸರ ನಡುವೆ ನಡೆಯುವ ಮಾತುಗಳು ಹೀಗಿವೆ.

ಕನಕರಾಯ : ಅಲ್ಲ ಸುಬ್ಬ ಜೋಯಿಸರೇ ತಕ್ಕ ವರದಕ್ಷಿಣೆಯನ್ನು ಕೊಳ್ಳದೆ ನಮ್ಮಂತವರ ಮಗನ ಮದುವೆ ಮಾಡಬಹುದೆ? ಇನ್ನು ಬಿ.ಎ ಪಾಸಾದಾಗ್ಗೆ ನಾಲ್ಕು ಸಾವಿರ

ರೂಪಾಯಿಗಳನ್ನು ಕೇಳಿದ್ದೆವು. ಇಗ್ಗೆ ಎಂ ಎ ಪಾಸಾಗಿದ್ದಾನೆ. ಎಂ ಎ ಗೆ ಕನಿಷ್ಟ ಐದು ಸಾವಿರ ಹೆಚ್ಚೆ?

ಸುಬ್ಬಾ ಜೋಯಿಸ : ಅಯ್ಯೋ ಉಂಟೆ? ಇದೋ ಶೂಲಪಾಣಿ, ಈ ನಮ್ಮ ಪ್ರಾಂತ್ಯದಲ್ಲಿ ಕನಕರಾಯರಿಗಿಂತ ದೊಡ್ಡವರ‍್ಯಾರು? ಅವರು ಮಾಡುವದೆಲ್ಲ ಏಕ ಮಾತ್ರ ಮಗನಾದ ನಿನ್ನ ಹಿತಕ್ಕಲ್ಲವೆ? ಮತ್ತೇನಂದ್ರೆ ಅದೇನೋ ಒಂದು ದೊಡ್ಡ ಪರೀಕ್ಷೆ ಬೇರೆ ಪಾಸ್ ಮಾಡಿರುವಿರಂತೆ.

ಶೂಲಪಾಣಿ : ಎಂ ಎ ಪಾಸು ಮಾಡಿರುವದು ವಧುಗಳ ಮಾತೃಪಿತೃಗಳ ಮನೆಗೆ ಡಾಕೆ ಹೊಡೆಯುವದಕ್ಕಲ್ಲ.

ಕನಕರಾಯ : ಸುಮ್ಮನಿರಬೇಕೋ ಈ ವಿಚಾರದಲ್ಲಿ ನೀನು ತಲೆಯಾಕಲಾಗದು. ೫ ಸಾವಿರಕ್ಕೆ ೧೦ ಸಾವಿರ ವರದಕ್ಷಿಣೆ ಕೊಟ್ಟು, ಮಗಳನ್ನು ಕೊಡತಕ್ಕವರು ಅನೇಕ ಜನಗಳು ಬಿದ್ದಿದ್ದಾರೆ. ಏಕೆ ಸುಬ್ಬಾ ಜೋಯ್ಸರೇ?

ಸುಬ್ಬ : ಅಂದರೆ ಆ ನಮ್ಮ ಪೆನ್ಸನದಾರ್ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹೇಮಣ್ಣನವರು ಇಂದೇ ಮತ್ತೆ, ನಾಳೆ ಸಹ ಅಲ್ಲ ಇಂದೇ ೫ ಸಾವಿರವೇಕೆ? ೬ಸಾವಿರ ವರದಕ್ಷಿಣೆ ಕೊಡುವುದಲ್ಲದೆ, ಮೇಲೆ ಅಳಿಯನಿಗೆ ಸಂತೋಷವಾಗುವಂತೆ ವರೋಪಚಾರಗಳನ್ನು ಕೊಡಲು ಸಹ ಸಿದ್ದರಾಗಿದ್ದಾರೆ. (ಪುಟ-೪೪೩)

ಕನಕರಾಯರ ವರದಕ್ಷಿಣೆಯ ರೋಗದಿಂದ ಮದುವೆ ಮುರಿದು ಬೀಳುತ್ತದೆ. ಇತ್ತ ಗೌರಿ ರಾಷ್ಟ್ರ ಸೇವೆಗಾಗಿ ಹೋಗುತ್ತಾಳೆ. ಸುಬ್ಬಾ ಭಟ್ಟನ ಸಮಾಜಘಾತುಕ ಕೆಲಸದಿಂದ ಶೀಲಾಪಾಣಿ ಮನೆಬಿಟ್ಟು ಹೋಗುತ್ತಾನೆ. ವರದಕ್ಷಿಣೆ ಸಮಸ್ಯೆಯಿಂದ ವಿವಾಹ ಮುರಿದು ಬಿದ್ದರೂ ಸಮಾನ ಮನಸ್ಕರರಾಗಿದ್ದ ಗೌರಿ ಮತ್ತು ಶೂಲಪಾಣಿ ಲಗ್ನ ವಿವಾಹವಾಗುವ ಮತ್ತು ರಾಷ್ಟ್ರ ಸೇವೆ ಮಾಡುವ ನಿರ್ಧಾರ ಮಾಡುತ್ತಾರೆ. ಅದನ್ನ ಕೇಳಿ ಸಂತೋಷವಾದ ಸುಬ್ಬಭಟ್ಟನ ಪತ್ನಿ ಸರೋಜ ಅದು ಸಮಾಜದ ಭಾಗ್ಯೋದಯವೆಂದು ಹೇಳುತ್ತಾಳೆ. ಜೈನಾ ಸುಶ್ರೂಷ ಪಥಕದೊಂದಿಗೆ ಹೊರಟ ಅವರ ಭಾವನೆಯನ್ನು ಪ್ರಶಂಶಿಸುತ್ತಾಳೆ. ಚೀನಾ ಮತ್ತು ಜಪಾನಿಯರ ಬಾಂಬ್ ದಾಳಿಯಲ್ಲಿ ಜೀವನದ ಹಂಗು ತೊರೆದು ಗಾಯಾಳುಗಳಿಗೆ ಶೂಲಪಾಣಿ ಚಿಕತ್ಸೆ ನೀಡುತ್ತಾನೆ. ಇವರ ಸಾಹಸವನ್ನು ಕೊಂಡಾಡಿ ರಾಷ್ಟ್ರಪತಿಗಳು ಆ ಪ್ರೇಮಿಗಳ ಮದುವೆ ಮಾಡಿಸುತ್ತಾರೆ. ಮೊದಲು ವರದಕ್ಷಿಣೆ ವಿಚಾರವಾಗಿ ಮದುವೆಯನ್ನು ವಿರೋಧಿಸಿದ ಅವರ ತಂದೆ ತಾಯಿಗಳು ಇವರ ಪ್ರೇಮ ವಿವಾಹವನ್ನು ಒಪ್ಪಿಕೊಳ್ಳುತ್ತಾರೆ.

ಸ್ವಾತಂತ್ರ್ಯ ಚಳುವಳಿಯ ಉಚ್ಛ್ರಾಯ ಕಾಲದಲ್ಲಿ ರಚನೆಗೊಂಡ ಈ ನಾಟಕ ಸಾಮಾಜಿಕ ಸಮಸ್ಯೆಗೆ ಕೈಗನ್ನಡಿಯಂತಿದೆ. ಜ್ವಲಂತ ಸಮಸ್ಯೆಯಾದ ವರದಕ್ಷಿಣೆಯ ಪಿಡುಗನ್ನು ಕುರಿತು

ರಚಿತವಾದ ಈ ನಾಟಕ ಸಾಧ್ಯವಾದಷ್ಟು ಸಮಸ್ಯೆಗೆ ಸ್ಪಂದಿಸಿದೆ. ಇಲ್ಲಿ ಸಾಮಾಜಿಕ ಸಮಸ್ಯೆಯ ಅರಿವುಳ್ಳ ಗೌರಿ ಮತ್ತು ಶೂಲಪಾಣಿಯು ವರದಕ್ಷಿಣೆ ಪದ್ಧತಿಯ ಪ್ರತಿಭಟನೆಕಾರರ ರೂಪಕವಾಗಿದ್ದಾರೆ.

ಟೊಳ್ಳುಗಟ್ಟಿ

ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸ್ವಾತಂತ್ರ್ಯ ಚಳುವಳಿಯ ಎರಡು ಕಣ್ಣುಗಳೆಂದೆ ಹೇಳಬಹುದು. ಈ ನಿಟ್ಟಿನಲ್ಲಿ ವಿಡಂಬನಾತ್ಮಕವಾಗಿ ಬರವಣಿಗೆ ಮಾಡಿದವರಲ್ಲಿ ಟಿ.ಪಿ. ಕೈಲಾಸಂ ಪ್ರಮುಖರು. ಕೈಲಾಸಂ ಅವರ ಈ ನಾಟಕ ಸಾಮಾಜಿಕ ವಾಸ್ತವವನ್ನು ನಿರೂಪಿಸುತ್ತದೆ. ಕನ್ನಡದಲ್ಲಿ ಮೊದಲು ಕಾಣಿಸಿಕೊಂಡ ಕರ್ಕಿ ವೆಂಕಟರಮಣಶಾಸ್ತ್ರೀಯವರ ಇಗ್ಗಪ್ಪಹೆಗಡೆಯ ವಿವಾಹ ಪ್ರಹಸನ ನಾಟಕ ಮೊದಲ ಸಾಮಾಜಿಕದಂತೆ ಕೈಲಾಸಂರ ಈ ನಾಟಕವೂ ಮುಖ್ಯವಾದದ್ದೆ. ಮೈಸೂರು ಪ್ರಾಂತ್ಯವು ಬ್ರಿಟಿಶರ ನೇರವಾದ ಆಡಳಿತಕ್ಕೆ ಕೆಲವು ಕಾಲ ಒಳಪಟ್ಟಿದ್ದರಿಂದಲೂ ಮತ್ತು ಮೈಸೂರು ಅರಸರು ಆಂಗ್ಲ ಅಧಿಕಾರಿಗಳನ್ನು ಪ್ರತಿನಿಧಿಗಳಾಗಿ ನೇಮಿಸಿಕೊಂಡು ಆಡಳಿತ ನೆಡಿಸಿಕೊಂಡಿದ್ದರಿಂದಲೂ ಕಾಲಕ್ರಮೇಣ ಆ ಪ್ರದೇಶದಲ್ಲಿ ಮಧ್ಯಮವರ್ಗ ಬೆಳೆಯತೊಡಗಿತು. ಉತ್ತರ ಕರ್ನಾಟಕದಲ್ಲಿ ಇಂಥ ಪರಿಸ್ಥಿತಿ ಅಷ್ಟಾಗಿ ಕಾಣಿಸಿಕೊಳ್ಳಲಿಲ್ಲ. ಆಗ ಈ ಮಧ್ಯಮವರ್ಗದ ಜನಜೀವನದ ಮೇಲೆ ಆಂಗ್ಲ ಶಿಕ್ಷಣದ ಪ್ರಭಾವ ಬೀರಿತು. ಇದರಿಂದಾಗಿ ಕೆಲವು ಸಮಸ್ಯೆಗಳು ಕೈಲಾಸಂ ಅವರ ನಾಟಕದ ವಸ್ತುಗಳಾದವು. ಹಿರಣ್ಣಯ್ಯ ಮತ್ತು ಭಾಗೀರಥಮ್ಮರಿಗೆ ಪುಟ್ಟು ಮತ್ತು ಮಾಧು ಇಬ್ಬರು ಮಕ್ಕಳು. ಇವರಿಬ್ಬರಿದು ವಿರುದ್ಧ ದಿಕ್ಕಿನಲ್ಲಿ ಆಲೋಚಿಸುವ ವ್ಯಕ್ತಿತ್ವಗಳು. ವಿಧುವೆಯಾಗಿದ್ದ ನಾಗಮ್ಮ ಹಿರಣ್ಣಯ್ಯನ ತಂಗಿ. ನಶಿಸಿ ಹೋಗುತ್ತಿರುವ ಬ್ರಾಹ್ಮಣ ಸಂಸ್ಕೃತಿಯ ಕೊನೆಯ ಕೊಂಡಿಯಂತೆ ಇವುಗಳನ್ನು ನಾಟಕದಲ್ಲಿ ಚಿತ್ರಿಸಲಾಗಿದೆ. ಆಧುನಿಕ ಶಿಕ್ಷಣದ ಪ್ರಭಾವದಿಂದ ಮೊದಲಿನ ನಾಗರಿಕತೆಯ ಸಂಪ್ರದಾಯಗಳು ಕ್ರಮೇಣ ಕುಸಿಯಲಾರಂಭಿಸಿದವು. ಮಹಿಳೆಯು ಸಾಬೂನು ಹಚ್ಚುವುದು, ಜಡೆ ಬಿಡುವುದು, ಬಳೆ, ಕುಂಕುಮ ಧರಿಸದೇ ಇರುವುದು ನಾಗಮ್ಮಳಿಗೆ ಅಧರ್ಮ ಮತ್ತು ಅನೈತಿಕವಾಗಿ ಕಾಣುತ್ತವೆ. ಅಧುನಿಕತೆಯು ಅವಳ ಪಾಲಿಗೆ ರಾಕ್ಷಸಿ ಸ್ವರೂಪದಂತೆ ಕಂಡುಬರುತ್ತದೆ.

ಮಾಧು ಮತ್ತು ಪುಟ್ಟುವನ್ನು ದೇಶಿ, ವಿದೇಶಿ ಭಾವನೆಯ ಪಾತ್ರಗಳಾಗಿ ನಾಟಕದಲ್ಲಿ ರಚಿಸಲಾಗಿದೆ. ಅಧುನಿಕ ಶಿಕ್ಷಣದ ನೇರ ಪ್ರಭಾವದ ವ್ಯತಿರಿಕ್ತ ಪರಿಣಾಮದ ಮೂರ್ತರೂಪವೆಂಬಂತೆ ಪುಟ್ಟು ಇಲ್ಲಿ ಚಿತ್ರಿತನಾಗಿದ್ದಾನೆ. ಹಾಗೆಯೇ ಹಿರಣ್ಣಯ್ಯ ಆಧುನಿಕ ಶಿಕ್ಷಣದ ಪ್ರಚಾರಕನಂತೆ ಕಾಣುತ್ತಾನೆ. ಮತ್ತು ಅಧುನಿಕ ಶಿಕ್ಷಣದ ವಿಶ್ವಾಸ ಮತ್ತು ಪೂರ್ಣ ನಂಬಿಕೆ ಉಳ್ಳವನಾಗಿದ್ದಾನೆ.

ಇಲ್ಲಿ ಇಂಗ್ಲಿಶ್ ಶಿಕ್ಷಣದ ಟೊಳ್ಳುತನವನ್ನು ತೋರಿಸಲು ಕೈಲಾಸಂ ಅವರು ನಾಟಕದಲ್ಲಿ ಒಂದು ಸನ್ನಿವೇಶವನ್ನು ಈ ರೀತಿ ನಿರ್ಮಿಸಿದ್ದಾರೆ. ಒಂದು ದಿನ ರಾತ್ರಿ ಬೆಂಕಿ ಬೀಳುತ್ತದೆ. ಮನಗೆ ಬೆಂಕಿಬಿದಿದ್ದು ಮೊದಲು ತಿಳಿಯುವುದು ಪುಟ್ಟುವಿಗೆ. ಆದರೆ ಅವನು ಯಾರಿಗೂ ಹೇಳದೇ ಕೇಳದೇ ತನ್ನ ಪುಸ್ತಕಗಳನ್ನು ಮಾತ್ರ ತೆಗೆದುಕೊಂಡು ಬರುತ್ತಾನೆ. ನಂತರ ಚೀರಿ ಮಲಗಿದವರನ್ನೆಲ್ಲ ಎಚ್ಚರಿಸುತ್ತಾನೆ. ಮಾಧು ಓಡಿಹೋಗಿ ತಾಯಿ, ಮಗು ಹಾಗೂ ತಂದೆಯನ್ನು ಕರೆದುಕೊಂಡು ಬರುತ್ತಾನೆ. ಅಂದರೆ ಜನರೆಲ್ಲ ಮಾಧುವನ್ನು ರಕ್ಷಿಸಿ ಹೊರಗೆ ತರುತ್ತಾರೆ. ಆಗ ಪುಟ್ಟು ಮನೆಯ ಹೊರಗಡೆ ಇರುವುದನ್ನು ನೋಡಿದ ರಾಮಶಾಸ್ತ್ರೀಯವರು ಹಿರಣ್ಣಯ್ಯನಿಗೆ ಟೊಳ್ಳು ಟೊಳ್ಳೆ ಗಟ್ಟಿ ಗಟ್ಟಿಯೇ ಎಂದು ಹೇಳುವ ಮೂಲಕ ಇಂಗ್ಲಿಶ್ ಶಿಕ್ಷಣದ ದುಷ್ಪರಿಣಾಮವನ್ನು ಗುರುತಿಸುತ್ತಾರೆ. ಆದರೆ ಬ್ರಿಟಿಶ್ ವ್ಯವಸ್ಥೆಯನ್ನು ಎದುರಿಸುವ ದೊಡ್ಡಶಕ್ತಿಯನ್ನು ಅದೇ ಇಂಗ್ಲಿಶ್ ಶಿಕ್ಷಣ ನೀಡಿದೆ ಎಂಬುದು ಅಷ್ಟೇ ನಿಜವಾದದ್ದು.

ಬೆವರಿಗೆ ಜಯವಾಗಲಿ

'ಬೆವರಿಗೆ ಜಯವಾಗಲಿ' ಎಂಬ ಕಾರಂತರ ಈ ನಾಟಕವು ದುಡಿಯುವ ವರ್ಗವನ್ನು ಕುರಿತು ರಚಿತಗೊಂಡಿರುವಂತಹಥದ್ದು. ಯುರೋಪಿನಾದ್ಯಂತ ಕೈಗಾರಿಕರಣದಿಂದ ಉಗಮವಾದ 'ಮಾಲಿಕ' ಮತ್ತು 'ಕಾರ್ಮಿಕ' ಎಂಬ ಎರಡು ವರ್ಗಗಳು ಕ್ರಮೇಣ ವಸಾಹತು ರಾಷ್ಟ್ರಗಳಿಗೆ ವಿಸ್ತರಿಸಿದವು. ಬ್ರಿಟಿಶರು ವಸಾಹತುಶಾಹಿ ರಾಷ್ಟ್ರಗಳನ್ನು ಮಾರುಕಟ್ಟೆಯ ಕೇಂದ್ರವನ್ನಾಗಿ ಮಾರ್ಪಡಿಸಿದ್ದರಿಂದ ಅಂತ ದೇಶದಲ್ಲಿ ಬಹುಸಂಖ್ಯಾತರಾಗಿ ದುಡಿಯುವ ವರ್ಗ ನಿರ್ಮಾಣಗೊಂಡಿತು. ಈ ಎರಡು ವರ್ಗ ಭೇದಗಳೇ ಈ ನಾಟಕದ ಕೇಂದ್ರವಾಗಿವೆ. ಕೂಲಿಯವರು, ಸುಖರಾಯ ಮತ್ತು ದ್ವಾರಪಾಲಕ, ಕುಂಟ, ಕುರುಡಿ ಪಾತ್ರಗಳ ಮೂಲಕ 'ದುಡಿಮೆ' ಮತ್ತು 'ದುಡ್ಡು' ಸಮಾಜದಲ್ಲಿ ಉಂಟು ಮಾಡಿದ ಪರಿಣಾಮ ಮತ್ತು ಮಾಲೀಕ ವರ್ಗ ದುಡಿಯುವ ವರ್ಗವನ್ನು ಗ್ರಹಿಸುವ ವಸ್ತುಗಳೇ ಈ ನಾಟಕದ ಹಂದರ.

ಲೋಕವನ್ನು ಅರಿತುಕೊಳ್ಳುವ ಸೂಕ್ಷ್ಮತೆಯನ್ನು ದನ ಕಾಯುವ, ಕುರುಡಿಯ ಪಾತ್ರದ ಮೂಲಕ ತಿಳಿಸುತ್ತಾರೆ. ಕಣ್ಣು ಕಾಣದಿದ್ದರೂ "ನಿತ್ಯವೂ ಈ ಹೊತ್ತಿಗೆ ಈ ಜನರ ಕಾಲ ಸಪ್ಪಳವೂ ಕೇಳಿಸುತ್ತದೆ. ಅದನ್ನು ಕೇಳಿ ನನ್ನೊಡಲು ಕನಿಕರದಿಂದ ಮರುಗುತ್ತದೆ. ಅದು ಉತ್ಸಾಹಿಗಳ ಲಘು ನಡೆಯಲ್ಲ, ವಿಲಾಸಿಗಳ ವೈಯಾರದ ಹೆಜ್ಜೆಯಲ್ಲ, ಜೀವನವನ್ನೇ ತಿಳಿದುಕೊಂಡು ಹೋಗುವವರ ನಡಿಗೆಯದು. ಅವರ ನಡಿಗೆಯಲ್ಲಿ ಉತ್ಸಾಹವಿಲ್ಲ, ಲಘುತ್ವವಿಲ್ಲ, ವೈಯಾರವಿಲ್ಲ, ಜೀವವಿಲ್ಲ. ಬೆಳಗ್ಗೆ ಪಾಡದ ಸಂಜೆ ಬರುವಾಗಲಂತೂ ಆ ನಡಿಗೆಯ ಭಾರ ಹೇಳತೀರದು. ದಿನವೆಲ್ಲಾ ಶ್ರಮಿಸಿ ಬರುವ ಈ ಜೀವತ್ವಗಳಿಗೆ ಆತಂತು ನಡೆಯಲು ಕಾಲೇ ಬಾರದು ಪಾಪದ ಜೀವಗಳು! ಏನು ದುಃಖದಲ್ಲಿ ಮುಳುಗಿರುವರೋ ಅವಳ ಮನದಾಳವನ್ನು ತಿಳಿಯಲು ಆಸೆಯಾಗುತ್ತದೆ. ಆದರೆ ಕೇಳುವ ಸಾಹಸವಿಲ್ಲ. ನೊಂದು–

ಬೆಂದು ಮೊದಲೆ ಬೇಸತ್ತು ಅವರು ನನ್ನ ಮಾತಿನ ಭಾರ ಹೊರಬಲ್ಲರೆ?"(ಮಾಲಿನಿ ಮಲ್ಯ, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ,(ಸಂ)೨೪ ಬೆವರಿಗೆ ಜಯವಾಗಲಿ, ಪುಟ-೧) ಹೀಗೆ ನೊಂದವರ ನೋವನ್ನು ತನ್ನ ಮನಸ್ಸಿನಲ್ಲಿಯೇ ಅರ್ಥ ಮಾಡಿಕೊಳ್ಳುವ ಶಕ್ತಿಯನ್ನು ಹೊಂದಿರುತ್ತಾಳೆ. ಆದರೆ ಅವಳ ಗಾನದ ಸವಿಯನ್ನು ಸವಿಯುವ ವ್ಯವಧಾನ ಅವರಿಗೆ (ದುಡಿಯುವ ಜನರಿಗೆ) ಇರುವುದಿಲ್ಲ. ಕಾರಣ ಈ ಜನರೆಲ್ಲ ಕಾರ್ಖಾನೆಯಲ್ಲಿ ದುಡಿಯುವ ಆಳುಗಳಾಗಿರುತ್ತಾರೆ. ಇವಳ ಹಾಡನ್ನು ಕೇಳುತ್ತಾ ಕುಳಿತರೆ ಅವರಿಗೆ ಸಂಬಳವಿಲ್ಲ. ಆದರೂ ಒಂದು ದಿನ ಆ ಕುರುಡಿಯು ಅವರನ್ನು ತನ್ನ ಕೊಳಲ ಕರೆಯನ್ನು ಕೇಳಿ ತಮ್ಮ ದುಃಖವನ್ನು ಮರೆಯುವಂತೆ ಆಗ್ರಹಿಸುತ್ತಾಳೆ. ನಂತರ ಅವಳೊಂದಿಗೆ ಕೆಲಸಮಯ ಕಳೆದ, ಜನರು ಅವಳ ಜೀವನದ ಬಗ್ಗೆ ಕೇಳುತ್ತಾರೆ. ನಂತರ ಅವಳ ಜೀವನದ ಈ ಸ್ಥಿತಿಗೆ ಹಣದ ವ್ಯಾಮೋಹವೇ ಕಾರಣ ಎಂಬುದು ಈ ಕಾರ್ಮಿಕರಿಗೆ ಗೊತ್ತಾಗುತ್ತದೆ. ಕೂಲಿಯವರೊಂದಿಗೆ ತನ್ನ ಜೀವನದ ಕಥೆಯನ್ನು ಹಂಚಿಕೊಂಡ ಕುರುಡಿಯು, ತಾವೆಲ್ಲರು ಹೊಲದಲ್ಲಿ ದುಡಿದು ಸುಖಿಯಾಗಿಬಹುದಲ್ಲ ಎಂದಾಗ ಅಲ್ಲಿನ ಸಂಭಾಷಣೆ ಹೀಗಿದೆ.

"ಒಂದನೇಯವ : ಹೊಲವೇ ನಮಗೆಲ್ಲ ಹೊಲ! ಇದ್ದುಬಿದ್ದುದವನ್ನೆಲ್ಲ ಮಾರಿ ನಗರವಾಸಿಗಳಿಗಾಗಿ ನಮ್ಮ ಧನಿರಾಯನ ಸೇವೆಮಾಡಿ ಕಾಸಿಲ್ಲದ ನರಕಲ್ಲುಗಳಾಗಿಹೆವು. ಇಲ್ಲಿಂದೇಳಲು ಗತಿಯಿಲ್ಲ. ದುಡಿಸಿಕೊಂಬವರಾರು? ಕಾರ್ಯಕ್ಕೆ ಬರಲು ಹಣ, ಹಣವೆಂಬೊಂದೇ ನುಡಿ ನಿಜವೆನಿಸುವುದು.

ಕುರುಡಿ : ಅಯ್ಯೋ ಮರುಳುಗಳೇ! ತಲೆಯೊಳಗೆ ಮಿದುಳಿದೆ; ಮೈಯೊಳಗೆ ಮಾಂಸವಿದೆ, ಇವಲ್ಲವೆ ಬಾಳ್ವೆ ಬದುಕುಗಳು?

ಒಂದನೆಯವ : ನಿಜದೇವಿ! ಹಣದ ಬಲೆಯೊಳಗೊಮ್ಮೆ ಸಿಲುಕಲು ಬಿಡಿಸಬರುವಂತಿಲ್ಲ. ಗಾಣಕ್ಕೆ ಕೈಕೊಟ್ಟಂತೆ ಅದು.

ಕುರುಡಿ : ಗಾಣ ತಿರುಗಿಸುವವರೇ ನೀವು ಅದನ್ನು ತಿರುಗಿಸದೇ ನಿಲ್ಲಿಸಿದರೆ ಕೈಯಲ್ಲಿ ಹೋಗುವುದಂತೆ?"

ವಸಾಹತುಶಾಹಿಗಳ ಮಾರುಕಟ್ಟೆಯ ದಾಹ ಉಲ್ಬಣಗೊಂಡಿದ್ದರಿಂದ ಹಲವಾರು ಊರುಗಳು ಕೈಗಾರಿಕರಣಗೊಂಡವು. ಅದಕ್ಕಾಗಿ ಕೃಷಿ ಭೂಮಿಯ ಪ್ರದೇಶಗಳು ಕೈಗಾರಿಕರಣಗೊಂಡಿದ್ದರಿಂದ ಆದ ಅನಾಹುತಗಳನ್ನು ಇಲ್ಲಿ ಗಮನಿಸಬಹುದು. ಹಾಗೆ ಕೈಗಾರಿಕರಣಗಳಿಂದ ಆಗುವ ಕ್ರೌರ್ಯವನ್ನು ನೋಡಬಹುದು. ೧೯೩೦ರಲ್ಲಿ ರಚನೆಯಾದ 'ಬೆವರಿಗೆ ಜಯವಾಗಲಿ' ಎಂಬ ನಾಟಕಕ್ಕೆ ರಷ್ಯಾಕ್ರಾಂತಿಯ ಪ್ರಭಾವ ಬೀರಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಮಾಕ್ಸಿಂ ಗಾರ್ಕಿಯ 'ತಾಯಿ' ಕಾದಂಬರಿಯನ್ನು ಹೋಲುವಂತೆ ಪಾತ್ರ ಇಲ್ಲಿ ಕುರುಡಿಯದು.

ಹೀಗೆ ಆಧುನಿಕ ಕಾಲದಲ್ಲಿ ರೂಪಗೊಂಡ ಕೈಗಾರಿಕೆಗಳು, ಕಾರ್ಮಿಕ ಎಂಬ ದೊಡ್ಡ ಸಮುದಾಯವನ್ನು ಸೃಷ್ಟಿಸಿದವು.

ಪ್ರಸ್ತುತ ಅಧ್ಯಯನದಲ್ಲಿ ಈ ನಾಟಕವನ್ನು ಏಕೆ ತೆಗೆದುಕೊಳ್ಳಲಾಗಿದೆ ಎಂದರೆ, ಭಾರತದ ಸ್ವಾತಂತ್ರ್ಯ ಚಳುವಳಿ ಸಂಕೀರ್ಣದಿಂದ ಕೂಡಿರುವಂತಹದ್ದು. ಅದು ತನ್ನೊಳಗೆ ಅರಣ್ಯವಾಸಿಗಳ, ರೈತರ, ಕಾರ್ಮಿಕರ, ಅಸ್ಪೃಶ್ಯತೆ ನಿವಾರಣೆಯಂತ ಅಂಶಗಳನ್ನು ಒಳಗೊಂಡಿದೆ. ಭಾರತ ಬ್ರಿಟಿಶರಿಂದ ಮಾತ್ರ ಬಿಡುಗಡೆಯನ್ನು ಬಯಸಿಲ್ಲ ಎಂಬುದನ್ನು ಇಂತ ನಾಟಕಗಳು ನಮ್ಮನ್ನು ಮತ್ತೆ ಮತ್ತೆ ಎಚ್ಚರಿಸುತ್ತವೆ.

ರಕ್ತರಾತ್ರಿ

ಕಂದಗಲ್ಲ ಹನುಮಂತರಾಯರ ಈ ನಾಟಕವು ಭಾರತದ ಸ್ವಾತಂತ್ರ್ಯ ಚಳುವಳಿಯ ರಾಜಕೀಯ ಆಯಾಮವನ್ನು ಕಟ್ಟಿಕೊಡುತ್ತದೆ. ಜೊತೆಗೆ ಆ ಭಾಗವಾಗಿ ಜಾತಿ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟಗಳನ್ನು ಪೌರಾಣಿಕ ಕತೆಗಳ ಚೌಕಟ್ಟಿನಲ್ಲಿಯೇ ಸಮಕಾಲೀನಗೊಳಿಸಿದೆ. ಬ್ರಿಟಿಶರಿಂದ ಪಡೆದ ರಾಜಕೀಯ ಸ್ವಾತಂತ್ರ್ಯವು ಮುಂದೆ ಭಾರತಲ್ಲಿ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಬಹುದು, ಎಂಬ ಪ್ರಜ್ಞೆಯುಳ್ಳ ನಾಟಕಕಾರರು ಜಾತಿ ಸಮಸ್ಯೆಯನ್ನು ರಾಜಕೀಯ ಸ್ವಾತಂತ್ರ್ಯದ ಜೊತೆ ಜೊತೆಗೆನೆ ಪಡೆಯಲು ನಡೆದ ಹೋರಾಟಗಳನ್ನು ಈ ನಾಟಕದ ಮೂಲಕ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಉದಾಹರಣೆಗೆ. ಅಶ್ವತ್ಥಾಮ ಶಕುನಿಗೆ ಹೇಳುವ ಮಾತು.

"ಶಕುನಿ ಮಾವನವರೆ ಕಾಭಿಮಾನದ ಪಡಿಯನ್ನೇಕೆ ಬಗೆಯುತ್ತಿರುವಿರಿ? ಸತ್ಯಾನ್ವೇಷಣೆ ಗುರುಶೋಧನೆಗಳಿಂದ ಕುರುಡು ಕುಲಾಭಿಮಾನ ಕ್ಷಯರೋಗಿಯ ಆಯುರ್ಮಾನ । ಓ ಕುಟೀಲ ನೀತಿ ಪಂಡಿತನೆ ! ಸ್ವಾರ್ಥಿಗಳು ಹುಟ್ಟಿದ ಕುಲಾಭಿಮಾನದ ಹೊಟ್ಟೆ, ಬೆಳೆದು ಬೆಳೆದು ದೊಳ್ಳಾಗಿ ಶಬ್ದ ಕಡೆಯಲಿ ಬಿರಿದೊಡೆದು ಸಿಡಿದು ಬೀಳ್ವವು ದ್ವೇಷಾಗ್ನಿಯ ಕಿಲಾಡಿಗಳು, ಆ ಕಿಡಿಗಳೆಲ್ಲ ರುದ್ರಜ್ವಾಲೆಗಳಾಗಿ ಹೊತ್ತುವವು ನಾಡಿನ ತುಂಬೆಲ್ಲ ಆಗ ನಾಡ ತಾಯಿಯ ಒಂದು ಕಣ್ಣಲ್ಲಿ ನೀರು ಮತ್ತೊಂದು ಕಣ್ಣಲ್ಲಿ ನೆತ್ತರು."(ಶ್ರೀನಿವಾಸರಾಜು ಚಿ. ದಾಮೋದರ ಶೆಟ್ಟಿ ನಾ.(ಸಂ) ಸುವರ್ಣ ನಾಟಕ (ಪೂರ್ಣವಧಿ) ಭಾಗ–೨, ಪುಟ–೩೪)

ಈ ಮೂಲಕ ಅಶ್ವತ್ಥಾಮನು ಭಾರತದಲ್ಲಿ ಆರಂಭವಾದ ಜಾತಿಯ ಕುರಿತು ಹೇಳುತ್ತಾನೆ. ಸ್ವಾತಂತ್ರ್ಯ ಚಳುವಳಿಯ ರಾಜಕೀಯ ಉದ್ದೇಶದ ಜೊತೆಗೆ, ಸಾಮಾಜಿಕ ಸಮಸ್ಯೆಯಾದ ಜಾತಿಯನ್ನು ನಿರಾಕರಿಸದಿದ್ದರೆ, ಭಾರತದ ಸ್ವಾತಂತ್ರ್ಯದ ಉದ್ದೇಶ ಈಡೇರಲು ಸಾಧ್ಯವೇ? ಹಾಗೆ ಜಾತಿ ವಿನಾಶಕ್ಕಾಗಿ ಭಾರತ ಮತ್ತೊಮ್ಮೆ ಇಂತ ಹೋರಾಟಕ್ಕೆ ಇಳಿಯುವ ಸಂದರ್ಭ ಬರಬಹುದು ಎಂಬುದನ್ನು ಸೂಚಿಸುತ್ತದೆ. ಸ್ವಾತಂತ್ರ್ಯ ನಂತರ ಈ

ವಿಷಯ ಕುರಿತು ಸಾಕಷ್ಟು ಸಾಹಿತ್ಯ ರಚನೆಗೊಂಡಿರುವುದನ್ನು ಗಮನಿಸಬಹುದು. ಇಂದಿಗೂ ಭಾರತಕ್ಕೆ ಜಾತಿಯೆಂಬುದು ಒಂದು ದೊಡ್ಡ ಸಮಸ್ಯೆ ಮತ್ತು ಸವಾಲಾಗಿಯೇ ಉಳಿದಿದೆ.

ಇದೇ ನಾಟಕದ ಇನ್ನೊಂದು ಸನ್ನಿವೇಶದಲ್ಲಿ ಅಶ್ವತ್ಥಾಮನು ಜಾತಿಯ ಗುರುತುಗಳನ್ನು ಕಿತ್ತೊಗೆದು ಮನುಷ್ಯತ್ವದ ಬಗ್ಗೆ ಮಾತನಾಡುತ್ತಾನೆ.

"ನಿನ್ನ ಗೆಳೆಯ ರಾಧೆಯನಿಗೆ ನಿನ್ನ ಕುಲದೀಕ್ಷೆ ಕೊಟ್ಟವನು ಬ್ರಾಹ್ಮಣ ಕುಲೋತ್ಪನ್ನ ಭಾರ್ಗವ ರಾಮ ! ಆದರೆ ರಾಜಾ ಕುಲಕುಲ ಎಂದು ತಮ್ಮೊಳಗೆ ಬಡಿದಾಡುತ್ತ ಭಾರತೀಯರು ಕಟ್ಟಕಡೆಗೆ ಸರ್ವನಾಶಕ್ಕೆ ತೆರೆದಿಟ್ಟು ಬಿಡುವರು ಭಾರತದ ಬಾಗಿಲವನ್ನು . ಇಂದು ನನ್ನ ಕೊರಳಲ್ಲಿ ದಾರವಿರುವಂತೆ (ಜನಿವಾರ ಹಿಡಿದು) ನಿಮ್ಮೆಲ್ಲರ ಕೊರಳಲ್ಲಿಯೂ ದಾರದಾರದ ಬಗೆ ಬೇರೆಯಾದರೂ ಹತ್ತಿರ ಎಂಬುದೊಂದೇ ವಸ್ತು ! ಇಂದು ಈ ದಾರವೇ ದೂರ ಆ ಅಶ್ವತ್ಥಾಮನು ಯಾವ ಬಗೆಯ ದಾರವನ್ನು ಮನ್ನಿಸುವುದಿಲ್ಲ"(ಜನಿವಾರ ಹರಿದು ಹಾಕುವನು).(ಅದೇ, ಪು.೩೪)

ಭಾರತ ಪಾಶ್ಚಾತ್ಯ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿದ್ದರೂ, ಎರಡು ಮಹಾಯುದ್ಧಗಳಿಂದ ಜಗತ್ತು, ಧರ್ಮ, ದೇವರ ಅಸ್ತಿತ್ವದ ಬಗ್ಗೆ ಅನುಮಾನಿಸುವ ಸಂದರ್ಭ ನಿರ್ಮಾಣಗೊಂಡಿದ್ದರೂ, ಭಾರತದಲ್ಲಿ ಮಾತ್ರ ಜಾತಿಯ ಕ್ರೌರ್ಯ ಉಲ್ಬಣಗೊಳ್ಳುತ್ತಲೆ ಇತ್ತು. ಉದಾಹರಣೆಗೆ ಬಂಗಾಳದಲ್ಲಿ ಹೆಸರಾಂತನಾಟಕಕಾರರಾದ ಡಿ.ಎಲ್.ರಾಯ್ ಅವರು ನಾಟಕದ ಆಳವಾದ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ಹೋಗಿ ಮರಳಿ ಬಂದಾಗ ಅವರನ್ನು ಸಮುದ್ರ ಪ್ರಯಾಣ ಮಾಡಿ ಅಪವಿತ್ರರಾಗಿದ್ದಿರಿ ಎಂದು ಸಮಾಜದ ಕಟ್ಟಳೆಗಳಿಗೆ ಗುರಿ ಮಾಡಲಾಯಿತು. ನಂತರ ಡಿ. ಎಲ್. ರಾಯ್ ಅವರು ಮೂಢ ನಂಬಿಕೆಯ ಕೂಪದಂತಾಗಿದ್ದ ಹಿಂದೂ ಸಂಪ್ರದಾಯವನ್ನು ಖಂಡಿಸುವಂತ 'ಕಲ್ಕಿ ಅವತಾರ' ಎಂಬ ನಾಟಕವನ್ನು ಬರೆದು, ಆ ಧರ್ಮದ ಕಟ್ಟಾ ಮತೀಯ ಶಾಸನಗಳನ್ನು ವಿಮರ್ಶಿಸಿದರು. ಹಾಗಾಗಿ ಆರಂಭದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಉಳ್ಳವರ ಚಳುವಳಿಯೆಂದು ಕರೆಯುತ್ತಿದ್ದರು.

ಕಂದಗಲ್ಲರ 'ರಕ್ತರಾತ್ರಿ' ನಾಟಕದಲ್ಲಿ ಅಶ್ವತ್ಥಾಮನು ಜಾತಿಯ ಸಂಕೇತವಾದ ಜನಿವಾರವನ್ನು ಹರಿಯುವ ಸನ್ನಿವೇಶ ಭಾರತ ಸ್ವಾತಂತ್ರ್ಯ ಚಳುವಳಿಯನ್ನು ಮತ್ತೊಂದು ಮಗ್ಗುಲಿಗೆ ಹೊರಳಿಸಿತು. ಶ್ರೀರಂಗರ ಹರಿಜನ್ವಾರ ನಾಟಕದಲ್ಲೂ ಇಂತ ಸನ್ನಿವೇಶ ಇದೆ. ಕುವೆಂಪು ಅವರು ನೂರು ದೇವರನ್ನು ನೂಕಾಚೆ ದೂರ ಕವಿತೆಯೂ ಜಾತಿ, ಧರ್ಮದ ಅಂಧತ್ವವನ್ನು ಕುರಿತು ಮಾತನಾಡಿದೆ. ಹನ್ನೆರಡನೇ ಶತಮಾನದಲ್ಲಿ ವಚನಕಾರರು ಕೈಗೊಂಡ ಇಂತ ಕಾರ್ಯಗಳು ಒಂದು ಚೌಕಟ್ಟಿಗೆ ಬಂದು, ಅದನ್ನು ಮೀರುವ ಪ್ರಯತ್ನಗಳು ಇಪ್ಪತ್ತನೇ ಶತಮಾನದ ಆರಂಭದಲ್ಲಿ ನಡೆದವು. ಪ್ರಮುಖವಾಗಿ ಕನ್ನಡ ವೃತ್ತಿರಂಗಭೂಮಿ

ನಾಟಕಗಳು ಈ ಭಾಗವಾಗಿಯೇ ರಚನೆಗೊಂಡಂತಿವೆ. ಭಾರತದ ರಾಜಕೀಯ ಸ್ವಾತಂತ್ರ್ಯ ಜೊತೆಗೆ ಜಾತಿ ನಿರ್ಮೂಲನೆಯು ಮುಖ್ಯವಾದದ್ದು ಎಂಬುದನ್ನು ಕನ್ನಡ ನಾಟಕಗಳು ಜನರಿಗೆ ಮನವರಿಕೆ ಮಾಡಿಕೊಟ್ಟಿವೆ.

ಇದೆ ಸನ್ನಿವೇಶದಲ್ಲಿ ಮುಂದುವರೆದು ಅಶ್ವತ್ಥಾಮ ಅಂದು ಸ್ಥಾಪನೆಗೊಳ್ಳುತ್ತಿದ್ದ 'ಭವಿಷ್ಯದ ಭಾರತ'ವು ಹೇಗೆ ಕಟ್ಟಲ್ಪಡಬೇಕು ಎಂಬ ಮಾತುಗಳನ್ನಾಡುತ್ತಾನೆ.

"ಮನುಷ್ಯತ್ವವೆಂಬುದೊಂದೇ ದಾರ! ಈ ಪ್ರಾಣಿ ಮನುಷ್ಯ ಕುಲದವನೆಂಬುದನ್ನು ಎತ್ತಿ ತೋರಿಸಲಿಕ್ಕೆ ಅಂತಹ ಅಭಂಗವಾದ ದಾರವನ್ನು ಧರಿಸುವವರೆಗೂ ಭಾರತೀಯರ ನರಪೇತುಗಳು ನಾಡತಾಯಿಯ ಮಾನರಕ್ಷಣೆಯಲ್ಲಿ ರಾಜಾ! ಇದೇ ತತ್ವ ತಾವರೆಯ ಗದ್ದುಗೆಯ ಮೇಲೆ ಕುಳಿತುಕೊಳ್ಳುವನು ಬರಲಿರುವ ನವಯುಗದ ಕಾರಣ ಪುರುಷನು". (ಅದೇ, ಪು.೩೪)

ಇಲ್ಲಿ ಕಂದಗಲ್ಲರು ನಿರ್ಮಾಣಗೊಳ್ಳುತ್ತಿದ್ದ ಸ್ವಾತಂತ್ರ್ಯ ಭಾರತಕ್ಕೆ ಜಾತ್ಯಾತೀತೆಯ ಅಗತ್ಯವನ್ನು ಕುರಿತು ಅಶ್ವತ್ಥಾಮನ ಮೂಲಕ ಹೇಳಿಸಿದ್ದಾರೆ. ಮೇಲ್ನೋಟಕ್ಕೆ ಈ ಸನ್ನಿವೇಶ ಭಾವೋದ್ವೇಗದಿಂದ ಕೂಡಿದೆ. ಎಂದೆನಿಸಿದರೂ, ಅದು ಭಾರತದ ಬಿಡುಗಡೆಗಾಗಿ ಆರಂಭವಾದ ಸ್ವಾತಂತ್ರ್ಯ ಚಳುವಳಿಯ ಬಹುತ್ವದ ವಿಸ್ತಾರವನ್ನು ಕುರಿತು ಮಾತನಾಡುತ್ತದೆ. ಸ್ವಾತಂತ್ರ್ಯ ಭಾರತಕ್ಕೆ 'ಮನುಷ್ಯತ್ವ ಒಂದೇ ದಾರವಾಗಬೇಕು' ಎಂದು ಮಾರ್ಮಿಕ ರಕ್ತರಾತ್ರಿ ನಾಟಕದಲ್ಲಿ ಮಾತನಾಡಲಾಗಿದೆ. ಹಾಗೇ ಜಾತಿಯನ್ನು ಮೀರಿ ಎಷ್ಟೋ ನಾಟಕ ಕಂಪನಿ ಕಲಾವಿದರು ಬದುಕಿದ್ದಾರೆ. ಸಮಾಜದಲ್ಲಿ ಸೌಹಾರ್ದಯುತವಾಗಿ ಬಾಳಿದ್ದಾರೆ.

೪.೩.೨. ಏಕೀಕರಣ ಚಳುವಳಿ

ಏಕೀಕರಣ ಎಂದರೇ ಯಾವುದು, ಹಾಗೆಂದರೇನು ಎಂಬ ಪ್ರಶ್ನೆ ಮೂಡುವುದು ಸಹಜ. ಭಾಷೆ, ಭೌಗೋಳಿಕ ಸ್ವರೂಪ, ಜನಾಂಗೀಯ ಸ್ವರೂಪ ಈ ಯಾವ ಅಂಶಗಳ ಮೇಲೆ ನಾವು ಏಕೀಕರಣಗೊಳ್ಳುವುದು ಸಾಧ್ಯ ಎಂಬ ಪ್ರಶ್ನೆ ಮೂಡುತ್ತದೆ. ಈಗ ಏಕೀಕರಣಗೊಂಡಿದೆ ಎನ್ನುವ ಕರ್ನಾಟಕದಲ್ಲಿ ಗಡಿಗಾಗಿಯೇ ಇನ್ನೂ ಹೋರಾಟಗಳು ನಡೆಯುತ್ತವೆ. ಏಕೀಕರಣದ ಮೂಲ ಪ್ರಶ್ನೆಗಳು ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿದೆ. ಹಾಗಾದರೆ ಒಂದು ಗೂಡುವುದು ಬೇಡವೆಂದಲ್ಲ. ಈ ಹಿಂದೆ 'ಭಾರತವು' ರಾಜಪ್ರಭುತ್ವದ ಅಧೀನದಲ್ಲಿದ್ದಾಗಲೂ ಈ ತರಹದ ಪ್ರಶ್ನೆಗಳಿದ್ದವು. ಹಾಗಾಗಿ ಈ ಒಂದು ಗೂಡುವಿಕೆಯನ್ನು ಯಾವ ನೆಲೆಯಲ್ಲಿ ಅನುಷ್ಠಾನಗೊಳಿಸಬೇಕು ಎಂಬುದರ ಮೇಲೆ ಅದರ ಸಫಲತೆ ವಿಫಲತೆಗಳನ್ನು ನೋಡಲು ಸಾಧ್ಯ. ಈ ಹಿಂದೆ ಇದ್ದ ಕರ್ನಾಟಕವು ಹರಿದು ಹೋಗಿದ್ದರಿಂದ

ಮತ್ತೆ ಅದನ್ನು ಒಂದುಗೂಡಿಸುವುದೇ ಏಕೀಕರಣದ ಉದ್ದೇಶವಾಗಿದ್ದರೆ, ಯಾವ ಕಾಲದಲ್ಲಿ ಕರ್ನಾಟಕ ಎಂಬುದು ಇತ್ತು ಎಂಬುದೆ ಇಂದಿಗೂ ಕಾಡುವ ಪ್ರಶ್ನೆಯಾಗಿದೆ.

ರಾಷ್ಟ್ರೀಯ ಚಳುವಳಿ ಮತ್ತು ಏಕೀಕರಣ ಚಳುವಳಿಗಳು ಇಪ್ಪತ್ತನೆ ಶತಮಾನದ ಕೊಡುಗೆಗಳು. ಹತ್ತೊಂಬತ್ತನೆ ಶತಮಾನದ ಕೊನೆ ಮತ್ತು ಇಪ್ಪತ್ತನೆ ಶತಮಾನದ ಪೂರ್ವದಲ್ಲಿ ಭಾರತದ ಪರಿಸರ ಸಾಂಸ್ಕೃತಿಕವಾಗಿ ಪರತಂತ್ರಕ್ಕೆ ಒಳಗಾಗಿತ್ತು. ಅದರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಲದಲ್ಲಿಯೇ ಕರ್ನಾಟಕವು ಭಾರತದ ಸ್ವಾತಂತ್ರ್ಯ ಹೋರಾಟದ ಜೊತೆಗೆ ತನ್ನ ವಿಸ್ಮೃತಿಯಿಂದ ಹೊರಬಂದು ತನ್ನ ಭಾಷೆ ಮತ್ತು ಅಸ್ಮಿತೆಗಾಗಿ ಹೋರಾಟ ಪ್ರಾರಂಭಿಸಿತು. ನೆರೆಯ ಭಾಷೆಗಳು ಅವಕಾಶ ಸಿಕ್ಕರೆ ಸಾಕು ಹೇಗೆ ಸ್ಥಳೀಯ ಭಾಷಿಕ ಸಮುದಾಯವನ್ನು ಆವರಿಸಿಕೊಳ್ಳುತ್ತವೆ, ಅದು ಹೇಗೆ ಕ್ರಮೇಣ ಪ್ರಧಾನ ಭಾಷೆಯನ್ನು ಅಧೀನ ಭಾಷೆಯನ್ನಾಗಿ ಮಾಡಿಕೊಳ್ಳುತ್ತದೆ ಎಂಬುದಕ್ಕೆ ಹತ್ತೊಂಬತ್ತನೆ ಶತಮಾನದ ಕರ್ನಾಟಕದ ಸಾಂಸ್ಕೃತಿಕ ಸನ್ನಿವೇಶವನ್ನು ಗಮನಿಸಬಹುದು. ಟಿಪ್ಪು ನಂತರ ಕರ್ನಾಟಕದ ಪ್ರದೇಶಗಳನ್ನು ಪೇಶ್ವೆ ನಿಜಾಮ ಮತ್ತು ಮೈಸೂರು ಸಂಸ್ಥಾನಗಳಿಗೆ ಹಂಚಲಾಯಿತು. ಉದಾ: ಪೇಶ್ವೆಯ ಆಡಳಿತ ಮತ್ತು ಬಾಂಬೆ ಪ್ರೆಸಿಡೆನ್ಸಿಯ ಆಡಳಿತದಿಂದ ಬಾಂಬೆ ಕರ್ನಾಟಕ ಮರಾಠಿಮಯವಾಯಿತು. ಕನ್ನಡ ಭಾಷೆಯನ್ನು ಮೂಲೆಗೆ ಸೇರಿಸಿ ಆ ಸ್ಥಾನವನ್ನು ಮರಾಠಿ ಭಾಷೆ ಅಲಂಕರಿಸಿಕೊಂಡಿತು. ಆ ಕಾಲದಲ್ಲಿಯೇ ಮರಾಠಿಗರು ಆ ಪ್ರದೇಶಕ್ಕೆ "ದಕ್ಷಿಣ ಮಹಾರಾಷ್ಟ್ರವೆಂದೆ ಕರೆಯುತ್ತಿದ್ದರು. ಹೀಗೆ ಕನ್ನಡ ಪ್ರದೇಶವೊಂದು ಮರಾಠಿ ಮಯವಾಗುವುದಕ್ಕೆ ಎರಡು ಕಾರಣಗಳನ್ನು ನಾವು ಗುರತಿಸಬಹುದು. ಒಂದು ವಸಾಹತುಶಾಹಿ ನೀತಿ, ಎರಡು ಮರಾಠಿಗರ ಆಕ್ರಮಣ ಗುಣ. ೧೮೨೫-೧೮೫೦ರ ಕಾಲಾವಧಿಯಲ್ಲಿ ಧಾರವಾಡ ಪ್ರಾಂತ್ಯದಲ್ಲಿ ೧೧೬ ಕನ್ನಡ ಶಾಲೆಗಳಿದ್ದರೆ, ೧೪೬ ಮರಾಠಿ ಶಾಲೆಗಳಿದ್ದವು. ೧೮೪೦ರಲ್ಲಿ ಧಾರವಾಡ ಪ್ರಾಂತ್ಯದ ವಿದ್ಯಾಧಿಕಾರಿಯಾಗಿದ್ದ ವಿಲಿಯಮ್ ಅಲೆನ್ ರಸೆಲ್ ಅವರು ಧಾರವಾಡ ಪ್ರಾಂತ್ಯದಲ್ಲಿ ಸರಕಾರಿ ಶಾಲೆಗಳು ಒಂದೂ ಇಲ್ಲ ಎಂದು ಹೇಳಿದ್ದಾರೆ. ಇಂತ ಸಂದರ್ಭದಲ್ಲಿ ಕನ್ನಡಿಗರು ತಮ್ಮ ಮಕ್ಕಳನ್ನು ಮರಾಠಿ ಶಾಲೆಗಳಿಗೆ ಕಳಿಸುವದು ಅನಿವಾರ್ಯವಾಯಿತು.

೧೮೮೫ ರಿಂದ ೧೯೧೫ರ ಕಾಲಾವಧಿಯಲ್ಲಿ ವಸಾಹತುಶಾಹಿ ನಿರ್ಮಿಸಿದ ಪ್ರೆಸಿಡೆನ್ಸಿಗಳ ಮೂಲಕ ಮತ್ತು ನಿಜಾಮನ ನೀತಿಗಳಿಂದ ಕನ್ನಡ ಕ್ಷೀಣಿಸುವ ಹಂತ ತಲುಪಿತು. ಅದಕ್ಕೆ ಕಾರಣಗಳನ್ನು ಚುರುಮುರಿಯವರ ಶಾಕುಂತಲ ನಾಟಕದ ಮುನ್ನುಡಿಯಿಂದ ಗಮನಿಸಬಹುದು ಈ ಕಾಲಾವಧಿಯಲ್ಲಿ "ಓದಿದರೆ ಮರಾಠಿ ಪುಸ್ತಕಗಳನ್ನು ಓದಬೇಕು; ತರಿಸಿದರೆ ಮರಾಠಿ ವರ್ತಮಾನ ಮಾಸ ಪತ್ರಿಕೆಗಳನ್ನು ತರಿಸಬೇಕು; ನೋಡಿದರೆ ಮರಾಠಿ ನಾಟಕಗಳನ್ನು ನೋಡಬೇಕು; ಕೇಳಿದರೆ ಮರಾಠಿ ಹಿಂದುಸ್ತಾನ ಸಂಗೀತವನ್ನು ಕೇಳಬೇಕು"(ರಾಮಕೃಷ್ಣ

ಮರಾಠಿ, ನಾಟಕ-ಕರ್ನಾಟಕ, ಪು-೧೬,೧೭) ಎಂಬ ಮಾತು ಮರಾಠಿಯ ಪ್ರಾಬಲ್ಯವನ್ನು ತಿಳಿಸುತ್ತದೆ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕನ್ನಡ ಸಾಹಿತ್ಯದ ಪಾತ್ರ ಪ್ರಮುಖವಾದದ್ದು. ನಾಟಕಗಳು ಸಹ ಸಾಹಿತ್ಯದ ಇತರೆ ಪ್ರಕಾರಗಳಿಗಿಂತ ಸಾಹಿತ್ಯಿಕವಾಗಿ ಪ್ರಯೋಗಾತ್ಮಕವಾಗಿ ವಸಾಹತುಶಾಹಿ ನಿರ್ಮಿಸಿದ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯೆ ನೀಡಿದೆ. ಹಾಗೆ ಕರ್ನಾಟಕ, ಕನ್ನಡ ಭಾಷೆಗೆ ತನ್ನತನದ ಗುರುತನ್ನು, ಮೆರಗನ್ನು ಕಂಡುಕೊಳ್ಳುವಲ್ಲಿ ಕನ್ನಡ ನಾಟಕಗಳ ಪಾತ್ರವು ಮುಖ್ಯವಾಗಿದೆ. ಕನ್ನಡ ನಾಟಕ ಸಾಹಿತ್ಯವು ದೇಶದ, ನಾಡಿನ, ರಾಜಕೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಪಂದಿಸುವವರ ಜೊತೆಗೆ ತನ್ನನ್ನು ಆವರಿಸಿದ ಪಾರುಪತ್ಯಗಳಿಂದ ವಿಮೋಚನೆ ಪಡೆಯುವುದರ ಕಡೆಗೂ ಗಮನಹರಿಸಿತು. ಆದ್ದರಿಂದ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ತನ್ನದೇ ಮಿತಿಯಲ್ಲಿ ಕಾರಣವು ಆಯಿತು. ಹಾಗೆ ೧೮೯೦ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಿಂದ ಕರ್ನಾಟಕತ್ವ, ಕರ್ನಾಟಕದ ಏಕೀಕರಣದ ಆಸೆಗೆ ಮತ್ತಷ್ಟು ಬಲಬಂದಿತು. ಇಂಥ ಸಂಘ ಸಂಸ್ಥೆಗಳು ಕರ್ನಾಟಕವನ್ನು ಭಾಷಿಕವಾಗಿ, ಭೌಗೋಳಿಕವಾಗಿ ರೂಪಿಸಲು ಪ್ರಯತ್ನಿಸಿದರೆ, ಕನ್ನಡ ನಾಟಕ ಸಾಹಿತ್ಯವು ಕನ್ನಡವನ್ನು ಸಾಂಸ್ಕೃತಿಕವಾಗಿ ಪುನರುಜ್ಜೀವನಗೊಳಿಸುವ ಹಾದಿಯಲ್ಲಿ ತನ್ನನ್ನು ತೊಡಗಿಸಿಕೊಂಡಿತು. ಈ ನಿಟ್ಟಿನಲ್ಲಿ ಶಾಂತಕವಿಗಳ ಹೆಸರು ದೊಡ್ಡದು. ಉಷಾಹರಣ, ರತಿಕಲ್ಯಾಣ ನಾಟಕಗಳನ್ನು ರಚಿಸುವುದರ ಮೂಲಕ ಕನ್ನಡವನ್ನು ಜನರ ಮನಸ್ಸಿನಿಂದ ಕಟ್ಟಲು ಕಂಕಣ ಬದ್ಧರಾದರು. ೧೮೭೭ರಲ್ಲಿ "ಶ್ರೀ ವೀರನಾರಾಯಣ ಪ್ರಸಾದಿತ ಕೃತಪುರ ನಾಟಕ ಮಂಡಳಿ"ಯನ್ನು ಸ್ಥಾಪಿಸುವುದರ ಮೂಲಕ ಕನ್ನಡ ಕಟ್ಟುವ ಕೆಲಸಕ್ಕೆ ಶಾಂತಕವಿಗಳು ನಾಂದಿ ಹಾಡಿದರು. ಇದು ಕರ್ನಾಟಕದಲ್ಲಿ ಸ್ಥಾಪನೆಗೊಂಡ ಮೊದಲ ನಾಟಕ ಕಂಪನಿ. ಕರ್ನಾಟಕವು ಸ್ವತಂತ್ರ ನಾಡಾಗಿ ಶ್ರೀಮಂತಿಕೆ, ಸ್ವಂತಿಕೆಗಳಿಂದ ಮೆರೆಯಬೇಕೆಂಬ ಹಂಬಲವನ್ನು ನಾಟಕ ಕೃತಿಗಳ ಮೂಲಕವೆ ಬಿತ್ತರಿಸಿದ ಶಾಂತಕವಿಗಳು ಸ್ವಾತಂತ್ರ್ಯ, ಸ್ವಾಭಿಮನದ ಮೌಲ್ಯಗಳನ್ನು ಕನ್ನಡಿಗರಲ್ಲಿ ಬಿತ್ತಿದರು. ನಾಡು-ನುಡಿಯ ಅಭಿಮಾನದಿಂದ ಆರಂಭವಾದ ಕನ್ನಡ ನಾಟಕವು ಪಾರ್ಸಿ ರಂಗಭೂಮಿಯ ಪರಕೀಯ ಆಕರ್ಷಣೆಯಿಂದ ಕನ್ನಡಿಗರನ್ನು ವಿಮುಖಗೊಳಿಸಿತ್ತು. ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಒಡೆಯರ ಆಶ್ರಯದಲ್ಲಿ ನಿರ್ಮಾಣವಾದ ನಾಟಕಗಳು ರಂಗಭೂಮಿತಂಡಗಳು ಪೌರಾಣಿಕ ಕತೆಗಳನ್ನೇ ನಾಟಕವಾಗಿ ಅಭಿನಯಿಸಿದವೇ ಹೊರತು, ಸಮಕಾಲೀನ ಸಮಾಜವನ್ನು ವಿಮರ್ಶಿಸುವತ್ತ ಜನರಲ್ಲಿ ಜಾಗೃತಿ ಉಂಟು ಮಾಡಲಿಲ್ಲ. ಅದರ ಅಗತ್ಯವು ಆ ಭಾಗದಲ್ಲಿರಲಿಲ್ಲ. ಕಾರಣ ಮೈಸೂರು ಸಂಸ್ಥಾನವು ಬ್ರಿಟಿಷರ ಅಧೀನದಲ್ಲಿತ್ತು. ನಂತರ ಬಂದ ಗುಬ್ಬಿ ಕಂಪನಿಯು ಕಲಾತ್ಮಕ ಅಭಿವ್ಯಕ್ತಿಗೆ ಸೀಮಿತವಾಯಿತು. ಹೈದರಾಬಾದ್ ಸಂಸ್ಥಾನ ಮತ್ತು ಮುಂಬೈ ಪ್ರೆಸಿಡೆನ್ಸಿ ಭಾಗದ ಕನ್ನಡ ಪರಿಸ್ಥಿತಿಗಿಂತ ಮೈಸೂರಿನ ಪರಿಸ್ಥಿತಿ

ಉತ್ತಮವಾಗಿತ್ತು. ೧೯೧೬ರಲ್ಲಿ ಮೈಸೂರಿನಲ್ಲಿ ವಿಶ್ವವಿದ್ಯಾಲಯ, ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಕೂಡ ಸ್ಥಾಪನೆಗೊಂಡಿತು.

ಆದರೆ ಕನ್ನಡ ಕಟ್ಟುವುದಕ್ಕಾಗಿ ಸಂಘ ಸಂಸ್ಥೆಗಳು ಸ್ಥಾಪನೆಯಾಗುವುದಕ್ಕಿಂತ ಪೂರ್ವದಲ್ಲಿ ಶಾಂತಕವಿಗಳು ೧೮೭೭ರಲ್ಲಿ ಕೃತಪುರ ನಾಟಕ ಕಂಪನಿ ಕಟ್ಟಿ ಆ ಮೂಲಕ ಉಷಾಹರಣ ನಾಟಕವನ್ನು ಪ್ರದರ್ಶಿಸಿ ಕನ್ನಡದ ಕೈಂಕರ್ಯವನ್ನು ಆರಂಭಿಸಿದ್ದರು. ಕರ್ನಾಟಕ ಪ್ರದೇಶದ ಮುಂಬೈ ಕರ್ನಾಟಕದಲ್ಲಿ ಕನ್ನಡದ ಸ್ಥಾನದಲ್ಲಿ ಮರಾಠಿ ಭಾಷೆ ಮೆರೆಯುತ್ತಿದ್ದ ಕಾಲವದು. ಈ ಪ್ರದೇಶಕ್ಕೆ ಮರಾಠಿಗಳು ದಕ್ಷಿಣ ಮಹಾರಾಷ್ಟ್ರ ಎನ್ನುತ್ತಿದ್ದರು. ಓದಿದದರೆ ಮರಾಠಿಯ ಪುಸ್ತಕಗಳನ್ನೆ ಓದಬೇಕು, ನೋಡಿದರೆ ಮರಾಠಿ ನಾಟಕಗಳನ್ನೆ ನೋಡಬೇಕು. ಕೇಳಿದರೆ ಮರಾಠಿ, ಹಿಂದುಸ್ಥಾನಿ ಸಂಗೀತವನ್ನು ಕೇಳಬೇಕು ಎಂಬ ಮುದುವೀಡು ಕೃಷ್ಣರಾಯರ ಮಾತುಗಳು (ಶಾಕುಂತಲ ನಾಟಕದ ಮುನ್ನುಡಿ) ಶಾಂತಕವಿಗಳಿಗೆ ಸ್ಫೂರ್ತಿ ನೀಡಿದವು. ಹಾಗಾಗಿ ವಿಸ್ಮೃತಿಗೆ ಜಾರಿದ್ದ ಕನ್ನಡಿಗರನ್ನು ಎಚ್ಚರಿಸಲು ಶಾಂತಕವಿಗಳು ಹರಸಾಹಸ ಪಟ್ಟಿದ್ದಾರೆ. ಕವಿಯಾಗಿ ಹಾಡಿದ್ದಾರೆ, ಕೀರ್ತನೆಗಳ ಮೂಲಕ ದಾಸನಾಗಿದ್ದಾರೆ, ನಾಟಕಗಳ ಮೂಲಕ ಕನ್ನಡತ್ವವನ್ನು ಕಟ್ಟಿದ್ದಾರೆ.

> ಕನ್ನಡ ನುಡಿಯ ದುಸ್ಥಿತಿಯ ನಾಟಕ ನಟನದಿಂದ ಕಳೆಯಬೇಕೆಂದು
> ಸತತಮಲ್ಲಿಯ ಜನಕೆ ಪೇಳ್ವೆವದರಿಂದ ಸ್ಫೂರ್ತಿಗೊಂಡವರ ಬಯಕೆಯಂತೆ
> ಅತಿಶಯಾನಂದದಿಂದತ್ಯವಸರವ ಮಾಡಿ
> ಪ್ರಥಮದೊಳುಷಾಹರಣ ನಾಟಕವ ರಚಿಸಿ ಪ
> ದ್ಧತಿಯಂತೆ ನಟನವಂ ಕಲಿಸಿದೆವು ನಾಟಕವು ರಂಗಸ್ಥಲಕ್ಕೆ ಬಂದವು"

ಹೀಗೆ ಮೊದಲ ನಾಟಕ ರಚನೆಯ ಸಂದರ್ಭವನ್ನು ಸ್ಮರಿಸಿದ್ದಾರೆ. ಅದೇ ವೇಳೆಗೆ ಅವರು ಕನ್ನಡಿಗರನ್ನು ಮರಳು ಮಾಡಿದ್ದ ಮರಾಠಿ ನಾಟಕಗಳ ರಹಸ್ಯವನ್ನು ಸೂಕ್ಷ್ಮತನದಿಂದ ಬಯಲು ಮಾಡಿ, ಅವು ಕನ್ನಡದ ಬಯಲಾಟಗಳ ಸುಧಾರಿತ ರೂಪಗಳಿಂದ ರಚಿತವಾದವು ಹೇಳಿದರು.

ಉಷಾಹರಣ

ಶಾಂತಕವಿಗಳು ರಚಿತ ಈ ನಾಟಕ ೧೯ನೇ ಶತಮಾನದ ಉತ್ತರಾರ್ಧ ಕಾಲದ ಕನ್ನಡದ ಪರಿಸ್ಥಿತಿಯನ್ನು ಕಟ್ಟಿಕೊಡುತ್ತದೆ. ಸಂಸ್ಕೃತ ಸಾಹಿತ್ಯವೇ ಕನ್ನಡ ಸಾಹಿತ್ಯ ರಚನೆಗೆ ಆಧಾರವಾಗಿದ್ದ ಕಾಲವದು. ಹಾಗೆ ಪೇಶ್ವೆ ಆಡಳಿತದಿಂದ ಬ್ರಿಟಿಶ್ ಆಡಳಿತಕ್ಕೆ ಮುಂಬೈ ಕರ್ನಾಟಕ ಹಸ್ತಾಂತರಗೊಂಡ ಸಂದರ್ಭವದು. ಇಂಗ್ಲಿಶ್ ಮತ್ತು ಮರಾಠಿಯ ಆಕ್ರಮಗಳನ್ನು

ಮೀರಿ ಕನ್ನಡವನ್ನು ಕಟ್ಟುವ ಪ್ರಯತ್ನಗಳು ಬಂಗಾಲಿ ಸಾಹಿತ್ಯದಿಂದ ಪ್ರಭಾವ ಬೀರಿತ್ತು. ಇಂಥ ಸನ್ನಿವೇಶದಲ್ಲಿಯೇ ಉಷಾಹರಣ ನಾಟಕ ರಚನೆಗೊಂಡಿದ್ದು, ನಾಟಕದ ಆರಭದಲ್ಲಿಯೇ ಸೂತ್ರಧಾರ ಮತ್ತು ನಟಿಯ ಮಾತುಗಳು ಇಂತಿವೆ.

ನಟಿ : ಈವೊತ್ತು ಯಾವ ನಾಟವನ್ನು ಪ್ರಯೋಗಿಸತಕ್ಕವರು?

ಸೂತ್ರಧಾರ : ಪ್ರಿಯಳೆ ನಾಟಕ ಗ್ರಂಥಗಳು ಕನ್ನಡ ಭಾಷೆಯಲ್ಲಿ ಇಲ್ಲವೆಂಬ ಕಂದಕವನ್ನು ನಿವಾರಣೆ ಮಾಡುವ ಅಭಿಮಾನದಿಂದ ಅನೇಕ ನಾಟಕಗಳನ್ನು ರಚಿಸಿದ್ದರಿಂದಲೂ ಅವುಗಳನ್ನು ಶಿಷ್ಯರಿಗೆ ಕಲಿಸಿ ರಂಗಸ್ಥಲದಲ್ಲಿ ಮಾಡಿಸಿ ತೋರಿಸಿದ್ದರಿಂದಲೂ ಕನ್ನಡ ನಾಟಕ ಕೋತ್ಪಾದಕರೂ ಕನ್ನಡ ಕವಿವರ್ಯರೂ ಆದಂತ ಬಾಳಾಚಾರ್ಯ ಸಕ್ಕರಿ ಉರ್ಫ್ ಶಾಂತಕವಿಗಳು ಹೊಸದಾಗಿ ನಿರ್ಮಿಸಿದ ಉಷಾಹರಣವೆಂಬ ಸರಸ ನಾಟಕವನ್ನು ಯೋಜಿಸಬೇಕೆಂದು ಮಾಡಿದ್ದೇನೆ"

ಎಂಬ ಈ ಮಾತುಗಳು ಕನ್ನಡ ನಾಟಕ ಸಾಹಿತ್ಯ ಚರಿತ್ರೆಯ ಆರಂಭವನ್ನು ಸೂಚಿಸುತ್ತದೆ. ಪ್ರಾಚೀನ ಭಾರತೀಯ ನಾಟಕಗಳು ದೈವದ ಸಂಕೇತಗಳನ್ನು ಪ್ರತಿನಿಧಿಸುತ್ತಿದ್ದವು. ಅಲ್ಲಿ ವಾಸ್ತವ ಅಂಶಗಳ ಗೈರು ಎದ್ದು ಕಾಣುತ್ತಿತ್ತು. ಮನರಂಜನೆಯೇ ಮುಖ್ಯವಾಗಿತ್ತು. ಆದರೆ ಉಷಾಹರಣ ನಾಟಕ ವಾಸ್ತವವನ್ನು ಮಾತನಾಡುತ್ತದೆ. ಶಾಂತಕವಿಗಳ ಈ ಕಾರ್ಯವನ್ನು ಕುರಿತು ಕೆ.ಮರುಳಸಿದ್ದಪ್ಪನವರು "ಮರಾಠಿಯ ಸಂಸ್ಕೃತಿ ದಾಳಿಯ ವಿರುದ್ಧ ಉತ್ತರ ಕರ್ನಾಟಕದವರು ಹೋರಾಟ ಮಾಡಿದುದು. ಅಲ್ಪಸಂಖ್ಯಾತರಾಗಿ ಮತ್ತು ಯಾವ ರಾಜಕೀಯ ಬೆಂಬಲವೂ ಇಲ್ಲದೇ ಎಂಬುದನ್ನು ಮನಗಂಡರೆ ಶಾಂತಕವಿಗಳು ಮತ್ತು ಗದುಗಿನ ಕರ್ನಾಟಕ ನಾಟಕ ಕಂಪನಿಯ ಮಹತ್ವವೆನೆಂಬುದು ಸ್ಪಷ್ಟವಾಗುತ್ತದೆ."ಎಂದು ಹೇಳಿದ್ದಾರೆ.

ಅಧುನಿಕ ಕನ್ನಡ ನಾಟಕ ಹುಟ್ಟಿಕೊಂಡ ಆ ಸಂದಿಗ್ಧ ಕಾಲಘಟ್ಟವನ್ನು ಹಾಗೂ ಅಂದಿನ ಜರೂರುಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಕರ್ನಾಟಕದ ಏಕೀಕರಣವನ್ನು ಮನಗಾಣಲು ಸಾಧ್ಯ. ಪಾರ್ಸಿ ಕಂಪನಿಗಳಿಂದ, ಬಂಗಾಲಿಗೆ ಬಂಗಾಲಿಯಿಂದ ಮರಾಠಿ ಮೂಲಕ ಕನ್ನಡವನ್ನು ಪ್ರವೇಶಿಸಿದ ಆಧುನಿಕ ಮಾದರಿಯ ನಾಟಕಗಳು ಮರಾಠಿಯ ಪ್ರಾಬಲ್ಯವನ್ನು ಮುರಿಯಲು ಅಂದಿನ ನಾಟಕ ಸಾಹಿತ್ಯಕ್ಕೆ ಕಾರಣವಾಯಿತು. ಮರಾಠಿಗರ ಆಕ್ರಮಣಶೀಲ ಪ್ರವೃತ್ತಿಯನ್ನು ಶಾಂತಕವಿಗಳು ಉಷಾಹರಣ ನಾಟಕದ ಮೂಲಕ ಹೀಗೆ ವ್ಯಕ್ತಪಡಿಸಿದ್ದಾರೆ.

ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ಕೀರ್ತಿ
ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ದರ್ಥಿ
ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ನಾಟರ ಮೂರ್ತಿಗಳ ಸಂಚಾರವು

ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕದಾಟ
ಎಲ್ಲಿ ನೋಡಲು ಮಹಾರಾಷ್ಟ್ರ ನಾಟಕ ಕೂಟ
ಎಲ್ಲಿ ನೋಡಲು ಮಹಾರಾಷ್ಟ್ರ ಭಾಷಮಯಂತಾಯತ್ತು ಕರ್ನಾಟಕಂ॥

ಅಧಿಕ ಮಾಸ

ಶ್ರೀ ರಂಗರದು ಅಧುನಿಕ ಕನ್ನಡ ನಾಟಕ ಕ್ಷೇತ್ರದಲ್ಲಿ ಪ್ರಮುಖವಾದ ಹೆಸರು. ಇಂಗ್ಲಂಡಿನಲ್ಲಿ ನಾಟಕ ಕ್ಷೇತ್ರದ ಬಗ್ಗೆ ಅಧ್ಯಯನ ಕೈಗೊಂಡು ಕರ್ನಾಟಕದಲ್ಲಿ ಹವ್ಯಾಸಿ ನಾಟಕ ಕ್ಷೇತ್ರವನ್ನು ಕಟ್ಟಿದವರಲ್ಲಿ ಶ್ರೀರಂಗರು ಒಬ್ಬರಾಗಿದ್ದಾರೆ. ಆಧುನಿಕ ಸಂದರ್ಭದಲ್ಲಿ ಕರ್ನಾಟಕದಲ್ಲಿ ಕನ್ನಡ ನಾಟಕಗಳ ಮೂಲಕ ಸಾಮಾಜಿಕ ಪ್ರಜ್ಞೆಯನ್ನು ಕಟ್ಟಿಕೊಟ್ಟರು. ಇಪ್ಪತ್ತನೆ ಶತಮಾನದಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿದ ಶ್ರೀರಂಗರು ಅಂದಿನ ವಾಸ್ತವಾಂಶಗಳು ತಮ್ಮ ನಾಟಕಗಳ ಮೂಲಕ ಸಾಮಾನ್ಯ ಜನರಿಗೂ ವಿಸ್ತರಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸ್ವಾತಂತ್ರ್ಯ ಚಳುವಳಿಯ ಮುಖ್ಯಧಾರೆಗಳಾಗಿದ್ದ ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಹಾಗೂ ಕನ್ನಡಕ್ಕೆ ಸಂಬಂಧಿಸಿದಂತೆ ನಾಡುನುಡಿಯ ವಿಚಾರಗಳನ್ನು ನಾಟಕಗಳ ಮೂಲಕ ಜನರಿಗೆ ತಲುಪಿಸಿದರು. ಪ್ರಸ್ತುತ 'ಅಧಿಕಮಾಸ' ನಾಟಕವು ಮುಖ್ಯವಾಗಿ ಎರಡು ವಸ್ತುಗಳನ್ನು ಕೇಂದ್ರಿತವಾಗಿರಿಸಿಕೊಂಡು ರಚನೆಗೊಂಡಿದೆ. ಮೊದಲನೆಯದು ಅಧಿಕ ಮಾಸ ಹೆಸರಿನಲ್ಲಿ ಮಹಿಳೆಯರಿಗೆ ವಿವಾಹವಾಗಲು ಇರುವ ಸಮಸ್ಯೆ. ಎರಡನೆಯದು ಕನ್ನಡ, ಕರ್ನಾಟಕದ ಬಗೆಗಿನ ಅಂಶಗಳನ್ನೂ ಈ ನಾಟಕ ವಿಸ್ತರಿಸಿಕೊಂಡಿದೆ.

ಇಂಗ್ಲಿಶ್ ಶಿಕ್ಷಣದಿಂದ ಕನ್ನಡಿಗರ ವಲಸೆ, ಇಂಗ್ಲಿಶ್ ಪ್ರಭಾವದಿಂದಾಗ ಇಂಗ್ಲಿಶ್ ಶಿಕ್ಷಣದ ಟೊಳ್ಳುತನವನ್ನು ಕುರಿತ ಅಂಶಗನ್ನು ಒಳಗೊಂಡಿದೆ. ಈ ಇಂಗ್ಲಿಶ್ ಶಿಕ್ಷಣದ ಬಗ್ಗೆ ಇರುವ ವ್ಯಾಮೋಹ ಕನ್ನಡಿಗರನ್ನು ಮಾರುಕಟ್ಟೆಯ ಸರಕುಗಳನ್ನಾಗಿ ಮಾಡುವುದರಲ್ಲಿ ಸಂದೇಹವಿಲ್ಲ ಎಂಬ ಮಾತನ್ನು ಅಂದೇ ಹೇಳಲಾಗಿದೆ. ಶಿಕ್ಷಣದ ಮಾಧ್ಯಮ ಯಾವುದಿರಬೇಕು ಎಂಬ ನಿರ್ಣಯಕ್ಕೆ ಬರದೇ ಇರುವ ಇಂದಿನ ಸಂದರ್ಭಕ್ಕೂ ಈ ನಾಟಕ ಪ್ರಸ್ತುತಗೊಳ್ಳುತ್ತಾ ಹೋಗುತ್ತದೆ.

ರಾಜ ಪ್ರಭುತ್ವದಿಂದ ವಸಾಹತುಶಾಹಿ ಆಡಳಿತದವರೆಗೂ ಒಂದೇ ಆಡಳಿತಕ್ಕೆ, ಸಾಂಸ್ಕೃತಿಕ ಪರಿಸರಕ್ಕೆ ಯಾವುದೇ ಭಾಷೆಯ ಸಮುದಾಯ ಒಳಗೊಳ್ಳದೆ ಅದರಿಂದ ತಾನು ಅನುಭವಿಸಿದ ಸಂಕಷ್ಟಗಳನ್ನು ರಮೇಶನ ಮಾತುಗಳು ಸ್ಪಷ್ಟೀಕರಿಸುತ್ತವೆ. ಇದಕ್ಕೆ ಕನ್ನಡ ಹೊರತಾದ್ದಲ್ಲ. ಇಂಗ್ಲಿಶ್ ಶಿಕ್ಷಣದಿಂದ ಆರಂಭವಾದ ಸರಕಾರಿ ಉದ್ಯೋಗ ಎಂಬ ವರ್ಗದಿಂದ ಸೃಷ್ಟಿಯಾದ ವಲಸೆಯಿಂದಾಗುವ ಪ್ರಾದೇಶಿಕತೆಯ ತೊಂದರೆಗಳನ್ನು ಈ ನಾಟಕ ಚಿತ್ರಿಸಿದೆ. ಹಾಗೆ ಕರ್ನಾಟಕ ಎಂಬುದು ಒಂದಾಗುವ ಕುರಿತು ಹೇಳುತ್ತದೆ. ಅದಕ್ಕಾಗಿ ಒಂದು

ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ಈ ಮೂಲಕ ಕರ್ನಾಟಕ ಎಂಬುದು ಸಾಂಸ್ಕೃತಿಕವಾಗಿ ಬೆಳೆಯಲು ಸಾಧ್ಯ ಎಂಬ ಮಾತನ್ನು ಕಲ್ಯಾಣರಾಯಣನ ಮಾತು ಸ್ಪಷ್ಟಪಡಿಸುತ್ತದೆ. ಅದಕ್ಕಾಗಿ ಪತ್ರ ಚಳುವಳಿಯನ್ನು ಪ್ರಾರಂಭಿಸಬೇಕು ಎಂದು ಹೇಳುತ್ತಾನೆ. ಹಾಗೆ ಕನ್ನಡಕ್ಕಾಗಿ ಒಂದು ಕನ್ನಡ ಪತ್ರಿಕೆ ಬೇಕು ಎಂಬ ಮಾತುಗಳು ಇಲ್ಲಿವೆ. ಇಲ್ಲಿ ಕಲ್ಯಾಣರಾಯ ಎಂಬ ಪಾತ್ರದ ಹೆಸರೆ ಯಾವ ಸ್ವರೂಪದಲ್ಲಿ 'ಕರ್ನಾಟಕ' ನಿರ್ಮಾಣವಾಗಬೇಕು ಎಂಬುದನ್ನು ಧ್ವನಿಸುತ್ತದೆ. ಹಾಗೆ ವಚನ ಕಾಲದ ಕಲ್ಯಾಣವನ್ನು ನೆನಪಿಸುತ್ತಿರಬಹುದು. ಕಲ್ಯಾಣರಾಯನ ಮಾತು ಹೀಗಿದೆ.

"ಕಲ್ಯಾಣರಾಯ : ಕನ್ನಡಿಗರೆ ಕರ್ನಾಟಕವು ಒಂದಾಗಬೇಕೆಂದು ಬಯಸುವುದಿಲ್ಲವೇ? ಹಾಗಾದರೆ ಕೆಳಗಿನ ವಿಳಾಸಕ್ಕೆ ಹಣ ಕಳುಹಿಸಿರಿ" (ನಕ್ಕು) ಯಾಕೆ, ತಮ್ಮ ಪತ್ರಕ್ಕೆ ದುಡ್ಡಿನ ತೊಂದರೆ ಇರುವದೆಂದು ಬಾಯಿಬಿಟ್ಟು ಹೇಳಬಾರದೆ? ಕರ್ನಾಟಕಕ್ಕೆ ವಿಶ್ವವಿದ್ಯಾಲಯ ಬೇಕೆ ಬೇಕು ಕನ್ನಡದ ಅಭಿಮಾನಿಗಳೇ ಕೆಳಗಿನ ವಿಳಾಸಕ್ಕೆ ಹಣಕಳಿಸಿರಿ. ಹೊಸಪದ್ದತಿಯ ಸುಲಿಗೆ(ಓದುತ್ತಾ) ಕರ್ನಾಟಕಕ್ಕೆ ದೈನಿಕ ಬೇಕೆ ಬೇಕು."(ಜಿ.ಎಸ್. ಆಮೂರ, ಶ್ರೀರಂಗ ಸಾರಸ್ವತ, ಪುಟ--೧೮೪)

ಕ್ರಾಂತಿ

ಪ್ರಮುಖವಾಗಿ ಗರುಡ ಸದಾಶಿವರಾಯರ ಕ್ರಾಂತಿ ನಾಟಕವು ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಸಾಮಾಜಿಕ ಸ್ವಾಸ್ತ್ಯದ ಪ್ರಜ್ಞೆಯ ಚಿಂತನೆಗಳುಳ್ಳ ನಾಟಕವಾಗಿದೆ. ಸಾಮಾಜಿಕ ಸಮಾನತೆಗಾಗಿ ನಡೆದ ಹೋರಾಟವು ಭಾರತೀಯ ಸ್ವಾತಂತ್ರ್ಯ ಚಳುವಳಿಗೆ ಇಂಬು ಕೊಟ್ಟಂತ ಅಂದೋಲನವಾಗಿದೆ. ಅದೇ ಸಂದರ್ಭದಲ್ಲಿ ದೇಶವನ್ನು ಒಗ್ಗೂಡಿಸುವಲ್ಲಿ ಪ್ರಯತ್ನಿಸಿದ ರಾಷ್ಟ್ರೀಯ ಚಿಂತನೆಗಳು, ಸ್ಥಳೀಯ (ನಾಡಿನ) ರಾಷ್ಟ್ರೀಯತೆಗೂ ಮಹತ್ವ ನೀಡಿದವು. ಹಾಗಾಗಿ ಭಾಷಾ ಆಧಾರದ ಮೇಲೆ ಪ್ರಾಂತೀಯ ವಿಂಗಡನೆಗಳು ನಡೆದವು. ಗರುಡರ ಕ್ರಾಂತಿ ನಾಟಕವು ಪ್ರಾಂತೀಯ ಅಂಶವುಳ್ಳ ನಾಟಕವಾಗಿದೆ. ಚೀನಾ ಮತ್ತು ಜಪಾನಗಳ ನಡುವೆ ಯುದ್ಧ ಸಂದರ್ಭದಲ್ಲಿ ಆರಂಭವಾದ ಭಾರತದ ಸೇವಾದಳದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಶೂಲಪಾಣಿ ಮತ್ತು ಗೌರಿ ಭಾಗವಹಿಸಿರುತ್ತಾರೆ. ಯುದ್ಧದ ಸನ್ನಿವೇಶದಲ್ಲಿ ಅವರ ಸಾಹಸ ಮಾನವೀಯತೆಯನ್ನು ಗುರುತಿಸಿ ಅವರಿಗೆ ಪ್ರಶಸ್ತಿ ಪ್ರಧಾನ ಮಾಡುವಾಗ ರಾಷ್ಟ್ರಪತಿಗಳ ಸೆಕ್ರೆಟರಿಗಳು 'ಕರ್ನಾಟಕ' ಎಂದು ಪ್ರಸ್ತಾಪಿಸುವ ಸನ್ನಿವೇಶವು ಕರ್ನಾಟಕದ ಅಸ್ಮಿತೆಯ ಸಂಕೇತವಾಗಿ ಇಲ್ಲಿ ಮೂಡಿದೆ.

ವಿದ್ಯಾರಣ್ಯ

ಭಾರತದ ಸ್ವಾತಂತ್ರ್ಯ ಚಳುವಳಿ, ಕರ್ನಾಟಕದ ಏಕೀಕರಣ ಹಾಗೂ ಹಂಪಿಯ ಚಾರಿತ್ರಿಕ ಸನ್ನಿವೇಶಗಳ ನಡುವೆ ಸಾಂಸ್ಕೃತಿಕ ವಿಚಾರಗಳ ಪ್ರಭಾವ ಪ್ರೇರಣೆಗಳು ಇವೆ.

ಹಾಗಾಗಿ ಹಂಪಿ ಮತ್ತು ವಿದ್ಯಾರಣ್ಯರ ರೂಪಕಗಳು ಸ್ವಾತಂತ್ರ್ಯ ಹಾಗೂ ಏಕೀಕರಣದಲ್ಲಿ ಭಾವನಾತ್ಮಕವಾಗಿ ತಳಕುಗೊಂಡಿವೆ. ಇನ್ನಿತರ ಪ್ರಾಂತೀಯ ಭಾಷೆಯಲ್ಲಿ ಅವರದೇ ಆದ ಭಾವನಾತ್ಮಕ ಸಂಕೇತಗಳು ಇದ್ದಂತೆ ಕನ್ನಡಿಗರಲ್ಲೂ ಇವೆ. ಅದರಲ್ಲಿ ಮುಖ್ಯವಾಗಿ ಹಂಪಿ, ವಿದ್ಯಾರಣ್ಯರ ರೂಪಕಗಳೇ ಕನ್ನಡ ಸಾಹಿತ್ಯದಲ್ಲಿ ಏಕೀಕರಣದ ಭಾಗವಾಗಿ ಅಭಿವ್ಯಕ್ತಗೊಂಡಿವೆ. ಹೊಸಕೆರೆ ಚಿದಂಬರಯ್ಯ ಅವರ ವಿದ್ಯಾರಣ್ಯ ಚರಿತ್ರೆ, ಶಾಂತಕವಿಗಳ ಶ್ರೀವಿದ್ಯಾರಣ್ಯ, ಆಲೂರ ವೆಂಕಟರಾಯರ ವಿದ್ಯಾರಣ್ಯರ ಚರಿತ್ರೆ, ಸಿ.ವೆಂಕಟರಮಣಯ್ಯ ನವರ ಶ್ರೀವಿದ್ಯಾರಣ್ಯ ಚರಿತ್ರೆ ಸಂಗ್ರಹ, ಭೀಮಾಜಿ ಜಿವಾಜಿ ಹುಲಿಕವಿಯ ಶ್ರೀ ವಿದ್ಯಾರಣ್ಯ ಸ್ವಾಮಿಗಳು, ನರಸಿಂಗ ಲಕ್ಷ್ಮಣ ಹೆಗ್ಗಡೆ ಅವರ ಕರ್ನಾಟಕ ಸಿಂಹಾಸನ ನಾಟಕವು, ಡಿ.ವಿ.ಜಿಯವರ ಶ್ರೀ ವಿದ್ಯಾರಣ್ಯ ಮುಂತಾದ ಕೃತಿಗಳನ್ನು ಗಮನಿಸಬಹುದು.

೧೯೧೯ರಲ್ಲಿ ರಚನೆಗೊಂಡ ಹುಯಿಲಗೋಳ ನಾರಾಯಣರ ಶ್ರೀ ವಿದ್ಯಾರಣ್ಯ ನಾಟವು ವಿಜಯನಗರ ಸಾಮ್ರಾಜ್ಯದ ಗುರುಗಳಾದ ವಿದ್ಯಾರಣ್ಯರ ಚರಿತ್ರೆಯ ಮೂಲಕ ಕನ್ನಡ ನಾಡು–ನುಡಿಯ ಕುರಿತು ರಚನೆಗೊಂಡಿದೆ. ಅದೇ ಸಂದರ್ಭದಲ್ಲಿ ಆರಂಭವಾದ ಭಾರತದ ಸ್ವಾತಂತ್ರ್ಯ ಚಳುವಳಿ ಕುರಿತ ಅಂಶಗಳು ಈ ನಾಟಕದಲ್ಲಿ ಸೇರಿವೆ. ಬುಕ್ಕರಾಯ ಮತ್ತು ಗೌರಾಂಬಿಕೆಯ ನಡುವಿನ ಪ್ರೇರಕತೆಯೂ ಇದರಲ್ಲಿದೆ. ಆದರೆ ಪ್ರಸ್ತುತ ನಾಟಕವು ರಾಷ್ಟ್ರೀಯತೆ ಚಿಂತನೆಯ ಫಲವಾಗಿ ಹುಟ್ಟಿಕೊಂಡ ಪ್ರಾದೇಶಿಕ ಭಾಷಾವಾರು ಪ್ರಾಂತ್ಯಗಳ ರಚನೆಗೆ ಒತ್ತುಕೊಡುತ್ತದೆ. ನಾಟಕದ ಆರಂಭದಲ್ಲಿಯೇ ನಟಿ ಸೂತ್ರದಾರನಿಗೆಯಾವ ನಾಟಕವನ್ನು ಆಡುತ್ತಿರಿ ಎಂದಾಗ ಸೂತ್ರದಾರ ಹೇಳುವ ಮಾತು ಇಂತಿದೆ.

ಸೂತ್ರದಾರ : ಚಿ ಅದನ್ನು ಮರೆತಿರುವೆಯಾ? ಕೇಳು. ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರೆಂದೂ ವಿದ್ಯಾರಣ್ಯ ಮುನಿಗಳೆಂದೂ ಜಗದ್ವಿಖ್ಯಾತರಾದ ಶ್ರೀ ಮಾಧವಾಚಾರ್ಯರ ಚರಿತ್ರೆಯಲ್ಲಿನ ಕೆಲವು ಭಾಗಗಳನ್ನು ನಾಟಕ ರೂಪದಲ್ಲಿ ಆಡಿ ತೋರಿಸಿಕೊಡುತ್ತವೆ. ಇದಕ್ಕೆ ನಿನ್ನ ಸಮ್ಮತಿಯಿದೆಯಾ?

ನಟಿ : ತಾವು ಹೂಡಿದ ಕಾರ್ಯಕ್ಕೆ ನನ್ನದು ಎಂದೂ ಆತಂಕವಿರುವುದಿಲ್ಲ. ಅದಕ್ಕೆ ನನ್ನ ಸಮ್ಮತಿಯದೆ. ಆದರೆ ಈ ನಮ್ಮ ಹೊಸ ಮಾದರಿಯ ಸಭಿಕರಿಗೆ ಈ ಹಳೆಯ ಕತೆಯು ಸರಿಬರುವುದೋ?

ಸೂತ್ರಧಾರ : ನಿನ್ನ ಸಂಶಯವೇನೋ ನಿಜವಿದೆ. ಏಕೆಂದರೆ ಈ ನಮ್ಮ ಕರ್ನಾಟಕದ ಜನಗಳು ಶ್ರೀವಿದ್ಯಾರಣ್ಯರು, ವಿಕ್ರಮಾಂಕ, ಪುಲಕೇಶಿ, ಬಸವೇಶ್ವರ, ಶ್ರೀಕೃಷ್ಣದೇವರಾಯರು, ಅಪ್ಪಾಜಿಯವರು ಇವರೇ ಮೊದಲಾದ ವಿಭೂತಿಗಳನ್ನು ಮರೆತುದುದರಿಂದಲೇ ಈಗ ಈ ಆವಸ್ಥೆಗೆ ಬಂದಿರುವುದು. ಆದುದರಿಂದ ಈ

ನಾಟಕವನ್ನಾಡಿ ಈ ನಮ್ಮ ಜನಗಳಿಗೆ ಆ ಮಹಾತ್ಮರ ಮಹತ್ತರವಾದ ಕೃತಿಗಳ ನೆನಪು ಮಾಡಿಕೊಡಬೇಕಾಗಿದೆ.

ಈ ಮೇಲಿನ ಮಾತಗಳು ಕನ್ನಡದ ಜನಗಳಿಗೆ ತಮ್ಮ ಪೂರ್ವ ಸೂರಿಗಳ ಕುರಿತು ಉಂಟಾದ ವಿಸ್ಮೃತಿಯಿಂದಲೇ ಕರ್ನಾಟಕವು ಹರಿದು ಹಂಚಿಹೋಗಿರುವುದು ಎಂಬುದನ್ನು ತಿಳಿಸುತ್ತವೆ. ಅದಕ್ಕಾಗಿ ನಾವು ನಮ್ಮ ಚರಿತ್ರೆಗೆ ಮರಳಬೇಕಾಗಿದೆ. ಆ ಮೂಲಕ ನಾವು ಕರ್ನಾಟಕವನ್ನು ಮತ್ತೆ ಒಂದುಗೂಡಿಸುವುದು ಅಶ್ಯಕವೆಂಬುದನ್ನು ಈ ನಾಟಕ ಕಟ್ಟಿಕೊಡುತ್ತದೆ. ಈಗಾಗಲೇ ಮೇಲೆ ಚರ್ಚಿಸಿದಂತೆ ವಿಜಯನಗರವು ಕರ್ನಾಟಕದ ಸಮನಾರ್ಥವನ್ನೆ ಒಳಗೊಂಡಿದೆ ಎಂಬುದನ್ನು ಈ ನಾಟಕ ಧ್ವನಿಸುತ್ತದೆ. ಇಲ್ಲಿ ಬರುವ 'ಕರ್ನಾಟಕ ಸಿಂಹಾಸನ' ಎಂದು ಕನ್ನಡ ನಾಡನ್ನು ಮರಳಿ ಕಟ್ಟಿಕೊಳ್ಳುವುದನ್ನು ಸೂಚಿಸುತ್ತದೆ.

ಕನ್ನಡ ನಾಡಿನ ಸ್ಥಾಪನೆಯ ಕುರಿತು ಮತ್ತೊಂದು ಸನ್ನಿವೇಶದಲ್ಲಿ ಸೂತ್ರಧಾರ ಹೀಗೆ ಹೇಳುತ್ತಾನೆ.

ಸೂತ್ರಧಾರ : ನಿನ್ನನ್ನು ಕುರಿತು ಅವನು ಮಾತನಾಡಲಿಲ್ಲ. ನಮ್ಮ ಕರ್ನಾಟಕದಲ್ಲಿ ರಾಜ್ಯವನ್ನು ಸ್ಥಾಪಿಸಬೇಕೆಂದು ಬಯಸಿ ಬಂದ ಹರಿಹರರಾಯನು ಕುರುಬರ ವೇಷವನ್ನು ಧರಿಸಿ ಅದನ್ನು ನಟಿಸುವುದಕ್ಕಾಗಿ ಕುರಿಗಳನ್ನು ಕಾಯುವ ನೆವದಿಂದ ಇಲ್ಲಿಗೆ ಬರುತ್ತಿದ್ದಾನೆ. ಮತ್ತು ಅದರಂತೆ ಅತ್ತಿತ್ತ ಚದರಿ ಹೋಗುತ್ತಿರುವ ಕುರಿಗಳನ್ನು ತಿರುವಿಕೊಂಡು ಬರಲಿಕ್ಕೆ ತನ್ನ ಆಳಿಗೆ ಹೇಳುತ್ತಿದ್ದಾನೆ. ತಿಳಿಯಿತೋ? ಅದೋ! ಅವನು ಇತ್ತ ಕಡೆಗೆ ಬಂದೇ ಬಿಟ್ಟನು.

ಅಂದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಗಾಗಿ ಬಂದ ಹರಿಹರರಾಯನಂತೆ ಇಂದು ಕರ್ನಾಟಕ ನಾಡನ್ನು ಒಂದುಗೂಡಿಸಲು ಹೋರಾಟದ ಅವಶ್ಯಕತೆ ಇದೆ. ಎಂಬ ಅರಿವನ್ನು ಈ ನಾಟಕ ಜನರಿಗೆ ತಿಳಿಸುತ್ತದೆ. ಇಲ್ಲಿ ಹರಿಹರರಾಯನು ಏಕೀಕರಣ ಹೋರಾಟಗಾರರನ್ನು ಪ್ರತಿನಿಧಿಸುತ್ತಾನೆ. ಮತ್ತು ಏಕೀಕರಣಕ್ಕೆ ಹೋರಾಡುತ್ತಿರುವ ನಾಯಕರನ್ನು ಈ ನಾಟಕ ನೆನಪಿಸುತ್ತದೆ.

ಪರಮೇಶ್ವರ ಪುಲಿಕೇಶಿ

೧೯೩೬ರಲ್ಲಿ ಹಂಪಿಯ ವಿಜಯನಗರ ಸ್ಥಾಪನೆಯ ಆರುನೂರು ವರ್ಷಾಚರಣೆಯನ್ನು ನಡೆಸಲಾಯಿತು. ಈ ವರ್ಷಾಚರಣೆಯ ನೆನಪಿನಾರ್ಥವಾಗಿ ಶ್ರೀರಂಗರು ಕರ್ನಾಟಕದ ಚಾಲುಕ್ಯ ಮನೆತನದ ಪುಲಿಕೇಶಿಯ ಕುರಿತು ನಾಟಕವೊಂದನ್ನು ರಚಿಸಿದರು. ಈ ನಾಟಕ ಹರ್ಷವರ್ಧನ ಮತ್ತು ಪುಲಿಕೇಶಿಯ ನಡುವೆ ನಡೆದ ಸಂಗತಿಗಳನ್ನು ಒಳಗೊಂಡಿದೆ. ಕರ್ನಾಟಕದ ರಾಜನಾದ ಪುಲಿಕೇಶಿಯೆ ಇಲ್ಲಿ ನಾಯಕ. ಅಧುನಿಕ ಕಾಲದಲ್ಲಿ ಬರೆಯಲ್ಪಟ್ಟ

ಚರಿತ್ರೆಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಬಾಳಿಹೋದ ರಾಜರುಗಳನ್ನು ವರ್ತಮಾನದ ಘಟನೆಗಳಿಗೆ ಸಮೀಕರಿಸಿ ಆ ಮೂಲಕ ಅಂದಿನ ರಾಜಕೀಯ ಘಟನೆಗಳಾದ ನಾಡು ನುಡಿಯ ಕುರಿತು ಚಿಂತಿಸುವಂತೆ ನಿರೂಪಿತಗೊಂಡಿವೆ.

ಏಕೀಕರಣ

ಎಲ್.ಎಸ್. ಇನಾಂದಾರರಿಂದ ರಚನೆಗೊಂಡ ಈ ನಾಟಕದಲ್ಲಿ ಕನ್ನಡಿಗರು ಮತ್ತು ಮರಾಠಿಗರ ನಡುವಿನ ದ್ವೇಷದ ವಾತಾವರಣವನ್ನು ಶಮನಗೊಳಿಸುವ ದೃಷ್ಟಿಯನ್ನು ಈ ನಾಟಕದಲ್ಲಿ ಕಾಣಬಹುದು. ಒಂದು ಕುಟುಂಬದ ಸುತ್ತ ಹೆಣೆದ ನಾಟಕವಿದು. ಕನ್ನಡದ ಕುಟುಂಬದ ತಾಯಿಗೆ ಮೂರು ಜನ ಗಂಡುಮಕ್ಕಳು. ಒಬ್ಬ ಮಗ ಕರ್ನಾಟಕದ ಕನ್ಯೆಯೊಂದಿಗೆ, ಇನ್ನೊಬ್ಬ ಮಗ ಮಹಾರಾಷ್ಟ್ರದ ಕನ್ಯಯೊಂದಿಗೆ, ಮೂರನೆ ಮಗ ತೆಲುಗಿನ ಕನ್ಯೆಯೊಂದಿಗೆ ಮದುವೆ ಆಗಿರುತ್ತಾರೆ. ಎರಡನೇ ಮಗ ಮಹಾರಾಷ್ಟ್ರದಲ್ಲಿ ಮೂರನೇ ಮಗ ಆಂಧ್ರದಲ್ಲಿ ನೆಲೆಸಿರುತ್ತಾನೆ. ನಂತರ ಹೆಂಡಂದಿರ ಮಾತುಕೇಳಿ ಕರ್ನಾಟಕದ ಹೊರಗಿದ್ದ ಮಕ್ಕಳು ತಾಯಿಯನ್ನು ಪಾಲು ಕೇಳುತ್ತಾರೆ. ಇದಕ್ಕೆ ಹಿರಿಯ ಮಗ ಒಪ್ಪುವುದಿಲ್ಲ. ತಾಯಿ ಇರುವವರೆಗೆ ಈ ಮನೆಯನ್ನು ಒಡೆಯಲು ಸಾಧ್ಯವಿಲ್ಲ. ಎಂದಾಗ, ಇದಕ್ಕೆ ಸೊಸೆಯಂದಿರು ಒಪ್ಪುತ್ತಾರೆ. ಇಲ್ಲಿಯ ತಾಯಿ ಕನ್ನಡ (ಕರ್ನಾಟಕ) ವನ್ನು ಪ್ರತಿನಿಧಿಸುತ್ತಾಳೆ. ಈ ರೀತಿಯ ಭಾವನಾತ್ಮಕ ಸಂಬಂಧಗಳ ಮೇಲೆ ಅಂದು ಕನ್ನಡ ನಾಟಕಗಳು ಕರ್ನಾಟಕದ ಏಕೀಕರಣ ಚಳುವಳಿಗೆ ಪ್ರತಿಕ್ರಿಯಿಸಿವೆ.

ಹರ್ಡೇಕರ್ ಮಂಜಪ್ಪ

ಎಸ್.ಎಸ್.ಕೋತಿನವರು ಬರೆದಿರುವ ಈ ನಾಟಕ ಸಮಾಜ ಮತ್ತು ನಾಡು ರಾಷ್ಟ್ರಕ್ಕಾಗಿ ಹೋರಾಡಿ 'ಕರ್ನಾಟಕದ ಗಾಂಧಿ' ಎಂದು ಗುರುತಿಸಿಕೊಂಡಿರುವ ಹರ್ಡೇಕರ್ ಮಂಜಪ್ಪನವರ ಜೀವನವನ್ನು ಒಳಗೊಂಡಿದೆ. ಸ್ವಾತಂತ್ರ್ಯ ಚಳುವಳಿ ಮತ್ತು ಏಕೀಕರಣ ಸಂದರ್ಭದಲ್ಲಿ ಪಾಲ್ಗೊಂಡ ಹೋರಾಟಗಾರರು ಹಾಡುತ್ತಿದ್ದ ಹಾಡುಗಳು ಹೇಗೆ ಜನರಲ್ಲಿ ನಾಡಿನ ಬಿಡುಗಡೆಗಾಗಿ ಹೋರಾಡುವಂತೆ ಧೈರ್ಯವನ್ನು ಪ್ರೇರೆಪಿಸುತ್ತಿದ್ದವು ಎಂಬುದನ್ನು ನಾಟಕದ ಒಂದು ಹಾಡು ಚಿತ್ರಿಸುತ್ತದೆ.

> "ನಾಡುನುಡಿಯ ಸೇವೆಗಾಗಿ ಓಡಿ ಬನ್ನಿರಿ
> ನಾಡಿಗಾಗಿ ನಮ್ಮ ಒಡಲು ಮೀಸಲೆನ್ನಿರಿ ॥ಪ॥
> ದೇಶಸೇವೆ ಈಶಸೇವೆ ಎಂಬುದನ್ನು ಮರೆತೆವಲ್ಲ
> ಸ್ವಾರ್ಥದಲ್ಲಿ ಮುಳುಗಿ ನಾವು ದಾಸ್ಯದಲ್ಲಿ ಕೊಳೆತೆವಲ್ಲಾ

ನಾಡ ಒಡಲ ಆಳದಿಂದ ಸಿಡಿದು ಬಂದ ಕಿಡಿಗಳೆ
ನಾಡಸಿರಿಯ ಹರಡಲೆಂದು ಮೂಡಿಬಂದ ಕುಡಿಗಳೆ
ಹೊಸತು ನಾಡು ಕಟ್ಟಲೆಂದು ಕೇಡಿಗಳನು ಮೆಟ್ಟಲೆಂದು
ಜನನಿಗಿಂತ ಜನ್ಮಭೂಮಿ ಮಿಗಿಲುಯೆಂದು ಸಾರಲೆಂದು"

ಇಂತಹ ಹಾಡುಗಳು ಜನರಲ್ಲಿ ಉಂಟು ಮಾಡಿದ ನಾಡಿನ ಬಗ್ಗೆ ಅಭಿಮಾನವನ್ನು ಮತ್ತು ಎಷ್ಟೋ ಜನ ಯುವಕರು ಅಭಿಮಾನದಿಂದ ನಾಡಿನ ಬಿಡುಗಡಿಗಾಗಿ ಹೋರಾಟಕ್ಕೆ ಧುಮುಕಿದ ಪ್ರಸಂಗಗಳನ್ನ ಈ ನಾಟಕದ ಮೂಲಕ ಗಮನಿಸಬಹುದು.

ಹೋರಾಟದ ಉಗ್ರತೆಗಳನ್ನು, ಹೋರಾಟಗಾರರ ಮೇಲಿನ ಪೋಲಿಸರ ದೌರ್ಜನ್ಯಗಳನ್ನು ಕುರಿತು ಒಂದು ಮಾತು ಹೀಗಿದೆ.

"ಏನು ಎಂಥಾ ಚಳುವಳಿ! ಎಂಥಾ ಭೀಕರ ಸ್ಥಿತಿ! ಕೇಳಿದರೆ ಸಾಕು; ಮೈತುಂಬಾ ಮುಳ್ಳು ಮೂರಿದಂಗಾಯ್ತು. ನಮ್ಮ ಜನರ ಚಳುವಳಿ ಪ್ರತಿಭಟನೆ ಕೇಳಿದರೆ ಕಣ್ಣಮುಂದೆ ಹಂಗಹಂಗ.....ಬೆಂಕಿಹೊಳಿನ ಹರದುಂಗ ಆಯ್ತು"

ಕಿತ್ತೂರ ಕೇಸರಿ

೨೦ನೆಯ ಶತಮಾನದಲ್ಲಿ ಆರಂಭದಲ್ಲಿ ಭಾರತದ ಬಿಡುಗಡೆಗಾಗಿ ಏಕತೆಯ ಪ್ರಶ್ನೆ ಬಂದಾಗ ಮತ್ತು ಕರ್ನಾಟಕವನ್ನು ಒಂದುಗೂಡಿಸುವ ಪ್ರಶ್ನೆ ಬಂದಾಗ ವಿಜಯನಗರ ಸಾಮ್ರಾಜ್ಯವನ್ನು ಏಕತೆಯ ಭಾಗವಾಗಿ ನೋಡುವ ಪ್ರಕ್ರಿಯೆ ಸಾಮಾನ್ಯವಾಗಿದೆ. ಅದು ಆಲೂರು ವೆಂಕಟರಾಯರಿಂದ ಸಾಹಿತ್ಯ ಕ್ಷೇತ್ರಕ್ಕೂ ಹರವನ್ನು ಪಡೆದುಕೊಂಡಿತು. ಚಿಕ್ಕೋಡಿ ಶಿವಲಿಂಗ ಸ್ವಾಮಿಗಳು ರಚಿಸಿದ ಕಿತ್ತೂರ ಕೇಸರಿ ನಾಟಕದಲ್ಲಿ ಅಂತ ಒಂದು ಸನ್ನಿವೇಶವಿದೆ. ಚೆನ್ನಮ್ಮ ಯುದ್ಧಕ್ಕೆ ಸಿದ್ಧತೆ ನಡೆಸುವಾಗಿನ ಮಾತು.

ಚೆನ್ನಮ್ಮ : ನಮ್ಮ ಕನ್ನಡ ವೀರರೆ ನಿಜವಾದ ಕನ್ನಡ ರಕ್ತವು ನಿಮ್ಮಲ್ಲಿದ್ದರೆ ನಮ್ಮ ಕನ್ನಡ ದೇಶವನ್ನು ಪರವಶಮಾಡಲಿಕ್ಕಿಲ್ಲವೆಂದು ನನ್ನ ನಂಬಿಕೆ. ಒಂದು ವೇಳೆ ಇದಕ್ಕೆ ತಪ್ಪಿದರೆ ಈಗಿರುವ ನಿಮ್ಮ ಸ್ವಾತಂತ್ರ್ಯವು ಪುನಃ ದೊರೆಯುವುದು ದುರ್ಲಭ. ಆದ್ದರಿಂದ ಚೆನ್ನಾಗಿ ವಿಚಾರ ಮಾಡಿ. ಈಗ ಕೈ ಹತ್ತುವ ಪ್ರಸಂಗ ಬಂದಿರುವದೆಂದು ಹೆದರಬೇಡಿರಿ ನಿಮ್ಮಲ್ಲಿರುವ ಪರಾಕ್ರಮ ಮತ್ತು ಬುದ್ಧಿ ಕೌಶಲ್ಯವನ್ನು ತೋರಿಸುವ ಈ ಸಮಯವನ್ನು ಕಳೆದುಕೊಳ್ಳಬೇಡಿರಿ. ಯಾವ ಮಾತೆಯ ಸ್ತನಪಾನದಿಂದ ಬೇಕಾದ ಹಾಗೆ ಚಲ್ಲಾಟದಲ್ಲಿ ಕಾಲ ಕಳೆದಿರೋ ಅವಳ ಅಭಿಮಾನವನ್ನು ಹಿಡಿಯಿರಿ ಅವಳ ಬಗ್ಗೆ ನಿರ್ದಯರಾಗದೆ ಟೊಂಕಕಟ್ಟಿ ಸಿದ್ಧಳಾಗಿರುವಾಗ ನೀವೇಕೆ ಸುಮ್ಮನೆ

ಕುಳಿತುಕೊಳ್ಳದಿರಿ. ಕಿತ್ತೂರಿನ ಅಳಿವು ಉಳಿವು ನಿಮ್ಮ ಕೈಯಲ್ಲಿದೆ ವೈರಿಗಳ ಎದೆಯನ್ನೇ ಸೀಳಿ ಮುನ್ನುಗ್ಗಿರಿ.

ಚೆನ್ನಮ್ಮನ ಇಂತ ಆವೇಶಭರಿತ ಮಾತುಗಳು ಕಂಪನಿ ಸರಕಾರದ ವಿರುದ್ಧ ಸ್ವಾತಂತ್ರ್ಯನಾಡು ಕಟ್ಟುವ ಇಂಗಿತವನ್ನು ಜನರಲ್ಲಿ ಮೂಡಿಸುತ್ತಿದ್ದವು. ಪರಿಣಾಮವಾಗಿ ಬ್ರಿಟಿಶ್ ಅಧಿಕಾರಿಗಳ ಅವಕೃಪೆಗೆ ಈ ನಾಟಕ ಒಳಪಟ್ಟಿತು. ಇಲ್ಲಿ ಕನ್ನಡಿಗರ ವೀರಾಭಿಮಾನವನ್ನು ಕೆರಳಿಸುವ ಸಂಭಾಷಣೆ ಕೇಳಿದಾಗಲೆಲ್ಲ ಪ್ರೇಕ್ಷಕರಿಂದ 'ಭಾರತ ಮಾತಾ ಕೀ ಜೈ' ಕರ್ನಾಟಕ ಮಾತಾ ಕಿ ಜೈ ಎಂಬ ಘೋಷಣೆಗಳು ಮೊಳಗುತ್ತಿದ್ದವು. ಇಂತ ನಾಟಕ ನೋಡಿಯೆ ತಾನು ೧೯೩೦ರಲ್ಲಿ ಸ್ವಾತಂತ್ರ್ಯಾಂದೋಲನದಲ್ಲಿ ಪಾಲ್ಗೊಂಡಿದ್ದು. ಎಂದು ಸಂಪಗಾವಿಯ ಸ್ವಾತಂತ್ರ್ಯ ಹೋರಾಟಗಾರರಾದ ವಾಲಿ ಚೆನ್ನಪ್ಪನವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮತ್ತೊಂದು ಸನ್ನಿವೇಶದಲ್ಲಿ ಚೆನ್ನಮ್ಮ ಎರಡನೆ ಯುದ್ಧದಲ್ಲಿ ಸೋತು ಸೆರೆಯಾಗಿ ಕಿತ್ತೂರನ್ನು ಬ್ರಿಟಿಷರಿಂದ ರಕ್ಷಿಸುವಂತೆ ಕಿತ್ತೂರಿನ ಮಹಿಳೆಯರಿಗೆ ಹೇಳುವ ಮಾತುಗಳು ಭಾವನಾತ್ಮಕವಾಗಿ ಪ್ರೇಕ್ಷಕರಿಗೆ ದೇಶಾಭಿಮಾನದ ಬಗ್ಗೆ ಅರಿವು ಮೂಡಿಸಿದ್ದನ್ನು ಗಮನಿಸಬಹುದು. ಆ ಮಾತು ಹೀಗಿದೆ.

> "ಅಮ್ಮಗಳಿರಾ ಪುರುಷರಿಂದಾಗುವ ಘೋರ ಕೃತ್ಯವನ್ನು
> ಕೈಗೊಂಡು ನಮ್ಮ ಹೆತ್ತಮ್ಮನನ್ನು ಸ್ವತಂತ್ರ್ಯವಾಗಿ ಇರಿಸಬೇಕೆಂದನು
> ಅದು ಸಾಧ್ಯವಾಗಲಿಲ್ಲ. ಮೋರೆಯ ಮೇಲೆ ಮೀಸೆಯನ್ನು
> ಹೊತ್ತ ಪುರುಷರೇ ಕನ್ನಡ ತಾಯಿಯ ಹೆಸರು ಉಳಿದಂತೆ
> ಮಾಡಿದರು ನಮ್ಮ ಸ್ತ್ರೀಯರು ಒಳ್ಳೆಯ ಕೋಮಲ ಮನಸ್ಸಿನವರು
> ನನ್ನ ಬಗ್ಗೆ ನಿಮ್ಮಲ್ಲಿ ತೀವ್ರ ಕಣ್ಣೀರು ಬರಬಹುದು ಆದರೆ ಹಾಗೆ
> ಕಣ್ಣೀರು ಚೆಲ್ಲದೇ ಹೇಡಿಗಳಂತೆ ಕುಳಿತಿರುವ ನಿಮ್ಮ
> ಪುರುಷರಿಗೆ ಪ್ರೋತ್ಸಾಹ ಕೊಟ್ಟು ನಿಮ್ಮ ಕನ್ನಡ ತಾಯಿಯನ್ನು ರಕ್ಷಿಸುವಂತೆ
> ಮಾಡಿರಿ"(ಕಿತ್ತೂರ ಕೇಸರಿ)

ಕಂಸವಧ

ಭಾರತದ ಸಾತಂತ್ರ್ಯ ಜಾಗೃತಿಯ ಬಗ್ಗೆ ಮಾತನಾಡುತ್ತಲೇ ಪ್ರಾದೇಶಿಕ ಐಕ್ಯತೆಯ ಬಗ್ಗೆ ಈ ನಾಟಕ ಮಾತನಾಡುತ್ತದೆ. ಭಾರತವು ಒಂದು ಭಾಷೆಯನ್ನಾಡುವ ಜನರುಳ್ಳ

ದೇಶವಲ್ಲಾ. ಹಲವು ಭಾಷೆಗಳನ್ನಾಡುವ ಜನಾಂಗಗಳ ಸಂಯುಕ್ತ ರಾಷ್ಟ್ರ ಎಂಬುದನ್ನು ಚಾಣೂರ ಮತ್ತು ಮುಷ್ಠಿಕರ ಮಾತುಗಳು ಸ್ಪಷ್ಟಪಡಿಸುತ್ತವೆ.

ಚಾಣೂರ–ಮುಷ್ಠಿಕ : ಬಜರಂಗಬಲೀ ಹಜೂರಕೇ ಗದ್ದೀಕ ಸಲಾಮ ತರಕಖೇ

ಕಂಸ : ಬನ್ನಿ ಬನ್ನಿ ಒಳ್ಳೇ ಸಮಯಕ್ಕೆ ಬಂದಿರಿ.

ಚಾಣೂರ : ಬಂದೌಂಕು ಹುಕುಮಹೋನಾ

ಕಂಸ : ಆ ಕೃಷ್ಣ – ಬಲರಾಮ ರಾಜಧಾನಿಯಲ್ಲಿ ಬಂದರಂತೆ.

ಚಾಣೂರ : ಆಗಯೇ; ಬೇಹತ್ತರ ಹುವಾ, ಜಹಾಂಪನ; ಉನಕೋ ರಾಸ್ತಮೆ ಗಾರದಕದಕ ಆಜಾ ಉಂ.

ಮುಷ್ಠಿಕ : ಬಾಯಿ ಚಮಾರ, ಅಪರೆ ರಾಯ ಬರಾಬರ ನಹಿ, ಬಿಲ್ಲಿ ಜೇ ಚುವ್ಹೇಕು ಖಿಲಾಖಿಲಾಕರ ಮಾರ ಡಾಲತಿ ಹ್ಯೆ, ವೈಸಾಯಿ ಅಖಾಡೆ ಮೇ ವಿನಗೌಲಿಯಾಂಕು ಖಿಲಾಖಿಲಾಕರ ಮಾರ ಡಾಲಿನ ಠೀಕ ಹೋ ಜಾಯೆಗಾ ಸರಕಾರಕೆ ನಜರೆ ಮುಬಾರಕ್‌ಕೋ ಏಕ್ ತಮಾಷಾ ಭೀ ಹೋ ಜಾಯೆಗಾ'(ಅದೆ, ಪು–೩೭೮)

ಉರ್ದು ಭಾಷೆಯಲ್ಲಿ ನಡೆದ ಈ ಸಂಭಾಷಣೆ ಕುರಿತು ತ. ಸು. ಶಾಮರಾಯರು "ಕಂಸವಧೆಯಲ್ಲಿ ಬರುವ ಮುಷ್ಠಿಕ ಮತ್ತು ಚಾಣೂರರು ಉರ್ದು ಭಾಷೆಯಲ್ಲಿ ಸಂಭಾಷಣೆ ನಡೆಸುವದರ ಔಚಿತ್ಯ ನಮಗೆ ಅರ್ಥವಾಗುವುದಿಲ್ಲ" ಎನ್ನುತ್ತಾರೆ.(ತ. ಸು. ಶಾಮರಾಯ, ಕನ್ನಡ ನಾಟಕ) ಕನ್ನಡದ ಪೌರಾಣಿಕ ನಾಟಕದಲ್ಲಿ ಉರ್ದು ಭಾಷೆಯನ್ನು ಬಳಸಿರುವ ಔಚಿತ್ಯ ಏನೇ ಇದ್ದರೂ ನಾಟಕ ರಚನೆಯ ಕಾಲದ ವರ್ತಮಾನದ ತಲ್ಲಣಗಳನ್ನು ತಿಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಭಾರತದ ಸಾತಂತ್ರ್ಯ ಚಳುವಳಿಯ ಜೊತೆ ಜೊತೆಗೆನೆ ರಾಷ್ಟ್ರೀಯತೆಯ ಭಾಗವಾಗಿ ಭಾಷಿಕವಾರು ಭಾಷಾ ಪ್ರಾಂತ್ಯಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಹೋರಾಟಗಳು ಜರುಗುತ್ತಿದ್ದವು. ಹಾಗೆ ಈ ಸನ್ನಿವೇಶವನ್ನು ಹೀಗೂ ಅರ್ಥೈಸಿಕೊಳ್ಳಬಹುದು. ಸಾತಂತ್ರ್ಯ ಚಳುವಳಿ ಭಾಗವಾಗಿ ನಡೆದ ಚಳುವಳಿ, ಸಭೆ ಸಮಾರಂಭ ಮತ್ತು ಪತ್ರ ವ್ಯವಹಾರಗಳು ಹಿಂದಿಯಲ್ಲಿಯೆ ನಡೆಯುತ್ತಿದ್ದವು. ಮತ್ತು ಹಿಂದಿ ಭಾಷೆಯ ಆಕ್ರಮಣದ ಸೂಕ್ಷ್ಮತೆಗಳು ಇವು ಆಗಿರಬಹುದು. ಇದರ ವಿರುದ್ಧ ತಮಿಳುನಾಡಿನಲ್ಲಿ ಪೆರಿಯಾರ್ ಅವರ ನೇತೃತ್ವದಲ್ಲಿ ದ್ರಾವಿಡ ಚಳುವಳಿ ಆರಂಭಗೊಂಡಿತು. "ಚಾಣೂರ ಮುಷ್ಠಿಕರು ಕಾಶ್ಮಿರ ಪ್ರದೇಶದ ಮಲ್ಲರು ಆದುದರಿಂದ ಅವರು ಮಾತನಾಡುವ ಭಾಷೆ ಉರ್ದು. ಅವರು ತಮ್ಮ ಪ್ರಾದೇಶಿಕ ಭಾಷೆಯನ್ನಾಡುವುದರಲಿ ಯಾವ ತಪ್ಪೂ ಇಲ್ಲವೆಂಬುದು ಸದಾಶಿವರಾಯರ ಅಭಿಪ್ರಾಯ. 'ಕಂಸವಧ'ದಲ್ಲಿ ಚಾಣೂರ ಮುಷ್ಠಿಕರು ಉರ್ದು

ಮಾತನಾಡಿದನಾದರೆ ಪಾದುಕಾಪಟ್ಟಾಭಿಷೇಕ ನಾಟಕದಲ್ಲಿ ಮಾರವಾಡಿಗಳು ತಮ್ಮದೇ ಆದ ರಾಜಸ್ಥಾನಿ ವಿಶಿಷ್ಟ ಶೈಲಿಯಲ್ಲಿ ಮಾತನಾಡುತ್ತಾರೆ. ಶ್ರೀ ಕೃಷ್ಣ ಬಲರಾಮನನ್ನು ಮಧುರೈಯಲ್ಲಿ ಸ್ವಾಗತಿಸುವಾಗ ಸಿಂಪಿಗ ಎನ್ನುವವನು ತನ್ನ ಮಾತೃಭಾಷೆಯಾದ ಮರಾಠಿಯಲ್ಲಿ ಪಠ್ಯ ಹೇಳುತ್ತಾನೆ "ಹಾಗಾಗಿ ದೇಶದ ಸ್ವಾತಂತ್ರ್ಯದ ಜೊತೆಗೆ ಭಾಷಿಕವಾಗಿ ಪ್ರಾಂತ್ಯಗಳ ಸ್ವಾತಂತ್ರ್ಯವು ಅಷ್ಟೆ ಮುಖ್ಯ ಎಂಬುದನ್ನು ಈ ನಾಟಕದ ಮೂಲಕ ತಿಳಿಯಬಹುದು.(ಬಸವರಾಜ ಜಗಜಂಪಿ, ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ಪು-೨೩೮)

ರಾಷ್ಟ್ರೀಯ ಚಳುವಳಿ ನೆರಳಲ್ಲಿಯ ಬಂದ ಪ್ರಾದೇಶಿಕ ಚಿಂತನೆಗಳು ೧೯-೨೦ನೆಯ ಶತಮಾನದ ಪ್ರಮುಖ ಕೊಡುಗೆಗಳಾಗಿವೆ. ಅಂದು ಸಾಂಸ್ಕೃತಿಕವಾಗಿ ಒಡಮೂಡಿದ ವಿಚಾರಗಳು ಪ್ರಾಂತೀಯ ಸಂದರ್ಭಕ್ಕೂ ವಿಸ್ತರಿಸಿದವು. ಇಂತ ಸಂದರ್ಭವನ್ನು ಹಿನ್ನೆಲೆಯಾಗಿಟ್ಟುಕೊಂಡು ಕನ್ನಡ ನಾಟಕ ಸಾಹಿತ್ಯ ತನ್ನ ಮೂಲಕ ಪ್ರಾಂತೀಯ ಸಮಸ್ಯೆಗಳನ್ನು ಮುನ್ನೆಲೆಗೆ ತರಲು ಪ್ರಯತ್ನಿಸಿತು. ಇಂದು ಚರ್ಚಿಸುತ್ತಿರುವ ಏಕರಾಷ್ಟ್ರದ ಉನ್ಮಾದಕ್ಕೆ ಅಂದಿನ ಚಿಂತನೆಗಳು ಆರೋಗ್ಯಕರವಾದ ವಾತಾವರಣವನ್ನು ನಿರ್ಮಿಸುವಲ್ಲಿ ಸಫಲತೆಯನ್ನು ಕಾಣಬೇಕಾಗಿದೆ. ಭಾರತವನ್ನು ರಾಜ್ಯಗಳ ಒಕ್ಕೂಟ ವ್ಯವಸ್ಥೆಯ ಭಾಗವೆಂದೆ ಪರಿಗಣಿಸಬೇಕೆಂಬ ಆಶಯಗಳನ್ನು ಕನ್ನಡ ನಾಟಕಗಳು ವ್ಯಕ್ತಪಡಿಸಿವೆ.

ಈ ಚಿಂತನೆಗಳ ವಿಸ್ಕೃತ ರೂಪವಾಗಿ ವಿನೂತವಾಗಿ ರೂಪಗೊಂಡ ನಾಟಕ ಸಾಹಿತ್ಯ ಸ್ವಾತಂತ್ರ್ಯ ಚಳುವಳಿಯಂತ ಘಟನೆಗಳನ್ನು ಜನರ ಮಧ್ಯಕ್ಕೆ ತೆಗೆದುಕಂಡು ಹೋಗಲು ಸಾಕಷ್ಟು ಶ್ರಮಿಸಿದೆ. ಹೊಸದಾಗಿ ವಸಾಹತುಗಳ ವಿರುದ್ಧ ವಸಾಹತು ರಾಷ್ಟ್ರಗಳು ತಮ್ಮ ಬಿಡುಗಡೆಗಾಗಿ ಯುರೋಪಿನ ಚಿಂತನಧಾರೆಗಳು ಪ್ರಭಾವ ರಚನೆಗೊಂಡ ನಾಟಕ ಸಾಹಿತ್ಯ ಇಲ್ಲಿಯ ಸಾಹಿತ್ಯ ರಚನಾದಂತ ಮಾದರಿಗಳ ಜೊತೆಗೆ ಐತಿಹಾಸಿಕ, ಸಾಮಾಜಿಕ ವಸ್ತುಗಳನ್ನೆ ಕೇಂದ್ರಿಕರಿಸಿ ರಚನೆಗೊಂಡಿತು. ಭಾರತದ ಅಂದಿನ ಜರೂರುಗಳಾದ ರಾಜಕಿಯ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ, ಏಕೀಕರಣದಂತ ಚಳುವಳಿಗಳನ್ನ ವ್ಯಕ್ತಿ ಕೇಂದ್ರಿತ, ವಸ್ತು ಕೇಂದ್ರಿತ ಮತ್ತು ಚಳುವಳಿ ಕೇಂದ್ರಿತ ಎಂದು ವಿಭಾಗಿಸಿಕೊಂಡು ಸಾಹಿತ್ಯ ಚರಿತ್ರೆಯ ನಡುವಿನ ಕೊಂಡಿಯಾಗಿ ನಾಟಕ ಸಾಹಿತ್ಯ ನಿರ್ವಹಿಸಿದ ಪಾತ್ರವನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

* * *

ಅಧ್ಯಾಯ: ಐದು

ಕನ್ನಡ ನಾಟಕಗಳು ಮತ್ತು ಗಾಂಧಿ

ಅಧ್ಯಾಯ : ಐದು

ಕನ್ನಡ ನಾಟಕಗಳು ಮತ್ತು ಗಾಂಧಿ

ಕನ್ನಡ ನಾಟಕಗಳಲ್ಲಿ ಗಾಂಧಿಯ ಪ್ರತಿನಿಧಿಕರಣವನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೋಡಬಹುದು. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ನಾಟಕಗಳಲ್ಲಿ ಒಂದು ಪಾತ್ರ, ವಸ್ತು, ಚಿಂತನೆಯಾಗಿ ಗಾಂಧಿ ಪ್ರತಿನಿಧೀಕರಣಗೊಂಡಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧಿ ಒಂದು ಪಾತ್ರವಾಗಿ ಮೂಡಿ ಬರುವುದಕ್ಕಿಂತ ಒಂದು ವಸ್ತು ಚಿಂತನೆಯಾಗಿ ಪ್ರತಿನಿಧಿಕೊಂಡಿರುವುದೇ ಹೆಚ್ಚು. ಈ ಹಿನ್ನೆಲೆಯಲ್ಲಿ ಗಾಂಧಿ ಕುರಿತು ಬಂದ ನಾಟಕಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕನ್ನಡ ನಾಟಕಗಳಲ್ಲಿ ಗಾಂಧಿಯನ್ನು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಗ್ರಹಿಸಲಾಗಿದೆ. ಗಾಂಧಿ ಪ್ರತಿಪಾದಿಸಿದ ಅಹಿಂಸೆ, ಅಸ್ಪೃಶ್ಯತೆ ನಿವಾರಣೆ, ಗುಡಿಕೈಗಾರಿಕೆಗಳು, ಗ್ರಾಮೋದ್ಧಾರ, ದಾಸ್ಯ ವಿಮೋಚನೆ, ಸ್ವದೇಶಿ ಚಳುವಳಿಯಂತಹ ಅಂಶಗಳು ನಾಟಕಗಳ ವಸ್ತುಗಳಾಗಿವೆ. ಕನ್ನಡ ನಾಟಕಗಳು ಅಷ್ಟೇ ಅಲ್ಲದೆ ಇನ್ನಿತರ ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಾದಂಬರಿ, ಕಥೆಗಳಲ್ಲಿಯೂ ಗಾಂಧಿಯ ತತ್ವಾದರ್ಶಗಳು ಪ್ರತಿನಿಧೀಕರಣಗೊಂಡಿವೆ.

ಕನ್ನಡ ನಾಟಕಗಳು ಅಷ್ಟೇ ಅಲ್ಲದೇ ಕನ್ನಡ ಸಾಹಿತ್ಯದಲ್ಲಿಯೂ ಗಾಂಧೀಜಿಯವರು ಇಷ್ಟೊಂದು ಪ್ರಭಾವ ಬೀರಲು ಕಾರಣಗಳೇನು? ಎಂಬುದನ್ನು ಅವಲೋಕಿಸುದಾಗ, ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯದಂತಹ ಲೇಖಕರು ಗಾಂಧಿ ಮತ್ತು ಅವರ ತತ್ವಾದರ್ಶಗಳನ್ನು ತಮ್ಮ ಸಾಹಿತ್ಯ ಕೃತಿಯಲ್ಲಿಯೂ ನಾಟಕಗಳಲ್ಲಿ ಮುಖ್ಯ ವಸ್ತುವಾಗಿಯೇ ಕೇಂದ್ರಿಕರಿಸಿಕೊಂಡಿರುವುದು ಕಂಡುಬರುತ್ತದೆ.

ನವೋದಯ ಕಾಲದ ಲೇಖಕರು ತಮ್ಮ ನಾಟಕಗಳಲ್ಲಿ ಗಾಂಧಿಯವರನ್ನು ಸಾಮಾಜಿಕವಾಗಿ ರಾಜಕೀಯವಾಗಿ ಗ್ರಹಿಸಿ ನಾಟಕಗಳ ಮೂಲಕ ಅಭಿವ್ಯಕ್ತಿಸಲು ಅವರ ಪ್ರಯತ್ನಿಸಿದ್ದಾರೆ. ಅಂತ ನಾಟಕಗಳೆಂದರೆ ಜಿ. ಪಿ. ರಾಜರತ್ನಂ ಅವರ ಸಂಭವಾಮಿ ಯುಗೇ ಯುಗೇ, ನೀಲತ್ತಳ್ಳಿ ಕಸ್ತೂರಿ ಅವರ ಕ್ರಾಂತಿ ಮಾರ್ಗ ಮತ್ತು ಇದು ಭಾರತದ ದಾರಿ, ಆನಂದಕಂದ ಅವರ ಅಮೃತಾತ್ಮ, ರಾಮಕೃಷ್ಣ ರಾಯರ 'ಗಾಂಧೀಜಿ ಸ್ವರ್ಗದಲ್ಲಿ,'

ಎಂ.ಎ ದೊರೆಸ್ವಾಮಿ ಅಯ್ಯಂಗಾರ್ ಅವರ 'ಧರ್ಮಜ್ಯೋತಿ,' 'ಶೋಕಚಕ್ರ,' ಮತ್ತು ಹರಿಜನಿವಾರ, ಗೋವಿಂದ ಪೈ ಅವರ 'ಚಿತ್ರಭಾನು' ಅಥವಾ ೧೯೪೭, ಕುವೆಂಪು ಅವರ 'ಬಲಿದಾನ,' ದ.ರಾ. ಬೇಂದ್ರೆ ಅವರ ಉದ್ಧಾರ, ಶಿವರಾಮ ಕಾರಂತರ ಗರ್ಭಗುಡಿ, ಹುಯಿಲಗೋಳ ನಾರಾಯಣರ ಪತಿತೋದ್ಧಾರ, ಹೀಗೆ ನವೋದಯ ಲೇಖಕರ ನಾಟಕಗಳಲ್ಲಿ ಗಾಂಧಿಯನ್ನು ಹಾಗೂ ಅವರ ಚಿಂತನೆಗಳನ್ನು ಕಾಣಬಹುದಾಗಿದೆ.

೧೯ನೇ ಶತಮಾನದ ಕೊನೆಯ ಭಾಗ ಮತ್ತು ೨೦ನೇ ಶತಮಾನದ ಆರಂಭ ಕಾಲದಲ್ಲಿ ನಡೆದ ರಾಷ್ಟ್ರೀಯ ಚಳುವಳಿಗಳ ಮಹಾತ್ಮ ಗಾಂಧಿಯವರ ಬರವಿಗೆ ಪೂರ್ವ ಸಿದ್ಧತೆಯಾಗಿ ಪರಿಣಮಿಸಿತು. ಮೊದಲ ಮಹಾಯುದ್ಧ ಮತ್ತು ಅದರ ಪರಿಣಾಮಗಳು ಭಾರತವನ್ನು ಆರ್ಥಿಕವಾಗಿ ತೀವ್ರ ಶೋಷಣೆಗೆ ಗುರಿ ಪಡಿಸುತ್ತಿರುವ ಕಾಲದಲ್ಲಿ ಭಾರತದ ರಾಜಕೀಯ ನಾಯಕತ್ವವನ್ನು ಮಹಾತ್ಮ ಗಾಂಧಿಯವರು ವಹಿಸಿಕೊಂಡರು. ಇಲ್ಲಿಗೆ ಆಧುನಿಕ ಭಾರತದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲಿ ಒಂದು ಪರ್ವವು ಮುಗಿದು ಗಾಂಧಿ ಯುಗ ಆರಂಭವಾಯಿತು. ಎಂದು ಮರುಳ ಸಿದ್ದಪ್ಪನವರು ಅಭಿಪ್ರಾಯಪಟ್ಟಿದ್ದಾರೆ.(ಮರುಳಸಿದ್ದಪ್ಪ ಕೆ, ೨೦೧೩, ಪುಟ.೯೨) ನವೋದಯ ಕಾಲಘಟ್ಟ ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ಗಾಂಧಿ ಯುಗ ಇವೆರಡನ್ನು ಏಕಕಾಲದಲ್ಲಿ ಪ್ರಕ್ರಿಯೆಯಲ್ಲಿದ್ದಂತವು. ಹಾಗಾಗಿ ನವೋದಯ ಲೇಖಕರು ನೇರವಾಗಿ ಗಾಂಧಿ ಮತ್ತು ಅವರ ತತ್ವಾದರ್ಶಗಳ ಪ್ರಭಾವಗಳಿಗೆ ಒಳಗಾಗಿದ್ದಾರೆ. ಅವರು ರಚಿಸಿದ ಸಾಹಿತ್ಯದಲ್ಲಿ ಗಾಂಧಿಯು ಏಕಕಾಲದಲ್ಲಿ ಒಂದು ಪಾತ್ರವಾಗಿ, ವ್ಯಕ್ತಿಯಾಗಿ, ಶಕ್ತಿಯಾಗಿ, ಪ್ರಮುಖ ಪಾತ್ರ, ವಸ್ತು ಚಿಂತನೆಯಾಗಿ ಪರಿಣಮಿಸಿದ್ದಾರೆ. ಹಾಗೆಯೇ ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯದಲ್ಲೂ ಅಭಿವ್ಯಕ್ತಿಗೊಂಡಿದ್ದಾರೆ.

ಗೋವಿಂದ ಪೈ ಅವರ ಚಿತ್ರಗಳು, ಕುವೆಂಪು ಅವರ ಬಲಿದಾನ. ಶ್ರೀ ರಂಗರ ಹರಿಜನ್ವಾರ, ಧರ್ಮವಿಜಯ ಮತ್ತು ಶೋಕಚಕ್ರ, ಹುಯಿಲಗೋಳ ನಾರಾಯಣರ ಪತಿತೋದ್ಧಾರ, ಚಂದ್ರಶೇಖರ ಕಂಬಾರರ ಭಾರತಾಂಬೆ. ಕೇಶವ ಮೋರಬ್ ಅವರ ಅವಿಶ್ವಾಸ, ಟಿ ಎಂ ಭಾಸ್ಕರ್ ಅವರ ಗಾಂಧಿ ಟೋಪಿ. ಮೈನಾ ಶಿವಾನಂದ ಸ್ವಾಮಿ, ಕೆ.ವೆಂಕಟರಾಜು ಅವರ ತಲೆ ಭಾಗದ ಜನ. ಪ್ರತಿಮಾ ಮಿತ್ರ ಅವರ ರಚಿಸಿದ ನಾನೇಕೆ ಮಹಾತ್ಮನಲ್ಲ. ಎಂಬ ನಾಟಕಗಳು ಗಾಂಧಿಯವರ ರಾಜಕೀಯ ಮತ್ತು ಸಾಮಾಜಿಕ ಆಯಾಮಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ನಾಟಕಗಳಾಗಿವೆ.

ಅಂದಿನ ಬಹತೇಕ ನಾಟಕಗಳು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿಯೇ ರಚನೆಗೊಂಡಿದೆ. ಪ್ರಸ್ತುತ ಅಧ್ಯಾಯದಲ್ಲಿ ಗಾಂಧಿಯನ್ನು ಒಂದು ಪಾತ್ರ ವಸ್ತು ಚಿಂತನೆಯಾಗಿ ಹೇಗೆ ಅಭಿವ್ಯಕ್ತಗೊಂಡಿದ್ದಾರೆ ಎಂಬುದನ್ನು ನೋಡಲಾಗಿದೆ.

ಚಿತ್ರ ಭಾನು ಅಥವಾ ೧೯೪೨

ಗೋವಿಂದಪೈ ಅವರು ಈ ನಾಟಕದಲ್ಲಿ ಗಾಂಧಿಯವರ ಅಹಿಂಸಾ ಮಾರ್ಗ ಹಾಗೂ ೧೯೪೨ರಲ್ಲಿ ದಾಸ್ಯ ವಿಮೋಚನೆಗಾಗಿ ನಡೆದ ಕ್ವಿಟ್ ಇಂಡಿಯಾ ಚಳುವಳಿ ತತ್ವಾದರ್ಶಗಳನ್ನು ಈ ನಾಟಕದಲ್ಲಿ ಪ್ರತಿನಿಧೀಕರಿಸಿದ್ದಾರೆ.

ಈ ನಾಟಕದ ಶೀರ್ಷಿಕೆಯ ಕುರಿತು ಪೈಯವರು ಹೀಗೆ ಹೇಳುತ್ತಾರೆ. ೧೯೪೨ರಲ್ಲಿ ಹುಬ್ಬಳ್ಳಿಯಲ್ಲಿ ಸ್ವಾತಂತ್ರ್ಯ ಹೋರಾದಲ್ಲಿ ವೀರೇಂದ್ರ ಎಂಬ ವಿದ್ಯಾರ್ಥಿ ಬಲಿಯಾಗುತ್ತಾನೆ. ದುರ್ಘಟನೆ ಸಂಭವಿಸಿದ ಆ ಇಸವಿ ಎಂದರೆ ೧೯೪೨ ನನ್ನ ಕಾಲ ಗಣನೆಯ ಪ್ರಕಾರ ಶಾಲವಾಹನ ಶಕವರ್ಷ ೧೮೭೪ನೆಯ ಚಿತ್ರಭಾನು ಸಂವತ್ಸರವಾದ್ದರಿಂದ ನನ್ನ ನಾಟಕಕ್ಕೆ ಚಿತ್ರಭಾನು ಅಥವಾ ತಮ್ಮ ೧೯೪೨ ಎಂದು ಜೋಡು ಹೆಸರನಿತ್ತೆ ಎಂದು ಗೋವಿಂದ ಪೈ ಯವರು ನಾಟಕದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.(ಗೋವಿಂದ ಪೈ ೨೦೦೯; ಪ್ರಸ್ತಾವನೆ)

ಭಾರತ ಸಂಗ್ರಾಮದಲ್ಲಿ ವಿರೇಂದ್ರ ಎಂಬ ಯುವಕ ಮರಣ ಹೊಂದಿದ ಚಿತ್ರಣ ಗೋವಿಂದ ಪೈ ಅವರಿಗೆ ಪ್ರಮುಖವೆನಿಸುತ್ತದೆ. ೧೯೪೨ರ ಆ ದುರ್ಘಟನೆ ಸಂಯುಕ್ತ ಕರ್ನಾಟಕ ದಿನಪತ್ರಿಕೆ ಒಂದು ಸಂಚಿಕೆಯಲ್ಲಿ ವಿವರಿಸಿದ ಮಾಹಿತಿಯನ್ನು ಓದಿದ ಗೋವಿಂದಪೈಯವರು ಅದರಿಂದ ಪ್ರಭಾವಿತರಾಗಿ ಚಿತ್ರಭಾನು ಅಥವಾ ೧೯೪೨ ಎಂಬ ನಾಟಕವನ್ನು ರಚಿಸಿದ್ದಾರೆ.

ಗಾಂಧೀಜಿ ಅವರ ಕ್ವಿಟ್ ಇಂಡಿಯಾ (ಭಾರತ ಬಿಟ್ಟು ತೊಲಗಿ) ವಜ್ರಘೋಷದಿಂದ ೧೯೪೨ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚರಿತ್ರಾರ್ಹ ಇಸವಿಯಾಗುತ್ತದೆ. ಮಾಡು ಇಲ್ಲವೇ ಮಡಿ, (ಡು ಆರ್ ಡೈ) ಎಂಬ ಕರೆ, ದೇಶಭಕ್ತರು ಮತ್ತು ಬ್ರಿಟಿಶರ ನಡುವೆ ಹೋರಾಟವನ್ನು ಪರ್ಯಾಪ್ತ ಸ್ಥಿತಿಗೆ ತರುತ್ತದೆ. ದೇಶಕ್ಕಾಗಿ ಬಲಿದಾನ ಸಹ ಪರ ಸದ್ಗತಿಯ ಸಾಧನವಾಗಿ ಒಂದು ಮೌಲ್ಯವಾಗುತ್ತದೆ. ಈ ಹೋರಾಟದ ಸ್ವರೂಪ ಮತ್ತು ಸಂದೇಶವನ್ನು, ಕರ್ನಾಟಕದಲ್ಲಿನ ಒಂದು ಐತಿಹಾಸಿಕ ಘಟನೆಯಿಂದ ಬಲಿಯಾಗುವ ವಿವರದ ಮೂಲಕ ಗೋವಿಂದ ಪೈಯವರ ಏಕಾಂಕ ಪರಿಮಿತಿಯೊಳಗೆ ಇದನ್ನು ನಾಟಕವಾಗಿಸಿ, ಅದಕ್ಕೆ ಚಿತ್ರ ಭಾನು ಅಥವಾ ೧೯೪೨ ಎಂಬ ಜೋಡಿ ಹೆಸರನ್ನು ಕೊಡುತ್ತಾರೆ. (ಅದೇ ಪುಟ.೧೫) ಎಂದು ಎಸ್ ಶಿವಾಜಿ ಜೋಯಿಸ ಅವರು ವಿವರಿಸುವುದು ಕಂಡುಬರುತ್ತದೆ.

ಗೋವಿಂದ ಪೈ ಅವರ ಚಿತ್ರಭಾನು ನಾಟಕದ ವಸ್ತು ಹುಬ್ಬಳ್ಳಿಯಲ್ಲಿ ನಡೆದ ಒಂದು ಘಟನೆ ಯಾಗಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಒಬ್ಬ ತರುಣನ ಘಟನೆ. ತಾಯಿ, ಮಗ ಮತ್ತು ಪ್ರೇಯಸಿ ಸಂಬಂಧಗಳ ದೇಶಭಕ್ತಿ ಮೀರಿ ನಿಲ್ಲುವ ಚಿತ್ರವನ್ನು ಈ ನಾಟಕ

ಕಟ್ಟಿ ಕೊಡುತ್ತದೆ. ಯುವಕನನ್ನು ಪೊಲೀಸರು ಹುಡುಕುವುದರ ಮೂಲಕ ಆರಂಭವಾಗಿ ಕೊನೆಗೆ ಅವನನ್ನು ಹಿಡಿಯುವುದರ ಮೂಲಕ ಈ ನಾಟಕ ಮುಗಿಯುತ್ತದೆ. ಮಹಾತ್ಮ ಗಾಂಧಿಯವರ ತತ್ವಾದರ್ಶವಾದ ಅಹಿಂಸಾ ಮಾರ್ಗದ ಬಗ್ಗೆ ಗೌರವವಿದ್ದು, ದೇಶದ ಬಿಡುಗಡೆಯ ಪರಮ ಉದ್ದೇಶದಲ್ಲಿ ಹಿಂಸಿಸಿದವರನ್ನು ಪ್ರತಿ ಹಿಂಸಿಸುವ ಧೋರಣೆಯಿದ್ದ ಪ್ರಬಲವಾದ ಹೋರಾಟಗಾರರ ವರ್ಗಕ್ಕೆ ಈ ನಾಟಕದ ನಾಯಕ ವೇಣುಗೋಪಾಲ ಸೇರುತ್ತಾನೆ. ಈ ನಾಟಕದಲ್ಲಿ ಬ್ರಿಟಿಶ ಕ್ರೌರ್ಯ ವೇಣುಗೋಪಾಲನನ್ನ ಬಲಿ ತೆಗೆದುಕೊಳ್ಳುತ್ತದೆ.

ವೇಣುಗೋಪಾಲಗೆ ಒಂದು ಕೌಟುಂಬಿಕ ಹಾಗೂ ಹೋರಾಟದ ಪರಿಸರ ಕಟ್ಟಿಕೊಡುವ ಮೂಲಕ ನಾಟಕದ ಕಟ್ಟಡವನ್ನು ನಾಟಕಕಾರರು ರಚಿಸುತ್ತಾರೆ. ವೇಣುಗೋಪಾಲನ ಮನೆಯಲ್ಲಿಯೇ ೧೯೪೨ನೆಯ ಇಸವಿಯ ಚಿತ್ರಭಾನು ಸಂವತ್ಸರದ ಒಂದು ದಿನ ರಾತ್ರಿ ೧೧ ಗಂಟೆಯಿಂದ ಮೂರನೇ ಬೆಳಗ್ಗೆ ಗಂಟೆಯೊಳಗೆ ತಪ್ಪಿಸಿಕೊಂಡು ಮನೆಗೆ ಬಂದ ಚಳುವಳಿಗಾರ ವೇಣುಗೋಪಾಲನನ್ನು ಪೊಲೀಸರು ಹುಡುಕಿ ಕೊಲ್ಲುವುದರ ಮೂಲಕ ಏಕಾಂಕ ನಾಟಕ ನಿರೀಕ್ಷಿಸುವ ಸ್ಥಳಐಕ್ಯ , ಕಾಲೈಕ್ಯ, ಕ್ರಿಯ ಐಕ್ಯಗಳನ್ನು ಸಾಂಗಗೊಳಿಸುವುದು ಕರ್ನಾಟಕದಲ್ಲಿ ಕಾಣುತ್ತದೆ. (ಅದೇ ಪುಟ೧೬) ಎಂದು ಎಸ್ ಶಿವಾಜಿ ಜೋಯಿಸ್ ಅವರು ಈ ನಾಟಕ ಕುರಿತು ಹೇಳಿದ್ದಾರೆ. ಈ ನಾಟಕದಲ್ಲಿ ವೇಣುಗೋಪಾಲ ಗಾಂಧೀಜಿಯವರ ೧೯೪೨ರ ಚಳವಳಿಯಿಂದ ಪ್ರೇರಿತನಾಗಿ ಅವನು ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುತ್ತಾನೆ.

ವೇಣುವಿನ ತಾಯಿ ಯಶೋದೆ ದೇಶದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಹಾಗೂ ಗಾಂಧಿ ಚಿಂತನೆ, ತತ್ವ ಆದರ್ಶಗಳ ಬಗ್ಗೆ ಅಭಿಮಾನ ತೋರುತ್ತಿದ್ದಳು. ಯಶೋಧ ಹಸುವಿನ ಕೆಚ್ಚಲನ್ನು ಒದ್ದೆ ಕೈಯಿಂದ ಹಿಂಡುವಂತೆ ಪ್ರತಿಕೂಲವಾದ ಕಾಲವನ್ನು ಅಹಿಂಸೆಯ ನೆರವಿನಿಂದ, ಮಹಾತ್ಮ ಗಾಂಧೀಜಿ ಅವರು ಸಾರಿದ ಅಹಿಂಸೆಯ ತತ್ವ ಅರಾಜಕತೆಯಲ್ಲಿ ತೊಳಲುತ್ತಿರುವ ದೇಶದ ಜನತೆಯನ್ನು ಹತೋಟಿಯಲ್ಲಿಡುವ ಅಸ್ತ್ರವಾಗಿದೆ ಎಂದು ತನ್ನ ಮನಸ್ಸಿನಲ್ಲಿರುವ ಭಾರವನ್ನು ಅಭಿವ್ಯಕ್ತಿಸುತ್ತಾಳೆ. ಗಾಂಧೀಜಿಯವರು ಹಿಂಸೆಯಿಂದ ಸ್ವಾತಂತ್ರ್ಯವನ್ನು ಬಯಸಿದವರೆಲ್ಲ ಅಹಿಂಸಾ ಮಾರ್ಗದಿಂದ ದೇಶಕ್ಕೆ ಸ್ವಾತಂತ್ರ್ಯ ಬರಬೇಕೆಂದು ಬಯಸಿದರು. ಈ ಅಹಿಂಸಾ ಮಾರ್ಗದ ತತ್ವವು ಅವರ ಚಳುವಳಿಯ ಮೂಲಕ ಇಡೀ ದೇಶವನ್ನು ವ್ಯಾಪಿಸಿತು. ಈ ನಾಟಕದಲ್ಲಿ ಗಾಂಧಿಯು ಪಾತ್ರವಾಗಿ ಬರದಿದ್ದರೂ ೧೯೪೨ರ ಘಟನೆ ಮತ್ತು ಅವರ ಚಿಂತನೆ ಮತ್ತು ತತ್ವಾದರ್ಶಗಳನ್ನು ಈ ನಾಟಕದಲ್ಲಿ ಪ್ರತಿಪಾದಿಸಲಾಗಿದೆ. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯೇ ಗಾಂಧಿಯನ್ನು ಪ್ರತಿನಿಧಿಸುತ್ತದೆ. ಯಶೋಧ ಮತ್ತು ವೇಣು ಮಾತನಾಡುವ ಸಂದರ್ಭ.

"ಆದರೆ ವೇಣು ಗಾಂಧಿ ತತ್ವ ಮೇರೆಗೆ ನೀವು ನಿಮ್ಮನ್ನು ಒಪ್ಪಿಕೊಳ್ಳಬೇಕಿತ್ತಲ್ಲ? ಆ ಸುಗ್ರೀವಾಜ್ಞೆಯನ್ನು ಹೇಗೆ ಮುರಿದಿರಿ?"

"ಅವ್ವ ಮಾತನಾಡಿದರೆ ಅದನ್ನು ಮಂದಿ ಆಚರಿಸುವ ವಿಧಾನ ಬೇರೆ ಇದನ್ನು ಮಹಾತ್ಮರು ಬಲ್ಲರು. ಮಹಾತ್ಮರ ಗುರಿಗೂ ಮತ್ತು ನಮ್ಮ ಗುರಿಗೂ ಭೇದವೆಂದರೆ ತಣ್ಣೀರು ಮತ್ತು ಬೆನ್ನಿ ರಂತೆ. ಆದರೆ ಎರಡರ ಕೆಲಸ ಮನೆಗೆ ಹತ್ತಿದ ಬೆಂಕಿ ನಂದಿಸುವುದೇ"(ಅದೇ ಪುಟ೩೬)

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮಂದಗಾಮಿಗಳು, ತೀವ್ರಗಾಮಿಗಳು ಮತ್ತು ಕ್ರಾಂತಿಕಾರಿಗಳು ಎಂಬ ಮೂರು ಗುಂಪುಗಳು ಕಂಡುಬರುತ್ತವೆ. ಇವರೆಲ್ಲರ ಧ್ಯೇಯ ಒಂದೇ ಆಗಿದೆ. ಆದರೆ ಅವರು ಅನುಸರಿಸುವ ವಿಧಾನ ಬೇರೆ ಬೇರೆಯಾಗಿದೆ. ಗಾಂಧೀಜಿಯವರು ಈ ಮೂರು ಗುಂಪುಗಳಿಗೆ ಒಳಪಡದವರು. ನಾಟಕದಲ್ಲಿ ನಾಟಕಕಾರರು ಗಾಂಧಿ ಮತ್ತು ಕ್ರಾಂತಿಕಾರಿಗಳು ಸ್ವಾತಂತ್ರ್ಯ ಪಡೆಯಲು ಬಳಸಿರುವ ವಿಧಾನಗಳನ್ನು ಹೇಳುತ್ತಿದ್ದಾರೆ. ಸ್ವಾಸತಂತ್ರ್ಯ ಪಡೆಯುವ ಗುರಿ ಒಂದೇ ಆಗಿದ್ದರೂ ಬಳಸುವ ವಿಧಾನಗಳು ಬೇರೆ ಬೇರೆಯಾಗಿರುವುದನ್ನು ಹೇಳಿಸುತ್ತಿದ್ದಾರೆ. ಗಾಂಧೀಜಿ ಅಹಿಂಸಾ ಮಾರ್ಗದ ಮೂಲಕ ಮುನ್ನಡೆಯುತ್ತಾರೆ.

ಬ್ರಿಟಿಷರಿಂದ ವಿಮೋಚನೆ ಪಡೆಯಲು ಯತ್ನಿಸುತ್ತಿದ್ದ ವ್ಯಕ್ತಿಗಳನ್ನು ಪೋಲೀಸರು ಹಿಡಿದು ಅವರನ್ನು ಜೈಲಿಗೆ ಹಾಕುತ್ತಿದ್ದರು. ಅಲ್ಲಿದ್ದಂತಹ ಯುವಕನಿಗೆ ಭಾರತದಲ್ಲಿಯ ಆಂಗ್ಲಶಾಹಿಯನ್ನು ಉರುಳಿಸಬೇಕು, ಭಾರತವನ್ನು ಸ್ವತಂತ್ರ್ಯಗೊಳಿಸಬೇಕು ಎಂಬ ಗೀಳು ಇವನದಾಗಿತ್ತು. ಆದರೆ ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಹೋರಾಟ ಮಾಡಲು ಇಷ್ಟಪಡುತ್ತಿರಲಿಲ್ಲ. ಸ್ವಾತಂತ್ರ್ಯ ಹೋರಾಟಗಾರರು ಪೋಲೀಸರಿಂದ ಶಿಕ್ಷೆಗೆ ಒಳಪಡುತ್ತಿದ್ದರು ಕೂಡ ಅವರನ್ನು ನೋಡಿಯೂ ಕೂಡ ನೋಡದಂತೆ ಇರುವ ವ್ಯಕ್ತಿಗಳನ್ನು ನೋಡಿ ಯುವಕನು ಈ ರೀತಿ ಹೇಳುವನು.

"ಹಿಂದಿನ ಮಾತು ಹೇಗೋ ಇರಲಿ ಇಂದಿಗೆ ೨೨ವರ್ಷಗಳಿಂದ ಮಹಾತ್ಮರು ಸ್ವರಾಜ್ಯ ಸ್ವರಾಜ್ಯ ಎಂದು ಕೂಗಾಡುತ್ತಲಿದ್ದರೂ, ಮನೆಗೆ ಬೆಂಕಿ ಹತ್ತಿದಾಗ ಆ ಕಡೆಗೆ ಬೆನ್ನುಹಾಕಿ ಕಮದಿಯನ್ನು ತಲೆಯ ಮೇಲಕ್ಕೆ ಎಳೆದುಕೊಂಡು ಮಾತು ನಿದ್ದೆ ಹೋಗುತ್ತಿರುವಷ್ಟರ ವಜ್ರಶುಂಠರಾದ ನಾವು ಹೊರಬೀಗರ ಕೊಂಡಿಗಳಿಂದ ನೊಂದೆವಾದರೆ ಹಾಗೆ ಮಾಡಿಯೇವೇ ಅವ್ವಾ ನೀರಿನಲ್ಲಿ ಇಳಿಯಲ್ಲಿಕ್ಕೆ ಅಂಜಿದಾತ ಈಸಲುಂಟೇ? ಸಾಯಲಿಕ್ಕೆ ಅಂಜುವವರು ಸ್ವಾತಂತ್ರ್ಯರಾಗಲುಂಟೆ?"(ಅದೇ ಪು.೮೮)

ಗಾಂಧೀಜಿಯವರ ಸ್ವರಾಜ್ಯ ಕಲ್ಪನೆಯು ಜನರ ಚಳುವಳಿಗೆ ಪ್ರೇರಣೆ ನೀಡಿರುವುದು ಕಂಡು ಬರುತ್ತದೆ. ಅದರಂತೆಯೇ ಸ್ವರಾಜ್ಯ ಚಳುವಳಿಗೂ ನಮಗೂ ಸಂಬಂಧವಿಲ್ಲ ಎಂಬ ಜನರು ಇದ್ದರು. ಎಂಬುದನ್ನು ಈ ನಾಟಕ ಸೂಚಿಸುತ್ತದೆ.

ತನ್ನ ಮನೆಗೆ ಬ್ರಿಟಿಶ್ ಪೋಲೀಸರು ಬಂದು ಹೋದರು ಎಂದು ತನ್ನ ಮನೆಯನ್ನು ಸ್ವರಾಜ್ಯದ ಗೃಹಶಾಂತಿಯನ್ನು ಮಾಡುತ್ತಲೇ ಇಲ್ಲಿ ಹೀಗಾಗಬೇಕಾಗಿತ್ತೆಂದು ಈ ರೀತಿ ಹೇಳುವನು.

"ರಾಜ ಮುಕುಟ, ರಾಜದಂಡ ಧರಣಿಗುರುಳಿ ಬೀಳಲಿ!
ಸ್ವತಂತ್ರ್ಯತೆ ಸಮಾನತೆ ಸೋದರಂತೆ ಸದಾ ಬಾಳಲಿ !
ಒಂದು ರಾಷ್ಟ್ರವೊಂದು ಜನತೆ
ಒಂದು ದೇವರೊಂದು ಮನತೆ
ಧರ್ಮ ಬಿಡದೆ ನಡೆವ ಘನತೆ
ಎಂದಿಗೆಮ್ಮರಾಗಲಿ!
ಭಾರತ ಯಶಃ ಪತಾಕೆ – ಚೂಣಿಯೊಳಗೆ ಸಾಗಲಿ (ಅದೇ, ಪು.೯೫)

ಹುಬ್ಬಳ್ಳಿಯ ಜನರು ಎಷ್ಟು ಸಂಪ್ರದಾಯಸ್ಥರಾಗಿದ್ದರೆನ್ನುವುದು ಈ ಸನ್ನಿವೇಶದ ಮೂಲಕ ತಿಳಿಯಬಹುದಾಗಿದೆ. ಪೋಲೀಸರು ಮನೆಯೊಳಗೆ ಬಂದು ಹೋಗಿದ್ದಕ್ಕೆ, ಮನೆ ಮೈಲಿಗೆಯಾಗಿದೆ ಎಂದು ಗೃಹಶಾಂತಿ ಮಾಡುವುದರ ಮೂಲಕ ಅವರು ಎಷ್ಟು ಸಂಪ್ರದಾಯಬದ್ಧರಾಗಿದ್ದರೆಂಬುದು ತಿಳಿಯುತ್ತದೆ. ಕೊನೆಗೆ ಆ ಯುವಕ ಪೋಲಿಸರಿಗೆ ಸೆರೆಸಿಗುವುದರ ಮೂಲಕ ಈ ನಾಟಕ ಮುಕ್ತಾಯವಾಗುತ್ತದೆ. ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ರಾಜಕೀಯ ಚಳುವಳಿ ಭಾಗವಾಗಿ ನೋಡುವುದಾದರೆ ಇನ್ನೊಂದು ಸಾಮಾಜಿಕ ಚಳುವಳಿ ಭಾಗವಾಗಯೂ ನೋಡಬಹುದಾಗಿದೆ. ಬ್ರಿಟಿಶ್ ಅಧಿಕಾರಿಗಳಿಗೆ ಅಲ್ಲಿ ಮಡಿಮೈಲಿಗೆಯನ್ನು ಮಾಡುವುದಲ್ಲದೆ ಸಮಾಜದಲ್ಲಿರುವ ಜನರು ಶ್ರೇಣೀಕರಣ ವ್ಯವಸ್ಥೆಯೂ ಕೂಡ ಸ್ವಾಂತತ್ರ್ಯ ಚಳುವಳಿಗೆ ಮಾರಕವಾಗಿದೆ ಎಂದು ಹೇಳಬಹುದು.

ಕ್ವಿಟ್ ಇಂಡಿಯಾ ಚಳುವಳಿಯೇ ಗಾಂಧೀಜಿ ಅವರನ್ನು ಪ್ರತಿನಿಧಿಸುವಂತಹ ಚಳುವಳಿಯಾಗಿದೆ. ಚಿತ್ರಭಾನು ನಾಟಕ ರಾಜಕೀಯ ಸ್ವಾತಂತ್ರ್ಯದ ಚಳುವಳಿಯಾಗಿದೆ. ಈ ರೀತಿಯಾಗಿ ಚಿತ್ರಭಾನು ನಾಟಕದಲ್ಲಿ ಗಾಂಧೀಜಿಯವರ ಅಹಿಂಸಾ ಮಾರ್ಗ ಚಳುವಳಿಯ ವಿಧಾನ ಮತ್ತು ತತ್ವಾದರ್ಶಗಳು ಪ್ರತಿನಿಧೀಕರಣಗೊಂಡಿರುವುದನ್ನು ಕಾಣಬಹುದು.

ಬಲಿದಾನ

ಕುವೆಂಪು ಅವರ 'ಬಲಿದಾನ' ನಾಟಕ ಸ್ವಾತಂತ್ರ್ಯ ಚಳುವಳಿಯ ಸಂದರ್ಭವನ್ನು ಚಿತ್ರಿಸುತ್ತದೆ. ಭಾರತ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿರುವಾಗ ಅದರ ವಿಮೋಚನೆಯನ್ನು ನಿರೀಕ್ಷಿಸುತ್ತಿರುವಂತೆ ಭಾರತಾಂಬೆ ಎಂಬ ಪಾತ್ರವನ್ನು ಸೃಷ್ಟಿಸಲಾಗಿದೆ. ಭಾರತ ಭಾರತಾಂಬೆಯಾದರೆ ಗಾಂಧಿಯನ್ನು ಭರತಸುತ ಪಾತ್ರವಾಗಿ ಇಲ್ಲಿ ನಾಟಕಕಾರರು ಸೃಷ್ಟಿಸಿದ್ದಾರೆ.

ಭಾರತಾಂಬೆ ಬ್ರಿಟಿಶರ ಸಂಕೋಲೆಯಲ್ಲಿ ಬಂಧಿತಳಾಗಿ ಭರತಸುತನ ಎದುರಿಗೆ ತನ್ನನ್ನು ಬಂಧಮುಕ್ತಳನ್ನಾಗಿ ಮಾಡಲು ಪರಿತಪಿಸುತ್ತಾಳೆ. ಭಾರತಾಂಬೆ ಬ್ರಿಟಿಶರ ಅಟ್ಟಹಾಸ, ಅನ್ಯಾಯ-ಆಕ್ರಮಣಗಳಿಂದ ಅವರ ಕಾಲಡಿಯಲ್ಲಿ ಬಿದ್ದು ನಲುಗಿಹೋಗಿರುವಳು. ಬ್ರಿಟಿಶರು ಭಾರತಾಂಬೆಯ ಕೈಕಾಲುಗಳನ್ನು ಸಂಕೋಲೆಗಳಿಂದ ಬಿಗಿದು ತನ್ನ ದಾಸಿಯನ್ನಾಗಿಸಿರುಸುತ್ತಾರೆ. ಇದರಿಂದ ಬೇಸತ್ತ ಭಾರತಾಂಬೆ ಬ್ರಿಟಿಶರ ಬಂಧನದಿಂದ ಮುಕ್ತಗೊಳಿಸುವ ಸಹಾಯಸ್ತಗಳಿಗೆ ಎದುರು ನೋಡುತ್ತಾಳೆ. ಅಂತಹ ಸಂದರ್ಭದಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬರುವರು. ಭಾರತಾಂಬೆಯ ಹೀನಾಯ ಸ್ಥಿತಿಯನ್ನು ಕಂಡು ಮರುಗಿ ಅವಳನ್ನು ಬ್ರಿಟಿಶರಿಂದ ಬಂಧಮುಕ್ತನನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ. ಕೊನೆಗೆ ಗಾಂಧೀಜಿ ಭಾರತಾಂಬೆಯನ್ನು ಬ್ರಿಟಿಶರ ಬಂಧನದ ಸರಪಳಿಯನ್ನು ಕಳಚಿ ಸ್ವಾತಂತ್ರ್ಯಳನ್ನಾಗಿ ಮಾಡುವುದೇ ಈ ನಾಟಕದ ಕಥಾವಸ್ತುವಾಗಿದೆ.

ಕುವೆಂಪು ಅವರು ಗಾಂಧೀಜಿಯ ಪಾತ್ರವನ್ನು ನೇರವಾಗಿ ಎಲ್ಲೂ ತರುವುದಿಲ್ಲ. ಈ ನಾಟಕದಲ್ಲಿ ಬರುವ ಪಾತ್ರಗಳೆಂದರೆ 'ಭಾರತಾಂಬೆ,' ಭರತಸುತ ಹಾಗೂ ಆಶರೀರವಾಗಿ ಕೇಳಿಸುವ 'ವಾಣಿ' ಮತ್ತು 'ಧ್ವನಿ'ಗಳು ಇಲ್ಲಿ ಪಾತ್ರಗಳಾಗಿವೆ. ಬಲಿದಾನ ನಾಟಕ ಮೂರು ದೃಶ್ಯಗಳನ್ನು ಒಳಗೊಂಡಿದೆ. ಬ್ರಿಟಿಶರು ಭಾರತಾಂಬೆಯನ್ನು ಬಂಧಿಸುತ್ತಾರೆ. ಅವಳ ಮಕ್ಕಳನ್ನು ಅನ್ಯಾಯ, ದಬ್ಬಾಳಿಕೆ, ಅಕ್ರಮ, ಅತ್ಯಾಚಾರಗಳಿಂದ ಬಲಿತೆಗೆದುಕೊಳ್ಳುತ್ತಾರೆ. ಇದೆಲ್ಲವನ್ನು ಭಾರತಾಂಬೆ ನೋಡಿ ಮನನೊಂದು ಭರತಸುತನಲ್ಲಿ ತನ್ನ ನೋವನ್ನು ತೋಡಿಕೊಳ್ಳುತ್ತಾಳೆ. ಅವಳ ವೇದನೆಗೆ ಭರತಸುತನು ಸ್ಪಂದಿಸುತ್ತಾನೆ. ನಿನ್ನನ್ನು ಈ ಬಂಧನದಿಂದ ಬಿಡಿಸಿ ಸ್ವತಂತ್ರಳನ್ನಾಗಿ ಮಾಡುತ್ತೇನೆ ಎಂಬ ಮಾತನ್ನು ನೀಡುತ್ತಾನೆ. ಈ ನಾಟಕ ಸ್ವಾತಂತ್ರ್ಯ ಸಂದರ್ಭದ ರಾಜಕೀಯ ಚಿತ್ರಣವನ್ನು ಪ್ರತಿನಿಧೀಕರಿಸಿದೆ.

ಈ ನಾಟಕದಲ್ಲಿ ಮೂರು ದೃಶ್ಯಗಳಿವೆ. ಒಂದನೇ ದೃಶ್ಯದಲ್ಲಿ ಸ್ವಾತಂತ್ರ್ಯ ಚಳುವಳಿ ಆರಂಭಕ್ಕಿಂತ ಪೂರ್ವ ಅಂದರೆ ಗಾಂಧೀ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬರುವ ಸಂದರ್ಭ. ಎರಡನೆಯ ದೃಶ್ಯದಲ್ಲಿ ಸ್ವಾತಂತ್ರ್ಯ ದೊರೆಯುವ ಸಂದರ್ಭವನ್ನು ಚಿತ್ರಿಸಲಾಗಿದೆ. ಮೂರನೇ ದೃಶ್ಯದಲ್ಲಿ ಸ್ವಾತಂತ್ರ್ಯ ದೊರೆತ ನಂತರದ ಸಂದರ್ಭವನ್ನು ನಾಟಕದಲ್ಲಿ ಚಿತ್ರಿಸಲಾಗಿದೆ.

ಒಂದನೇ ದೃಶ್ಯದಲ್ಲಿ ಭರತಸುತ [ಗಾಂಧಿ] ಭಾರತಾಂಬೆ [ಭಾರತ] ಪರಿಚಯದ ಮೂಲಕ ಬ್ರಿಟಿಶ್ ಆಡಳಿತದಲ್ಲಿ ಬಂಧನವಾದ ಸಂದರ್ಭವನ್ನು ಹೇಳಲಾಗುತ್ತಿದೆ. ಈ ಬಂಧನದಿಂದ ಭಾರತಾಂಬೆ ಸ್ವಾತಂತ್ರ್ಯಳನ್ನಾಗಿ ಮಾಡಲು ಗಾಂಧಿಯನ್ನು ನಿರೀಕ್ಷಿಸುತ್ತಿರುವುದು, ಬ್ರಿಟಿಶರು ಭಾರತವನ್ನು ಆಳುತ್ತಿರುವ ಸಂದರ್ಭ ಅದು ಭಾರತದ ಬಂಧನವಾಗಿದೆ. ಈ ಬಿಡುಗಡೆಗಾಗಿ ಗಾಂಧಿಯ ಆಗಮನವನ್ನು ಈ ಕೆಳಗಿನಂತೆ ಚಿತ್ರಿಸಲಾಗಿದೆ.

ಭಾರತಾಂಬೆ ಮತ್ತು ಭರತಸುತನ ಸಂಭಾಷಣೆ

ಭಾರತಾಂಬೆ : ನಾ ಬಲ್ಲೆ ಹೇಳುವೆನು ಕೇಳು:

ಭಕ್ತರೆದೆಯಲ್ಲವಳ ನರ್ತನವಿಲ್ಲದಾಯ್ತು!
ಅವಳ ದರ್ಶನ ಕಳುಕಿದರ್.
ನೆತ್ತರಿನ ನಾಲಿಗೆಯ ನೋಡಿ ಬೆದರಿದರ್;
ರುಂಡಗಳ ಮಾಲೆಯನು ಕಂಡು ನಡುಗಿದರು!
ಕರಿಯ ಬಣ್ಣವ ಕಂಡು ಹೇಸಿದರು.
ಕೈಯ ಕತ್ತಿಯ ಕಿತ್ತು, ಕೊಳಲನಿಟ್ಟರು ಅಲ್ಲಿ.
ರುಂಡಮಾಲೆಯನಿಳ್ದು ರಚಿಸಿದರು ವನಮಾಲಿಯಂ.
ಶಿವನೆದೆಯ ಮೇಲೆ ಏಳು ಕುಣಿವುದನು ಬಿಡಿಸಿ
ಕೊಳಲೂದಿ ಕುಣಿವಂತೆ ಮಾಡಿದರು
ಗೋಪಿಯರೊಡನೆ.
ಅದರಿಂದ ವೀರತ್ವವಳಿದುದಾಯ್
ಕೌದ್ರಮಂ ಪೂಜಿಪುದ ಮರೆತಿಹರ್;
ಅದರಿಂದ ಪಾಳ್ ಬಿದ್ದುದೀ ದೇಗುಲಂ.
ವತ್ಸ ಮಾಕಾಳಿ ಪೂಜಿಕನೆ ನೀನ್?

ಬಭರತಸುತ : ಅಹುದಮ್ಮಾ

ಭಾರತಾಂಬೆ : ಆದರೂ ಬೇಡಿದುದ ನೀಡಲಂಜಿದೆಯೇನ್?

ಭರತಸುತ : ಕೇಳಮ್ಮ, ನೀಡುವೇನು.

ಭಾರತಾಂಬೆ : ನೆತ್ತರನ್ ಕಂಡಳ್ಕುವೆಯ, ಹೇಳು?

ಭರತಸುತ : ನೆತ್ತರೊಳ್ ಮುಳುಗಿದರು ಬೆದರನ್.

ಭಾರತಾಂಬೆ : ಕತ್ತಿಯನ್ ಕಂಡಳ್ಕುವೆಯಾ ಹೇಳ್?

ಭರತ ಸುತ : ಕೂರಸಿನಲರೆಂದು ಮುಡಿಯುವೆನ್

ಭಾರತಾಂಬೆ : ಕಂಪಿಸದೆ ಧರಿಸಬಲ್ಲೆಯಾ ಸೆರೆಯ ಸಂಕೋಲೆಯನ್?

ಸಿಡಿಗುಂಡಿನೆದುರಿನಲಿ ಎದೆಯೊಡ್ಡಿ ನಿಲ್ವೆಯೇನ್?

ಭರತಸುತ: ನಿಲ್ಲುವೆನ್ ತಾಯಾಣೆ!"

(ಕುವೆಂಪು, ಬಲಿದಾನ ಪುಟ ೪೮, ೪೯)

ಈ ನಾಟಕದಲ್ಲಿ ಭಾರತಾಂಬೆ ಬ್ರಿಟಿಶರು ಭಾರತವನ್ನು ಆಳುತ್ತಿರುವ ಪರಿಯನ್ನು ಇಲ್ಲಿ ಭರತಸುತನಿಗೆ ಹೇಳಿ ಸ್ವಾತಂತ್ರ್ಯ ಚಳುವಳಿಗೆ ಅವನನ್ನು ಸಜ್ಜು ಮಾಡಲಾಗುತ್ತಿದೆ. ಈ ರೂಪಕದ ಮೂಲಕ ಭಾರತದ ಸ್ಥಿತಿಗತಿಯನ್ನು ಲೇಖಕರು ಇಲ್ಲಿ ಭಾರತಾಂಬೆಯ ಮೂಲಕ ಹೇಳಿಸುತ್ತಿದ್ದಾರೆ. ಹೋರಾಟದಲ್ಲಿ ಎಂತಹ ಗಂಭೀರ ಸಂದರ್ಭ ಬಂದರೂ ನೀನು ಎದುರಿಸಬೇಕು. ರಕ್ತ, ಕತ್ತಿ ಯಾವುದಕ್ಕೂ ಹೆದರದೆ ಸೆರೆಯ ಸಂಕೋಲೆಯಿಂದ ಮುಕ್ತರಾಗಬೇಕಾದರೆ ಸಿಡಿಗುಂಡಿನೆದುರಲ್ಲಿ ಎದೆಯೊಡ್ಡಿ ನಿಲ್ಲಬೇಕು. ಯಾವುದಕ್ಕೂ ಜಗ್ಗದೆ ಹೋರಾಡಬೇಕು ಎಂದು ಹೇಳುವ ಸಂದರ್ಭವಾಗಿದೆ.

ಬ್ರಿಟಿಶರ ಕೈಯಲ್ಲಿ ಭಾರತಾಂಬೆ ಬಂಧನವಾದದ್ದನ್ನು ಭರತಸುತನಿಗೆ ತಿಳಿಸಿರುವ ಸಂದರ್ಭ.

"ಭರತಸುತ : ಎಂದೆಂದು ನಿನ್ನವನೆ! ನೀನಾರು ಮಾತಾಯಿ?

ಭಾರತಾಂಬೆ : ವೇದಗಳ ಹೆತ್ತವಳ್! ಯೋಗಿಗಳ ಪಡೆದವಳ್!

ಲೋಕಕ್ಕೆ ವೀರರನು ಕೊಟ್ಟವಳ್!

ಮಾನವನಿಗೆ ಬುದ್ಧಿ ನೀಡಿದ ತಾಯಿ

ನಾನ್ ಭಾರತಾಂಬೆ!

ಗುರುತಾಯಿತೇ ಈಗ?

ಭರತಸುತ : ಜನನಿ, ನಿನಗೇತಕೀ ದುರವಸ್ಥೆ?

ಭಾರತಾಂಬೆ : ಸೆರೆಯಾಳು ನಾನು, ನೋಡು.

ಕೈ ಕಾಲ್ಗಳಂ ಬಿಗಿದ ಸಂಕೋಲೆಗಳ್ !

ಭರತಸುತ : (ರೋಷದಿಂದ) ಕಳಚುವೆನ್, ತಾಯಿ!

ಭಾರತಾಂಬೆ : ಬಲವಿರಲ್ ಕಳಚಬಲ್ಲೆಯ ಕಾಣ್

ಭರತಸುತ : (ಪ್ರಯತ್ನಿಸಿ ಸೋತು ಏದುತ್ತಾ)

ಕಬ್ಬಿಣದ ಸಂಕೋಲೆಗಳ್, ತಾಯಿ,

ತುಂಡು ಮಾಡಲು ನನಗೆ ಬಲವಿಲ್ಲ

ಬೀಗವಿದೆ! ಬೀಗ ಹಾಕಿದ ದುರಾಳನಾರಮ್ಮ!

ಭಾರತಾಂಬೆ : ನಾನರಿಯೆ, ಯಾರು ಹಾಕಿದರೆಂದು

ಪರಕೀಯರೆಂದೊಮ್ಮೆ ಯೋಚಿಸುವೆ,

ನನ್ನವರೆ ಎಂದೊಮ್ಮೆ ಗೋಳಿಡುವೆ

ಆರೆಂದರಿಯನ್ !...

ನಾನು ಮಲಗಿದ್ದಂದು ಬೀಗ ಹಾಕಿದರ ಪ್ಪಾ !

ಕೀಲಿ ಕೈ ಇಲ್ಲ

ಭರತಸುತ : ಕೀಲಿ ಕೈ ಆರ ಬಳಿ ಇರುವುದಮ್ಮ

ಭಾರತಾಂಬೆ : ಹೇಳಲಂಜುವೆ ಮಗು

ಭರತಸುತ : ಹೇಳು ಜೀವ ತೆತ್ತು ಬಂಧನವ ಬಿಡಿಸುವೆನ್

ಭಾರತಾಂಬೆ : ಗುಟ್ಟಾಗಿ ಹೇಳುವೆನು ಕೇಳು (ಕಿವಿಯಲ್ಲಿ ಹೇಳುತ್ತಾಳೆ)

ಭರತಸುತ : (ಕೋಪಾತಿಶಯದಿಂದ)

ಹೇ ದುಷ್ಟ ನಿನ್ನನಿದುವರೆಗೂ ಗೆಳೆಯನೆಂದೇ

ತಿಳಿದು ಮರುಳಾದೆ!... ತಪ್ಪಾಯಿತಮ್ಮ

ಅಪರಾಧಿ ನಾನ್! ಕೀಲಿ ಕೈಯನ್ನು ತಂದು ಬಿಡಿಸುವೆನು

ಭಾರತಾಂಬೆ : ತರಲು ಹೋದವರಲ್ಲಿ ಒಬ್ಬನಾದರೂ ಮರಳಿ

ಬರಲಿಲ್ಲ. ನಿನ್ನ ಗತಿ?

ಭರತ ಸುತ : ಮೃತ್ಯು ಅಥವಾ ಸಿದ್ಧಿ!

ಭಾರತಾಂಬೆ : ದುಡುಕದಿರು, ವತ್ಸ, ದುಡುಕದಿರ್ ಎಚ್ಚರಿಕೆ !

ಭರತಸುತ : ನಿನ್ನ ಕೃಪೆಯೊಂದೆ ಇರಲಿ ಗೆಲ್ಲುವೆನ್!

ಮಡಿದರೂ ನಿನಗಾಗಿ ಕದನದಲ್ಲಿ ಮಡಿಯುವೆನ್

ಹರಸಿ ಕಳುಹಮ್ಮ

ಭಾರತಾಂಬೆ : ವಿಜಯೀಭವ ! ಹೋಗಿ ಬಾ ಬೇಗ ಬಾ

(ಅದೇ, ಪುಟ- ೪೯-೫೧)

ಈ ಮೇಲಿನ ಉಲ್ಲೇಖವನ್ನು ಗಮನಿಸಿದಾಗ ಭಾರತ ದೇಶಕ್ಕೆ ಒದಗಿಬಂದ ದುರಂತದ ಸ್ಥಿತಿಯನ್ನು ಹೇಳಲಾಗುತ್ತಿದೆ. ಬ್ರಿಟಿಶರ ಸಂಕೋಲೆಯಲ್ಲಿ ಭಾರತ ಸಿಲುಕಿಕೊಂಡಿದೆ. ಇದಕ್ಕೆ ಕಾರಣರಾದವರು ವಿದೇಶಿಯರೇ ಅಥವಾ ಸ್ವದೇಶಿಯರೆ ಎಂಬುದೇ ಗೊಂದಲದಲ್ಲಿದೆ. ಭಾರತಕ್ಕೆ ಇಂತಹ ಸ್ಥಿತಿ ಬರಲು ನಮ್ಮವರೂ ಸಹ ಕಾರಣೀಭೂತರಾಗಿರಬಹುದು ಎಂದು ಭಾರತಾಂಬೆ ಊಹಿಸುತ್ತಾಳೆ. ಕೀಲಿಕೈಯನ್ನು ತರಲು ಹೋದವರಲ್ಲಿ ಒಬ್ಬನಾದರೂ ಮರಳಿ ಬರಲಿಲ್ಲ ಎಂಬ ಮಾತು ಸ್ವಾತಂತ್ರ್ಯ ಚಳುವಳಿಯಲ್ಲಿ ಎಷ್ಟು ಜನ ಪ್ರಾಣ ಹೋಗಿರಬಹುದು ಎಂಬುದು ಈ ಮಾತಿನ ಮೂಲಕ ತಿಳಿಯಬಹುದು. ಬ್ರಿಟಿಶರ ಗುಂಡಿಗೆ ಬಲಿಯಾದವರು ಅದೆಷ್ಟು ಜನವೋ ತಿಳಿಯದು. ಯಾರು ಮರಳಿ ಬರಲಿಲ್ಲ. ನಿನ್ನ ಗತಿ ಏನು ಎಂದು ಭಾರತಾಂಬೆ ಕೇಳಿದಾಗ ಭರತಸುತ ಮೃತ್ಯು ಅಥವಾ ಸಿದ್ಧಿ! ಈ ಹೋರಾಟದಲ್ಲಿ ಮರಣ ಅಥವಾ ವಿಜಯ ಇವೆರಡರಲ್ಲಿ ಒಂದು ಸಿಗಲೇಬೇಕು ಎಂಬ ಮಾತು ೧೯೪೨ ರಲ್ಲಿ ಗಾಂಧೀಜಿ ಅವರು "ಮಾಡು ಇಲ್ಲವೇ ಮಡಿ" ಎಂಬ ಕರೆಯನ್ನು ನೆನಪಿಸುತ್ತಾರೆ. ಗಾಂಧೀಜಿ ಅವರ ಆ ಕರೆಯೇ ಈ ನಾಟಕದಲ್ಲಿ ಉಲ್ಲೇಖವಾಗಿರುವದನ್ನು ಗಮನಿಸಬಹುದು. ಸ್ವಾತಂತ್ರ್ಯ ಚಳುವಳಿ ಆರಂಭವಾದ ಕಾಲವನ್ನು ಈ ಮೊದಲನೇ ದೃಶ್ಯದಲ್ಲಿ ಚಿತ್ರಣಗೊಂಡಿರುವ ಕಾಣಬಹುದು.

ಬಲಿದಾನ ನಾಟಕದ ದೃಶ್ಯ ಎರಡರಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಚಿತ್ರಣ ಮತ್ತು ಸ್ವಾತಂತ್ರ್ಯ ದೊರೆತ ಸಂದರ್ಭವನ್ನು ಇಲ್ಲಿ ನಾಟಕಕಾರರು ಚಿತ್ರಿಸಿದ್ದಾರೆ. ೧೯೪೭ರ ಸಂದರ್ಭದಲ್ಲಿ ಆದ ಕೆಲವು ಘಟನೆಗಳನ್ನು ಪ್ರತಿನಿಧಿಕರಿಸಿದ್ದಾರೆ. ಕೆಲವು ಉದಾಹರಣೆಗಳನ್ನು ಈ ಕೆಳಗಿನಂತೆ ನೋಡಬಹುದು.

"ಧ್ವನಿ : ಸತ್ತವರ ಕರೆಯು, ಓ ಕೂಗುತಿದೆ ಅದು ಅದೋ ಕೇಳು

ಭೂತಕಾಲದ ಗರ್ಭ ಗೋರಿಯಿಂದ

ಆಲಿಸಿ ಅದನು ನೀ ಸುಮ್ಮನಿರುವೇಯ ಹೇಳು,

ದೇಶ ಮಾತೆಯು ಹಡೆದ ವೀರ ಕಂದಾ ?
ಏಳಿರೈ ಸೋದರರಿರ, ನಿಮಗಾಗಿ ಮಡಿದೆಮ್ಮ
ಮರೆಯದಿರಿ ನಿಮ್ಮಣ್ಣ ತಮ್ಮಂದಿರನು...
ಇರಲಿ ಹೂವಿನ ಮಾಲೆ, ಇರಲಿ ರೇಷ್ಮೆಯ ವಸನ
ಇರಲಿ ಮುತ್ತಿನ ಹಾರ! ಕೈಗತ್ತಿ ಬರಲಿ!
ಇರಲಿ ಹೊಸ ಹೆಣ್ಣು ಮದುವೆಯ ಸೊಗಸು ಶೃಂಗಾರ;
ಬರಲಿ ಕಾರಾಗಾರ ಮೃತ್ಯುವೈ ತರಲಿ!
ರಕ್ತ ಹೃದಯದ ಬಿಸಿಯ ರಕ್ತ ತರ್ಪಣವಿತ್ತು
ತಣಿಸಿರೈ ಸತ್ತರಾ ಬಯಕೆತೆತ್ತು;
ಇಲ್ಲದಿರೆ ನಿಮಗಾಗಿ ಸತ್ತಮಗೆ ಸೊಗವಿಲ್ಲ;
ಬದುಕಿರುವ ನಿಮಗೂ ಬದುಕೆ ಮಿತ್ತು!
ಇಂದು ರಕ್ತದ ಬಿಂದು, ಮುಂದೆ ಸೌಖ್ಯದ ಸಿಂಧು!
ಎಂದು ಸಾಹಸ ಕೇಳಿ ಹಿಂಜರಿಯಬೇಡಿ!(ಅದೇ, ಪುಟ ೯೦,೯೧)

ಅಶರೀರ ಧ್ವನಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸತ್ತ ವೀರರ, ಜನರ ಘಟನೆಯನ್ನು ವಿವರಿಸುತ್ತದೆ. ಸತ್ತವರ ಕರೆಯು ಓ ಎಂದು ಕೂಗುತ್ತಿದೆ. ಅದೋ ಕೇಳು ಎಂದು ಹೇಳುತ್ತಾ ನಿಮಗಾಗಿ, ದೇಶಕ್ಕಾಗಿ ಹುತಾತ್ಮರಾದ ವೀರರನ್ನು ಮರೆಯದಿರಿ ಅವರಿಗಾಗಿ ಗೌರವವನ್ನು ಸಲ್ಲಿಸಿರಿ ಎಂದು ದೇಶದ ಜನರಿಗೆ ಹೇಳುತ್ತಿದೆ. ಅಶರೀರ ಧ್ವನಿ. ಈ ರಕ್ತ ತರ್ಪಣ ದಿಂದಲೇ ದೇಶಕ್ಕೆ ಮುಂದೆ ಸೌಖ್ಯವಿದೆ ಎಂದು ಹೇಳುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮ ಇಲ್ಲಿ ಚಿತ್ರಣವಾಗಿದೆ.

ಭಾರತಾಂಬೆ ಮತ್ತು ಛಾಯಾ ಧ್ವನಿ ಸಂಭಾಷಣೆ ಈ ಕೆಳಗಿನಂತಿದೆ

"ಭಾರತಾಂಬೆ : ನೀನಾರು ಮಗು?
ಆವ ತಾಯಿಯ ಕರುಳಿಗೆ ಉರಿಯಿಕ್ಕಿ ಬಂದಿರುವೆ?
ಛಾಯಾ ಧ್ವನಿ : ಏಕಮ್ಮ ನಿನಗೆ ಈ ನಿರಾಶೆ?
ಭಾರತಾಂಬೆ : ಕತ್ತಲೋಳ್ ಕಾಣಿಸದೆ ಆರವರ್ ನಿಡಿವವರ್

ಛಾಯಾ ಧ್ವನಿ : ನಾನಮ್ಮ ಛಾಯಾ ಧ್ವನಿ?

ಭಾರತಾಂಬೆ : ಛಾಯಾ ಧ್ವನಿ ಆರ ಛಾಯಾ ಧ್ವನಿ?

ಛಾಯಾ ಧ್ವನಿ : ಆರೋಬ್ಬನದು ಆಯ್ತು ತಾಯ ಬಿಡುಗಡೆಗಾಗಿ
ದುಡಿದು ಮಡಿದ ಕೋಟಿ ಜೀವಗಳ ಪ್ರತಿಮೆ
ತಂದಿಹೆನು ನಿಮಗೊಂದು ವಾರ್ತೆಯನ್ನು

ಭಾರತಾಂಬೆ : ಮಂಗಳವೋ? ಮೇಣ್.....

ಛಾಯಾ ಧ್ವನಿ : ಮಂಗಳದ ಸಂದೇಶವದು, ಜನನಿ.

ಭಾರತಾಂಬೆ : ಕೋಟಿ ಅಮಂಗಳಗಳಂ ಒಂದತ್ತಿ
ಮಾಡಿತೀ ಮಂಗಳ ಧ್ವನಿ !

ಛಾಯಾ ಧ್ವನಿ : ಶೋಕವಂ ಬಿಡು, ತಾಯಿ ಸ್ವಾತಂತ್ರ್ಯ ಸಂಗ್ರಾಮದೊಳ್
ಸಂತೋಷದಿಂ ಮಡಿದವರೆಮ್
ನೀನಳಲ್ ಕುಂದಪ್ಪುದೆಮ್ಮಾ ಸಂತಸಕೆ
ನಟ್ಟನಡು ರಾತ್ರಿಯೋಳ್ ದಟ್ಟಯ್ಸುತಿರೆ ಇರುಳ್
ನಿನಗೆ ಬಿಡುಗಡೆಯಪ್ಪುದಾದ ಭರತಸುತನಂ!
ಬೀಳ್ಕೊಳ್ಳುವೆನ್ ಪಸರಸೆಮ್ಮ ನಮ್ಮ.

ಭಾರತಾಂಬೆ : ನಿಮಗೆಲ್ಲರ್ಗಂ ಸುಗತಿಯಕ್ಕೆ
ಜನ್ಮ ಜನ್ಮದೊಳುಂ ನನಗೆ ನೀಮನಿಬರಂ
ಮಕ್ಕಳಕ್ಕೆ !
ಎನಿತು ಮಕ್ಕಳ್ ನನ್ನ ಸಲುವಾಗಿ
ತಂದೆ ತಾಯಂದಿರನ್ ತೊರೆದಗಲಿದರ್?
ಎನಿತು ಪೆಂಡರ್ ತಮ್ಮ ಗಂಡಂದಿರನ್
ಮೀರಿ ಮಡಿದರ್ ?
ಎನಿತು ಸತಿಯರ್ ತಮ್ಮ ಮಾಂಗಲ್ಯಮಂ
ಸ್ವಾತಂತ್ರ್ಯ ದೇವತೆಗೆ ಬಲಿದಾನವಿತ್ತು

ಕಣ್ಬನಿಯ ಕಡಲೊಳಳ್ದಿಹರ್ !
ಎನಿತು ಮನೆಗಳ್ ಮುರಿದುವೆನಿದು ಸೇವಾರಗಳ್
ಸಿರಿಯುಳಿದು ಗತಿಗೆಟ್ಟುವಡವಿಪಾಲಾಗಿ
ಬಲಿಪರಂಪರೆವೇಳ್ಕುಮಿ ಸ್ವಾತಂತ್ರ್ಯ ಸಾಧನೆಗೆ
ಪಡೆಯ ಬಲಿದಾನಂ
ಪಿಡಿದುದಂ ನಡೆಯೆ ಬಲಿದಾನಂ !
ಬಲಿದಾನಕುಂಟೆ ಕೊನೆ ?
ಬಲಿಪರಂಪರೆಯಲ್ತೆ ಸ್ವಾತಂತ್ರ್ಯ ಜೀವನಂ !

(ಅದೇ, ಪು.೯೧, ೯೨)

ಈ ಮೇಲಿನ ಉಲ್ಲೇಖವೂ ಸಹ ಗಾಂಧೀಜಿಯವರ ಮುಂದಾಳತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ಎನ್ನ ಕುರಿತು ಚಿತ್ರಿಸುತ್ತದೆ. ಆದರೆ ಈ ಹೋರಾಟದಲ್ಲಿ ಮಡಿದವರ ಬಗ್ಗೆ ಛಾಯಾಧ್ವನಿ ಭಾರತಾಂಬೆಗೆ ಘಟನೆಯ ವಿವರವನ್ನು ನೀಡುತ್ತದೆ. ಭಾರತದ ಸ್ವಾತಂತ್ರ್ಯಕ್ಕಾಗಿ ವೀರಯೋಧರು ಸಂತೋಷದಿಂದ ಮಡಿದಿದ್ದಾರೆ. ಶೋಕವನ್ನು ಬಿಡುತಾಯಿ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಂದು ಛಾಯಾಧ್ವನಿ ಹೇಳಿದಾಗ ಭಾರತಾಂಬೆಗೆ ವೇದನೆಯಾಗುತ್ತದೆ. ಈ ಸ್ವಾತಂತ್ರ್ಯಕ್ಕಾಗಿ, ಭಾರತದ ಬಿಡುಗಡೆಗಾಗಿ ಎಷ್ಟು ಜನ ಮರಣ ಹೊಂದಿದ್ದಾರೆ. ಎಷ್ಟೋ ಕುಟುಂಬಗಳು ಅನಾಥವಾಗಿವೆ. ಹೆಂಗಸರು ಗಂಡಂದಿರನ್ನು ಕಳೆದುಕೊಂಡಿದ್ದಾರೆ. ತಂದೆ ತಾಯಿಗಳು ಮಕ್ಕಳನ್ನು ಕಳೆದುಕೊಂಡಿದ್ದಾರೆ. ಎಂದು ಭಾರತಾಂಬೆ ವೇದನೆ ಪಡುತ್ತಾ ಸ್ವಾತಂತ್ರ್ಯಕ್ಕಾಗಿ ಬಲಿಪರಂಪರೆಯೆ ಮುಂದುವರಿದಿದೆ ಎಂದು ಬಲಿದಾನ ಚಿತ್ರಣ ನೀಡಲಾಗುತ್ತದೆ. ಅಹಿಂಸೆ ಇಲ್ಲಿ ಸ್ಫೋಟಗೊಂಡಿದೆ.

ಭಾರತಕ್ಕೆ ಬ್ರಿಟಿಶರಿಂದ ಬಿಡುಗಡೆ ಸಿಕ್ಕ ಸಂದರ್ಭದಲ್ಲಿ ಭರತಸುತ ಭಾರತಾಂಬೆಗೆ ಕೀಲಿ ಕೈಯುನ್ನು ಒಪ್ಪಿಸುತ್ತಿರುವ ಸಂಧರ್ಭ ಈ ಕೆಳಗಿನಂತಿದೆ.

"ಭಾರತಾಂಬೆ : ಬಂದೆಯಾ ಮಗೂ
ಭರತಸುತ : ಬಂದೆನ್! ತಂದನ್ ಇದೆಕೊ ಕಾಣ್
ಭಾರತಾಂಬೆ : ವತ್ಸ, ಇದೇನ್ ಕೆನ್ನೀರ್
ಭರತಸುತ : ನೆತ್ತರೊಳ್ ಮುಳಗಿರ್ದದನ್ ಎತ್ತಿ ತಂದೆನ್, ತಾಯಿ
ಭಾರತಾಂಬೆ : ಪರಕೀಯ ವೈರಿಗಳ್ ಚೆಲ್ಲಿದುದೆ!

ಭರತಸುತ : ಅಲ್ತಲ್ತು ನಮ್ಮವರ್ ಚೆಲ್ಲಿದುದೆ!
ಪರಕೀಯ ವೈರಿಗಳ್ ಚೆಲ್ಲಿದಾ ಶೋಷಿತಮ್
ಹನುಗೊರಸು ನೀರ್, ನಮ್ಮವರ್ ಚೆಲ್ಲಿದ
ಕಡಲಿದಿರ್ ! ಈ ನಿನ್ನ ಶೃಂಖಲೆಗಳಂ ಬಿಗಿದಾ
ಭೀಗಮಂ ತೆಗೆವ ಕೀಲಿ ಕೈ ಮುಳುಗಿರ್ದುದಾ
ಸೀದರರ್ ಸೋವವರ್ ಮೆಯಿಂದ ಚಲ್ಲಿದಾ
ಮತವೈರ ಸಂಜಾತ ರುಧೀರ ಪ್ರವಾಹದೊಳ್

ಭಾರತಾಂಬೆ : ಅಯ್ಯೊ ಇಲ್ಲಿಯಂ ಬಿಡುಗಡೆಯ ಪಡೆವಲ್ಲಿಯುಂ
ನಾನೆಂತಪ್ಪ ದುರ್ಭಾಗ್ಯಯೆನ್ !
ಅನ್ಯರಿಂ ಪಡೆವಡೆಯೊಳಂದು ಬಲಿದಾನಂ !
ನನ್ನವರೆ ಕೊಡವಡೆಯೊಳಿಂದ ಬಲಿದಾನಂ
ಇನ್ನು ಮೆನಿತೆರ್ಕುವೋಮನ್ ಬಲಿದಾನಂ !

ಭರತಸುತ : ಅಳಲದರ್, ತಾಯೆ, ಅಳಲ್ಕಿದು ಪೊಳ್ತುಳು
ನಿನ್ನಂ ಮೊದಲ್ ಸ್ವತಂತ್ರತೆಯಂ ಮಾಳ್ಪೆನ್
ಅನಂತರಂ ನೋಳ್ಪಮೀ ನಿನ್ನ ಸ್ವಾತಂತ್ರ್ಯದಿಂ
ಸಂಭವಿಪ ಸದ್ಬುದ್ದಿಯಂ ಸಂತೃಪ್ತಿಯಂ ಶಾಲೆಯಂ!"

(ಅದೇ, ಪು.೯೪, ೯೫)

ಗಾಂಧಿ ಮತ್ತು ಅವರ ಸಹಚರರ ಪ್ರತಿಫಲದಿಂದ ದೊರೆತ ಸ್ವಾತಂತ್ರ್ಯದ ಸಂದರ್ಭ ಇದಾಗಿದೆ. ಬ್ರಿಟಿಶರನ್ನು ಭಾರತದಿಂದ ಓಡಿಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುತ್ತಾರೆ. ಭಾರತಾಂಬೆಯನ್ನು ಬಂಧಮುಕ್ತಳನ್ನಾಗಿ ಭರತಸುತ ಮಾಡುತ್ತಾನೆ. ಕೀಲಿ ಕೈಯಿಂದ ಬೀಗವನ್ನು ಕಳಚುತ್ತಾನೆ. ಭರತಮಾತೆಯನ್ನು ಸ್ವತಂತ್ರ್ಯಳನ್ನಾಗಿ ಮಾಡುತ್ತಾನೆ. ಬಲಿದಾನದಿಂದ ನನಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಪರಿತಪಿಸುತ್ತಾಳೆ. ಆಗ ಭರತಸುತ ವೇದನೆ ಪಡಬೇಡ ತಾಯಿ ಸ್ವಾತಂತ್ರ್ಯಕ್ಕಾಗಿ ಬಲಿದಾನ ನಡೆದಿದೆ ನಿಜ. ಆದರೆ ಈ ಸ್ವಾತಂತ್ರ್ಯ ಸದ್ಬುಧ್ಧಿ, ಸಂತೃಪ್ತಿ, ಶಾಂತಿಯನ್ನು ಹೊಂದುತ್ತದೆ ಎಂದು ಭರತಸುತ ಹೇಳುತ್ತಾನೆ. ಗಾಂಧೀಜಿಯವರ ಮುಂದಾಳತ್ವದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ. ಈ

ರೀತಿಯಾಗಿ ಗಾಂಧೀಜಿಯವರ ತತ್ವಾದರ್ಶ, ಚಳುವಳಿ ನಾಟಕದಲ್ಲಿ ಪ್ರತಿನಿಧೀಕರಣಗೊಂಡಿದೆ. ಭಾರತ ಸ್ವಾತಂತ್ರ್ಯ ಚಳುವಳಿ ಹಿಂಸೆಯನ್ನು ಒಳಗೊಂಡಿತ್ತು ಎಂಬುದು ಈ ನಾಟಕದಿಂದ ತಿಳಿಯುತ್ತದೆ.

ದೃಶ್ಯ ಮೂರರಲ್ಲಿ ಭಾರತಾಂಬೆ ಮತ್ತು ಭರತಸುತ ಸ್ವಾತಂತ್ರ್ಯ ನಂತರದಲ್ಲಿ ಮಾತನಾಡುವ ಉದಾಹರಣೆಯನ್ನು ಈ ಕೆಳಗಿನಂತೆ ಕಾಣಬಹುದು.

ಭರತಸುತ : ಸ್ವಾತಂತ್ರ್ಯೋತ್ಸವಕ್ಕೆ ಜನ ಸಮುದ್ರಂ ನೆರೆದು
ಸ್ವಸ್ಥಿಯಂ ಘೋಷಿಸಿದೆ. ನಿನ್ನ ಕಾಣಲ್ಕೆವರ್
ಕಾತರಿ ಕಾಯುತಿಹರಲ್ಲಿ ನೋಡಲ್ಲಿ ಕಾಣ್ !
ಇಲ್ಲಿ ನಿನ್ನನ್ ಕಾಣದೆಲ್ಲಿದಳ್ ಕಾಯೆಂದು
ಕಾತರದಿ ಕೂಗಿದನ್

ಭಾರತಾಂಬೆ : (ನಸುನಗುತ್ತ) ನಾನಿನ್ ಅಶರೀರಿ
ಮೇಣ್ ವಿರಾಟ್ ಶರೀರಿ ನನ್ನನ್
ಆ ಅನ್ಯರೆಸಗಿದೊಲ್ ಗುಡಿಯೊಳಯ ಸೆರೆಗೈದು
ಪೂಜಿಸಲ್ ಬಗೆವಾ ಕರ್ಬೊನ್ನ ಸಂಕೋಲೆಯಂ
ಕಳಚಿ ಚೆಂಬೊನ್ನ ಮಿಳಿಗಳಿಂ
ಸ್ವಾತಂತ್ರ್ಯದರ್ಥಮಂ ಬಂಧಿಸದಿರನರ್ಥದಿಂ
ನುಡಿವರೆಡೆಯಿಂ ಮಿಗಿಲ್ ದುಡಿವರೆಡೆ ಸೊಗಸೆನಗೆ !

ಭರತಸುತ : ಮನ್ನಿಸೆನ್ನನ್ ಪೂಜ್ಯೆ ನಿನ್ನ ಸ್ವಾತಂತ್ರ್ಯಮಂ
ಬಂಧಿಸಲ್ ಬಗೆದಂದೆನಲ್ತು ಉತ್ಸವಕೆ
ಬಿಜಯ ಗೆಯ್ ಎಂದು ಕೆಳಲ್ಕೆ ಬಂದೆನ್

ಭಾರತಾಂಬೆ : ಆವುದುತ್ಸವಮೆನಗೆ?

ಭರತಸುತ : ಏಕಮ್ಮಾ ! ಸ್ವಾತಂತ್ರ್ಯೋತ್ಸವಂ!

ಭಾರತಾಂಬೆ : ಆವುದಾ ಸ್ವಾತಂತ್ರ್ಯ?

ಭರತಸುತ : ನಮ್ಮೆಲ್ಲರಿತ್ತ ಬಲಿದಾನಂಗಳಿಂ ಪಡೆದ
ಭಾರತ ಸ್ವಾತಂತ್ರ್ಯಂ !

ಭಾರತಾಂಬೆ : ಬಾಹ್ಯ ಬಂಧನಗಳಂ ಕಳಲ್ಚಿದಿರಿ ದಿಟಂ
ಆಂತರದ ಶೃಂಖಲೆಗಳೊಳವು ವಜ್ರೋಪಮಂ
ಅವುಗಳಿಂದ ಕಡಿವ ದುಡಿಮೆಯೊಳಿರ್ಪನೆಡೆಗೆ
ನಾನೆಯ್ದಿದೆನ್ ನೆರವೀಯಲೆಂದಾತರಿಗೆ !

ಭರತಸುತ : ಆವೆಡೆಗೆ? ಆರವನ್? ಸ್ವಾತಂತ್ರ್ಯೋತ್ಸವಕೆ
ಮಕ್ಕಳೆಲ್ಲರ್ ಇಲ್ಲೆ ನೆರೆದಿರ್ಪರಮ್ಮಾ!

ಭಾರತಾಂಬೆ : ಮರೆತೆಯೇನ್ ನೀಂ ತಂದ ಕೀಲಿ ಕೈಯಂ
ನೆತ್ತರೊಳ್ ಮುಳುಗಿರ್ದುದಂ?
ಬೆನ್ನಟ್ಟುತಿರ್ಪುದಾ ಭೂತಮಿನ್ನುಂ!
ಖಿನ್ನ ನಾಗದಿರ್
ಅನಿವಾರ್ಯಮದಕೆ ನೀನಲ್ತು ಕಾರಣಂ
ಎಲ್ಲರುಂ ಇಲ್ಲೆ ನೆರೆದಿಹರೆಂದುಯೆಲ್ತೆ?
ಎಲ್ಲಿ ತೋರೆನಗಿಲ್ಲಿ ಆ ಸ್ವಾತಂತ್ರ್ಯ ಶಿಲ್ಪಿಯಂ ?

ಭರತಸುತ : ಕಾಣೆನಾ ಪುಣ್ಯಾತ್ಮನಂ! ಎಲ್ಲಿದನ್ ತಾಯಿ?

ಭಾರತಾಂಬೆ : ದಿವ್ಯಶಕ್ತಿಯ ನಿತ್ತಪೆನ್; ಕೇಳ್ ಕಾಣ್ (ಭರತಸುತನು ಆಲಿಸುತ್ತಾನೆ. ಬಹುರೂಪದಿಂದ ರಾಮನಾಮ ಇಂಪಾಗಿ ಕರುಣ ಪೂರ್ವಕವಾಗಿ ತೇಲಿಬರುತ್ತದೆ.)

ವಾಣಿ : ರಘುಪತಿ ರಾಘವ ರಾಜಾರಾಮ್
ಪತಿತ ಪಾವನ ಸೀತಾರಾಮ್
ಈಶ್ವರ ಅಲ್ಲಾ ತೇರೆ ನಾಮ್
ಸಬ್ ಕೋ ಸನ್ಮತಿ ದೇ ಭಗವಾನ್ ! (ಅದೇ ಪು.೭೦-೭೨)

ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಸಂದರ್ಭದಲ್ಲಿ ಜನ ಸಂತೋಷದಿಂದಿದ್ದಾರೆ. ಭರತ ಮಾತೆಯನ್ನು ಕಾಣಲು ಬಂದಿದ್ದಾರೆ. ಭರತಮಾತೆ ಸ್ವಾತಂತ್ರ್ಯ ಎಂದರೆ ಯಾವುದು? ಎಂದು ಪ್ರಶ್ನಿಸುತ್ತಾಳೆ. ಪರಕೀಯರಿಂದ ಸ್ವಾತಂತ್ರ್ಯ ಪಡೆದಿದ್ದೇನೆ ನಿಜ. ಆದರೆ ದೇಶದೊಳಗಿರುವ ಬಂಧನದಿಂದ ಸ್ವತಂತ್ರ್ಯ ಪಡೆಯಲಾಗಲಿಲ್ಲ ಎಂದು ಹೇಳುತ್ತಾಳೆ. ಯಾಕೆಂದರೆ ಬ್ರಿಟಿಶರ ನಿರ್ಗಮನದಿಂದ

ರಾಜಕೀಯ ಸ್ವಾತಂತ್ರ್ಯ ಮಾತ್ರ ನಮಗೆ ದೊರೆತಿದೆ. ಸಾಮಾಜಿಕ ಸ್ವಾತಂತ್ರ್ಯ ಇನ್ನು ದೊರೆತಿಲ್ಲ. ಜನರ ಬದುಕಿನ ಕ್ರಮದಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ. ಸಮಾಜದಲ್ಲಿರುವ ಮೌಢ್ಯ, ಜಾತಿ ಪದ್ದತಿ, ಕಂದಾಚಾರ, ಅಸ್ಪೃಶ್ಯತೆ ಆಚರಣೆ ಇವುಗಳಿಂದ ಬಿಡುಗಡೆ ಬೇಕಾಗಿದೆ ಎಂಬುದನ್ನು ಈ ಮಾತಿನಿಂದ ತಿಳಿದುಕೊಳ್ಳಬಹುದಾಗಿದೆ. ಇದು ನಿಜವಾದ ಸ್ವಾತಂತ್ರ್ಯ. ಕೆಲವರಿಗೆ ಮಾತ್ರ ಸಿಕ್ಕ ಸ್ವಾತಂತ್ರ್ಯ, ದುಡಿಯುವ ವರ್ಗಕ್ಕೆ, ಬಡವರಿಗೆ, ದೀನದಲಿತರಿಗೆ ಸಿಕ್ಕ ಸ್ವಾತಂತ್ರ್ಯ ಬಾಹ್ಯ ಸ್ವಾತಂತ್ರ್ಯವನ್ನು ಬಲಿದಾನದಿಂದ ಪಡೆದಿರಬಹುದು. ಆದರೆ ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಬಲಿದಾನದ ಪರಂಪರೆಯು ಮುಂದುವರಿದರೂ ಸಾಮಾಜಿಕ ನ್ಯಾಯ ಸಿಗುವುದು ಕಷ್ಟ. ಆದ್ದರಿಂದ ಭಾರತದಂತಹ ಶ್ರೇಣಿಕೃತ ಸಮಾಜದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುವ ಅವಶ್ಯಕತೆ ಯಿದೆ. ಹಾಗಾಗಿ ಇಲ್ಲಿ ಗಾಂಧೀಜಿಯವರನ್ನು ಸ್ವಾತಂತ್ರ್ಯ ಶಿಲ್ಪಿಯಾಗಿ ಪ್ರತಿನಿಧೀಕರಿಸಲಾಗಿದೆ.

ಸಮಾಜದಲ್ಲಿ ದಲಿತರ ಉದ್ಧಾರವಾದರೆ ಸಾಮಾಜಿಕ ನ್ಯಾಯ ದೊರೆತಂತೆ ಆದ್ದರಿಂದ ಗಾಂಧೀಜಿ ಅವರ "ರಘುಪತಿ ರಾಘವ ರಾಜಾರಾಮ್ ಪತಿತ ಪಾವನ ಸೀತಾರಾಮ್" ಎಂಬ ಗೀತೆಯನ್ನು ಈ ನಾಟಕದಲ್ಲಿ ಪ್ರತಿಪಾದಿಸಿದ್ದಾರೆ. ಪತಿತ ಪಾವನ ಎಂದರೆ ದಲಿತರ ಪಾವನ, ದಲಿತರ ಉದ್ಧಾರ ಎಂಬ ಅರ್ಥ ಬರುತ್ತದೆ. ಗಾಂಧೀಜಿಯವರು ದಲಿತರನ್ನು ಹರಿಜನರೆಂದು ಕರೆದಿದ್ದಾರೆ. ದೇವಾಲಯ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ರೀತಿ ದಲಿತರ ಉದ್ಧಾರಕ್ಕಾಗಿ ಗಾಂಧೀಜಿಯವರು ಸಾಮಾಜಿಕ ನ್ಯಾಯಕ್ಕಾಗಿ ಶ್ರಮಿಸಿದ್ದಾರೆ ಎಂದು ಹೇಳಬಹುದು. ಹಾಗೆ ಇಲ್ಲಿ ಗಾಂಧೀಜಿ ಅವರ ಜೊತೆಗೆ ರಾಜಕೀಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಶ್ರಮವಹಿಸಿದವರನ್ನು ಪ್ರತಿನಿಧೀಕರಿಸಿದ್ದಾರೆ.

ಕುವೆಂಪು ಅವರ ಈ ಬಲಿದಾನ ನಾಟಕದಲ್ಲಿ ಗಾಂಧೀಜಿಯವರು ಪ್ರತ್ಯಕ್ಷವಾಗಿ, ನೇರವಾಗಿ ಪಾತ್ರವಾಗಿ ಬಂದಿದ್ದರು ಅವರನ್ನು ಚಳುವಳಿಯ ಭಾಗವಾಗಿ ಚಿಂತನೆಯಾಗಿ ಈ ನಾಟಕದಲ್ಲಿ ಪ್ರತಿನಿಧೀಕರಿಸಲಾಗಿದೆ. ಭರತಸುತ ಎಂಬ ಪಾತ್ರವೇ ಗಾಂಧೀಯ ರೂಪಕ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯದ ಬಗ್ಗೆ ಇಲ್ಲಿ ಗಾಂಧಿಯ ಚಿಂತನೆಗಳು ವ್ಯಕ್ತಗೊಂಡಿವೆ. ದುಡಿಯುವ, ಬಡವರ, ದಲಿತ ವರ್ಗದ ದನಿಯಾಗಿ ಒಬ್ಬ ನ್ಯಾಯಶಿಲ್ಪಿಯಾಗಿ ಅದ್ಭುತ ಸ್ವರೂಪಿಯಾಗಿ ಸ್ವಾತಂತ್ರ್ಯ ಸಂಭ್ರಮದ ರೂವಾರಿಯಾಗಿ ಈ ನಾಟಕದಲ್ಲಿ ಗಾಂಧಿಯನ್ನು ಚಿತ್ರಿಸಿದ್ದಾರೆ.

ಗರ್ಭಗುಡಿ

ಶಿವರಾಮ ಕಾರಂತರ 'ಗರ್ಭಗುಡಿ' ನಾಟಕ ಅಸ್ಪೃಶ್ಯತೆ ಆಚರಣೆ, ದೇವಾಲಯ ಪ್ರವೇಶವನ್ನು ಮುಖ್ಯವಸ್ತುವಾಟ್ಟುಕೊಂಡಿದೆ. ಈ ನಾಟಕದಲ್ಲಿ ಕಶ್ಯಪಋಷಿ, ಭಾನುಕೋಟೆ,

ಏಕಾಕ್ಷಿ, ಮಾಗೇಶ, ಅಶ್ವತ್ಥ, ಸಣ್ಣಪ್ಪಭಟ್ಟ ಇವೂ ಮೇಲ್ಜಾತಿ ಪಾತ್ರಗಳಾಗಿವೆ. ಮಾಂಕು, ಬಾಂಕು ಕೆಳ ಜಾತಿ ಪಾತ್ರಗಳಾಗಿವೆ. ದೇವಸ್ಥಾನದ ಒಳಗಡೆ ದಲಿತರಿಗೆ ಅಥವಾ ಕೆಲಜಾತಿಯವರಿಗೆ ಜಾತಿಯವರಿಗೆ ಪ್ರವೇಶವಿಲ್ಲ. ಅಸ್ಪೃಶ್ಯತೆ ಆಚರಣೆ ಕಂಡುಬರುತ್ತದೆ. ಗಾಂಧೀಜಿ ಅವರು ದಲಿತರಿಗೆ ದೇವಾಲಯ ಪ್ರವೇಶ ಕುರಿತು ಮಾಡಿದ ಹೋರಾಟ, ದಲಿತರ ಉದ್ಧಾರಕ್ಕಾಗಿ ಹಾಕಿಕೊಂಡ ಯೋಜನೆಗಳು, ಅವರ ಚಿಂತನೆಗಳು ಶಿವರಾಮ ಕಾರಂತರ ಮೇಲೆ ಪ್ರಭಾವ ಬೀರಿವೆ. ಆ ಭಾಗವಾಗಿ ಈ ನಾಟಕದಲ್ಲಿ ಗಾಂಧೀಜಿಯವರ ಚಿಂತನೆಗಳು ಮೂಡಿಬಂದಿವೆ.

ಇದು ಧರ್ಮದ ಅವನತಿಯನ್ನು ಸಂಕೇತಿಸುವ ನಾಟಕವಾಗಿದೆ. ಇಲ್ಲಿ ಪುರಾಣ ಪಾತ್ರವಾದ ಕಶ್ಯಪ ಋಷಿಯನ್ನು ಬಳಸಿಕೊಂಡಿದ್ದಾರೆ. ಪುರೋಹಿತಶಾಹಿಗೆ ಮಾತ್ರ ಸೀಮಿತವಾಗಿದ್ದಂತಹ ದೇವಸ್ಥಾನದ ಗರ್ಭಗುಡಿಯ ಪ್ರವೇಶವನ್ನು ಸಾಮಾನ್ಯ ಜನರಿಗೂ, ದಲಿತರಿಗೂ ಪ್ರವೇಶ ಸಿಗುವಂತೆ ಕಶ್ಯಪಋಷಿ ಮಾಡುತ್ತಾನೆ. ಮಹಾತ್ಮ ಗಾಂಧಿಯವರ ಚಿಂತನೆ ಇಲ್ಲಿ ಮೂಡಿ ಬಂದಿದೆ. ವಾಸ್ತವ ಮಾದರಿಯ ಸಾಮಾಜಿಕ ನಾಟಕವಾಗಿ ಗರ್ಭಗುಡಿಯನ್ನು ಪರಿಶೀಲಿಸಿದ್ದಾರೆ. ಪುರಾಣ ಕಾಲದ ಕಶ್ಯಪ ಋಷಿಯ ಪಾತ್ರ ಮತ್ತು ಗರ್ಭಗುಡಿಯದಂತ ಕಥೆಯನ್ನು ಆಧರಿಸಿದ ವಸ್ತುರಚನೆ ಸಮಕಾಲೀನ ಪರಿಸರಕ್ಕೆ ಹೊಂದಿಕೊಳ್ಳುವುದಿಲ್ಲವೆನಿಸಿದರೂ ಪುರೋಹಿತರ, ಮಠಾದಿಪತಿಗಳ ಸ್ವಾರ್ಥ ಕಪಟಗಳನ್ನು ವಿಡಂಬಿಸಲು ಈ ನಾಟಕ ಯಶಸ್ವಿಯಾಗಿದೆ. ಬ್ರಾಹ್ಮಣರ ಅವನತಿ, ಧರ್ಮಾಧಿಕಾರಿಗಳ ಲೊಭ, ಅಸ್ಪೃಶ್ಯರ ಶೋಷಣೆ ಇವನ್ನೆಲ್ಲ ಚಿತ್ರಿಸಲು ಕಲ್ಪಿಸಿಕೊಂಡಿರುವ ಇಲ್ಲಿ ಸಾವಯವ ಸಂಬಂದವಿದೆ.

ಅಸ್ಪೃಶ್ಯತೆ ಆಚರಣೆಗೆ ಸಂಬಂಧಪಟ್ಟ ಒಂದು ಉದಾಹರಣೆ ಈ ಕೆಳಗಿನಂತೆ ನೋಡಬಹುದು.

ಸಣ್ಣಪ್ಪಭಟ್ಟ ; ಕಶ್ಯಪನ ಕತೆಯನ್ನು ಕೇಳಿ ಯಾರಿಗೆ, ನಿನಗೇನು ನೀರು? ನದಿಯವರೆಗೆ ಹೋಗಲು ಏನು ದಾಡಿ? ನಿನಗೇನು ಸಾವಿನ ಸಂಕಟ ಬಂದಿದೆ? ಏನೋ ಸೊಕ್ಕಿನವನೇ!

ಕಶ್ಯಪ : ದಯಾಳುವೆ, ನನಗೇನು ನೀರು ಬೇಕಾಗಿಲ್ಲ. ಇಲ್ಲಿ ನೋಡಿರಿ ಈ ಮಗುವಿನ ತಲೆಯೊಡೆದು ಹೋಗಿದೆ. ಯಾರು ಹೊಡೆದರೋ ಏನೊ? ಇವನ ಮುಖಕ್ಕೆ ಸ್ವಲ್ಪ ನೀರನ್ನು ಹಾಕಿರಿ ಸ್ಮೃತಿ ಬರಲಿ.

ಸಣ್ಣಪ್ಪಭಟ್ಟ : ಯಾರಿಗೆ? ಅವನಿಗೇನು? ಅಯ್ಯೋ ಥೂ ನಿನ್ನ ಕುಲ ಹಾಳಾಗಲಿ. ಹೊಲೆಯರ ಪಿಳ್ಳೆಯನ್ನು ಹಿಡಿದು ಕರೆಯುತ್ತಾನೆ ನನ್ನನ್ನು ತಿರುಗಿ ಸ್ನಾನ ಮಾಡುವಂತೆ ಮಾಡಿದನು.

ಕಶ್ಯಪ : ಸ್ನಾನವೇಕೆ ಸ್ವಾಮಿ? ಅವನು ನಮ್ಮಂತೆ ಮನುಷ್ಯರಲ್ಲವೇ? ಸ್ವಲ್ಪ ನೀರನ್ನು ಬಾಯಿಗೆ ಹಾಕಿರಿ. ನಿಮ್ಮ ಕುಲ ಉದ್ಧಾರವಾದೀತು.

ಸಣ್ಣಪ್ಪಭಟ್ಟ : ಕರ್ಮ ಚಂಡಾಲ. ನಿನ್ನಂತೆ ನಾನು ಹೊಲಯರನ್ನು ಮುಟ್ಟುತ್ತೇನೆ ಎಂದು ತಿಳಿದೆಯೊ?

ಕಶ್ಯಪ : ಮುಟ್ಟಬೇಡಿ ದೂರದಿಂದಲೇ ಎಸೆಯಿರಿ.

ಸಣ್ಣಪ್ಪಭಟ್ಟ : ನೀನು ಬಹಳ ಸೊಕ್ಕಿರುವೆಯಲ್ಲ. ಮೂರ್ಖ ! ಅದು ಪತಿತ ಪಾವನೀಯ ತೀರ್ಥ ಹೊಲೆಯರ ಮಕ್ಕಳನ್ನು ತೊಳೆಯುವ ಚರಂಡಿ ನೀರಲ್ಲ. ತೀರ್ಥ – ಏನು ತಿಳಿಯಿತೇ?

ಕಶ್ಯಪ : ತೀರ್ಥವೆ? ಪತಿತ ಪಾವನೀಯ ತೀರ್ಥೋದಕಲೆ? ಒಳಿತಾಯಿತು ಪಾಪದ ಬಾಲಕನು ತೀರ್ಥ ಬಲದಿಂದ ಜೀವವನ್ನು ಹಿಡಿಯಲಿ.

ಸಣ್ಣಪ್ಪಭಟ್ಟ : ಹಾಳಾಗಿ ಹೋಗು, ಅಸಂಬಂಧ ಮಾಡುವವನೇ, ಅವನ ಬಾಯಿಗೆ ತೀರ್ಥವಂತೆ! ನಿನಗೆ ಹೇಳಲು ಸೊಕ್ಕದರೂ ಎಷ್ಟು ಇರ ಬೇಕು? ತೀರ್ಥವನ್ನು ಅವನ ಬಾಯಿಗೆ ಸುರಿಯಬೇಕಾ? ಇದೇನು ತಾಳೆಯ ಹೆಂಡವೆಂದು ತಿಳಿದೆಯಾ? ನೀನಾರೆಂದು ತಿಳಿದು ನಾಳೆ ಶ್ರೀಪಾದಾಂಗಳವರಿಂದ ನಿನ್ನನ್ನು ದಂಡಿಸದಿದ್ದರೆ.

ಕಾಶ್ಯಪ : ಹೇ ಉತ್ತಮನೆ, ನನಗೆ ಬೇಕಾದ್ದನ್ನು ಮಾಡಿಸು, ಆದರೆ ಈ ಸಾಯುವ ಮಗುವನ್ನು ಉಳಿಸಲಾರೆಯಾ? ಇಲ್ಲ ಈ ಕಠಿಣಾತ್ಮನು ತೆರಳಿದನು. ಇವನಿಗೆ ಈ ಧೀರನರ ಮೇಲೆ ಎಂದೂ ಕರುಣೆಗೆ ಬರಲಾರದು ಯಾರನ್ನು ಕರೆಯಲಿ, ಇಲ್ಲಿ, ನಾನೆ ಹೋಗುತ್ತೇನೆ"(ಶಿವರಾಮ ಕಾರಂತ, ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಾಹಿತ್ಯ– ೨೩ ನಾಟಕಗಳು, ಪುಟ ೧೧೯ – ೧೨೦)

ಈ ನಾಟಕದಲ್ಲಿ ಅಸ್ಪೃಶ್ಯತೆ ಆಚರಣೆಯನ್ನು ಮೇಲ್ಜಾತಿಯವರು ಆಚರಿಸುತ್ತಿರುವುದು ಕಂಡುಬರುತ್ತದೆ. ಕಶ್ಯಪ ಋಷಿಯು ಮನುಷ್ಯರೆಲ್ಲರೂ ಒಂದೆ ಎಲ್ಲರೂ ಸಮಾನರು. ಜಾತಿಯ ಭೇದವಿಲ್ಲ ಎಂಬ ತತ್ವವನ್ನು ಹೇಳುತ್ತಾನೆ. ಗಾಂಧೀಜಿಯು ಅಸ್ಪೃಶ್ಯತೆ ಆಚರಣೆ ನಿಷೇಧಿಸಬೇಕು, ದಲಿತರಿಗೆ ದೇವಾಲಯ ಪ್ರವೇಶ ಮಾಡಿಕೊಡಬೇಕೆಂದು ಭಾರತದಾದ್ಯಂತ ಹೋರಾಟವನ್ನು ಮಾಡುತ್ತಾರೆ, ಅವರ ಚಿಂತನೆಯ ಪ್ರಭಾವ ಕಾರಂತರ ಮೇಲು ಆಗಿರುವುದು ಈ ಮೂಲಕ ಕಂಡುಬರುತ್ತದೆ.

ಕೇಂದ್ರ ಪಾತ್ರವಾದ ಕಶ್ಯಪ ಋಷಿಯ ಪಾತ್ರ ರಚನೆಯಲ್ಲಿ ಭಾವಾತಿರೇಕದ ಸ್ಪರ್ಶವಿದೆಯಾದರೂ ಈ ಪಾತ್ರಕ್ಕಿರುವ ಪೌರಾಣಿಕ ಹಿನ್ನೆಲೆಯಿಂದಾಗಿ ಮೂಡಿಬಂದಿದೆ.

ಸಮಾಜದ ಅವನತಿಯನ್ನು ಈ ನಾಟಕದಲ್ಲಿ ಚಿತ್ರಿಸಿದ್ದಾರೆ. ಏಕಾಕ್ಷಿ ಮಾಗೇಶರಂತಹ ಸಾಮಾನ್ಯರಿಂದ ಹಿಡಿದು ಭಾನುಕೋಟೆ ಆಚಾರ್ಯನಂತಹ ಧರ್ಮಾಧಿಕಾರಿ. ಸ್ವಾಮಿರಾಯನಂತಹ ಮಠಾದಿಪತಿಯವರೆಗೆ ಶೋಷಣೆಯ ವಿವಿಧ ರೂಪಗಳ ಹಂತಗಳನ್ನು ಅತ್ಯಂತ ವಾಸ್ತವವಾಗಿ ಉತ್ಕಟವಾಗಿ ಇಲ್ಲಿ ನಿರೂಪಿಸಲಾಗಿದೆ.

ಜನರ ಅಂಧಶ್ರದ್ಧೆ, ಅಜ್ಞಾನಗಳನ್ನು ಪ್ರತಿನಿಧಿಸುವ ಲೇಕಕರು, ಶೋಷಣೆಗೆ ತುತ್ತಾದ ಹೊಲೆಯರು, ಸಮಾಜದ ಇನ್ನೊಂದು ಮುಖವಾಗಿದ್ದು, ಹಣದ ಆಸೆಗಾಗಿ ಅವರ ಉದ್ಧಾರದ ಬಗ್ಗೆ ನಾಟಕದಲ್ಲಿ ಆಶಾವಾದವಿದೆ. ಹಣದ ಆಸೆಗಾಗಿ ಅನಾಥ ಬಂಧುವನ್ನು ನಿರಾಕರಿಸುವ ಪುರೋಹಿತರಿಂದ ಗರ್ಭಗುಡಿಯನ್ನು ಮುಕ್ತಗೊಳಿಸುವ ಕಶ್ಯಪ ಋಷಿ ಪುರಾಣ ಕಾಲದವನಂತಿದ್ದರೂ ಆಧುನಿಕ ಪ್ರವಾದಿಯಂತೆ ಗೋಚರಿಸುತ್ತಾನೆ. ಅವನು ಮಠಾಧಿಪತಿ, ಧರ್ಮಾಧಿಕಾರಿ ಪುರೋಹಿತರಿಗೆ, ಗುಪ್ತ ನಿಧಿಯನ್ನು ದೊರಕಿಸಿಕೊಟ್ಟ ಪ್ರತಿಯಾಗಿ ಅವರಿಂದ ದೇವರಿಗೆ ಸಂಬಂಧಿಸಿದ ಹಕ್ಕುಗಳನ್ನೆಲ್ಲಾ ಕಸಿದುಕೊಂಡು ಅನಾಥ ಬಂಧುವಿನ ಗರ್ಭಗುಡಿಯನ್ನು ಸಾಮಾನ್ಯರಿಗೂ ಅಂದರೆ, ದಲಿತರಿಗೆ ಮುಕ್ತವಾಗಿಸುವ ಸನ್ನಿವೇಶದಿಂದ ಈ ನಾಟಕ ಮುಕ್ತಾಯವಾಗುತ್ತದೆ.

ಅಸ್ಪೃಶ್ಯತೆ ಆಚರಣೆ ನಿಷೇಧ ಮತ್ತು ದಲಿತರಿಗೆ ದೇವಾಲಯದ ಪ್ರವೇಶ ಎಂಬ ಆಶಯವೇ ಇಲ್ಲಿ ಮುಖ್ಯವಾಗಿದೆ. ಶಿವರಾಮ ಕಾರಂತರ ಈ ಗರ್ಭಗುಡಿ ನಾಟಕಕ್ಕೆ ಗಾಂಧೀಜಿ ಅವರ ತತ್ವಾದರ್ಶಗಳು, ಚಿಂತನೆಗಳು ಪ್ರಭಾವ ಬೀರಿವೆ. ಈ ರೀತಿಯಾಗಿ ಚಿಂತನೆಗಳ ಮೂಲಕ ಗಾಂಧೀಜಿ ಈ ನಾಟಕದಲ್ಲಿ ಪ್ರತಿನಿಧಿಕರಣಗೊಂಡಿದ್ದಾರೆ.

ಉತ್ತರ ಭೂಪ

ಕಾಂಗ್ರೆಸ್ ಸ್ಥಾಪನೆ ಮತ್ತು ಗಾಂಧೀಜಿ ಆಗಮನದ ನಂತರ ಭಾರತೀಯ ಸ್ವಾತಂತ್ರ್ಯ ಚಳುವಳಿಯು ತುಂಬಾ ವ್ಯಾಪಕತೆಯನ್ನು ಪಡೆದುಕೊಂಡಿತು. ಮಹಾತ್ಮ ಗಾಂಧಿ ಎಂದರೆ ಭಾರತದ ಬಿಡುಗಡೆಯ ಭಾಗ್ಯ ವಿಧಾತ ಎಂದು, ದೇಶವೇ ಗಾಂಧಿಯವರ ಪ್ರಭಾವಕ್ಕೆ ಒಳಗಾಯಿತು. ಸಾಹಿತ್ಯವು ಕೂಡ ಗಾಂಧಿ ಅವರ ಚಿಂತನೆಗಳನ್ನು ಜನರತ್ತ ಒಯ್ಯಲು ಪ್ರಯತ್ನಿಸಿತು. ಮುಖ್ಯವಾಗಿ ನಾಟಕ ಸಾಹಿತ್ಯ ಆ ನಿಟ್ಟಿನಲ್ಲಿ ಯಶಸ್ಸು ಪಡೆಯಿತು. ಮರಾಠಿ ಪ್ರಭಾವದಿಂದ ಮುಂಬೈ ಕರ್ನಾಟಕ ಪ್ರವೇಶ ಪಡೆದ ವೃತ್ತಿರಂಗಭೂಮಿಯ ಸ್ವಾತಂತ್ರ ಚಳುವಳಿಯ, ವಾಸ್ತವದ ಅರಿವನ್ನು ಜನರಿಗೆ ತಲುಪಿಸಲು ಪ್ರಮುಖ ಪಾತ್ರವಹಿಸಿತು. ಮತ್ತು ಪೌರಾಣಿಕ, ಐತಿಹಾಸಿಕ ವಸ್ತುಗಳ ಮೂಲಕ ಚಳುವಳಿಯ ಚಿತ್ರಗಳನ್ನು ಬಿತ್ತರಿಸುತ್ತಿದ್ದವು. ನಾಟಕಕಾರರಾದ ಐರಣಿಕೋಲ ಶಾಂತಪ್ಪನವರು ಈ ನಾಟಕದಲ್ಲಿ ಗಾಂಧಿ ಮತ್ತು ನೆಹರು ಅವರನ್ನು ತನ್ನ ಬಿಡುಗಡೆಗಾಗಿ ಭಾರತಮಾತೆ ಪಡೆದ ಮಕ್ಕಳು ಎಂದು ಆ ನಾಯಕರನ್ನು ನೆನಪಿಸಿದ್ದಾರೆ. ನಾಟಕದ ನಾಂದಿ ಪದ್ಯದಲ್ಲಿಯೇ ಮಾತುಗಳು ಬರುತ್ತವೆ.

ಜೈ ಭಾರತ ಭೂಮಿಗೆ। ಮಾತೆಗೆ ಜೈ ಪಾವನ ಮೂರ್ತಿಗೆ
ಜೈ ದಾತೆಗೆ ಕಲ್ಯಾಣಿಗೆ ಜೈ ಜೈ ಜೈ
ಭೀಷ್ಮ ದ್ರೋಣ ಪರಶುರಾಮ ಭೀಮಾರ್ಜುನಾದಿ
ಸುತರ ಪೆತ್ತ ವೀರಮಾತೆಗೆ ಜೈ ದೇಶ ಸೇವೆ
ಯಿಂದ ಸುಖಿಪ ದೇಶಾಭಿಮಾನಿಗಳಾಗಿ । ಧೀರ ಕರ್ಮ
ವೀರರಿಗೆ ಜೈ ಧೀರ ಬಾಹ ಶೂರ ನೆಹರು ಧರ್ಮ
ಶ್ರೇಷ್ಠ ಪುರುಷ ಗಾಂಧಿ ಪೆತ್ತ ವೀರಮಾತೆಗೆ ಜೈ ಜೈ ಜೈ ಜೈ
(ಐರಣಿಕೋಲ ಕೋಲಶಾಂತಪ, ಉತ್ತರ ಭೂಪ, ಪುಟ,೧)

ಈ ಪದ್ಯದ ಮೂಲಕ ಚಳುವಳಿ ನೇತಾರರನ್ನು ಹೊರಟಗಾರರನ್ನು ಗೌರವದಿಂದ ನೆನಯಲಾಗಿದೆ. ಆ ಸಂದರ್ಭದಲ್ಲೇ ರಚನೆಗೊಂಡ ನಾಟಕಗಳಿಗೆ, ಗಾಂಧೀಜಿ ಪ್ರೇರಕನಾದದಂತೆ ಉತ್ತರ ಭೂಪ ನಾಟಕಕ್ಕೆ ಪ್ರೇರಣೆ ಗಾಂಧಿಯನ್ನು ಸಮಾಜದ ಉದ್ದಾರಕ ಮುತ್ಸದ್ದಿ ಅಂತೆ ಈ ನಾಟಕದ ಕೊನೆಗೆ ಮಂಗಲ ಪದ್ಯದಲ್ಲಿ ಚಿತ್ರಿಸಲಾಗಿದೆ. ಪದ್ಯ ಹೀಗಿದೆ

ಮಂಗಳ ಸ್ತುತಿ
ಗಾಂಧಿ ಜಯ ಕರುಣಾನಿಧೆ
ಲೋಕೆ ಮನೋಹರ ಮೋಹನ ಗಾಂಧಿ
ಜಯತು ಸುಗುಣ ಶರಧಿ
ಧರ್ಮ ವಂಡಧರ ವೈರಿ ಭಯಂಕರ
ಭಾರತ ಹಿತಕರ ಪಂಚ ಸುಖಂಕರ
ಧೀನ ಜನೋಧಾದಾ ಸಾರ ಕಳಾಧರ(ಅದೇ, ಪುಟ-೧೦೪)

ವಸಾಹತುಶಾಹಿಯಿಂದ ಭಾಗತದ ಆಡಳಿತಾತ್ಮಕ ಸ್ವಾತಂತ್ರ್ಯ ಎಷ್ಟು ಮುಖ್ಯವೋ, ಸಾಮಾಜಿಕ ಸ್ವಾತಂತ್ರ್ಯಯೂ ಅಷ್ಟೇ ಪ್ರಮುಖ. ಆ ಕುರಿತು ನಡೆದ ಹೋರಾಟಗಳನ್ನು ಈ ನಾಟಕದಲ್ಲಿ ಕಾಣಬಹುದು. ಉದಾರಣೆಗೆ ಇದೇ ಪದ್ಯದ(ಮಂಗಳ ಸ್ತುತಿ) ಕೊನೆಗೆ "ದೀನ ಜನೋದ್ಧಾರ ಸಾರ ಕಳಾಧರ" ಎಂಬ ಮಾತುಗಳು ಸಾಮಾಜದಲ್ಲಿನ ಅಸ್ಪೃಶ್ಯತೆಯನ್ನು, ಕೀಳರಿಮೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿಯೂ ಚಳುವಳಿಗಳು ನಡೆದಿವೆ ಎಂಬುದನ್ನು ಗಮನಿಸಬಹುದು.

ಕಂಸವಧ

೧೯೨೦ರ ಸುಮಾರಗೆ ರಚನೆಗೊಂಡ ಗರುಡರ ಕಂಸವಧ ನಾಟಕವು ಭಾರತವನ್ನು ಬ್ರಿಟಿಶರ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸುವ ತುರ್ತನ್ನು ಮಾರ್ಮಿಕವಾಗಿ ಕಟ್ಟಿಕೊಡುತ್ತದೆ. ಹಾಗಾಗಿ ಬ್ರಿಟಿಶ್ ರಾಜಾಸತ್ತೆಯನ್ನು ಕೊನೆಗಾಣಿಸಲು ಕೃಷ್ಣನ ಪಾತ್ರದ ಮೂಲಕ ಗಾಂಧಿಯ ಆಗಮನದ ಸೂಚನೆಯನ್ನು ಈ ನಾಟಕ ಕೊಡುತ್ತದೆ. ೧೯೧೬ರ ಸುಮಾರಿಗೆ ಆಫ್ರಿಕಾದಿಂದ ಬಂದ ಗಾಂಧೀಜಿ ಅವರು ಮೊದಲು ಭಾರತದ ಸಂಚಾರ ಕೈಗೊಂಡು ಕಾಂಗ್ರೆಸ್ಸಿನ ಮೂಲಕ ಸಮ್ಮೇಳನಗಳನ್ನು ಏರ್ಪಡಿಸಿ ಜನರನ್ನು ಸ್ವಾತಂತ್ರ್ಯ ಚಳುವಳಿಗೆ ಅಣಿಗೊಳಿಸುವ ಕ್ರಿಯಾತ್ಮಕ ಚಿಂತನೆಗಳನ್ನು ಈ ನಾಟಕ ಸೂಕ್ಷ್ಮವಾಗಿ ಹಿಡಿದಿಟ್ಟುಕೊಂಡಿದೆ. ಈ ನಾಟಕದಲ್ಲಿ ಕೃಷ್ಣನನ್ನು ಕಂಸನ ಸಂಹಾರಕ್ಕೆ ಕರೆದುಕೊಂಡು ಹೋಗುವ ಸನ್ನಿವೇಶವು ಭಾರತದ ಸ್ವಾತಂತ್ರ್ಯಕ್ಕಾಗಿ ಗಾಂಧಿಯ ಆಗಮನವನ್ನು ನೆರವೇರಿಸುತ್ತದೆ. ಮತ್ತು ಭಾರತವನ್ನು ಬ್ರಿಟಿಶರಿಂದ ಕಾಪಾಡಲು ಗಾಂಧಿಯೇ ಮುಖ್ಯ ಎಂದು, ಅಂದು ನಂಬಿರುವ ಜನರ ಮಾತುಗಳ ರೂಪಕಗಳನ್ನು ಈ ನಾಟಕದಲ್ಲಿ ವಿಜಯನ ಮಾತಿನಿಂದ ಅರ್ಥೈಸಿಕೊಳ್ಳಬಹುದು.

> 'ವಿಜಯ : ಈ ಪ್ರಪಂಚಕ್ಕೆ ಸಮರ್ಥನೆಂದರೆ
>
> ನಮ್ಮ ಕೃಷ್ಣನಲ್ಲವೆ
>
> ಗೋಕುಲದ ಮೇಲೆ ಯಾವ ವಿಪತ್ತುಗಳು
>
> ಬಂದರು ಅವುಗಳನ್ನು
>
> ನಿವಾರಣೆ ಮಾಡುವವನು'(ರಮಾಕಾಂತ ಜೋಷಿ, ಪ್ರಕಾಶ ಗರುಡ,(ಸಂ)

ಗರುಡ ಸದಾಶಿವರಾಯರ ಸಮಗ್ರ ನಾಟಕ ಸಂಪುಟ, ಪುಟ-೩೬೮)

ಇದೇ ಪದ್ಯದ ಮುಂದುವರೆದ ಭಾಗದಲ್ಲಿ ಸ್ವಾತಂತ್ರ್ಯ ನಂತರದ ಭಾರತದಲ್ಲಿಯೂ ಸ್ವಾತಂತ್ರ್ಯ ಪೂರ್ವ ಆಶೋತ್ತರಗಳು ಫಲಿಸುವುದಿಲ್ಲ, ಎಂಬ ಗುಮಾನಿಯನ್ನು ಈ ಪದ್ಯವು ಸೂಚಿಸುವಂತಿದೆ. ಅದು ಹೀಗಿದೆ

> ತೃಣಾವರ್ತನ ಸಂಹಾರದ
>
> ಕಂಟಕದಿಂದ ಪಾರಾದೆವೆಂದು ಸಮಾಧಾನಪಡುತ್ತಾ
>
> ಒಂದೆರೆಡು ದಿನ ಕಾಲಕಳೆಯುವಷ್ಟರಲ್ಲಿ ಪುನಃ
>
> ನಿನ್ನಿನರ್ಥವೇ'(ಅದೆ, ಪು-೩೬೮)

೧೯ನೇ ಶತಮಾನದ ಕೊನೆಯಲ್ಲಿ ವಸಾಹತು ಶಾಹಿಯಿಂದ ಬಿಡುಗಡೆಗಾಗಿ

ಹಾತೊರೆಯುತ್ತಿದ್ದ ಭಾರತ ಈ ನಿಟ್ಟಿನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯೊಂದಿಗೆ ಹೆಜ್ಜೆಹಾಕತೊಡಗಿತ್ತು. ಆದರೆ ಅಖಂಡ ಭಾರತಕ್ಕೆ ಒಳಪಡುವಂತೆ ಸ್ವಾತಂತ್ರ್ಯ ಚಳುವಳಿಯನ್ನು ವಿಸ್ತರಿಸಲು ಸಮರ್ಥ ನಾಯಕರ ಕೊರತೆಯನ್ನು ೧೯೨೦ರ ದಶಕದಲ್ಲಿ ನೀಗಿಸಿಕೊಂಡಿತು. ೧೯೧೬ರಲ್ಲಿ ಭಾರತದ್ಯಾಂತ ಸಂಚರಿಸಿ ಪ್ರಾಂತಿಯ ಚಳುವಳಿಗೆಒಂದು ಸ್ಪಷ್ಟ ರಾಜಕಿಯ ಸ್ವರೂಪ ನೀಡಿ ಗಾಂಧಿ ಅದರ ಮುಂದಾಳತ್ವ ವಹಿಸಿಕೊಂಡರು. ಇಂತ ವ್ಯಕ್ತಿತ್ವವನ್ನು ಕನ್ನಡ ನಾಟಕಗಳು ರಾಜಕಿಯ ಮತ್ತು ಸಾಮಾಜಿಕ ಚಿಂತನೆಗಳ ಹಿನ್ನಲೆಯಲ್ಲಿ ಅಭಿವ್ಯಕ್ತಗೊಳಿಸಿವೆ. ಹಾಗೆ ಅಹಿಂಸಾ ವಳುವಳಿಯಾಗಿ ಅಸ್ಪೃಸತಾ ನಿವಾರಣೆಗಾಗಿ, ಗುಡಿಕೈಗಾರಿಕೆಗಳನಿಮಾತೃವಾಗಿ ಕಾಲದಿಂದ ಕಾಲಕ್ಕೆ ನಿಭಿನ್ನ ಮಾದರಿಯಲ್ಲಿ ರೂಪಗೊಳ್ಳುತ್ತಿದ್ದ ಗಾಂಧಿಯ ಕುರಿತು ರಚನೆಗೊಂಡ ನಾಟಕಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ.

* * *

ಅಧ್ಯಾಯ–ಆರು

ಸಕ್ರಿಯ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ನಾಟಕಗಳ ಪ್ರೇರಣೆ ಮತ್ತು ಪ್ರಭಾವ

೬.೧. ವಿಸ್ಮೃತಿಯಿಂದ ಸ್ಮೃತಿಯಡೆಗೆ

೬.೨. ಕಲೆಯಿಂದ ಕರೆಯಾಗಿ

೬.೩. ಪರಂಪರೆ ಮತ್ತು ಸಮಕಾಲೀನ ಸಾರ್ವಕಾಲಿಕತೆಗಳ ಸಮುಚ್ಚಯ

೬.೪. ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧ

ಅಧ್ಯಾಯ : ಆರು

ಸಕ್ರಿಯ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ನಾಟಕಗಳ ಪ್ರೇರಣೆ ಮತ್ತು ಪ್ರಭಾವ

ಪೀಠಿಕೆ

ಒಂದು ಕಾಲದ ವ್ಯವಸ್ಥೆ ಮತ್ತು ಸಂಸ್ಕೃತಿಯ ಸ್ವರೂಪವನ್ನು ಆ ಕಾಲದಲ್ಲಿ ಸೃಷ್ಟಿಯಾದ ವ್ಯವಸ್ಥೆಗಳು, ಮುಖ್ಯವಾಗಿ ರಾಜಕೀಯ ಚಿಂತನೆಗಳು ನಿರೂಪಿಸುತ್ತವೆ. ಜಗತ್ತಿನ ಇತರೆ ದೇಶಗಳಿಗೆ ವಿಸ್ತರಣೆಗೊಂಡಂತೆ ವಸಾಹತುಶಾಹಿ ನೀತಿಗಳು ಭಾರತವನ್ನು ಪ್ರವೇಶಿಸಿ ಭಾರತವನ್ನು ಸಾಂಸ್ಕೃತಿಕ ಸಂಘರ್ಷಗಳಿಗೆ ನಾಂದಿ ಹಾಡಿತು. ಈ ತರಹದ ವಿದ್ಯಮಾನಗಳನ್ನು ಭಾರತ ಹಿಂದಿನಿಂದಲೂ ಕಂಡಿದೆ. ಆದರೆ ಕಾನ್‌ಸ್ಟಾಂಟಿನೋಪಾಲ್ ಪತನದ ನಂತರ ವಾಸ್ಕೋಡಿಗಾಮನ ಜಲಮಾರ್ಗದ ಶೋಧನೆಯ ಫಲವಾಗಿ ಭಾರತೀಯ ವಿಚಾರಧಾರೆಗಳಿಗೆ ಮುಖಾಮುಖಿಗೊಂಡ ಯುರೋಪಿನ ವಿಚಾರಗಳು, ಭಾರತದಲ್ಲಿ ಸಾಮ್ರಾಜ್ಯಶಾಹಿ ಆಡಳಿತದ ಜೊತೆಗೆ ಇಲ್ಲಿಯ ಚಿಂತನೆಗಳ ಸ್ವರೂಪವನ್ನು ವೈಚಾರಿಕವಾಗಿ ಬದಲಾಯಿಸಲು ಪ್ರಯತ್ನಿಸಿವೆ. ಇಂಗ್ಲಿಶ್ ಶಿಕ್ಷಣದ ಕ್ರಾಂತಿಯಿಂದ ಯುರೋಪಿನಲ್ಲಾದ ಬದಲಾವಣೆಗಳನ್ನು ಗ್ರಹಿಸಲು ಭಾರತೀಯರಿಗೆ ಸಾಧ್ಯವಾಯಿತು. ಮತ್ತು ಇದರ ಫಲವಾಗಿಯೆ ಭಾರತೀಯರ ಸ್ವಾತಂತ್ರ್ಯ ಕೂಗು ಆರಂಭಗೊಂಡಿತು. ಭಾರತದ ಸ್ವತಂತ್ರ್ಯ ಚಳುವಳಿಯನ್ನು ಚರಿತ್ರೆ ಎಂಬ ಜ್ಞಾನಶಿಸ್ತು ಒಂದು ಬಗೆಯಾಗಿ ಕಟ್ಟಲು ಪ್ರಯತ್ನಿಸಿವೆ. ಸಾಹಿತ್ಯಕ್ಕೆ ತನ್ನದೇ ಆದ ರಚನಾ ವಿನ್ಯಾಸಗಳಿವೆ. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯು ಚರಿತ್ರೆಯನ್ನ ವಿಭಿನ್ನವಾಗಿ ಗ್ರಹಿಸಲು ಕನ್ನಡ ಸಾಹಿತ್ಯ ಕಟ್ಟಿಕೊಟ್ಟ ಸ್ವತಂತ್ರ್ಯ ಚಳುವಳಿಯ ಚರಿತ್ರೆಯನ್ನು ಅವಲೋಕಿಸಬೇಕಾಗುತ್ತದೆ.

ಸಾಹಿತ್ಯ ಗತಕಾಲದ ಮತ್ತು ತಾನು ರಚನೆಗೊಳ್ಳುತ್ತಿದ್ದ ಕಾಲದ ಘಟನೆಗಳನ್ನು ಒಳಗೊಂಡಿರುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಸಮಕಾಲೀನ ಸಂದರ್ಭದಲ್ಲಿ ಗತಕಾಲದ ಚಿತ್ರಣವನ್ನು ತನ್ನ ಇತಿಮಿತಿಗಳೊಂದಿಗೆ ಕಟ್ಟಿಕೊಡುವ ಮತ್ತು ಭವಿಷ್ಯದ ಮಾರ್ಗದರ್ಶಿಯಂತೆ ಕೆಲಸ ಮಾಡುತ್ತದೆ. ಸಾಹಿತ್ಯ ಮತ್ತು ಸ್ವತಂತ್ರ್ಯ ಚಳುವಳಿಯ ನಡುವೆ ಪರಸ್ಪರ ಅವಿನಾಭಾವ ಸಂಬಂಧವಿದೆ. ಆದರೆ ಆಧುನಿಕ ಚರಿತ್ರಾಕಾರರು ಸಾಹಿತ್ಯವನ್ನು ಚರಿತ್ರೆಯ ದಾಖಲಾತಿಯಾಗಿ ಪರಿಗಣಿಸಲಿಲ್ಲ ಎಂಬುದು ಅಷ್ಟೇ ಪ್ರಮುಖವಾದ ಮಾತು. ಈ ಕುರಿತು ಎಸ್. ಚಂದ್ರಶೇಖರ ಅವರು "ಸಾಹಿತ್ಯ ಮತ್ತು ಇತರ ಸಮಾಜವಿಜ್ಞಾನಗಳ

ನಡುವೆ ಗೆರೆಯೇ ಇಲ್ಲದಂತಹ ಸಂದರ್ಭ ಒಂದು ಕಾಲದಲ್ಲಿತ್ತು. ಅದು ಎಲ್ಲಾ ಕಾಲಕ್ಕೂ ಸಲ್ಲುವ ಆದರ್ಶವೆಂದು ತಿಳಿಯಬೇಕಾಗಿಲ್ಲ. ಅದಾಗ್ಯೂ ಚರಿತ್ರೆಯ ಪುನರ್‌ನಿರ್ಮಾಣಕ್ಕೆ, ಅದರಲ್ಲೂ ಕ್ರಿ.ಶ.೧೮೦೦ರವರೆಗಿನ ದಕ್ಷಿಣಭಾರತದ ಇತಿಹಾಸವನ್ನು ಅರಿಯಲು ಇಂದಿಗೂ ಸಾಹಿತ್ಯದ ಬೇರೆ ಬೇರೆ ಪ್ರಕಾರವೇ ಮೂಲವಾಗಿರುವುದು ಸರ್ವವಿಧಿತವಾಗಿದೆ. ಆಧುನಿಕ ಭಾರತದ ಚರಿತ್ರೆಯತ್ತ ಒಂದು ನೋಟ ಬೀರಿದರೆ ವ್ಯತ್ಯಾಸಗೊತ್ತಾಗುತ್ತದೆ. ಆದರೂ ಎಲ್ಲಿಯೂ ಕೂಡ ಚರಿತ್ರೆಗೆ ಸಾಹಿತ್ಯ ಮೂಲವಾಗಿರುವ ಸಂಗತಿ ದಾಖಲಾಗಿಲ್ಲ. ಚರಿತ್ರೆಗೆ ಆಕರವಾಗಿ ಸಾಹಿತ್ಯ ಕೃತಿಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ ಎಂಬುದು ಇದರ ಅರ್ಥವಲ್ಲ. ಆದರೆ ಆಧುನಿಕ ಇತಿಹಾಸಕಾರ ಸಾಹಿತ್ಯ ಕೃತಿಗಳನ್ನು ಉಪಯೋಗಿಸಿಕೊಳ್ಳಲು ಅಷ್ಟು ಉತ್ಸಾಹ ತೋರುವಂತೆ ಕಾಣುವುದಿಲ್ಲ".(ಬಿ.ಷೇಕ್ ಅಲಿ, ಚಂದ್ರಶೇಖರ್ ಎಸ್ (ಸಂ) ಕರ್ನಾಟಕ ಚರಿತ್ರೆ ಸಂ–೭, ಪುಟ–೯೨) ಎಂದು ಹೇಳಿದ್ದಾರೆ. ಭಾರತಕ್ಕೆ ವಸಾಹತುಶಾಹಿ ಶಿಕ್ಷಣದ ಭಾಗವಾಗಿ ಒದಗಿಬಂದ ವ್ಯವಸ್ಥೆಗಳಾದ ಶಿಕ್ಷಣ, ರಾಷ್ಟ್ರೀಯತೆ, ಸ್ವಾತಂತ್ರ್ಯ, ಪುನರುಜ್ಜೀವನ, ನಾಡುನುಡಿ ಚಿಂತನೆಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸಾಹಿತ್ಯದ ಶ್ರಮ ಪ್ರಮುಖವಾದದ್ದು. ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ನಾಟಕಗಳು ಸ್ವತಂತ್ರ್ಯ ಚಳುವಳಿ ಎಂಬ ಆಧುನಿಕ ಭಾರತದ ಚಾರಿತ್ರಿಕ ಘಟ್ಟವನ್ನು ನಿಭಾಯಿಸಿದ, ಅರ್ಥೈಸಿಕೊಂಡ ಆ ಮೂಲಕ ಸಮಕಾಲೀನ ಸಂದರ್ಭದ ವಿವರಗಳನ್ನು ಒದಗಿಸುವ ಆಕರಗಳಾಗಿ ಕೆಲಸ ನಿರ್ವಹಿಸಿವೆ. ಹಾಗೂ ಸ್ವತಂತ್ರ ಚಳುವಳಿಯ ಕುರಿತು ಜನಸಾಮಾನ್ಯರ ಚರಿತ್ರೆಯಾಗಿ ವಿಭಿನ್ನ ಚಾರಿತ್ರಿಕ ನೋಟವನ್ನು ಹೇಗೆ ನಿರ್ವಹಿಸಿವೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

೬.೧. ವಿಸ್ಮೃತಿಯಿಂದ ಸ್ಮೃತಿಯೆಡೆಗೆ

ಆಧುನಿಕ ಭಾರತದ ಇತಿಹಾಸದಲ್ಲಿ ೧೮ನೇ ಶತಮಾನವು ಹಲವಾರು ಕಾರಣಗಳಿಂದ ಪ್ರಮುಖ ಕಾಲಘಟ್ಟವಾಗಿದೆ. ಮೊಗಲ್ ಆಳ್ವಿಕೆಯು ಕೊನೆಗೊಳ್ಳುತ್ತಿದ್ದ ಕಾಲವದು. ವಸಾಹತುಶಾಹಿಯ ಮಾದರಿಯ ಸಾಮ್ರಾಜ್ಯಶಾಹಿ ಆಡಳಿತಕ್ಕೆ ಒಳಪಡುತ್ತಲೆ, ಕೆಲವು ಹಿತಾಸಕ್ತಿಗಳಿಂದ ಭಾರತೀಯ ಚಿಂತನಾಧಾರೆಗಳಿಗೆ ಮೆತ್ತಿಕೊಂಡಿದ್ದ ವಿಸ್ಮೃತಿಯು ಕಳಚತೊಡಗಿತ್ತು. ಭಾರತೀಯ ಪುನರುಜ್ಜೀವನದ ಉಗಮವನ್ನು ಪಾಶ್ಚಾತ್ಯ ಸಂಸ್ಕೃತಿಯೊಡನೆ ನಡೆಸಿದ ಸಂಘರ್ಷದಲ್ಲಿ ಗುರುತಿಸಬಹುದಾಗಿದೆ. ಭಾರತದಲ್ಲಿ ಸನಾತನ ಎಂಬ ನೆಪದಲ್ಲಿ ಈ ಹಿಂದೆ ನಡೆದ ಬೌದ್ಧಿಕ ಚಳುವಳಿಗಳನ್ನು ವಿಸ್ಮೃತಿಗೆ ತಳ್ಳಲ್ಪಟ್ಟಿದ್ದರಿಂದ ದೇವರು, ಧರ್ಮ, ಪ್ರಭುತ್ವ ಹಾಗೂ ಚರ್ಚಿನ ವಿರುದ್ಧ ಜನಸಮುದಾಯ ಮಾತನಾಡುವಂತಾಯಿತು. ಈ ಹಿನ್ನೆಲೆಯಲ್ಲಿ ಆಧುನಿಕವಾಗಿ ರೂಪಗೊಳ್ಳುತ್ತಿದ್ದ ಭಾರತಕ್ಕೆ ಪಾರಂಪರಿಕವಾಗಿ ನಡೆದುಕೊಂಡು ಬಂದ ಜಾತಿ, ಅಸ್ಪೃಶ್ಯತೆ, ಧಾರ್ಮಿಕ, ಮೌಢ್ಯಗಳಂತ ಸಮಸ್ಯೆಗಳು ತೊಡಕಾಗಿ ಪರಿಣಮಿಸಿದ್ದವು. ಹಾಗಾಗಿ ಧಾರ್ಮಿಕ, ಸಾಮಾಜಿಕ ಸುಧಾರಣಾ ಚಳುವಳಿಗಳು ಅಂದಿನ ಜರೂರಾಗಿದ್ದವು.

ಕನ್ನಡ ಸಾಹಿತ್ಯ ಈ ನಿಟ್ಟಿನಲ್ಲಿ ತನ್ನನ್ನು ತೊಡಗಿಸಿಕೊಂಡಿತ್ತು. ಆ ಭಾಗವಾಗಿ ಅನೇಕ ಸಮಾಜವಾದಿ ಲೇಖಕರ ನಾಟಕಗಳು ರಂಗದ ಮೇಲೆ ಪ್ರಯೋಗಗೊಂಡು ವಿಸ್ಮೃತಿಗೆ ತಳ್ಳಲ್ಪಟ್ಟಿದ್ದ ಭಾರತೀಯ ಚಿಂತನೆಗಳನ್ನು ಮುನ್ನೆಲೆಗೆ ತರಲು ಪ್ರಯತ್ನಿಸಿದವು. ಅಂತ ಪ್ರಯತ್ನಗಳು ಬಂಗಾಳಿ ರಂಗಭೂಮಿಯಿಂದ ಪ್ರರಂಬಗೊಂಡವು. ಬಂಗಾಳಿಯ ನಾಟಕಕಾರರಾದ ಡಿ. ಎಲ್. ರಾಯ್‌ರವರು 1840ರಲ್ಲಿ ಇಂಗ್ಲೆಂಡಿಗೆ ಹೋಗಿ ಮರಳಿದ ನಂತರ ಅವರು ಭಾರತೀಯ ಸಮಾಜದ ಕಟ್ಟಳೆಗಳನ್ನು ಎದುರಿಸಬೇಕಾಯಿತು. ಕಾರಣ ಸಮುದ್ರ ಪ್ರಯಾಣ ಅಪವಿತ್ರ ಎಂಬುದು. ಆಗ ಮೂಢನಂಬಿಕೆಯಿಂದ ವಿಸ್ಮೃತಿಗೆ ಜಾರಿದ್ದ ಹಿಂದೂ ಸಂಪ್ರದಾಯವನ್ನು ಖಂಡಿಸುವ ಕಲ್ಕಿ ಅವತಾರ ಎಂಬ ಹಿಂದೂ ಧರ್ಮದ ಎಲ್ಲಾ ಕಟ್ಟಳೆಗಳನ್ನು ಅಣುಕಿಸುವ ನಾಟಕಗಳನ್ನು ಬರೆದರು. ಕನ್ನಡದಲ್ಲೂ ಗರುಡ ಸದಾಶಿವರಾಯ, ಹುಯಿಲಗೋಳ ನಾರಾಯಣರಾಯರು, ಕುವೆಂಪು, ಕಂದಗಲ್ಲ ಹನುಮಂತರಾಯರು ಇನ್ನೂ ಮುಂತಾದವರು ಹಿಂದೂ ಧರ್ಮ ಅನುಸರಿಸಿಕೊಂಡು ಬಂದ ಸಾಮಾಜಿಕ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸುವಂತ ಅನೇಕ ನಾಟಕಗಳನ್ನು ರಚಿಸಿದರು. ಭಾರತೀಯ ಸ್ವಾತಂತ್ರ್ಯ ಚಳುವಳಿಗೆ ಎಲ್ಲ ಸಮುದಾಯದವರನ್ನು ಒಳಗೊಳ್ಳುವಂತೆ ಸಮಗ್ರ ಸ್ವಾತಂತ್ರ ಚಳುವಳಿಯನ್ನು ಕಟ್ಟಿದ ಶ್ರೇಯಸ್ಸು ಕನ್ನಡ ನಾಟಕಗಳಿಗೆ ಸಲ್ಲುತ್ತದೆ. ವಿಸ್ಮೃತಿಯ ಪೊರೆಯನ್ನು ಕಳಚಿಕೊಂಡ ಭಾರತೀಯ ಚಿಂತನಾಧಾರೆ ನಾಟಕಗಳ ಮೂಲಕ ಮುನ್ನೆಲೆಗೆ ಬಂದು ಸಮಕಾಲೀನತೆಯ ಪ್ರತಿಸ್ಪಂದನೆ , ಜನರನ್ನು ಏಕತ್ರಗೊಳಿಸುವ ಪ್ರಚಾರದ ಸಭೆಗಳಾಗಿ ಕೂಡ ಕಾರ್ಯನಿರ್ವಹಿಸಿವೆ. ಜನರನ್ನು ಒಂದು ಉದ್ದೇಶಕ್ಕಾಗಿ ಒಟ್ಟಾಗಿಸುವ ಕೇಂದ್ರಬಿಂದುವಾಗಿಯೂ ತನ್ನ ಸುತ್ತಮುತ್ತಲೂ ಹಲವು ಅಂಶಗಳನ್ನು ಸೆರೆ ಹಿಡಿದಿವೆ. ಸಾಮಾಜಿಕ ಸ್ವಾಸ್ಥ್ಯ, ವಸಾಹತುವಿರೋಧಿ ನೀತಿ, ತನ್ನತನದ ಹುಡುಕಾಟ, ಪರಂಪರೆಯ ಅನ್ವಯಿಕತೆ ಇತ್ಯಾದಿಗಳನ್ನು ಸಮಸ್ಥಿತಿಯಲ್ಲಿರುವ ಕಕ್ಷೆಯಂತೆ ನಾಟಕಗಳು ಕೆಲಸ ನಿರ್ವಹಿಸಿವೆ. ಹಾಗೆ ಮೇಲ್ನೋಟಕ್ಕೆ ನಾಟಕಗಳು ಪ್ರದರ್ಶನಕ್ಕಾಗಿ ಪ್ರಯೋಗಗೊಂಡರೂ ಸಾಮಾಜಿಕ, ರಾಜಕೀಯ, ಆರ್ಥಿಕ ಇತ್ಯಾದಿ ಸಾಂಸ್ಕೃತಿಕ ಅಂಶಗಳ ಮೊತ್ತವಾಗಿ ತೋರುವವು. ಹಾಗೂ ಸಮಕಾಲೀನ ವಿಚಾರಗಳಿಗೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ನಾಟಕಗಳು ಅಡಗು ತಾಣಗಳಂತೆ ಇದ್ದವು. ಅದಕ್ಕಾಗಿ ಕಾನೂನಿನ ರಿತ್ಯಾ ಕ್ರಮಗಳಿಗೆ ಮೇಲಿಂದ ಮೇಲೆ ಕನ್ನಡ ನಾಟಕಗಳು ಒಳಗಾಗಿವೆ.

೬.೨. ಕಲೆಯಿಂದ ಕರೆಯಾಗಿ

18–19ನೇ ಶತಮಾನ ಸಾಂಸ್ಕೃತಿಕವಾಗಿ ಪುನರುಜ್ಜೀವನಗೊಳ್ಳುತ್ತಿದ್ದ ಕಾಲವದು. ದೇಶ, ರಾಷ್ಟ್ರ ಎಂಬ ಆಧುನಿಕ ಪರಿಕಲ್ಪನೆಗಳು ಮುನ್ನೆಲೆಗೆ ಬಂದಾಗ, ಜಗತ್ತಿನಾದ್ಯಾಂತ ಮೂಲಭೂತವಾದ ಮತ್ತು ಸಮಾಜವಾದ ಚಿಂತನೆಗಳು ದೇಶವನ್ನು ರೂಪಿಸುವಲ್ಲಿ

ಹಾತೊರೆಯುತ್ತಿದ್ದವು. ಅದಕ್ಕಾಗಿ ಎರಡು ಮಹಾಯುದ್ಧಗಳು ನಡೆದವು. ಈಗಾಗಲೆ ಹೇಳಿದ ಹಾಗೆ ವಸಾಹತುಶಾಹಿಯ ಜೊತೆಗೆ ಬಂದ ಸಾಂಸ್ಕೃತಿಕ ವ್ಯವಸ್ಥೆಗಳಾದ ಶಿಕ್ಷಣ, ಸಾಹಿತ್ಯ, ವೈಚಾರಿಕ ಬರಹಗಳು ದೇಶವನ್ನು ಕಟ್ಟುವ ಕಾರ್ಯದಲ್ಲಿ ಸೇತುವೆಯಾಗಿ ಕಾರ್ಯನಿರ್ವಹಿಸಿವೆ. ಪ್ರಸ್ತುತ ಅಧ್ಯಾಯದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ನಾಟಕಗಳು ಒಂದು ಕಲಾಮಾಧ್ಯಮವಾಗಿ ನಿರ್ವಹಿಸಿದ ಪಾತ್ರವನ್ನು ಇಲ್ಲಿ ಗಮನಿಸಲಾಗಿದೆ. "ರಾಷ್ಟ್ರೀಯತೆಯ ಪ್ರಜ್ಞೆ ಬಲವಾಗಿದ್ದೆಡೆ ಮತ್ತು ರಾಷ್ಟ್ರೀಯ ವಿಮೋಚನೆ ಹಾಗೂ ಏಕೀಕರಣ ಚಳುವಳಿಗಳು ಪ್ರಬಲವಾಗಿದ್ದ ದೇಶಗಳಲ್ಲಿ ಸಾರ್ವಜನಿಕ ವ್ಯವಹಾರಗಳು ಮತ್ತು ಕಲಾಪ್ರಕಾರಗಳ ನಡುವೆ ಗಾಢವಾದ ಸಂಬಂಧ ಏರ್ಪಟ್ಟಿರುತ್ತದೆ".(ಎರಿಕ್ ಹಾಬ್ಸಬಾಮ್(ಅನು)ನಾ ದಿವಾಕರ, ಕ್ರಾಂತಿಯುಗ, ಪುಟ–324) ಎಂಬ ಚಿಂತಕರ ಮಾತು ಪ್ರಸ್ತುತವೆನಿಸುತ್ತದೆ. ಈ ಹಿಂದೆ ಪರಂಪರೆಯ ಶೈಲಿಯಲ್ಲಿಯೇ ರಚನರಗೊಳ್ಳುತ್ತಿದ್ದ ಕಲೆಯು 1840ರ ಸುಮಾರಿಗೆ ಆಧುನಿಕ ಜಗತ್ತಿನ ಚಿಂತನೆಗಳಿಗೆ ತನ್ನನ್ನು ತೆರೆದುಕೊಂಡಿತ್ತು. ಸಾಮಾಜಿಕ ಬದ್ಧತೆಯನ್ನು ಮೈಗೂಡಿಸಿಕೊಂಡು ಅಂದು ವಸಹತು ರಾಷ್ಟ್ರಗಳ ಮುಂದಿದ್ದ ಪ್ರಶ್ನೆಗಳನ್ನು ತನ್ನ ಮೂಲಕ ಜನಸಾಮಾನ್ಯರಲ್ಲಿಗೂ ತಲುಪಿಸಿತು. ಮತ್ತು ಅವರಲ್ಲಿ ಆ ಪ್ರಶ್ನೆಗಳ ಕುರಿತು ಅರಿವು ಮೂಡಿಸುವಲ್ಲಿ ಕಲೆಯ ಪಾತ್ರ ಪ್ರಮುಖವಾದದ್ದು. ಕನ್ನಡ ಸಂದರ್ಭದಲ್ಲಿಯೂ ಕ್ರಾಂತಿಕಾರಿ ಚಿಂತನೆಗಳಿಗೆ ಮಗ್ಗಲೂ ಹೊರಳಿಸಿದ ನಾಟಕ ಸಾಹಿತ್ಯ ಕಲೆಯಾಗಿ ಪ್ರದರ್ಶನಗೊಳ್ಳುವುದರ ಮೂಲಕ ಇತರ ಸಾಹಿತ್ಯನ ಪ್ರಕಾರಗಳಿಗಿಂತ ಭಿನ್ನವಾಗಿಯೇ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯನ್ನು ಜನಸಾಮಾನ್ಯರ ಚರಿತ್ರೆಯಾಗಿ ಕಟ್ಟಿದೆ. ಹಿನ್ನೆಲೆಯಲ್ಲಿ ಚರಿತ್ರೆಯ ಆಕರಗಳಾಗಿ ನಾಟಕಗಳನ್ನು ಗಮನಿಸಬಹುದು. ಕಲೆಗಾಗಿ ಕಲೆಯೆಂಬ ಪರಿಕಲ್ಪನೆಯ ಮೂಲಕ ಅಭಿವ್ಯಕ್ತಗೊಳ್ಳುತ್ತಿದ್ದ ನಾಟಕ 20ನೇ ಶತಮಾನದ ಆಶೋತ್ತರಗಳನ್ನ ವರ್ತಮಾನದ ಕರೆಗಳಾಗಿ ಸಮಾಜದ ಮುಂದಿಡಲು ಪ್ರಯತ್ನಿಸಿತು. ಕನ್ನಡದಲ್ಲಿ ಕಲೆಯನ್ನು ಕಲೆಗಾಗಿ ಸ್ವೀಕರಿಸದೆ ಸ್ವಾತಂತ್ರ್ಯ ಚಳುವಳಿಯ ಕರೆಯಾಗಿ ಚಿಕ್ಕೋಡಿಯ ಶಿವಲಿಂಗ ಸ್ವಾಮಿಗಳು ರಚಿಸಿ, ಅಬ್ಬಿಗೇರಿ ಕಂಪನಿಯಿಂದ ಪ್ರದರ್ಶನಗೊಂಡ 'ಕಿತ್ತೂರ ಕೇಸರಿ' ನಾಟಕವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ನಿದ್ದೆಗೆಡಿಸಿತ್ತು. ಈ ನಾಟಕ ಪರಿಣಾಮವಾಗಿ ಅಸಹಕಾರ ಚಳುವಳಿ ತೀವ್ರಗೊಂಡು ಬ್ರಿಟಿಶ್ ಸರ್ಕಾರದ ವಿರುದ್ಧ ಘೋಷಣೆಗಳು ಕೂಗಿ ಬಂದವು. ಮುಂದೆ ಈ ನಾಟಕ ಬ್ರಿಟಿಶ್ ಸರ್ಕಾರದ ಸೆನ್ಸಾರಿಗೆ ಒಳಪಟ್ಟಿತು. ನಾಟಕ ಒಂದು ವೇಳೆ ಕಲೆಯಾಗಿ ಮುಂದುವರೆದಿದ್ದರೆ ಇಂತಹ ಸಮಸ್ಯೆಗಳಿಗೆ ಒಳಗಾಗುತ್ತಿರಲಿಲ್ಲ. ಅಂದಿನ ಸಂದರ್ಭದ ಘಟನೆಗಳಿಗೆ ಮಣಿದು 'ಕಲೆಗಾಗಿ ಕಲೆ ಅಲ್ಲ, ಕರೆಗಾಗಿ ಕಲೆಯೆಂಬ' ಚಿಂತನೆಯೆಲ್ಲಿ ತೊಡಗಿ ಚಳುವಳಿಯ ಸ್ವರೂಪದಲ್ಲಿ ಜನಸಾಮಾನ್ಯರನ್ನು ಮುಖ್ಯವೇದಿಕೆಗೆ ತಂದು ಸಮಗ್ರ ಭಾರತದ ಕಣ್ಣೋಟವನ್ನು ನೀಡಿದವು. ಗರುಡರ ಕಂಸವಧ ಸಮಾಜದಲ್ಲಿನ ಅಸ್ಪೃಶ್ಯತೆಯ ನಿವಾರಣೆಯ ಕರೆಯಾಗಿ

ಗುರ್ತಿಸಿಕೊಂಡಿತು. ಹಾಗೆ ಸಮಾಜದ ಮುಗ್ಧ ಜನರ ನಾಡಿ ಮಿಡಿತವನ್ನು ಅರ್ಥೈಸಿಕೊಂಡು ಮನರಂಜನೆಯ ಭಾಗವಾದ ನಾಟಕ ಪ್ರಕಾರ ಶಿಕ್ಷಣದ ಮಾಧ್ಯಮವಾಯಿತು. ಅಕ್ಷರಸ್ಥರ ಸ್ವತ್ತಾಗಿದ್ದ ಸಾಹಿತ್ಯವನ್ನು ಸಮಕಾಲೀನವಾಗಿಸಿ ಅಂದಿನ ಸಮಸ್ಯೆಗಳಿಗೆ ಸ್ಪಂದಿಸುವ ಮಾಧ್ಯಮವಾಗಿ ಈ ನಾಟಕಗಳು ಕಾರ್ಯನಿರ್ವಸಿವೆ. ಸಾಹಿತ್ಯವನ್ನು ದೃಶ್ಯವಾಗಿಸಿದ ಹೆಗ್ಗಳಿಕೆ ಒಂದಾದರೆ ಕಲೆಯನ್ನು ತಕ್ಷಣದ ಸಾಧನವಾಗಿಸಿದ ರೀತಿ ಮತ್ತೊಂದು .

೬.೩. ಪರಂಪರೆ ಮತ್ತು ಸಮಕಾಲೀನ ಸಾರ್ವಕಾಲಿಕತೆಗಳ ಸಮುಚ್ಚಯ

ವಸಾಹತುಶಾಹಿ ಆಡಳಿತದ ಪ್ರಭಾವದಿಂದ ಭಾರತದ ಸಾಂಸ್ಕೃತಿಕ ವ್ಯವಸ್ಥೆಗಳ ಕೊಡುಕೊಳ್ಳುವಿಕೆಯ ಕುರಿತು ಚಿಂತಕರಲ್ಲಿ ಪರ ಮತ್ತು ವಿರೋಧದ ಮಾತುಗಳಿವೆ. ಆದರೆ ಪಾಶ್ಚಿಮಾತ್ಯರಿಂದ ಎರವಲಾಗಿ ಬಂದ ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಪ್ರಕಾರವು ಪ್ರಮುಖವಾದದ್ದು. ನಾಟಕ ಎಂಬುದು ಭಾರತಕ್ಕೆ ಹೊಸ ಸಾಹಿತ್ಯ ಮಾದರಿಯೆಲ್ಲ. ಪ್ರಾದೇಶಿಕವಾಗಿ ತನ್ನದೇ ಆದ ಮಾದರಿಗಳು ಪ್ರಚಲಿತದಲ್ಲಿದ್ದವು. ಪಾರ್ಸಿ ಕಂಪನಿಗಳ ಮೂಲಕ ಅಧುನಿಕ ನಾಟಕ ಪ್ರಕಾರ ತನ್ನ ರಚನಾ ಸ್ವರೂಪ ಮತ್ತು ಪ್ರದರ್ಶನದ ಸ್ವರೂಪದಲ್ಲಿ ಬದಲಾವಣೆಯೊಂದಿಗೆ ಭಾರತೀಯ ರಂಗಭೂಮಿಗೆ ಪ್ರವೇಶ ಪಡೆಯಿತು. ಪರಂಪರಗತವಾಗಿ ನಾಟಕ ಮನರಂಜನೆಗೆ ಸೀಮಿತವಾಗಿತ್ತು. ಭಾರತೀಯ ಪರಂಪರೆಯ ಮಹಾಕಾವ್ಯಗಳೆನಿಸಿಕೊಂಡ ರಾಮಾಯಣ, ಮಹಾಭಾರತದ ವಸ್ತು, ಪಾತ್ರಗಳೆ ಈ ನಾಟಕಗಳ ಕೇಂದ್ರವಾಗಿರುತ್ತಿದ್ದವು. ಕನ್ನಡದ ಸಾಹಿತ್ಯ ಪರಂಪರೆಯು ಪಂಪನಿಂದಲೂ ಅದೇ ಪುರಾಣದ ಪಾತ್ರ ವಸ್ತುಗಳನ್ನು ತಮ್ಮ ಆಶ್ರಯದಾತರ ಕಣ್ಣೋಟಗಳಾಗಿ ಪುನರ್‌ರಚಿಸುವ ಕಾರ್ಯಗಳೆ ನಡೆದಿವೆ. ಆದರೆ ಹಲವಾರು ಚಿಂತಕರನ್ನು ಗಮನಿಸಿದಂತೆ 18–19ನೇ ಶತಮಾನಗಳ ಸಾಂಸ್ಕೃತಿಕ ಪಲ್ಲಟಗಳು ಕೊಡುಕೊಳ್ಳುವಿಕೆಯ ಭಾಗವಾಗಿ ಸಾಹಿತ್ಯವು ತಮ್ಮ ಕಾಲದ ಆಶೋತ್ತರಗಳನ್ನು ತನ್ಮೂಲಕ ಸಮಕಾಲೀನಗೊಳಿಸುವಲ್ಲಿ ಪ್ರಯತ್ನಿಸಿತು. ಕನ್ನಡದಲ್ಲಿ ಸಕ್ಕರೆ ಬಾಳಚಾರ್ಯರ ಉಷಾಹರಣ ನಾಟಕವನ್ನು ಮೊದಲ ಪ್ರಯತ್ನವಾಗಿ ಗಮನಿಸಬಹುದು. ಈ ನಾಟಕ ಭಾರತೀಯ ಪರಂಪರೆಯ ಪೌರಾಣಿಕ ವಸ್ತುವನ್ನು ತೆಗೆದುಕೊಂಡಿದ್ದ ಅದನ್ನು ಅಂದಿನ ಕಾಲದ ಘಟನೆಗಳಿಗೆ ಮುಖಾಮುಖಿಗೊಂಡಿದೆ. ಕನ್ನಡದ ಮೇಲೆ ಮರಾಠಿ ಭಾಷೆಯ ಪ್ರಾಬಲ್ಯವನ್ನು ವಿರೋಧಿಸುವಂತ ಘಟನೆಗಳನ್ನು ಒಳಗೊಂಡಿದೆ. ಗರುಡ ಸದಾಶಿವರಾಯರ ಕಂಸವಧಾ ನಾಟಕ ಪೌರಾಣಿಕ ಕತೆಯ ಹಿನ್ನೆಲೆಯಲ್ಲಿ ರಚನೆಗೊಂಡಿದ್ದವು.

ಕೃತಿಯ ರಚನೆಯ ಕಾಲದ ಸಂದರ್ಭದ ಬಿಕ್ಕಟ್ಟುಗಳಿಗೆ ಮುಖಾಮುಖಿ ಗೊಂಡಿದ್ದರಿಂದ ಅದು ಒಮ್ಮೆಲೆ ಪರಂಪರೆ ಮತ್ತು ಸಮಕಾಲೀನಗಳ ನಡುವಿನ ಕೊಂಡಿಯಾಗಿ ನಿಂತಿದೆ. ಪೌರಾಣಿಕ ಪಾತ್ರದ ಕೃಷ್ಣನನ್ನು ಗಾಂಧಿಯಾಗಿ ಸಮಕಾಲೀನಗೊಳಿಸುವ ಪ್ರಕಿಯೆಗಳು ಈ

ನಾಟಕದಲ್ಲಿ ಚಿತ್ರಿತಗೊಂಡಿವೆ. ಅದೇ ರೀತಿಯಾಗಿ ತಿರುಮಲ ವೆಂಕಟಾಚಾರ್ಯರ 'ಭಕ್ತ ಪ್ರಹ್ಲಾದ' ನಾಟಕದಲ್ಲಿ ಹಿರಣ್ಯಕಶ್ಯಪುನನ್ನು ಬ್ರಿಟಿಶ್ ಅಧಿಕಾರಿಯನ್ನಾಗಿ ಪ್ರಹ್ಲಾದನನ್ನು ಸತ್ಯಾಗ್ರಹಿಯನ್ನಾಗಿ ಸಮಕಾಲೀನಗೊಳಿಸುವುದರ ಮೂಲಕ ಭಾರತದ ಸ್ವಾತಂತ್ರ್ಯ ಚಳುವಳಿಗೆ ಬೆಂಬಲವಾಗಿ ಕನ್ನಡ ನಾಟಕಗಳು ನಿಂತಿವೆ. ಹೀಗೆ ಲಂಕಾದಹನ, ಅಕ್ಷಯಾಂಬರ, ರಕ್ತರಾತ್ರಿ ಹಲವಾರು ನಾಟಕಗಳನ್ನು ಗಮನಿಸಬಹುದು.

ಮೇಲ್ನೋಟಕ್ಕೆ ಭಾರತೀಯ ಪರಂಪರೆ ಪೌರಾಣಿಕ ವಸ್ತು ಮತ್ತು ಪಾತ್ರಗಳನ್ನು ದುಷ್ಟ ಶಿಕ್ಷಕ ಶಿಷ್ಟ ರಕ್ಷಕ ಎಂಬ ನೆಲೆಯಲ್ಲಿ ಗ್ರಹಿಸಿಕೊಂಡು ಬಂದಿದೆ. ಆದರೆ 19–20ನೇ ಶತಮಾನದಲ್ಲಿ ಅಧುನಿಕತೆಯನ್ನು ಹೊಲುವ ಚಿಂತನೆಗಳು ಪ್ರವೇಶದಿಂದ ಕನ್ನಡ ನಾಟಕಗಳು ಪೌರಾಣಿಕ ವಸ್ತುಗಳನ್ನು ತೆಗೆದುಕೊಂಡು ರಚನೆಗೊಂಡಿದ್ದರೂ ಅವುಗಳ ಉದ್ದೇಶ ಸಮಕಾಲೀನರಲ್ಲಿ ನೆಲೆಗೊಂಡಿತ್ತು. ನಾಟಕಗಳ ಶೀರ್ಷಿಕೆ ಪೌರಾಣಿಕ ಕಥೆಗಳ ಹೆಸರಿನಿಂದ ರಚನೆಗೊಂಡಿದ್ದರೂ ಅವುಗಳ ಉಪಶೀರ್ಷಿಕೆ ಸಮಕಾಲೀನ ಸಮಸ್ಯೆಗಳು ಆಗಿರುತ್ತಿದ್ದವು. ಉದಾಹರಣೆಗೆ– ಕಂಸವಧ, ಮಾತೃಬಂಧ, ವಿಮೋಚನೆ, ಲಂಕಾದಹನ, ಸುಜನೋದ್ಧಾರ ಮುಂತಾದವು.

೬.೪. ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧ

ಇತಿಹಾಸ ಮತ್ತು ಸಾಹಿತ್ಯದ ನಡುವಿನ ಅಂತರ್‌ಸಂಬಂಧ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದ ಪ್ರಕ್ರಿಯೆ. ಆದರೆ ಹಾಗೆ ಒಂದು ಕಾಲದ ಚರಿತ್ರೆಯನ್ನು ರಚಿಸುವಾಗ ಆಕರಗಳಾಗಿ ಸಾಹಿತ್ಯವನ್ನು ಪರಿಗಣಿಸಿದ ಸಂದರ್ಭವೂ ನಡೆದಿವೆ. ಎರಡನೆ ದರ್ಜೆಯ ಆಕರಗಳಾಗಿ ನೋಡುವ ವ್ಯವದಾನವು ಕೆಲವು ಇತಿಹಾಸಕಾರರಿಗೆ ಇರುವುದಿಲ್ಲ. ಕಾರಣ ಸಾಹಿತ್ಯ ಕಲ್ಪನೆಗಳ ಕನಸ್ಸುಗಳಲ್ಲಿ ರಚನೆಗೊಳ್ಳುವ ಒಂದು ಬರವಣಿಗೆ ಕ್ರಮ ಗ್ರಹಿಸಲಾಗಿದೆ. ಎಂದು ಆದರೆ ಈಗಾಗಲೆ ಸಾಹಿತ್ಯಕ್ಕೂ ಚರಿತ್ರೆಗೂ ಅತ್ಯುತ್ತಮ ಸಂಬಂಧ ಇದೆ ಎಂಬುದನ್ನು ರುಜುವಾತುಪಡಿಸಲಾಗಿದೆ. ಕನ್ನಡದಲ್ಲಿ ಸಾಹಿತ್ಯದ ಬಹುತೇಕ ಕೃತಿಗಳು ಚರಿತ್ರೆಯ ಆಕರಗಳಾಗಿ ಕಾರ್ಯನಿರ್ವಹಿಸಿವೆ. ಕವಿರಾಜಮಾರ್ಗದ ಆದಿಯಾಗಿ ಚರಿತ್ರೆಯನ್ನು ದಾಖಲಿಸುವ ನಿಟ್ಟಿನಲ್ಲಿ ಸಾಹಿತ್ಯದ ಪಾತ್ರ ಘಮ್ಯವಾದದ್ದು. ಒಂದು ಜನಾಂಗದ ಚರಿತ್ರೆಯನ್ನು ಕಟ್ಟಲು, ಆ ಜನಾಂಗದ ಭಾಷೆಯು ಸಾಹಿತ್ಯವನ್ನು ಅವಲೋಕಿಸಿದ ಆ ಜನಾಂಗದ ಚರಿತ್ರೆಯನ್ನು ಕಟ್ಟಲು ಚರಿತ್ರೆಕಾರರಿಗೆ ಸಾಸಾಧ್ಯ. ಈಗಾಗಲೆ ಕಟ್ಟಿಕೊಂಡು ಬಂದ ಚರಿತ್ರೆಯನ್ನು ಮರು ಶೋಧಿಸಿ ಕಟ್ಟುವಲ್ಲಿ ಸಾಹಿತ್ಯ ಕೃತಿಗಳ ಪಾತ್ರ ಪ್ರಮುಖವಾದುದು. ಉದಾಹರಣೆಗೆ ವಿಜಯನಗರ ಸಾಮ್ರಾಜ್ಯದ ಅವನತಿಗೆ ಬಹುಮನಿ ಸುಲ್ತಾನರು ಮತು ವಿಜಯನಗರ ಅರಸರ ನಡುವಿನ ಯುದ್ಧಗಳೇ ಕಾರಣ ಎಂದು ಈಗಾಗಲೇ ಕಟ್ಟಿಕೊಂಡ ಚಾರಿತ್ರಿಕ ಘಟನೆಯನ್ನು ಬಹುಮನಿ ಸುಲ್ತಾನ ಕಾಲದ ಸಾಹಿತ್ಯಿಕ ಬರವಣಿಗೆಗಳು ಅಲ್ಲಗೆಳೆದಿವೆ.

ಕನ್ನಡದಲ್ಲಿ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಸಾಹಿತ್ಯ ಕೃತಿಗಳ ಪಾತ್ರ ಮುಖ್ಯವೆನಿಸುತ್ತದೆ. ಚರಿತ್ರೆಯಲ್ಲಿ ದಾಖಲಾಗದ ವಿಷಯಗಳನ್ನು ಸಾಹಿತ್ಯ ಗುರುತಿಸುವ ಕೆಲಸ ಮಾಡುತ್ತದೆ. ಮುಖ್ಯವಾಗಿ ಕನ್ನಡ ನಾಟಕಗಳು ಸಾಹಿತ್ಯ ಮತ್ತು ಚರಿತ್ರೆಯನ್ನು ಬೆಸೆಯುವ ಕೊಂಡಿಯಂತೆ ಕೆಲಸ ಮಾಡಿವೆ. 19–20ನೇ ಶತಮಾನದ ಕರ್ನಾಟಕ ಸ್ವಾತಂತ್ರ್ಯ ಚಳುವಳಿಯ ಎಷ್ಟೋ ವಿಚಾರಗಳನ್ನು ಕನ್ನಡ ನಾಟಕ ಸಾಹಿತ್ಯ ಕಲ್ಪನೆ ಮತ್ತು ವಾಸ್ತವಗಳ ಮೂಲಕ ಅಂದಿನ ಚರಿತ್ರೆಯನ್ನು ಕಟ್ಟಿಕಟ್ಟಿವೆ. ಸಾಹಿತ್ಯವನ್ನು ಚರಿತ್ರೆಯ ಆಕರಗಳಾಗಿ ಸ್ವಿಕರಿಸಬೇಕಾ ಅಥವಾ ಬೇಡವೇ ಎಂಬ ವಾಗ್ವಾದಗಳಿರುವಾಗಲೂ ಕನ್ನಡ ನಾಟಕಗಳು ಅದಕ್ಕೆ ಅಪವಾದವೆಂಬಂತೆ ಗುಪ್ತಗಾಮಿಯಂತೆ ಸ್ವಾತಂತ್ರ್ಯ ಚಳುವಳಿಯ ಸಂದಂರ್ಭದಲ್ಲಿ ಈ ಹಿಂದೆ ಬ್ರಿಟಿಶರ ವಿರುದ್ಧ ನಡೆದ ಸಂಸ್ಥಾನಿಕರ ಸಮಕಾಲೀನ ಸಮಸ್ಯೆಗಳಿಗೆ ಸಮೀಕರಿಸಿ ಜನಮಾನಸದಲ್ಲಿ ಚಳುವಳಿಯ ಕುರಿತು ಅರಿವು ಮೂಡಿಸಿ ಚಳುವಳಿಯನ್ನು ಸಮಕಾಲೀನಗೊಳಿಸುವುದರ ಜೊತೆಗೆ ಸರ್ವಾಕಾಲಿಕವಾಗಿಸಿರುವುದು ಕನ್ನಡ ನಾಟಕಗಳ ಹೆಗ್ಗಳಿಕೆಯಾಗಿದೆ. ನಾಟಕ ಸಾಹಿತ್ಯ ರಂಜನೆಯ ಮೂಲಕ ಲೋಕ ಶಿಕ್ಷಣವಾಗಿರುವುದು ಸರ್ವೆಸಮಾನ್ಯ. ಸಾಮಾಜಿಕ, ಕೌಟುಂಬಿಕ, ಪೌರಾಣಿಕ ನೆಲೆಗಳಿಂದ ಚಾರಿತ್ರಿಕ ನೆಲೆಯಾಗಿ ಅ ಕಾಲದ ಚರಿತ್ರೆಯ ಉದ್ದೇಶಗಳನ್ನು ಸಮಕಾಲೀನಗೊಳಿಸುವುದರ ಮೂಲಕ ಚರಿತ್ರೆಯ ಆಕರಗಳಾಗಿರುವುದು ಕನ್ನಡ ನಾಟಕಗಳ ವಿಶೇಷವೆಂದೆ ಹೇಳಬಹುದು. ಭೂತಕಾಲದ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ವರ್ತಮಾನದ ಸಮಕಾಲೀನ ಸಮಸ್ಯೆಗಳಿಗೆ ಸೃಜನಶೀಲವಾಗಿ ಚಾರಿತ್ರಿಕ ದೃಷ್ಟಿಕೋನವನ್ನು ಕೊಡುವಲ್ಲಿ ನಾಟಕಗಳ ಪಾತ್ರ ದೊಡ್ಡದಿದೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ, ಟಿಪ್ಪು ಸುಲ್ತಾನ ,ಕಿತ್ತೂರು ಚನ್ನಮ್ಮ, ಬೆಳವಡಿ ಮಲ್ಲಮ್ಮನಂತ ಚಾರಿತ್ರಿಕ ವ್ಯಕ್ತಿಗಳ ಚರಿತ್ರೆಯನು ಮತ್ತು ನರಗುಂದದಂತ ಸಂಸ್ಥಾನಗಳ ಚರಿತ್ರೆಯನ್ನು ಸ್ವಾತಂತ್ರ್ಯ ಚಳುವಳಿಯ ವಸ್ತುವನ್ನಾಗಿಸಿ ಅವುಗಳನ್ನು ಸಮಕಾಲಿನಗೊಳಿಸುವದರ ಮೂಲಕ ನಾಟಕ ಸಾಹಿತ್ಯ ಚರಿತ್ರಯನ್ನು ಕಟ್ಟುವ ಆಕರಗಳಾಗಿವೆ. ನರಗುಂದ ಬಂಡಾಯ ಚರಿತ್ರಯನ್ನು ನಾಟಕವಾಗಿಸಿ 1939ರಲ್ಲಿ ಹುಬ್ಬಳ್ಳಿಯಲ್ಲಿ ಪ್ರದರ್ಶನಗೊಂಡಾಗ ಪ್ರೇಕ್ಷಕರು ಜಯಘೋಷ ಕೂಗ್ತಾ ಗಾಂಧಿ ಅವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಅನೇಕ ಜನ ಧುಮಿಕಿದ ಪ್ರಸಂಗಗಳನ್ನು ಸಮಕಾಲೀನಗೊಳಿಸುವ ಪ್ರಕ್ರಿಯೆ ಮುಖ್ಯವಾದದ್ದು. ಟಿಪ್ಪು ಸುಲ್ತಾನನನ್ನು ಕುರಿತು ಪರ ವೀರೋದ ಚರ್ಚಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಆರ್.ಡಿ.ಕಾಮತ್ ಅವರ ಟಿಪ್ಪು ಸುಲ್ತಾನ್ ನಾಟಕ ಟಿಪ್ಪುನನ್ನು ಅದಮ್ಯ ರಾಷ್ಟ್ರಪ್ರೇಮಿಯಂತೆ ಚಿತ್ರಿಸಿದೆ. ಸ್ವದೇಶಿ ಚಳುವಳಿಯಂತ ಚಾರಿತ್ರಿಕ ಘಟನೆಗಳನ್ನು ನಾಟಕಗಳು ಪ್ರದರ್ಶನದ ಮೂಲಕ ಸಮಕಾಲೀನ ಚರಿತ್ರೆಯನ್ನಾಗಿ ಅದನ್ನು ಕಟ್ಟಿಕೊಟ್ಟಿವೆ. ಹಾಗಾಗಿ ಕನ್ನಡ ನಾಟಕಗಳ ಮೂಲಕ ಕರ್ನಾಟಕದ ಚರಿತ್ರೆಯನ್ನು ಕಟ್ಟಿಕೊಡುವಂತ ಅಧ್ಯಯನದ ಸಾಧ್ಯತೆ ಇರುವದನ್ನು ಈ ಅಧ್ಯಾಯದಿಂದ ಕಂಡುಕೊಳ್ಳಲಾಗಿದೆ.

ವಸಾಹತುಶಾಹಿ ಆಡಳಿತದ ಭಾಗವಾಗಿ ಬಂದ ವ್ಯವಸ್ಥೆಗಳ ಮೂಸೆಯಲ್ಲಿ ಸರಂಚನೆಗೊಂಡ ಭಾರತದ ಸಾಂಸ್ಕೃತಿಕ ಪರಿಸರವು ಸಾಹಿತ್ಯದ ಮೂಲಕ ಅಂದಿನ ಘಟನೆಗಳಿಗೆ ಮುಖಾಮುಖಿಗೊಂಡಿತು. ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ನಾಟಕ ಸಾಹಿತ್ಯ ಚಳುವಳಿಯಂತ ಘಟನೆಯನ್ನು ಸಕ್ರಿಯವಾಗಿ ಚಲನೆಯಲ್ಲಿಡಲು ವಿಭಿನ್ನ ಹಾದಿಗಳನ್ನು ತುಳಿಯಿತು. ಅಂದರೆ ವಿಸ್ಮೃತಿಗೆಜಾರಿದ ಪರಂಪರಾ ಚಿಂತನೆಗಳನ್ನು ಅಂದು ಒದಗಿಬಂದ ಧಾರೆಗಳೊಂದಿಗೆ ಪುನರುತ್ಥಾನಗೊಳಿಸಲು ಪ್ರಯತ್ನಿಸಿತು. ಹೀಗೆ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಿಗಿಂತ ನಾಟಕ ಸಾಹಿತ್ಯ ಸ್ವಾತಂತ್ರ್ಯ ಚಳುವಳಿಯನ್ನು ಜನರ ಮಧ್ಯೆ ಜೀವಂತವಾಗಿಡಲು ಅನುಸರಿಸಿದ ಮಾರ್ಗಗಳನ್ನು ಇಲ್ಲಿ ಚರ್ಚಿಸಲಾಗಿದೆ.

* * *

ಅಧ್ಯಾಯ–ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ಭಾರತ ಎಂಬುದು ಈಗಿನ ಹಾಗೆ ರಚನೆಗೊಳ್ಳದೇ ಇದ್ದ ಕಾಲದಿಂದಲೂ ಹೊರಗಿನವರ ದಾಳಿಗೆ ಒಳಗಾಗಿರುವುದು ಕಂಡುಬರುತ್ತದೆ. ಅದು ವ್ಯಾಪಾರಿಕ ಸಂಬಂಧವಾಗಿತ್ತಷ್ಟೆ. ಅಷ್ಟೆ ಅಲ್ಲದೆ ಹೊರಗಿನ ಚಿಂತನೆಗಳೊಂದಿಗೆ ಮುಖಾಮುಖಿಯಾಗುವುದನ್ನು ಗಮನಿಸಬಹುದು. ಪ್ರಮುಖವಾಗಿ ಕಾನ್‌ಸ್ಟಾಂಟಿನೋಪಲ್ ಪತನದ ನಂತರ ೧೪೯೮ರಲ್ಲಿ ವಾಸ್ಕೊಡಿಗಾಮನ ಜಲಮಾರ್ಗದ ಮೂಲಕ ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರ ನಂತರ ಇಲ್ಲಿಯ ರಾಜಕೀಯ ಆಡಳಿತದ ದೌರ್ಬಲ್ಯವನ್ನರಿತು, ಆಡಳಿತಕ್ಕೂ ಪ್ರವೇಶಿಸಿದರು. ಆಡಳಿತದದ ಹಿಡಿತಕ್ಕಾಗಿ ಅವರಲ್ಲಿಯೆ ಹೋರಾಟಗಳಾದವು. (ಪೋರ್ಚುಗೀಸರು, ಡಚ್ಚರು, ಪ್ರೆಂಚರು, ಬ್ರಿಟಿಶರು) ಅಂತಿಮವಾಗಿ ಬ್ರಿಟಿಶರು ಭಾರತದ ಆಡಳಿತಕ್ಕೆ ಕೈಹಾಕಿದರು. ಹೀಗೆ ಕೆಲವು ಸಂಸ್ಥಾನಗಳ ಹೊರತಾಗಿ ಬ್ರಿಟಿಶರ ನೇರ ಆಡಳಿತಕ್ಕೆ ಒಳಗಾದ ಭಾರತ ಯೂರೋಪಿನ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿತು. ಈ ಚಿಂತನೆ ಭಾರತೀಯರಿಗೆ ಬ್ರಿಟಿಶರನ್ನು ವಿರೋಧಿಗಳೆಂದೇ ಭಾವಿಸಲು ಕಾರಣವು ಆದವು. ಯುರೋಪಿನ ಸಾಂಸ್ಕೃತಿಕ ನೀತಿಗಳು ಮುಖಾಮುಖಿಯಾದ ಭಾರತೀಯ ಪರಿಸರ ಆಧುನಿಕವಾಗಿ ತನ್ನತನ ಕಟ್ಟಿಕೊಳ್ಳಲು ಪ್ರಯತ್ನಿಸಿತು. ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿ, ವಿಜ್ಞಾನದ ಅವಿಷ್ಕಾರಗಳು, ವೈಚಾರಿಕ ಚಿಂತನೆಗಳು ಭಾರತದ ಮೇಲೆ ಪರಿಣಾಮ ಬೀರಿವೆ.

ಇನ್ನೂರು ವರ್ಷಗಳ ಕಾಲ ಬ್ರಿಟಿಶರಿಂದ ಆಳ್ವಿಕೆಗೆ ಒಳಪಟ್ಟ ಭಾರತೀಯ ವ್ಯವಸ್ಥೆಯು ಸಂಕೀರ್ಣತೆಯಿಂದ ಕೂಡಿತ್ತು. ಬ್ರಿಟಿಶರು ವ್ಯಾಪಾರ ಕಾರಣದಿಂದ ಭಾರತಕ್ಕೆ ಬಂದು ಭಾರತವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡರು. ಅವರ ನೀತಿಗಳನ್ನು ಜಾರಿಗೆ ತಂದು ಯೋಜನೆಗಳು ಭಾರತವನ್ನು ವಸಾಹತುವನ್ನಾಗಿ ನಿರ್ಮಿಸಿದರು. ಇದರ ವಿರುದ್ಧ ಆರಂಭವಾದ ಸ್ವಾತಂತ್ರ್ಯ ಚಳುವಳಿಯ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಹೋರಾಟಗಾರರು ನೀಡಿರುವ ಕರೆಗೆ ಸಾಮಾನ್ಯ ಜನರು ಸುಲಭವಾಗಿ ಕೈಜೋಡಿಸಲಿಲ್ಲ. ಅದರಲ್ಲಿ ಸ್ವತಂತ್ರ್ಯ ಪ್ರೇಮವನ್ನು ತುಂಬಲು ಸಾಹಿತಿಗಳು, ಸೃಜನಶೀಲ ಬರಹಗಾರರು ತಮ್ಮ ಕೃತಿಗಳ ಮೂಲಕ ಜನರನ್ನು ಎಚ್ಚರಿಸುವ ಪ್ರಯತ್ನ ಮಾಡಿದರು. ಈ ನಿಟ್ಟಿನಲ್ಲಿ ೧೯ನೇ ಶತಮಾನದ ಕೊನೆ ಮತ್ತು

೨೦ನೆ ಶತಮಾನದ ಆರಂಭದಲ್ಲಿ ರೂಪುಗೊಂಡ ಕನ್ನಡ ನಾಟಕಗಳ ಕೊಡುಗೆ ಉತ್ತಮವಾದದ್ದು. ಗೋವಿಂದ ಪೈ, ಜಿ.ಪಿ. ರಾಜರತ್ನಂ, ಗರುಡ ಸದಾಶಿವರಾಯ, ಶಿವರಾಮ ಕಾರಂತ, ಕುವೆಂಪು, ಗೋವಿಂದ ಪೈ, ಚಿಕ್ಕೊಡಿ ಗೋವಿಂದ ಸ್ವಾಮಿಗಳು, ಆರ್.ಡಿ. ಕಾಮತ್, ಶ್ರೀರಂಗ ಮುಂತಾದ ನಾಟಕಕಾರರು ಕನ್ನಡಿಗರ ಮನದಲ್ಲಿ ಸ್ವಾತಂತ್ರ್ಯ ಪ್ರಜ್ಞೆ, ವೈಚಾರಿಕ ಜಾಗೃತಿಗಳನ್ನು ಮೂಡಿಸಲು ಪ್ರಯತ್ನಿಸಿದರು. ಸಾಮಾಜಿಕ ಪಿಡುಗುಗಳಾದ ಅಸ್ಪೃಶ್ಯತೆ, ವರದಕ್ಷಿಣೆ ಪದ್ಧತಿ, ಜಾತಿಪದ್ಧತಿ, ವಿಧವಾ ವಿವಾಹ, ಸ್ತ್ರೀಶೋಷಣೆ, ವರ್ಗಭೇದ ಇವೆ ಮುಂತಾದ ಸಾಮಾಜಿಕ ಅಂಶಗಳನ್ನು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಕನ್ನಡ ನಾಟಕಗಳು ಗ್ರಹಿಸಿದವು.

ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸ್ವಾತಂತ್ರ್ಯ ಚಳುವಳಿಗೆ ಪ್ರತಿಕ್ರಿಯೆ ನೀಡಿದ ಕನ್ನಡ ನಾಟಕಗಳು, ಕನ್ನಡ ಸಾಹಿತ್ಯ ಚರಿತ್ರೆಯ ವಿಸ್ತರಣೆಗೆ ಕಾರಣವಾದವು. ಹಾಗೆ ದೈವಿಕ, ಮನರಂಜನೆಯ ಭಾಗವಾಗಿ ಪ್ರದರ್ಶನಗೊಳ್ಳುವ ನಾಟಕಗಳು ಅಧುನಿಕತೆ ಸೃಷ್ಟಿಸಿದ ಆವಾಂತರಗಳಿಂದ ವಾಸ್ತವಕ್ಕೆ ಹತ್ತಿರವಾದವು. ಸಾಹಿತ್ಯವು ಸಮಾಜದ ಪ್ರತಿಬಿಂಬವೆಂಬಂತೆ ರೂಪುಗೊಂಡಿದ್ದು ಅಧುನಿಕ ಸಂದರ್ಭದಲ್ಲೆ ಎಂದರೆ ತಪ್ಪಾಗಲಾರದು.

ಅಧ್ಯಯನದ ಫಲಿತಗಳು

* ದೈವಿಕತೆ ಮತ್ತು ಮನರಂಜನೆಯಿಂದ ತುಂಬಿಕೊಂಡಿದ್ದ ನಾಟಕಗಳು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಉದ್ದೇಶಿತ ಅಂಶಗಳ ಮೂಲಕ ವಾಸ್ತವಕ್ಕೆ ತೆರೆದುಕೊಂಡವು. ಸ್ವಾತಂತ್ರ್ಯ ಮತ್ತು ಏಕೀಕರಣದ ಭಾಗವಾಗಿ ಸ್ಥಾಪನೆಗೊಂಡ ಸಂಘ ಸಂಸ್ಥೆಗಳು ರಾಜಕೀಯ ಪ್ರಜ್ಞೆಯ ಭಾಗವಾಗಿದ್ದರೆ. ಕನ್ನಡ ನಾಟಕಗಳು ಸಾಂಸ್ಕೃತಿಕ ಪ್ರಜ್ಞೆಯನ್ನು ಜನಸಾಮಾನ್ಯರಲ್ಲಿ ಮೂಡಿಸಲು ವಾಹಕಗಳಂತೆ ಕೆಲಸ ನಿರ್ವಹಿಸಿವೆ.

* ತಿಲಕರಂತೆ ತೀವ್ರವಾದಿ ರಾಷ್ಟ್ರೀಯತೆಯ ನಾಯಕರು ಧಾರ್ಮಿಕ ಪೌರಾಣಿಕ ಇತಿಹಾಸ ಸಂಕೇತಗಳ ಮೂಲಕ ಜನರಲ್ಲಿ ಭಾವನಾತ್ಮಕವಾಗಿ ರಾಷ್ಟ್ರೀಯತೆ ಹಾಗೂ ವಸಾಹತುಶಾಹಿ ವಿರೋಧಿ ಭಾವನೆಗಳನ್ನು ಮೂಡಿಸಲು ಪ್ರಯತ್ನಿಸಿದರು. ಮುಂದೆ ಕನ್ನಡ ನಾಟಕ(ಕನ್ನಡ ಸಾಹಿತ್ಯ) ಸಾಹಿತ್ಯ ಅದೇ ಸಂಕೇತಗಳ ಮೂಲಕ ಸಾಹಿತ್ಯ ರಚನೆಯಲ್ಲಿ ತೊಡಗಿತು.

* ಭಾರತದ ಸ್ವಾತಂತ್ರ್ಯ ಚಳುವಳಿಯು ತನ್ನೊಳಗೆ ಹಲವು ಬಗೆಯ ಸ್ವಾತಂತ್ರ್ಯದ ಬಾಹುಗಳನ್ನು ಇಟ್ಟುಕೊಂಡಿದ್ದರೂ ಅದು ಸಾಂಸ್ಕೃತಿಕ ಕ್ರಾಂತಿಯಾಗಿ ಹೊರಹೊಮ್ಮಲಿಲ್ಲ. ಆದರೆ ಕನ್ನಡ ನಾಟಕಗಳು ಆ ನಿಟ್ಟಿನಲ್ಲಿಯೇ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ಸ್ವಾತಂತ್ರ್ಯವನ್ನು ಸಾಂಸ್ಕೃತಿಕದ ಕ್ರಾಂತಿಯೆಂದು ಭಾವಿಸಿದ್ದವು.

* ಸಾಹಿತ್ಯದ ಇತರೆ ಪ್ರಕಾರಗಳಾದ ಕಥೆ, ಕಾವ್ಯ, ಕಾದಂಬರಿಗಳು ಸಾಹಿತ್ಯಿಕ ಪಠ್ಯಗಳಾಗಿ ಮಾತ್ರ ಉಳಿಯುತ್ತವೆ. ಆದರೆ ನಾಟಕವು ಸಾಹಿತ್ಯಪಠ್ಯ ಮತ್ತು ಪ್ರದರ್ಶನ ಪಠ್ಯಗಳಾಗಿ ಹೊರಹೊಮ್ಮುವುದರಿಂದ ಹೆಚ್ಚು ಪ್ರಭಾವ ಬೀರುವ ಮಾಧ್ಯಮವಾಗಿದೆ. ಆದ್ದರಿಂದ ಅಂದಿನ ಘಟನೆಗಳಿಗೆ ಚಳುವಳಿಯ ಮೂಲಕ ಜನರು ಹೇಗೆ ಪ್ರತಿಕ್ರಿಯಿಸಿದರೋ ಅದರಂತೆಯೇ ನಾಟಕಗಳು ಸಹ ಆ ಸಂದರ್ಭದ ಘಟನೆಗಳಿಗೆ ಚಳವಳಿಯಂತೆಯೇ ಕಾರ್ಯ ನಿರ್ವಹಿಸಿದವು.

* ಕನ್ನಡ ನಾಟಕಗಳು ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದ ಸಂದಿಗ್ಧತೆಗಳನ್ನು ಬಿತ್ತರಿಸುವ ಮಾಧ್ಯಮವಾಗಿ, ಸಮಕಾಲೀನ ಸಮಾಜದ ಜನಸಾಮಾನ್ಯರ ನೋವುನಲಿವುಗಳನ್ನು ತಣಿಸುವ ವೇದಿಕೆಯಾಗಿ ಕೆಲಸ ನಿರ್ವಹಿಸಿವೆ.

* ಬ್ರಿಟಿಶರ ಮನರಂಜನೆಗಾಗಿ ಭಾರತಕ್ಕೆ ಎರವಲು ಬಂದ ಅಧುನಿಕ ಮಾದರಿಯ ನಾಟಕಗಳು, ತದನಂತರ ವಸಾಹತುಶಾಹಿಗಳ ಭಾರತೀಯ ವಿರೋಧಿ ನೀತಿಗಳ ವಿರುದ್ಧ ಪ್ರತಿಕ್ರಿಯಿಸಲು ಆರಂಭಿಸಿದವು. ಪರಿಣಾಮವಾಗಿ ಕನ್ನಡ ನಾಟಕಗಳು 'ಸೆನ್ಸಾರ್' ಪದ್ಧತಿಗೆ ಒಳಗಾದವು. ಈ ಪದ್ಧತಿ ಭಾರತಕ್ಕೆ ಹೊಸದಾಗಿತ್ತು. ಇದರಿಂದ ಅನೇಕ ನಾಟಕಗಳು ನಿಷೇಧಕ್ಕೆ ಒಳಗಾದವು.

* ಬ್ರಿಟಿಶ್ ವಿರೋಧಿ ನೀತಿಗಳುಳ್ಳ ನಾಟಕಗಳು ಬ್ರಿಟಿಶ್ ಸರಕಾರಗಳಿಂದ ಸೆನ್ಸಾರ್‌ಗೆ ಒಳಪಟ್ಟಾಗ ಮತ್ತೆ ಪ್ರದರ್ಶನಗೊಳ್ಳಲು 'ಉಪಶೀರ್ಷಿಕೆ'ಯನ್ನು ಅಳವಡಿಸಿಕೊಂಡು ಪ್ರದರ್ಶನಗೊಳ್ಳುತ್ತದ್ದವು. ಈ ಕ್ರಮ ಬ್ರಿಟಿಶರ ಕುತಂತ್ರ ನೀತಿಗಳ ವಿರುದ್ಧ ಮತ್ತೆ ನಾಟಕಗಳನ್ನು ಪ್ರದರ್ಶಿಸಲು ಬಳಸಿಕೊಂಡ ತಂತ್ರವಾಗಿದೆ.

* ಭಾರತದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯ ಬರವಣಿಗೆಗಳನ್ನು ಕನ್ನಡ ನಾಟಕ ಸಾಹಿತ್ಯ ಕಟ್ಟಿಕೊಟ್ಟಿದೆ. ಹಾಗಾಗಿ ಸ್ವಾತಂತ್ರ್ಯ ಚಳುವಳಿಯ ಆಕರಗಳಾಗಿ ಕನ್ನಡ ನಾಟಕಗಳನ್ನು ಗಮನಿಸಬಹುದು.

* ವಸಾಹತುಶಾಹಿ ಅನುಭವದಿಂದ ತನ್ನತನದ ಹುಡುಕಾಟವಾಗಿ ಪ್ರಾರಂಭವಾದ ಕಲೆ, ಸಾಹಿತ್ಯ, ಸಂಸ್ಕೃತಿ ಕುರಿತ ಚಿಂತನೆಗಳು ಸ್ವಾತಂತ್ರ್ಯ ಸಂದರ್ಭವನ್ನು ಗ್ರಹಿಸಿ ಅಭಿವ್ಯಕ್ತಿಸಿದ ಬಗೆಯಾಗಿ ಕನ್ನಡ ನಾಟಕಗಳು ರೂಪುಗೊಂಡಿವೆ.

* ಹೀಗೆ ರೂಪುಗೊಂಡ ಕನ್ನಡ ನಾಟಕಗಳು ಸೂಚ್ಯವಾಗಿ ಬ್ರಿಟಿಶ್ ವಿರೋಧಿ ನೀತಿಯನ್ನು ಅನುಸರಿಸಿ, ಜನರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು (ಭಾವವನ್ನು) ಜಾಗೃತಗೊಳಿಸಿವೆ. ಮತ್ತು ಸಾಮಾಜಿಕ ಶಿಕ್ಷಣದ ಭಾಗವಾಗಿ ಕಾರ್ಯನಿರ್ವಹಿಸಿವೆ.

* * *

ಅನುಬಂಧಗಳು

* ಸ್ವಾತಂತ್ರ್ಯ ಚಳುವಳಿ ಕುರಿತ ಇತರೆ ನಾಟಕಗಳ ಪಟ್ಟಿ
* ಪ್ರಧಾನ ಆಕರಗಳು
* ಪರಾಮರ್ಶನ ಗ್ರಂಥಗಳು

ಸ್ವಾತಂತ್ರ್ಯ ಚಳುವಳಿ ಕುರಿತ ಇತರೆ ನಾಟಕಗಳ ಪಟ್ಟಿ

ಟಿಪ್ಪು ಸುಲ್ತಾನ–ಆರ್.ಡಿ.ಕಾಮತ್

ರಾಷ್ಟ್ರವೀರ ರಾಯಣ್ಣ–ಕೆ.ಆರ್. ಸಿಂಗ್

ವೀರಮಹಿಳೆ ಓಬವ್ವ– ಪ್ರಕಾಶ ಮೂರ್ತಿ

ಝಾನ್ಸಿ ರಾಣಿ–ಗುರುಸಿದ್ದಪ್ಪ

ಕಿತ್ತೂರು ರಾಣಿಚನ್ನಮ್ಮ–ಅನಕೃ

ಕೆಳದಿ ಚನ್ನಮ್ಮ– ಪುಂಡಲೀಕ ಧುತ್ತರಗಿ

ಕಿತ್ತೂರು ಚನ್ನಮ್ಮ–ಪುಂಡಲೀಕ ಧುತ್ತರಗಿ

ಕಿತ್ತೂರು ಚನ್ನಮ್ಮ–ಕಂದಗಲ್ ಹನುಮಂತರಾಯ

ನರಗುಂದದ ಬಂಡಾಯ–ಕಂದಗಲ್ ಹನುಮಂತರಾಯ

ಸಂಗೊಳ್ಳಿ ರಾಯಣ್ಣ–ಎಸ್.ಎಮ್.ಖೇಡಗಿ

ಬೋಲೋ ಭಾರತ್ ಮಾತಾಕಿ–ರಾಮಚಂದ್ರದೇವ

ಕಿತ್ತೂರು ಚನ್ನಮ್ಮ–ಎಂ.ಎಸ್.ಸುಂಕಾಪುರ

ಧ್ವಜ ವಂದನೆ–ರಾಜರತ್ನಂ ಜಿ.ಪಿ

ಚಲೇಜಾವ್–ಭಾವಜೀವಿ

ಇಂದಿನ ಭಾರತ–ಅಪ್ಪಾಜಿಗೌಡ

ಬಾಣಸಿಗ ಭೀಮ–ಕಂದಗಲ್ಲ ಹನುಮಂತರಾಯ

ಮಾತಂಗಕನ್ಯಾ–ಕಂದಗಲ್ಲ ಹನುಂತರಾಯ

ಬಿ.ಎ–ಐರಣಿ ಕೋಲ ಶಾಂತಪ್ಪ

ಅಸ್ಪೃಶ್ಯತಾ ನಿವಾರಣೆ-ಚಿಕ್ಕೋಡಿ ಶಿವಲಿಂಗ ಸ್ವಾಮಿ

ಕಿತ್ತೂರು ರುದ್ರಮ್ಮ-ಚಿಕ್ಕೋಡಿ ಶಿವಲಿಂಗ ಸ್ವಾಮಿ

ಪವಿತ್ರ ಖಾದಿ-ಚಿಕ್ಕೋಡಿ ಶಿವಲಿಂಗ ಸ್ವಾಮಿ

ಮಹಾರತಿ ಭೀಷ್ಮ-ಅಚ್ಯುತರಾಯ ಹುಯಿಲಗೋಳ

ಮೈಲಾರ ಮಹಾದೇವ-ಕರಿಯಪ್ಪ ಹುಚ್ಚಣ್ಣವರ

ಸಪ್ತರ್ಷಿಗಳು-ರಘುಸುತ

ಕೆಂಪುಗುಲಾಬಿ-ರಘುಸುತ

ಸ್ವಾತಂತ್ರ್ಯ ಸಮರ-ರಘುಸುತ

* * *

ಪ್ರಧಾನ ಆಕರಗಳು

೦೧. ಆಮೂರ.ಜಿ.ಎಸ್.(ಸಂ), ಹುಯಿಲಗೋಳ ನಾರಾಯಣರಾಯರ ಸಮಗ್ರ ಸಾಹಿತ್ಯ, ಸಂಪುಟ–೧ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೦೮

೦೨. ಆಮೂರ.ಜಿ.ಎಸ್.(ಸಂ), ಶ್ರೀರಂಗ ಸಾರಸ್ವತ, ಸಂಪುಟ–೩ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೨೦೦೫

೦೩. ಆಮೂರ.ಜಿ.ಎಸ್.(ಸಂ), ಶ್ರೀರಂಗ ಸಾರಸ್ವತ, ಸಂಪುಟ–೪, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೨೦೦೫

೦೪. ಐರಣಿ ಕೋಲರಾಂತಪ್ಪ, ಉತ್ತರ ಭೂಪ, ಪಿ.ಸಿ. ಶಾಬಾದಿಮಠ ಬುಕ್–ಡಿಪೋ ಗದಗ

೦೫. ಕೃಷ್ಣ ಕೊಲ್ಲಾರ ಕುಲಕರ್ಣಿ, ಕೃಷ್ಣಕುಮಾರ ಕಲ್ಲೂರ, ಕರ್ನಾಟಕ ಸಾಹಿತ್ಯ ಅಕಾಡೆಮಿ. ೧೯೯೪

೦೬. ಕೃಷ್ಣರಾಯ, ಶಾ.ಮಂ.(ಸಂ), ಅ.ನ. ಕೃಷ್ಣರಾಯರ ಸಾಹಿತ್ಯ ಶ್ರೇಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು. ೨೦೦೮

೦೭. ಗರುಡ ಸದಾಶಿವರಾಯ, ಶ್ರೀರಾಮ ಪಾದುಕಾ ಪಟ್ಟಾಭಿಷೇಕ, ಎ.ಎಮ್. ಕರಡಿ ಬುಕ್ ಡಿಪೊ. ಹುಬ್ಬಳ್ಳಿ, ೧೯೬೮

೦೮. ಗರುಡ ಸದಾಶಿವರಾಯ, ಚವತಿಯ ಚಂದ್ರ, ಎ.ಎಮ್. ಕರಡಿ ಬುಕ್ ಡಿಪೊ. ಹುಬ್ಬಳ್ಳಿ, ೧೯೬೯

೦೯. ಬೇಂದ್ರೆ, ದ.ರಾ, ಉದ್ಧಾರ, ವಾಮನ ಬೇಂದ್ರೆ(ಸಂ) ಶ್ರೀಮಾತಾ ಪ್ರಕಾಶನ. ಧಾರವಾಡ ೧೯೯೫

೧೦. ರಮಾಕಾಂತ ಜೋಶಿ, ಪ್ರಕಾಶ ಗರುಡ, ಗರುಡ ಸದಾಶಿವರಾಯರ ಸಮಗ್ರ ನಾಟಕ, ಸಂಪುಟ–೧, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧

೧೧. ರಾಮಚಂದ್ರ, ಎಂ, ಎಂ.ಎನ್. ಕಾಮತ್ ಸಾಹಿತ್ಯ ವಾಚಿಕೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೩

೧೨. ಹನುಮಂತರಾವ್ ಕಂದಗಲ್ಲ, ಕುರುಕ್ಷೇತ್ರ, ಪಿ.ಸಿ. ಶಾಬಾದಿಮಠ ಬುಕ್-ಡಿಪೊ ಗದಗ, ೨೦೦೬

೧೩. ಹನುಮಂತರಾವ್ ಕಂದಗಲ್ಲ, ಅಕ್ಷಯಾಂಬರ, ಪ್ರಭಾ ಪ್ರಿಂಟರ್ಸ್, ಗದಗ, ೧೯೮೪

೧೪. ಶಿವಲಿಂಗಶಾಸ್ತ್ರಿಗಳು ಚಿಕ್ಕೊಡಿ, ಕಿತ್ತೂರ ಕೇಸರಿ, ಮಲ್ಲಪ್ಪ ವಿರೂಪಾಕ್ಷಪ್ಪ ಅರಳಿ, ಪುಸ್ತಕ ವ್ಯಾಪಾರಿಗಳು, ಗದಗ, ೧೯೮೧

೧೫. ಶ್ರೀಕಂಠಶಾಸ್ತ್ರಿ ಹಿರೇಮಠ, ದ್ರೌಪದಿ ವಸ್ತ್ರಹರಣ, ಪಿ.ಸಿ. ಶಾಬಾದಿಮಠ ಬುಕ್-ಡಿಪೊ ಗದಗ, ೧೯೮೨

೧೬. ಶ್ರೀನಿವಾಸರಾಜು, ಬಿ. ದಾಮೋದರ ಶೇಟ್ಟಿ, ನಾ.(ಸಂ) ಸುವರ್ಣ ನಾಟಕ-ಭಾಗ ೨ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

ಪರಾಮರ್ಶನ ಗ್ರಂಥಗಳು

೦೧. ಅಗ್ರಹಾರ ಕೃಷ್ಣಮೂರ್ತಿ, ಸಂಸ್ಕೃತಿ ಕಥನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೦೨. ಅರ್ಕಸಾಲಿ ವೃಷಭೇಂದ್ರಾಚಾರ, ಸ್ವಾತಂತ್ರ್ಯೋತ್ತರ ಕನ್ನಡ ಹಾಗೂ ತೆಲಗು ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆ,

೦೩. ಅಕ್ಷರ.ಕೆ.ವಿ, ರಂಗ ಪ್ರಪಂಚ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ೨೦೧೦

೦೪. ಅಬಿದಾ ಸಮೀಉದ್ದೀನ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುಸ್ಲಿಂ ಮಹಿಳೆಯರ ಕೊಡುಗೆ, ಕನ್ನಡ ಷಾಕಿರಾ ಖಾನಂ, ನವಕರ್ನಾಟಕ ಪ್ರಕಾಶನ, ೨೦೧೩

೦೫. ಆಮೂರ.ಜಿ.ಎಸ್, ಆಧುನಿಕ ಕನ್ನಡ ಸಾಹಿತ್ಯದ ವಿರಾಟ ಪುರುಷ (ಶ್ರೀರಂಗ ಸಾರಸ್ವತ ಸಮೀಕ್ಷೆ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೫

೦೬. ಆದ್ಯ ರಂಗಾಚಾರ್ಯ, ನಾಟ್ಯಶಾಸ್ತ್ರ, ಅಕ್ಷರ ಪ್ರಕಾಶನ, ಸಾಗರ

೦೭. ಆಲೂರು ವೆಂಕಟರಾಯರು, ಕರ್ನಾಟಕ ಗತವೈಭವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೦೮. ಇರ್ಫಾನ್ ಹಬೀಬ್, ರಾಷ್ಟ್ರೀಯ ಆಂದೋಲನ (ಕನ್ನಡಕ್ಕೆ ಅಬ್ದುಲ್ ರೆಹಮಾನ್ ಪಾಷಾ.ಎಂ), ನವಕರ್ನಾಟಕ ಪ್ರಕಾಶನ, ೨೦೧೫

೦೯. ಇಂದಿರಾ.ಆರ್, ಭಾರತೀಯ ಸಮಾಜ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫

೧೦. ಎರಿಕ್ ಹಾಬ್ಸ್‌ಬಾಮ್, ಅತಿರೇಕಗಳ ಯುಗ, (ಅನು-ಶ್ರೀಧರ.ವಿ.ಎಸ್), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೬

೧೧. ಎರಿಕ್ ಹಾಬ್ಸ್‌ಬಾಮ್, ಸಾಮ್ರಾಜ್ಯಗಳ ಯುಗ, (ಅನು–ಗಂಗಾಧರಮೂರ್ತಿ. ಬಿ, ಚಂದ್ರಪ್ಪ. ಸಿ) ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೬

೧೨. ಎರಿಕ್ ಹಾಬ್ಸ್‌ಬಾಮ್, ಬಂಡವಾಳ ಯುಗ (ಅನು–ನಗರಗೆರೆ ರಮೇಶ), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೬

೧೩. ಎರಿಕ್ ಹಾಬ್ಸ್‌ಬಾಮ್, ಕ್ರಾಂತಿಯ ಯುಗ, (ಅನು–ದಿವಾಕರ. ನಾ) ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೬

೧೪. ಒಕ್ಕುಂದ.ಎಂ.ಡಿ, ಭಾರತ : ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆ, ಲಡಾಯಿ ಪ್ರಕಾಶನ, ಧಾರವಾಡ, ೨೦೧೭

೧೫. ಕನಕ ಮುಖರ್ಜಿ, ಭಾರತೀಯ ಮಹಿಳಾ ವಿಮೋಚನೆಯ ಆಂದೋಲನ (ಕನ್ನಡಕ್ಕೆ ಅನುವಾದ – ರಾಹು), ಲಡಾಯಿ ಪ್ರಕಾಶನ, ಗದಗ, ೨೦೧೩

೧೬. ಕ್ಯಾತನಹಳ್ಳಿ ರಾಮಣ್ಣ, ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, ಪ್ರಸಾರಾಂಗ ಮತ್ತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೮

೧೭. ಕೀರ್ತಿನಾಥ ಕುರ್ತಕೋಟಿ, ವಿಮರ್ಶೆಯ ವಿನಯ ಕಾದಂಬರಿ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೬

೧೮. ಕಿರೊಣ್ ಮೊಯ್ ರಾಹಾ, ಬಂಗಾಳಿ ರಂಗಭೂಮಿ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ೧೯೧೫

೧೯. ಕೃಷ್ಣ ಎಂ.ಎಚ್, ಕನ್ನಡ ನಾಡಿನ ಚರಿತ್ರೆ ಬಾಗ–೩, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫

೨೦. ಕೃಷ್ಣಕುಮಾರ್ ಸಿ.ಪಿ, ಪರಿಗ್ರಹಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೦

೨೧. ಕೆಂಗುಡ್ಡಪ್ಪನವರ ಎಚ್.ಎಸ್, ಕೋಗನೂರ ಸ್ವಾತಂತ್ರ್ಯ ಯೋಧರು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೧೦

೨೨. ಗಣೇಶ ಅಮೀನಗಡ, ಬಣ್ಣದ ಬದುಕಿನ ಚಿನ್ನದ ದಿನಗಳು, ಪ್ರಸಾಧನ ಪ್ರಕಾಶನ ಭಾರತೀನಗರ. ಬಿಜೈ, ಮಂಗಳೂರು, ೨೦೦೭

೨೩. ಗಂಗಾಧರ ಮೂರ್ತಿ.ಬಿ, ಭಾರತೀಯ ಭಾಷಾ ಸಾಹಿತ್ಯಗಳ ವರ್ಗಸೆಲೆ, ಲಡಾಯಿ ಪ್ರಕಾಶನ, ಗದಗ, ೨೦೧೭

೨೪. ಗಂಗಾನಾಯಕ್. ಕೆ.ಎನ್.(ಸಂ) ಬಂಗಾಳಿ ಸಾಹಿತ್ಯ, ಕುವೆಂಪು ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೨

೨೫. ಗಂಗಾನಾಯಕ್.ಕೆ.ಎನ್, ಹೊಸಗನ್ನಡ ಕವಿಗಳು ಮತ್ತು ನಾಟಕಕಾರರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.ವಿ.ವಿ, ೨೦೧೧

೨೬. ಗಾಂಧಿ ಮೋ.ಕ, ಅಸ್ಪೃಶ್ಯತೆ, ರಾ.ಶ್ರೀ. ಹುಕ್ಕೇರಿಕರ ಅಧ್ಯಕ್ಷರು ಸ್ಥಾನಿಕ ಸಂಪಾದಕ ಮಂಡಳಿ ವಿದ್ಯಾಗಿರಿ, ಧಾರವಾಡ

೨೭. ಗಿರಡ್ಡಿ ಗೋವಿಂದರಾಜ, ಪ್ರಮಾಣು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೭

೨೮. ಗೂಗಿ ವಾಧಿಯೊಂಗೊ, ವಸಾಹತು ಪ್ರಜ್ಞೆ ಮತ್ತು ವಿಮೋಚನೆ (ಕನ್ನಡಕ್ಕೆ ರಹಮತ್ ತರೀಕೆರೆ), ಮು.ಧರಣಿ ಪ್ರಿಂಟರ್ಸ್, ಬೆಂಗಳೂರು, ೨೦೧೫

೨೯. ಗೋಪಾಲರಾವ್.ಎಚ್.ಎಸ್, ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ೨೦೧೭

೩೦. ಗೋವಿಂದರಾಜು.ಸಿ.ಆರ್, ಭಾಷಾ ಚಳುವಳಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೭

೩೧. ಗೋವಿಂದರಾಜು.ಸಿ.ಆರ್, ಕರ್ನಾಟಕದ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೩೨. ಚನ್ನಬಸಪ್ಪ.ಕೋ, ಕರ್ನಾಟಕ ಏಕೀಕರಣ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೧೩

೩೩. ಚಿದಾನಂದಮೂರ್ತಿ. ಎಂ, ಬೃಹತ್ ಕರ್ನಾಟಕ; ಭಾಷಿಕ ಸಾಂಸ್ಕೃತಿಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೩೪. ಚಂದ್ರಶೇಖರ್.ಎಸ್, ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ ಬಿಳಿಗೆರೆ, ತಿಪಟೂರು, ೨೦೦೨

೩೫. ಚಂದ್ರಶೇಖರ್.ಎಸ್, ವಸಾಹತು ಕಾಲಿನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೩೭. ಜಗಜೀವನ್ ರಾಮ್, ಭಾರತದಲ್ಲಿ ಜಾತಿವಾದ ಮತ್ತು ಹರಿಜನರ ಸಮಸ್ಯೆ, (ಅ.ನು. ಗೌರಮ್ಮ.ಕೆ, ಯಲ್ಲಪ್ಪ, ಬೂತಯ್ಯ.ಟಿ ಆದಿ ಭಾರತ ಸಾಹಿತ್ಯ ಪ್ರಕಾಶನ, ಮೈಸೂರು, ೧೯೯೦)

೩೮. ಜಯದೇವ. ಹು.ಕಾ. ಅರುಣೋದಯ ನವೋದಯ ನಂತರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೧೯೯೯

೩೯. ಜಯಶ್ರೀ ದಂಡೆ, ಜಯದೇವಿತಾಯಿ ಲಿಗಾಡೆ, ನಂಜನಗೂಡು ತಿರುಮಲಾಂಬಾ ಸಾಹಿತ್ಯ ಕೃಷಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೧೧

೪೦. ಜವಾಹರಲಾಲ್ ನೆಹರೂ, ಭಾರತ ದರ್ಶನ – ೧ (ಅ.ನು. ಕೃಷ್ಣಮೂರ್ತಿರಾವ್), ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ೨೦೦೭

೪೧. ಜವಾಹರಲಾಲ್ ನೆಹರೂ, ಭಾರತ ದರ್ಶನ – ೨ (ಅ.ನು. ಕೃಷ್ಣಮೂರ್ತಿರಾವ್), ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ೨೦೦೭

೪೨. ಜೋಶಿ.ಜಿ.ಡಿ, ಹುಯಿಲಗೋಳ ನಾರಾಯಣರಾಯರು ಜೀವನ ಹಾಗೂ ಸಾಹಿತ್ಯ ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ, ಮುಂಬೈ, ೧೯೯೬

೪೩. ಜೋಶಿ.ಪಿ.ನಿ, ಬಂಡಾಯ ೧೮೫೭ ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ೨೦೧೩

೪೪. ಜೋಳದರಾಶಿ ದೊಡ್ಡನಗೌಡರು, ನಂದೇ ನಾನೋದಿದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೪೫. ತಾರಕೇಶ್ವರ್.ವಿ.ಬಿ, ವಸಾಹತುಶಾಹಿ ಮತ್ತು ಭಾಷಾಂತರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೪೬. ತಿಪ್ಪೇಸ್ವಾಮಿ.ಜಿ.ಆರ್, ಎಂ.ಎಲ್.ಶ್ರೀಕಂಠೇಶಗೌಡ, ಸಾಹಿತ್ಯ ಅಕಾಡೆಮಿ ಕೀರ್ತಿ ಪ್ರಿಂಟರ್ಸ್, ಬೆಂಗಳೂರು, ೨೦೧೫

೪೭. ತಿರುಮಲ ತಾತಾಚಾರ್ಯಶರ್ಮ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ (೧೮೦೦–೧೮೫೭)

೪೮. ದೇಜಗೌ, ಸಿ.ಪಿ.ಕೆ, ಕಟ್ಟಿಮನಿ : ಬದುಕು–ಬರಹ, ಗೀತಾ ಬುಕ್ ಹೌಸ್, ಮೈಸೂರು, ೧೯೬೯

೪೯. ದೇಜಗೌ, ಕರ್ನಾಟಕದ ರೂವಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೫೦. ದಂಡಪ್ಪ.ಎಚ್, ಜಾಗತಿಕ ವಿಚಾರ ಸಾಹಿತ್ಯ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೭

೫೧. ದಂಡಪ್ಪ. ಎಚ್.(ಸಂ), ಭಾರತೀಯ ವಿಚಾರ ಸಾಹಿತ್ಯ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೭

೫೨. ಧಾರವಾಡಕರ.ರಾ.ಯ, ಹೊಸಗನ್ನಡ ಸಾಹಿತ್ಯದ ಉದಯಕಾಲ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೩

೫೩. ನಾಗರತ್ನಮ್ಮ.ಎಸ್, ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ, ದೇಶಿ ಪ್ರಕಾಶನ ವಿಜಯನಗರ, ಬೆಂಗಳೂರು, ೨೦೦೯

೫೪. ನಾಗಭೂಷಣ.ಡಿ.ಎಸ್, ನಮ್ಮ ಸಮಾಜವಾದಿಗಳು, ಸಮತ ಪ್ರಕಾಶನ, ಚಾಮರಾಜನಗರ, ೨೦೧೫

೫೫. ನಾರಾಯಣರಾವ್.ವಿ.ಎಸ್, ಮಹಾತ್ಮ ಗಾಂಧಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭

೫೬. ನಿಂಗಣ್ಣ ಸಣ್ಣಕ್ಕಿ, ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೫೭. ಪಣಿಕ್ಕರ್.ಕೆ.ಎನ್, (ಅನು : ಪಾರ್ಥಸಾರಥಿ.ಕೆ.ಎಸ್), ಭಾರತದ ರಾಷ್ಟ್ರೀಯತೆಯ ಪರಿಕಲ್ಪನೆ, ನವಕರ್ನಾಟಕ ಪ್ರಕಾಶನ, ೨೦೧೬

೫೮. ಪರ್ವತೆ.ಟಿ.ವಿ, ಬಾಲಗಂಗಾಧರ ತಿಲಕ್ (ಅನು : ಅನಂತನಾರಾಯಣ.ಎಸ್), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೦೯

೫೯. ಪ್ರಕಾಶ ಗರುಡ, ಕಂಪನಿ ನಾಟಕ ಅರ್ಥಾತ್ ವೃತ್ತಿರಂಗಭೂಮಿ, ಯಾಜಿ ಪ್ರಕಾಶನ, ಹೊಸಪೇಟೆ, ೨೦೧೫

೬೦. ಪ್ರಕಾಶ ಗರುಡ, ಗರುಡ ಸದಾಶಿವರಾಯರು, ಸಾಹಿತ್ಯ ಅಕಾಡೆಮಿ, ೨೦೦೮

೬೧. ಪ್ರಭುಪ್ರಸಾದ್.ಕೆ.ಬಿ, ರಂಗ ಅಂತರಂಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೮

೬೨. ಬಸವರಾಜ ಮಲಶೆಟ್ಟಿ, ಸ್ವಾತಂತ್ರ್ಯ ಹೋರಾಟ ಮತ್ತು ಜನಪದ ಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೬೩. ಬಂಜಗೆರೆ ಜಯಪ್ರಕಾಶ್, ಕನ್ನಡ ರಾಷ್ಟ್ರೀಯತೆ, ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು, ೨೦೦೦

೬೪. ಬಾರ್ಕೂರು ಉದಯ, ರಾಷ್ಟ್ರೀಯತೆ : ಇತಿಹಾಸ ಕಥನ, ಶಾಲ್ಮ ಪ್ರಕಾಶನ, ಬಾರ್ಕೂರು, ೨೦೦೯

೬೫. ಬಾರ್ಕೂರು ಉದಯ, ಇತಿಹಾಸ ಸಂಕಥನದಲ್ಲಿ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ಪ್ರಶ್ನೆ, ಶಾಲ್ಮ ಪ್ರಕಾಶನ, ಬಾರ್ಕೂರು, ೨೦೦೯

೬೬. ಬಾಬು ಕೃಷ್ಣಮೂರ್ತಿ, ಭಾರತದ ಸ್ವಾತಂತ್ರ್ಯ ಸಂಗ್ರಾಮ, ಶ್ರೀ ಸಮುದ್ಯತಾ ಸಾಹಿತ್ಯ, ಬೆಂಗಳೂರು, ೨೦೦೭

೬೭. ಬಾಳಾಸಾಹೇಬ ಲೋಕಾಪುರ, ದು.ನಿಂ.ಬೆಳಗಲಿ ಸಾಹಿತ್ಯಕ ಅನುಸಂಧಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೧೧

೬೮. ಬಾಳಾಸಾಹೇಬ ಲೋಕಾಪುರ, ಕೆರೂರು ವಾಸುದೇವಾಚಾರ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೧೦

೬೯. ಭೀಮನಸೇನರಾವ್ ಡಿ.ಕೆ, ಅವಲೋಕನ – ಸಂಶೋಧನ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೦

೭೦. ಬೋರಲಿಂಗಯ್ಯ, ದೇಶಿ ಕನ್ನಡ ಪರಂಪರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬

೭೧. ಬೋಳಂತೆಕೋಡಿ ಈಶ್ವರ ಭಟ್ಟ(ಸಂ), ನಿರಂಜನ ಅಭಿನಂದನ, ಕರ್ನಾಟಕ ಸಂಘ, ಪುತ್ತೂರು. ೧೯೮೬

೭೨. ಭಗವಾನ್.ಕೆಎಸ್, ಹಿಂದೂ ಸಾಮ್ರಾಜ್ಯ ಶಾಹಿಯ ಇತಿಹಾಸ, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು, ೨೦೧೫

೭೩. ಮಜುಂದಾರ್.ಎ.ಕೆ, ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ ಸಂ–೨೫, ಸ್ವಾತಂತ್ರ್ಯ ಸಂಗ್ರಾಮ ಭಾಗ–೩, ಭಾರತರೀಯ ವಿದ್ಯಾಭವನ, ಬೆಂಗಳೂರು, ೧೯೯೮

೭೪. ಮರುಳಸಿದ್ದಪ್ಪ.ಕೆ, ಒಡನಾಟ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೩

೭೫. ಮರುಳಸಿದ್ದಪ್ಪ.ಕೆ, ಆಧುನಿಕ ಕನ್ನಡ ನಾಟಕ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೯

೭೬. ಮಹಾಬಲೇಶ್ವರ.ಬಿ.ಸಿ, ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು (೧೯೪೬-೨೦೦೦), ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬಗಾ.......೯, ೨೦೧೨

೭೭. ಮಳಲಿ ವಸಂತಕುಮಾರ್, ಕುವೆಂಪು ಅವರ ನಾಟಕಗಳು ಒಂದು ಅಧ್ಯಯನ, ಪಂಪ ಪ್ರಕಾಶನ, ಮೈಸೂರು

೭೮. ಮಾರ್ಕ್ಸ್ ಎಂಗೆಲ್ಸ್, ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ (೧೮೫೭-೧೮೫೯)

೭೯. ಮಿಶಾಯೆಲ್ ಗೊಟ್‌ಲೊಬ್, ದಕ್ಷಿಣ ಏಶಿಯಾದಲ್ಲಿ ಇತಿಹಾಸ ಚಿಂತನೆ (ಅನು : ಆರ್ಯ ಆಚಾರ್ಯ), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೦

೮೦. ಮುನಿಯಪ್ಪ, ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ, ಅನಿಕೇತನ ಪ್ರಕಾಶನ, ೨೦೦೫

೮೧. ಮುತ್ತೇಗೌಡ.ಟಿ.ಎನ್, ನವೋದಯ ಕಾದಂಬರಿಗಳಲ್ಲಿ ಧರ್ಮ ಜಿಜ್ಞಾಸೆ, ಯುವ ಸಾಧನೆ, ಬೆಂಗಳೂರು, ೨೦೧೨

೮೨. ಮೋಹನ ಕೃಷ್ಣರೈ.ಕೆ, ಯುದ್ಧ ಮತ್ತು ಒಪ್ಪಂದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭

೮೩. ಮ್ಯಾಗೇರಿ.ಐ.ಜೆ, ವಸಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು, ಕನ್ನಡ ಸಾಹಿತ್ಯ ಪರಿಷತ್ತು, ೨೦೦೮

೮೪. ಯಳನಾಡು ಅಂಜನಪ್ಪ, ಧರ್ಮ ಮತ್ತು ಮುಕ್ತ ವಿಚಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

೮೫. ರಘುನಾಥ ಶಂಕರೆಪ್ಪ, ಬೀದರ ಪ್ರದೇಶದ ಸ್ವಾತಂತ್ರ್ಯ ಸಂಗ್ರಾಮ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೧೭

೮೬. ರಹಮತ್ ತರೀಕೆರೆ, ಅಮೀರ್ ಬಾಯಿ ಕರ್ನಾಟಕಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೨

೮೭. ರಹಮತ್ ತರೀಕೆರೆ, ಕನ್ನಡ ವಾರ್ಷಿಕ ೧೯೯೪, ಕ.ವಿ.ವಿ.ಹಂಪಿ, ೧೯೯೫

೮೮. ರಾಗೌ, ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ಜಯಶ್ರೀ ಎಲೆಕ್ಟ್ರಿಕಲ್ ಅಂಡ್ ಪಬ್ಲಿಷರ್, ೨೦೧೦

೮೯. ರಾಜಾರಾಮ ತೋಳ್ಪಾಡಿ, ಸಮಾಜವಾದ : ಒಂದು ವಾಚಿಕೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೭

೯೦. ರಾಧಾ ಕುಲಕರ್ಣಿ, ಹುಯಿಲಗೋಳ ನಾರಾಯಣರು ಜೀವನ-ಸಾಧನೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೭

೯೧. ರಾಮಕೃಷ್ಣ ಮರಾಠೆ, ನಾಟಕ-ಕರ್ನಾಟಕ, ದಾಮಿನಿ ಸಾಹಿತ್ಯ ಬೆಂಗಳೂರು, ೨೦೦೯

೯೨. ರಾಮಕೃಷ್ಣ ಮರಾಠೆ, ಕೊಣ್ಣೂರ ನಾಟಕ ಕಂಪನಿ, ಪ್ರಸಾರಾಂಗ ಕ.ವಿ.ವಿ, ಹಂಪಿ, ೧೯೯೯

೯೩. ರಾಮಕೃಷ್ಣ ಮರಾಠೆ, ತೆರೆಮರೆ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪

೯೪. ರಾಮಚಂದ್ರ.ಎಂ, ಎಂ.ಎನ್.ಕಾಮತ್ : ಸಾಹಿತ್ಯ ವಾಚಿಕೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩

೯೫. ರಾಮಣ್ಣ ಹವಳೆ, ರಾಯಚೂರು ಜಿಲ್ಲೆಯ ಹೋರಾಟ, ಶ್ರೀ ಶ್ರೀ ಪಬ್ಲಿಕೇಷನ್, ರಾಯಚೂರು, ೨೦೧೦

೯೬. ರಂಗನಾಥ್.ಎಚ್.ಕೆ, ಕರ್ನಾಟಕ ರಂಗಭೂಮಿ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೧೧

೯೭. ಲಲಿತಶಾಸ್ತ್ರೀ ಮತ್ತು ನಿರೂಪಮ, ರಾಷ್ಟ್ರೀಯತೆ ಮತ್ತು ಕಾವ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೨

೯೮. ವಸಂತಕುಮಾರ ಪೆರ್ಲ, ಸ್ವಾತಂತ್ರ್ಯೋತ್ತರ ಕನ್ನಡ ನಾಟಕಗಳಲ್ಲಿ ಜಾನಪದ ಒಳನೋಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

೯೯. ವಸು.ಎಂ.ವಿ, ಕನ್ನಡದೊಳ್ ಭಾವಿಸಿದ ಜನಪದಂ, ಚಿಂತನ ಪುಸ್ತಕ, ಬೆಂಗಳೂರು, ೨೦೦೯

೧೦೦. ವಿಜಯ್ ಪೂಣಚ್ಚ ತಂಬಂಡ, ವರ್ಗದಿಂದ ಸಂಸ್ಕೃತಿಯಡೆಗೆ ಸಬಾಲ್ಟರ್ನ್ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭

೧೦೧. ವಿಜಯಾ ದಬ್ಬೆ, ಹಿತೈಷಿಣಿಯ ಹೆಜ್ಜೆಗಳು, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೨

೧೦೨. ವಿರೂಪಾಕ್ಷಿ ಪೂಜಾರಹಳ್ಳಿ, ಏಕೀಕರಣ ಚಳುವಳಿ ಮತ್ತು ಬಳ್ಳಾರಿ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

೧೦೩. ವಿಶ್ವ ಕುಂದಾಪುರ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿ, ಕ್ರಿಯಾ ಪ್ರಕಾಶನ, ಬೆಂಗಳೂರು, ೨೦೧೪

೧೦೪. ವೆಂಕಟಸುಬ್ಬಯ್ಯ.ಎಚ್.ವಿ, ಶ್ರೀರಂಗ ಸಂಪದ, ಸಿರಿವರ ಪ್ರಕಾಶನ, ಬೆಂಗಳೂರು, ೨೦೧೭

೧೦೫. ವೈಕುಂಠರಾಜು.ಬಿ.ವಿ, ಕನ್ನಡ ರಂಗಭೂಮಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೦೬. ವೈದೇಹಿ, ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ, ಅಭಿನವ ಪ್ರಕಾಶನ, ೨೦೧೪

೧೦೭. ಸವಿತ.ಬಿ.ಸಿ, ರೈತ ಚಳುವಳಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೭

೧೦೮. ಸೂರ್ಯನಾಥ ಕಾಮತ್,(ಸಂ), ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೮

೧೦೯. ಸಂತಾನಂ.ಕೆ, ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ಭಾರತೀಯ ರಾಷ್ಟ್ರೀಯತೆ (ಅನು : ರಂಗರಾವ್.ಎ.ಆರ್), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ೨೦೧೦

೧೧೦. ಸ್ವಾಮಿ ರಮಾನಂದ ತೀರ್ಥ, ಹೋರಾಟದ ನೆನಪುಗಳು, (ಅನು–ಸೂರ್ಯನಾಥ ಕಾಮತ್) ಗೀತಾ ಬುಕ್ ಹೌಸ್, ಮೈಸೂರು. ೧೯೭೭

೧೧೧. ಸ್ವಾಮಿ ಹರ್ಷಾನಂದ, ಪ್ರಾಚೀನ ಮತ್ತು ಮಧ್ಯಯುಗೀನ ಹಿಂದೂ ಸಂಸ್ಕೃತಿ, ಶ್ರೀ ನಿತ್ಯಾನಂದ ಪ್ರಕಾಶನ, ಬೆಂಗಳೂರು, ೨೦೧೧

೧೧೨. ಶಂಕರನಾರಾಯಣರಾವ್.ಎನ್.ಪಿ, ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು, ನವ ಕರ್ನಾಟಕ ಪ್ರಕಾಶನ, ೨೦೧೫

೧೧೩. ಶಾಮರಾಯ.ತ.ಸು, ಕನ್ನಡ ನಾಟಕ, ಪ್ರತಿಭಾ ಪ್ರಕಾಶನ, ಮೈಸೂರು, ೨೦೦೭

೧೧೪. ಶಿವಣ್ಣ.ಆರ್.ಜಿ, ರಾಮಲಿಂಗಪ್ಪ.ಎಚ್, ಸಂಕ್ಷಿಪ್ತ ವಿಶ್ವ ಇತಿಹಾಸ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬

೧೧೫. ಶಿವರಾಮ ಪಡಿಕ್ಕಲ್, ನಾಡು-ನುಡಿಯ ರೂಪಕ, ಪ್ರಸಾರಾಂಗ ಮಂಗಳೂರು ವಿ.ವಿ, ಮಂಗಳ ಗಂಗೋತ್ರಿ, ೨೦೦೧

೧೧೬. ಶಿವಣ್ಣ ದೊಡ್ಡಹನುಮಂತರೆಡ್ಡಿ, ಮುತ್ತಜ್ಜನ ಭವ್ಯ ಭಾರತ, ಸ್ಟ್ರಾಂಡ್ ಬುಕ್ ಸ್ಟಾಲ್, ಮುಂಬೈ, ೨೦೦೯

೧೧೭. ಶಿವಾರೆಡ್ಡಿ.ಕೆ.ಸಿ, ಕನ್ನಡದ ಹಾಡು ಪಾಡು, ಅಧ್ಯಯನ ಮಂಡಳಿ, ಬೆಂಗಳೂರು, ೨೦೦೩

೧೧೮. ಶಿವಾರೆಡ್ಡಿ. ಕೆ.ಸಿ. ಪ್ರದೀಪ. ಕೆ.ವಿ(ಸಂ) ಅನುವಾದ ಸಂಕಥನ- ಭಾಗ ೧, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೭

೧೧೯. ಶಿವಾರೆಡ್ಡಿ. ಕೆ.ಸಿ. ಲಕ್ಷ್ಮಿಕಾಂತ. ಎಸ್.ಬಿ.(ಸಂ) ಅನುವಾದ ಸಂಕಥನ-ಭಾಗ ೨ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೭

೧೨೦. ಶಿವರಾಮ ಕಾಡನಕುಪ್ಪೆ, ಸಾಮಾಜಿಕ ನೆಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೧೨೧. ಶಾಂತಾರಾಮ ನಾಯಕ ಹಿಚಕಡ, ಸ್ವಾತಂತ್ರ್ಯ ಹೋರಾಟದ ಹೊರಳು ನೋಟ, ಉ.ಕನ್ನಡ, ೨೦೦೯

೧೨೨. ಶೇಷಾದ್ರಿ. ಬಿ, ಚಂದ್ರಶೇಖರ.ಟಿ.ಆರ್, (ಸಂ) ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೧೨೩. ಶೇಷಗಿರಿವಾರ್.ಎಲ್.ಎಸ್, ಹೊಸಗನ್ನಡ ಸಾಹಿತ್ಯ ಚರಿತೆ-೧೦, ಸಪ್ನ ಬುಕ್ ಹೌಸ್, ೨೦೧೫

೧೨೪. ಶ್ರೀನಿವಾಸ ಹಾವನೂರು, ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧

೧೨೫. ಶ್ರೀರಂಗ, ನನ್ನ ನಾಟ್ಯ ನೆನಪುಗಳು, ಶ್ರೀರಂಗ ಸಾರಸ್ವತ ಪ್ರಕಾಶನ, ಬೆಂಗಳೂರು, ೧೯೬೦

೧೨೬. ಶ್ರೀಧರ ಹೆಗಡೆ ಭದ್ರನ್, ಸಾಹಿತ್ಯ ಚಳುವಳಿಗಳು, ಧರಣಿ ಪ್ರೀಂಟರ್ಸ್, ಬೆಂಗಳೂರು, ೨೦೧೮

೧೨೭. ರಾಘವೇಂದ್ರ ಪಾಟೀಲ, ಆನಂದಕಂದ, ಸಾಹಿತ್ಯ ಅಕಾಡೆಮಿ, ಮುದ್ರಕ : ವಾಗರ್ಥ, ಬೆಂಗಳೂರು, ೨೦೦೧

೧೨೮. ಹಿರೇಮಠ. ಎಸ್.ಎಸ್.(ಸಂ) ವಿಚಾರ ಸಾಹಿತ್ಯ ೧೯೯೫ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

೧೨೯. ಹೆಗಡೆ. ಎಂ.ಜಿ(ಸಂ) ಸಾಹಿತ್ಯ ವಿಮರ್ಶೆ ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

ಪತ್ರಿಕೆಗಳು

೦೧. ಭಾರದ್ವಾಜ. ದ. ಕೃ (ಸಂ), ರಂಗಭೂಮಿ, ಸಂಪುಟ–೧, ಅಮೆಚೂರು ನಾಟಕ ಸಂಘ ಬೆಂಗಳೂರು, ಸಿಟಿ, ೧೯೨೫–೧೯೨೬

೦೨. ಭಾರದ್ವಾಜ. ದ. ಕೃ (ಸಂ), ರಂಗಭೂಮಿ, ಸಂಪುಟ–೨, ಅಮೆಚೂರು ನಾಟಕ ಸಂಘ ಬೆಂಗಳೂರು ಸಿಟಿ. ೧೯೨೬–೧೯೨೭

೦೩. ಭಾರದ್ವಾಜ. ದ. ಕೃ (ಸಂ), ರಂಗಭೂಮಿ, ಸಂಪುಟ–೩, ಅಮೆಚೂರು ನಾಟಕ ಸಂಘ ಬೆಂಗಳೂರು ಸಿಟಿ. ೧೯೨೭–೧೯೨೮

೦೪. ಭಾರದ್ವಾಜ. ದ. ಕೃ (ಸಂ), ರಂಗಭೂಮಿ, ಸಂಪುಟ–೫, ಅಮೆಚೂರು ನಾಟಕ ಸಂಘ ಬೆಂಗಳೂರು ಸಿಟಿ. ೧೯೨೯–೧೯೩೦

* * *